ಚರಿತ್ರೆ ರಚನಾಶಾಸ್ತ್ರ: ದಾವಣಗೆರೆ ಜಿಲ್ಲೆಯನ್ನು ಕುರಿತ ಅಧ್ಯಯನಗಳ ಸಮೀಕ್ಷೆ

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಚರಿತ್ರೆ ವಿಭಾಗಕ್ಕೆ
ಎಂ.ಫಿಲ್. ಆಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕ

ಟಿ. ತಿಪ್ಪೇಸ್ವಾಮಿ

ಮಾರ್ಗದರ್ಶಕರು

ಡಾ. ವಿರೂಪಾಕ್ಷಿ ಪೂಜಾರಹಳ್ಳಿ

ಚರಿತ್ರೆ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೬-೦೭

ಚರಿತ್ರೆ ರಚನಾಶಾಸ್ತ್ರ: ದಾವಣಗೆರೆ ಜಿಲ್ಲೆಯನ್ನು ಕುರಿತ ಅಧ್ಯಯನಗಳ ಸಮೀಕ್ಷೆ

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಚರಿತ್ರೆ ವಿಭಾಗಕ್ಕೆ
ಎಂ.ಫಿಲ್. ಆಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕ

ಟಿ. ತಿಪ್ಪೇಸ್ವಾಮಿ

ಮಾರ್ಗದರ್ಶಕರು

ಡಾ. ವಿರೂಪಾಕ್ಷಿ ಪೂಜಾರಹಳ್ಳಿ

ಚರಿತ್ರೆ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೬-೦೭

ಮಾರ್ಗದರ್ಶಕರ ಪ್ರಮಾಣಪತ್ರ

ಚರಿತ್ರೆ ರಚನಾಶಾಸ್ತ್ರ: ದಾವಣಗೆರೆ ಜಿಲ್ಲೆಯನ್ನು ಕುರಿತ ಅಧ್ಯಯನಗಳ ಸಮೀಕ್ಷೆ ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ಟಿ. ತಿಪ್ಪೇಸ್ವಾಮಿ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : ೨೮-೨-೦೨

೨೮/೨

ಡಾ. ವಿರೂಪಾಕ್ಷಿ ಪೂಜಾರಹಳ್ಳಿ
ಮಾರ್ಗದರ್ಶಕರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪ್ರಮಾಣ ಪತ್ರ

ಚರಿತ್ರೆ ರಚನಾಶಾಸ್ತ್ರ: ದಾವಣಗೆರೆ ಜಿಲ್ಲೆಯನ್ನು ಕುರಿತ ಅಧ್ಯಯನಗಳ ಸಮೀಕ್ಷೆ ಎಂಬ ನಿಬಂಧವನ್ನು ಡಾ. ವಿರೂಪಾಕ್ಷಿ ಪೂಜಾರಹಳ್ಳಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್. ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯದ ಚರಿತ್ರೆ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : ೨೮-೨-೦೨

Thippeswamy T

ಟಿ. ತಿಪ್ಪೇಸ್ವಾಮಿ

ಸಂಶೋಧಕರು

ಚರಿತ್ರೆ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕೃತಜ್ಞತೆಗಳು

ಚರಿತ್ರೆ ರಚನಾಶಾಸ್ತ್ರ: ದಾವಣಗೆರೆ ಜಿಲ್ಲೆಯನ್ನು ಕುರಿತ ಅಧ್ಯಯನಗಳ ಸಮೀಕ್ಷೆ ಎಂಬ ನಿಬಂಧವನ್ನು ಸಿದ್ಧಪಡಿಸಲು ಸೂಕ್ತ ಸಲಹೆಗಳೊಂದಿಗೆ ಮಾರ್ಗದರ್ಶನ ನೀಡಿದ ಡಾ. ವಿರೂಪಾಕ್ಷಿ ಪೂಜಾರಹಳ್ಳಿ ಅವರಿಗೆ ನನ್ನ ಕೃತಜ್ಞತೆಗಳು.

ನಿಬಂಧದ ಅಧ್ಯಯನಕ್ಕೆ ಎಲ್ಲ ರೀತಿಯ ನೆರವು ನೀಡಿದ ಚರಿತ್ರೆ ವಿಭಾಗದ ಮುಖ್ಯಸ್ಥರಾದ ಡಾ. ಕೆ. ಮೋಹನ್‌ಕೃಷ್ಣರೈ ಅವರಿಗೆ ಕೃತಜ್ಞತೆಗಳು.

ಅಧ್ಯಯನದ ಅವಧಿಯಲ್ಲಿ ವಿವಿಧ ಆಯಾಮಗಳನ್ನು ಬೋಧಿಸಿದ ಪ್ರೊ. ಲಕ್ಷ್ಮಣ್ ತೆಲಗಾವಿ, ಪ್ರೊ. ಸಿ. ಆರ್. ಗೋವಿಂದರಾಜು, ಡಾ. ವಿಜಯ್ ಪೂಣಚ್ಚ, ಡಾ. ಚಿನ್ನಸ್ವಾಮಿ ಸೋಸಲೆ ಮತ್ತು ಡಾ. ವಿರೂಪಾಕ್ಷಿ ಪೂಜಾರಹಳ್ಳಿ ಅವರುಗಳ ಸಹಕಾರಕ್ಕೆ ನನ್ನ ಕೃತಜ್ಞತೆಗಳು.

ನನ್ನ ಸಂಶೋಧನೆಯನ್ನು ನಡೆಸಲು ಸೂಕ್ತ ವಾತಾವರಣವನ್ನು ಕಲ್ಪಿಸಿದ ಮಾನ್ಯ ಕುಲಪತಿಗಳಿಗೆ, ಕುಲಸಚಿವರಿಗೆ, ಅಧ್ಯಯನಾಂಗದ ನಿರ್ದೇಶಕರಿಗೆ, ಗ್ರಂಥಪಾಲಕರಿಗೆ ಅಭಾರಿಯಾಗಿದ್ದೇನೆ.

ಸದಾ ಮಗನ ಏಳ್ಗೆಯನ್ನು ಬಯಸುವ ತಂದೆತಾಯಿಯರಾದ ತಿಮ್ಮಣ್ಣ ಮತ್ತು ಬೋರಮ್ಮ ಹಾಗೂ ಪೂಜ್ಯ ಸಮಾನರಾದ ಮಾವನವರಾದ ಎಂ. ಬಿ. ತಿಪ್ಪೇಸ್ವಾಮಿ ಅವರಿಗೆ ನಾನು ಚಿರಋಣಿ.

ಪ್ರೀತಿಯ ಮಡದಿಯಾದ ಎಂ. ಟಿ. ಶಶಿಕಲಾ, ಅಕ್ಕನವರಾದ ಪುಟ್ಟಮ್ಮ ಹಾಗೂ ಸಹೋದರರಿಗೆ ನನ್ನ ಕೃತಜ್ಞತೆಗಳು.

ಪ್ರೀತಿಯ ಉಷಾರಾಣಿ, ಯಶೋಧಾ, ಶಿಲ್ಪಾ ಅವರಿಗೆ ನನ್ನ ನೆನೆಕೆಗಳು.

ನಿಬಂಧಕ್ಕೆ ಸಂಬಂಧಿಸಿದ ಆಕರಗಳನ್ನು ಸಂಗ್ರಹಿಸಲು ಸಹಕರಿಸಿದ ಶ್ರೀ ಹುಸೇನ್ ಮಯ್ಯಾ, ಡಾ. ಬಿ. ಪಿ. ಕುಮಾರ್, ಡಾ. ಎಚ್. ತಿಪ್ಪೇಸ್ವಾಮಿ, ಟಿ. ಗಿರಿಜ, ವಿಜಯಕುಮಾರ್, ಸಂತೋಷ್, ಹನುಮಂತಪ್ಪ, ನಾರಾಯಣ ಮಲ್ಲಾಪುರ, ಪ್ರಭಾಕರ್ ಲಕ್ಕೋಳ್, ಎಚ್. ಎಸ್. ವಸಂತ್, ಗುರುಮೂರ್ತಿ, ರಮೇಶ, ಕೆ. ಎಲ್. ತಿಪ್ಪೇಸ್ವಾಮಿ, ಮಲ್ಲೇಶಪ್ಪ, ಕೊಟ್ರೇಶ್ ಉತ್ತಂಗಿ, ಹರಿಹರದ ಜೈಮುನಿ, ಫ್ರಾನ್ಸಿಸ್ ಡಿ. ಕ್ಸೇವಿಯರ್, ಬ್ರಹ್ಮದೇವ ಹದಳಗಿ, ಹೆಚ್. ಮಲ್ಲಿಕಾರ್ಜುನ, ಓ. ದೇವರಾಜ, ಹಿರೇಬಿದ್ರಿ ಹೋಳಿಬಸಪ್ಪ, ಹನುಮಂತರಾಯ ದೊಡ್ಡಮನಿ, ಡಾ. ಆಂಜನೇಯ, ಓಂ ಪ್ರಕಾಶ್ ನಾಯಕ, ಜೆ. ಬಿ. ಸಿದ್ದನಗೌಡ, ಕೆ. ಎಂ. ರುದ್ರಯ್ಯ, ಎ. ಡಿ. ಬಸವರಾಜ, ಆರ್. ಲೋಹಿತ್‌ಕುಮಾರ್, ಶಶಿಧರ್ ಮಲ್ಲಪ್ಪ, ಸತ್ಯವತಿ, ಮಧು, ಶಶಿಕಾಂತ್ ಭಿಲ್ಲವ, ಇಬ್ರಾಹಿಂ ಇವರಿಗೆ ನನ್ನ ಕೃತಜ್ಞತೆಗಳು.

ಅಕ್ಷರ ಸಂಯೋಜನೆ ಮಾಡಿದ ಅಭಿಗ್ರಾಫಿಕ್ಸ್‌ನವರಿಗೆ ನನ್ನ ಕೃತಜ್ಞತೆಗಳು.

ಟಿ. ತಿಪ್ಪೇಸ್ವಾಮಿ

ಪರಿವಿಡಿ

ಕರ್ನಾಟಕದಲ್ಲಿ ದಾವಣಗೆರೆ ಜಿಲ್ಲೆ



ಆಧಾರ : ದಾವಣಗೆರೆ ಜಿಲ್ಲೆಯ ಅಂಕಿ ಅಂಶಗಳ ನೋಟ ೨೦೦೧-೨೦೦೨

ದಾವಣಗೆರೆ ಜಿಲ್ಲೆ



ಆಧಾರ : ದಾವಣಗೆರೆ ಜಿಲ್ಲೆಯ ಅಂಕಿ ಅಂಶಗಳ ನೋಟ 2001 - 2002

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

೧.೧ ಅಧ್ಯಯನದ ಉದ್ದೇಶ

೧.೨ ಚರಿತ್ರೆ ಪುನರ್‌ರಚನೆ

೧.೩ ಅಧ್ಯಯನ ವಿಧಾನ

೧.೪ ಅಧ್ಯಯನ ವ್ಯಾಪ್ತಿ

ಕರ್ನಾಟಕ ರಾಜ್ಯದ ೨೯ (ರಾಮನಗರ, ಚಿಕ್ಕಬಳ್ಳಾಪುರ ಸೇರಿ) ಜಿಲ್ಲೆಗಳಲ್ಲಿ ದಾವಣಗೆರೆಯೂ ಒಂದು. ಈ ಹಿಂದೆ ಇದು ಮೈಸೂರು ಸಂಸ್ಥಾನದ ಭಾಗವಾಗಿತ್ತು. ಇದು ಫಲವತ್ತಾದ ಭೂಮಿ, ವಾಣಿಜ್ಯ ಕೇಂದ್ರ, ಕೈಗಾರಿಕಾ ಕೇಂದ್ರ ಮುಂತಾದ ಹೆಗ್ಗಳಿಕೆಗೆ ಪ್ರಸಿದ್ಧಿ ಪಡೆದಿದೆ. ಈ ಜಿಲ್ಲೆಯು ಐತಿಹಾಸಿಕ, ಸಾಂಸ್ಕೃತಿಕ, ಧಾರ್ಮಿಕ ಸಂಘಟನೆ ಸಮೃದ್ಧಿಗಳಿಂದ ಕರ್ನಾಟಕಕ್ಕೆ ಅಷ್ಟೇ ಅಲ್ಲ ಅಖಿಲ ಭಾರತ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧಿಯನ್ನು ಪಡೆದಿದೆ. ಈ ಜಿಲ್ಲೆಯು ಕಾಲದಿಂದ ಕಾಲಕ್ಕೆ ತನ್ನದೇ ಆದ ಮಹತ್ವವನ್ನು ಪಡೆಯುತ್ತಾ ಬಂದಿದೆ. ಪ್ರಸ್ತುತವಾಗಿ ಜಿಲ್ಲೆ ಇಡೀ ಕರ್ನಾಟಕದಲ್ಲಿಯೇ ಶೈಕ್ಷಣಿಕವಾಗಿ ಪ್ರಗತಿಯಲ್ಲಿದ್ದು ಇಂಗ್ಲೆಂಡಿನ ಆಕ್ಸ್‌ಫರ್ಡ್ ನಗರ ಎಂದು ಮಾಧ್ಯಮಗಳಲ್ಲಿ ಬಿಂಬಿಸುತ್ತಿದೆ. ಈ ಜಿಲ್ಲೆಗೆ ಸುಮಾರು ೮೦೦ ವರ್ಷಗಳ ಹಿಂದಿನ ಚರಿತ್ರೆಯಿದ್ದಾಗ್ಯೂ, ಕೇವಲ ಎರಡು ಶತಮಾನಗಳಿಂದ ಅತ್ಯಂತ ಶೀಘ್ರವಾಗಿ ಅಭಿವೃದ್ಧಿ ಹೊಂದುತ್ತಿದೆ. ದಾವಣಗೆರೆ ಆರಂಭದಲ್ಲಿ ಒಂದು ಪುಟ್ಟ ಹಳ್ಳಿಯಾಗಿತ್ತು. ಕ್ರಿ.ಶ. ೧೮೧೧ ರಲ್ಲಿ ಕೇವಲ ಐದುನೂರು ಮನೆಗಳಿದ್ದು, ಕ್ರಿ.ಶ. ೧೯೦೦ ರಲ್ಲಿ ಕೇವಲ ೧೦,೦೦೦ ಜನ ಸಂಖ್ಯೆ ಹೊಂದಿದ್ದ ದಾವಣಗೆರೆ ಇಂದು ೨೦೦೧ ರ ಜನಗಣತಿಯ ಪ್ರಕಾರ ಒಟ್ಟು ಐದು ಲಕ್ಷ ಜನಸಂಖ್ಯೆಯನ್ನು ಹೊಂದಿ ಈಗ ಜಿಲ್ಲಾ ಕೇಂದ್ರವಾಗಿದೆ. ಈ ಜಿಲ್ಲೆಯ ಕಾಲಗರ್ಭದಲ್ಲಿ ಹುದುಗಿರುವ ಘಟನಾವಳಿಗಳನ್ನು ಅವಲೋಕಿಸಿದರೆ ಭವ್ಯವಾದ ಚರಿತ್ರೆಯಿರುವುದು ಗೋಚರಿಸುತ್ತದೆ. ಇದರ ಹಿರಿಮೆ ಗರಿಮೆ, ಗರಿಗಳು, ಯಶಸ್ಸು, ವೈಫಲ್ಯಗಳು ಆಕರ್ಷಕವಾಗಿವೆ. ಇಲ್ಲಿನ ಭೌಗೋಳಿಕ ಹಿನ್ನೆಲೆ ಇತಿಹಾಸ ಈ ನೆಲದಲ್ಲಿ ಆಳಿಬಾಳಿದವರ ಚಿತ್ರಣ ಅದ್ಭುತವಾದುದು. ದಾವಣಗೆರೆ ಜಿಲ್ಲೆಯ ಉದ್ದಗಲಕ್ಕೂ ಹಬ್ಬಿರುವ ಬೆಟ್ಟಗುಡ್ಡಗಳ ಸಾಲು, ಕಣಿವೆ ಕೊಳ್ಳಗಳು, ಕೆರೆ-ಬಾವಿಗಳು, ಇಲ್ಲಿರುವ ಕೋಟೆ-ಕೊತ್ತಲಗಳು ಚರಿತ್ರೆಯನ್ನೇ ಪ್ರತಿಬಿಂಬಿಸುವ ಗುಡಿ-ಗುಂಡಾರಗಳು, ಮಠ-ಮಾನ್ಯಗಳು, ಇಲ್ಲಿನ ಶಾಸನಸಂಪತ್ತು, ವಾಸ್ತುಶಿಲ್ಪಕಲೆ, ದೇವಾಲಯಗಳು, ಸ್ಮಾರಕಗಳಿಗೆ ಕೊರತೆ ಇಲ್ಲ. ಅವು ಪ್ರಾಚೀನ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಬಿಚ್ಚಿಡುತ್ತಾ ಸಾಮಾನ್ಯ ಜನರಿಂದ ಸಂಶೋಧಕರವರೆಗೂ ಮೂಕ ವಿಸ್ಮಿತರನ್ನಾಗಿ ಮಾಡುತ್ತದೆ. ಈ ಪ್ರದೇಶದ ಚರಿತ್ರೆಯನ್ನು ಅರ್ಥೈಸಿಕೊಳ್ಳಬೇಕಾದರೆ ದಾವಣಗೆರೆ ಜಿಲ್ಲೆಯ ಊರುಕೇರಿಗಳ ಪ್ರಾದೇಶಿಕ ಪರಿಚಯದ ಒಳಹೊಕ್ಕು ನೋಡಿದಾಗಲೇ ಅದರ ಅರಿವು ಮೂಡುತ್ತದೆ.

ದಾವಣಗೆರೆ ಚಾರಿತ್ರಿಕವಾಗಿ ಮಹತ್ವ ಪಡೆದ ಜಿಲ್ಲೆಯಾಗಿದೆ. ಇತಿಹಾಸಪೂರ್ವ ಕಾಲದ ನೆಲೆಗಳು ಜಿಲ್ಲೆಯಲ್ಲಿ ಗುರುತಿಸಲ್ಪಟ್ಟಿರುವುದರಿಂದ ಜಿಲ್ಲೆಯ ಇತಿಹಾಸವು ಪ್ರಾಗೈತಿಹಾಸಿಕ ಕಾಲದವರೆಗೂ ಹೋಗುತ್ತದೆ. ಆದಿಮಾನವನು ಬಳಸಿ ಬಿಟ್ಟುಹೋದಂತಹ ಶಿಲಾ ಆಯುಧಗಳು, ಮಡಿಕೆ-ಕುಡಿಕೆಗಳು ಈ ನೆಲೆಗಳಲ್ಲಿ ದೊರಕಿದ್ದು, ಇತಿಹಾಸಪೂರ್ವ ಕಾಲದ ಚರಿತ್ರೆಗೆ ಕನ್ನಡಿ ಹಿಡಿದಂತಿದೆ. ಕ್ರಮೇಣ ಮಾನವನು ಲೋಹವನ್ನು ಕಂಡುಕೊಂಡು ಜೀವನ ನಡೆಸತೊಡಗಿದನು. ಕಾಲಾನಂತರ ಮಾನವ ಸಂಘಟಿತನಾಗಿ ಬಾಳತೊಡಗಿದ. ಕ್ರಿ.ಪೂ. ೪ ನೇಶತಮಾನದ ಪೂರ್ವದಲ್ಲಿ ದಕ್ಷಿಣಭಾರತದಲ್ಲಿ ನಂದರು ಆಳ್ವಿಕೆ ನಡೆಸುತ್ತಿದ್ದರು. ದಾವಣಗೆರೆ ಪ್ರದೇಶ ಇವರ ಆಳ್ವಿಕೆಗೆ ಒಳಪಟ್ಟಿತ್ತು. ನಂತರ ಮೌರ್ಯರು ನಂದರನ್ನು ಮೂಲೆಗೊತ್ತಿ ಅವರ ಪ್ರದೇಶವನ್ನು ವಶಪಡಿಸಿಕೊಂಡು ಆಳ್ವಿಕೆ ನಡೆಸಿದರು. ನಂತರ ಶಾತವಾಹನರು, ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಸಾಮಂತನಾಯಕರಾದ ಬೆಳಗುತ್ತಿ ಸಿಂಧರು, ಉಚ್ಚಂಗಿ ಪಾಂಡ್ಯರು, ನೊಳಂಬರು, ಸೇವುಣರು ಮೊದಲಾದವರು ಆಳಿದರು. ನಂತರ ಹೊಯ್ಸಳರು, ವಿಜಯನಗರದ ಅರಸರು ಇವರ ಪತನದ ನಂತರ ಅನೇಕ ಪಾಳೆಯಪಟ್ಟುಗಳು ಹುಟ್ಟಿಕೊಂಡವು. ಅವುಗಳಲ್ಲಿ ದಾವಣಗೆರೆ ಪ್ರದೇಶವನ್ನು ಆಳಿದ ಪಾಳೆಯಗಾರಿಕೆ ಸಂಸ್ಥಾನಗಳಾದ ಚಿತ್ರದುರ್ಗ, ಹರಪನಹಳ್ಳಿ, ಬಸವಾಪಟ್ಟಣ, ಸಂತೇಬೆನ್ನೂರು, ತರೀಕೆರೆ ಸಂಸ್ಥಾನಗಳು ಪ್ರಮುಖವಾಗಿವೆ. ಈ ಎಲ್ಲಾ ಪಾಳೆಯಗಾರ ಸಂಸ್ಥಾನಗಳನ್ನು ಹತ್ತಿಕ್ಕಿ ಹೈದರ್ ಮತ್ತು ಟಿಪ್ಪುಸುಲ್ತಾನರು ಆಳಿದರು. ಟಪ್ಪುವನ್ನು ೪ ನೇ ಆಂಗ್ಲೋ ಮೈಸೂರು ಕದನದಲ್ಲಿ ಆಂಗ್ಲರು ಮಣಿಸಿದ್ದಲ್ಲದೆ ಮೈಸೂರನ್ನು

ತಮ್ಮ ವಶಕ್ಕೆ ತೆಗೆದುಕೊಂಡರು. ಆಗಲೂ ಸಹ ದಾವಣಗೆರೆ ಆಂಗ್ಲರ ಪರೋಕ್ಷ ಆಳ್ವಿಕೆಯ ವ್ಯಾಪ್ತಿಯಲ್ಲಿತ್ತು. ನಂತರ ಮೈಸೂರು ಸಂಸ್ಥಾನದ ಒಡೆಯರು ಆಡಳಿತ ನಡೆಸಿದರು. ೧೯೪೭ ರಲ್ಲಿ ಭಾರತ ಸ್ವಾತಂತ್ರ್ಯಗೊಂಡಾಗ, ಭಾರತದ ಒಕ್ಕೂಟದಲ್ಲಿ ಮೈಸೂರು ಸಂಸ್ಥಾನ ವಿಲೀನಗೊಂಡಿತು. ನಂತರ ಮೈಸೂರು ರಾಜ್ಯದಲ್ಲಿ ದಾವಣಗೆರೆಯು ರಾಜ್ಯದ ಅಂಗವಾಗಿ ಮುಂದುವರೆಯಿತು. ನಂತರ ೧೯೫೬ ರಲ್ಲಿ ವಿಶಾಲ ಮೈಸೂರು ರಾಜ್ಯ ಸ್ಥಾಪನೆಯಾಯಿತು. ಆಗಲೂ ಸಹ ದಾವಣಗೆರೆ ಪ್ರದೇಶ ಈ ವ್ಯಾಪ್ತಿಯಲ್ಲಿ ಸೇರ್ಪಡೆಗೊಂಡಿತು. ೧೯೭೩ ನವೆಂಬರ್ ೧ ರಂದು ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂಬ ನಾಮಕರಣ ಪಡೆಯಿತು. ೧೯೯೭ ರಲ್ಲಿ ಕರ್ನಾಟಕ ಸರ್ಕಾರ ಹೊಸ ಜಿಲ್ಲೆಗಳ ಸ್ಥಾಪನೆಯ ಅಂಗೀಕಾರ ತೆಗೆದುಕೊಂಡಿತು. ಆ ಸಂದರ್ಭದಲ್ಲಿ ದಾವಣಗೆರೆಯು ಒಂದು ಜಿಲ್ಲೆಯಾಗಿ ಹೊರಹೊಮ್ಮಿತು. ಇದಕ್ಕೂ ಪೂರ್ವವಾಗಿ ಈಗಿನ ದಾವಣಗೆರೆ ಜಿಲ್ಲೆಯ ಹಲವು ತಾಲ್ಲೂಕುಗಳು ಬಳ್ಳಾರಿ, ಶಿವಮೊಗ್ಗ, ಚಿತ್ರದುರ್ಗ ಜಿಲ್ಲೆಯಲ್ಲಿ ಹಂಚಿಕೆಯಾಗಿದ್ದವು. ಈ ಜಿಲ್ಲೆಯ ಕೆಲ ತಾಲ್ಲೂಕುಗಳು ೧೯೯೭ ಆಗಸ್ಟ್ ೧೫ ರಂದು ದಾವಣಗೆರೆ ಜಿಲ್ಲೆಗೆ ಸೇರ್ಪಡೆಯಾದವು. ಹೀಗೆ ಆದಿಮಾನವನ ಕಾಲದಿಂದ ಆಧುನಿಕ ಕಾಲದವರೆಗೂ ದಾವಣಗೆರೆ ಪ್ರದೇಶ ಚಾರಿತ್ರಿಕವಾಗಿ ಮಹತ್ವ ಪಡೆದಿದೆ.

೧.೧ ಅಧ್ಯಯನದ ಉದ್ದೇಶ

ದಾವಣಗೆರೆ ಜಿಲ್ಲೆಯನ್ನು ಕುರಿತು ವಿವಿಧ ನೆಲೆಗಳಲ್ಲಿ ಅಧ್ಯಯನ ಮಾಡಿರುವುದನ್ನು ಗಮನಿಸಬಹುದು. ಪ್ರಮುಖವಾಗಿ ಚಾರಿತ್ರಿಕ ಅಧ್ಯಯನ ಕೃತಿಗಳಲ್ಲದೆ ಚರಿತ್ರೆಯೇತರ ಕೃತಿಗಳನ್ನು ಈ ಅಧ್ಯಯನದಲ್ಲಿ ಅವಲೋಕಿಸಲಾಗುವುದು. ಮುಖ್ಯವಾಗಿ ಚರಿತ್ರೆ ರಚನಾಶಾಸ್ತ್ರದ ಹಿನ್ನೆಲೆಯಲ್ಲಿ ರಚಿಸಿರುವ ಚರಿತ್ರೆ ಕುರಿತ ಅಧ್ಯಯನಗಳನ್ನು ಅವಲೋಕಿಸಲಾಗುವುದು. ಚರಿತ್ರೆ ಎಂದರೇನು? ಚರಿತ್ರೆ ರಚನಾಶಾಸ್ತ್ರ ಎಂದರೇನು? ಮತ್ತು ಚರಿತ್ರೆ ಪುನರ್‌ರಚನೆ ಎಂದರೇನು? ಎನ್ನುವುದರ ಬಗ್ಗೆ ಮೊದಲು ತಿಳಿಯುವ ಪ್ರಯತ್ನ ಮಾಡುವುದಾಗಿದೆ. ಭಾರತೀಯರಿಗೆ ಚಾರಿತ್ರಿಕ ಪ್ರಜ್ಞೆ ಇಲ್ಲ ಎಂದು ವಿದೇಶಿಯರು ಮೂದಲಿಸಿದ್ದನ್ನು ನೋಡಿದರೆ, ಭಾರತೀಯರು ಪುರಾಣ ಕಾವ್ಯಗಳಲ್ಲಿ ಚಾರಿತ್ರಿಕ ಸಂಗತಿಗಳನ್ನು ವಿಶ್ಲೇಷಿಸಲು ಪ್ರಯತ್ನಿಸಿದ್ದಾರೆ. ಆದರೂ ಅದು ಕಾವ್ಯವೇ ಹೊರೆತು ಚರಿತ್ರೆ ಆಗಲಾರದು.

ಚರಿತ್ರೆ ಎಂಬ ಪದ ಸಮಗ್ರ ಅರ್ಥವನ್ನು ಒಳಗೊಂಡಿದೆ. ಈ ಕುರಿತು ಹೇಳುವುದಾದರೆ "ಕಾಲಗರ್ಭದಲ್ಲಿ ಹುದುಗಿ ಹೋದ ಅಪೂರ್ವ ಘಟನೆಗಳನ್ನು ಅನ್ವೇಷಿಸಿ ಸಂಶೋಧನೆಯ ಕುಲುಮೆಯಲ್ಲಿ ಕೂಲಂಕಶವಾಗಿ ವೈಜ್ಞಾನಿಕ ರೀತಿಯಲ್ಲಿ ಶೋಧಿಸಿ ಅಸತ್ಯವನ್ನು ತೊಡೆದು ಹಾಕಿ ಸತ್ಯವನ್ನು ಸಾರುವುದೇ ಚರಿತ್ರೆ"[೧].

ಪ್ರೊಫೆಸರ್ ಮಿಟ್ಲೆಂಡ್‌ರವರ ಪ್ರಕಾರ "ಮನುಷ್ಯರು ಏನು ಮಾಡಿದ್ದಾರೆ ಮತ್ತು ಹೇಳಿದ್ದಾರೆ ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ ಅವರು ಏನು ಯೋಚಿಸಿದ್ದಾರೆ ಅದೇ ಚರಿತ್ರೆಯಾಗಿದೆ".[೨]

ಡಯೋನೈಸಿಯಾಸ್‌ನು ಚರಿತ್ರೆಯನ್ನು ಮತ್ತೊಂದು ರೀತಿಯಲ್ಲಿ ಅರ್ಥೈಸಿರುವರು. ಅವರ ಪ್ರಕಾರ "ಚರಿತ್ರೆ ಎಂದರೆ ತತ್ವಶಾಸ್ತ್ರವನ್ನು ಉದಾಹರಣೆಗಳ ಮೂಲಕ ಬೋಧಿಸುವುದು"[೩]

ಈ ಜಗತ್ತಿನಲ್ಲಿ ಮಾನವ ಜೀವಿಸಲು ಪ್ರಾರಂಭಿಸಿದುದರಿಂದ ಇಂದಿನವರೆಗೆ ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಹಿತ್ಯಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಆತನ ಸಾಧನೆಗಳು ಮತ್ತು ವಿಫಲತೆಗಳ ಯಥಾರ್ಥ ನಿರೂಪಣೆಯೇ ಚರಿತ್ರೆ ಎನ್ನಲಾಗಿದೆ.[೪]

ಚರಿತ್ರೆ ರಚನಾಶಾಸ್ತ್ರ ಎಂದರೇನು? ಎಂಬುದನ್ನು ವಿವರಿಸುವುದು ಸುಲಭವಲ್ಲ. ರಚನಾಶಾಸ್ತ ಎಂಬುದು ಸಂಶೋಧನೆಗೆ ಒಳಗಾದ ಸಂಶೋಧಕನು ಯಾವ ವಿಧಾನದಿಂದ ಚರಿತ್ರೆಯನ್ನು ರಚಿಸುವನು ಎಂಬುದನ್ನು ಅರ್ಥೈಸುವುದಾಗಿದೆ. ಚರಿತ್ರೆ ರಚನಾಶಾಸ್ತ್ರವೆಂದರೆ 'ಒಂದು ಸಮಾಜದ ಅಥವಾ ರಾಜ್ಯದ ಚರಿತ್ರೆಯನ್ನು ಕಟ್ಟುವಲ್ಲಿ ಸೂಕ್ತ ಆಕರಗಳೊಂದಿಗೆ ಅಂದಿನ ಸಮಕಾಲೀನ ಸಮಗ್ರ ವಿಷಯಗಳನ್ನು ಸೈದ್ಧಾಂತಿಕ ತಳಹದಿಯ ಮೇಲೆ ರಚನೆ ಮಾಡುವ ಪ್ರಕ್ರಿಯೆ' ಎನ್ನಲಾಗಿದೆ.

ಈ ಚರಿತ್ರೆ ರಚನಾಶಾಸ್ತ್ರದ ರಚನಾ ವಿಧಾನದಲ್ಲಿ ಬೇರೆ ಬೇರೆ ಕಾಲ ಮತ್ತು ಸ್ಥಳದ ನಿರ್ದಿಷ್ಟತೆಯನ್ನು ಹೊಂದಿ ಭಿನ್ನಭಿನ್ನ ಚರಿತ್ರೆಗಳಿವೆ. ಘಟನೆಗಳ ಚರಿತ್ರೆ, ರಾಜಕೀಯ ಸಂಸ್ಥೆಗಳ ಚರಿತ್ರೆ, ಮನುಷ್ಯ-ಪರಿಸರ

ಚರಿತ್ರೆ, ಜನಾಂಗೀಯ ಚರಿತ್ರೆ, ಧಾರ್ಮಿಕ ಚರಿತ್ರೆ, ಕಲೆ ಮತ್ತು ವಾಸ್ತುಶಿಲ್ಪ ಚರಿತ್ರೆ, ನಗರ ಚರಿತ್ರೆ, ದಲಿತ ಚರಿತ್ರೆ, ಸ್ತ್ರೀಚರಿತ್ರೆ, ಆರ್ಥಿಕ ಚರಿತ್ರೆ, ವನ್ಯಜೀವಿ ಚರಿತ್ರೆ ಮುಂತಾದ ವಿಷಯಗಳ ಚರಿತ್ರೆ ಹೀಗೆ ಇವುಗಳನ್ನು ಪ್ರತ್ಯೇಕಗೊಳಿಸಿ ನೋಡುವ ರಚನಾ ವಿಧಾನವಿದೆ. ಈ ಎಲ್ಲಾ ವಿಷಯಗಳೊಂದಿಗೆ ಸಾಮಾನ್ಯ ಗ್ರಹಿಕೆಯಲ್ಲಿಟ್ಟುಕೊಂಡು ನೋಡುವುದು ಒಂದು ದೃಷ್ಟಿಕೋನವಾದರೆ, ಎರಡನೆಯದಾಗಿ ವಿಭಿನ್ನ ಆಯಾಮಗಳು ಪರಸ್ಪರ ಸಂಬಂಧ ಉಳ್ಳವುಗಳಾಗಿದ್ದು ಕಾಲದಿಂದ ಕಾಲಕ್ಕೆ ಆಗುವ ಬದಲಾವಣೆಗಳನ್ನು ಸಮಗ್ರ ದೃಷ್ಟಿಕೋನದಲ್ಲಿ ವಿಶ್ಲೇಷಿಸುವುದು ಒಂದು ವಿಧಾನ.

೧.೨ ಚರಿತ್ರೆ ಪುನರ್‌ರಚನೆ

ಚರಿತ್ರೆ ಪುನರ್ ರಚನೆ ಎಂದರೆ, ಚರಿತ್ರೆ ರಚನಾಶಿಸ್ತಿನಲ್ಲಿ ಅಲಕ್ಷಿಸಲ್ಪಟ್ಟಿರುವ, ಕಡೆಗಣಿಸಿರುವ ವಿಚಾರಗಳನ್ನು ಕುರಿತು ಮರುಪರಿಶೀಲನೆ ಮಾಡಿ ಸತ್ಯಾಸತ್ಯತೆಯನ್ನು ಕಂಡುಕೊಳ್ಳಲು ಮಾಡುವ ಪ್ರಯತ್ನ ಎಂದು ಹೇಳಬಹುದು. ಅಂದರೆ ಚರಿತ್ರೆ ಕುರಿತು ಈಗಾಗಲೇ ಬಂದಿರುವ ಕೃತಿಗಳನ್ನು ಪುನರ್‌ರಚನೆ ಮಾಡುವುದಾಗಿದೆ. ರಚನೆಯಾದ ಕೃತಿಗಳನ್ನು ಎರಡು ಆಯಾಮಗಳಲ್ಲಿ ಕಾಣಬಹುದು. ಮೊದಲನೆಯದಾಗಿ, ಕೃತಿ ಯಾವ ವಿಚಾರವನ್ನು ಹೇಳಲು ಪ್ರಯತ್ನಿಸಿದೆ ಎಂಬುದು, ಎರಡನೆಯದಾಗಿ ಆ ಕೃತಿ ಯಾವ ವಿಚಾರವನ್ನು ಕೈ ಬಿಟ್ಟಿದೆ ಎನ್ನುವುದನ್ನು ಗಮನಿಸಿ ಅಲಕ್ಷಿಸಿಲ್ಪಟ್ಟ, ಕಡೆಗಣಿಸಲ್ಪಟ್ಟ ವಿಚಾರಗಳನ್ನು ಮೇಲೆತ್ತಿಕೊಂಡು ಚರಿತ್ರೆಯನ್ನು ಪುನರ್‌ರಚನೆ ಮಾಡುವುದಾಗಿದೆ.

ಪ್ರಸ್ತುತ ಸಂದರ್ಭದಲ್ಲಿ ಚರಿತ್ರೆ ಪುನರ್‌ರಚನೆ ಅಗತ್ಯವಿದೆ ಎಂದರೆ ತಪ್ಪಾಗಲಾರದು. ಅಂದರೆ ಈಗಾಗಲೇ ಚರಿತ್ರೆ ರಚನಾಶಾಸ್ತ್ರ ಮಾದರಿಯಲ್ಲಿ ರಚನೆಯಾದ ಕೃತಿಗಳು ಬಹುತೇಕವಾಗಿ ಸಾಂಪ್ರದಾಯಿಕ ರಚನಾ ಮಾದರಿಯಲ್ಲಿರುವುದು ಕಂಡುಬರುತ್ತದೆ. ಈ ಮಾದರಿಯಲ್ಲಿ ಉಳ್ಳವರ ಚರಿತ್ರೆ ಬಗ್ಗೆ ಹೆಚ್ಚಿನ ವಿಷಯ ತಿಳಿಸಲಾಗಿದೆ. ಆದರೆ ಅಂದಿನ ಸಮಾಜದಲ್ಲಿ ಅಲಕ್ಷಿಸಲ್ಪಟ್ಟ, ಕಡೆಗಣಿಸಲ್ಪಟ್ಟ ಅನೇಕ ಬುಡಕಟ್ಟು ಸಮುದಾಯದವರ, ದಲಿತರ ಕೃಷಿಕರ, ಕಾರ್ಮಿಕರ, ಸೈನಿಕರ, ಸ್ತ್ರೀಯರ, ಜೊತೆಗೆ ಧರ್ಮ, ಶಿಕ್ಷಣ, ಭಾಷೆ, ಉಡುಗೆ ತೊಡುಗೆ, ಮುಂತಾದ ವಿಚಾರಗಳತ್ತ ಇಂದು ಗಮನ ಹರಿಸಿ ಚರಿತ್ರೆ ರಚಿಸುವುದರಿಂದ ಅವುಗಳಿಗೆ ಚರಿತ್ರೆ ಪುಟಗಳಲ್ಲಿ ಪ್ರಮುಖ ಸ್ಥಾನ ಕಲ್ಪಿಸಿಕೊಡುವುದಲ್ಲದೆ ಚರಿತ್ರೆಯ ವಿಸ್ತಾರ ಹೆಚ್ಚಿದಂತಾಗಿ ಹೆಚ್ಚಿನ ಮಹತ್ವ ದೊರೆತಂತಾಗುತ್ತದೆ. ಆದ್ದರಿಂದ ಇಂದು ಚರಿತ್ರೆ ಪುನರ್‌ರಚನೆ ಆಗುವುದರಿಂದ ಚರಿತ್ರೆಯಲ್ಲಿ ಮರೆಯಾದ ಸತ್ಯಾಸತ್ಯತೆಗಳ ಬಗ್ಗೆ ಸ್ಥಾನ ಕಲ್ಪಿಸಿಕೊಟ್ಟಂತಾಗುತ್ತದೆ.

ಪ್ರಸ್ತುತ ಅಧ್ಯಯನವು ಆರು ಅಧ್ಯಾಯಗಳನ್ನು ಒಳಗೊಂಡಿದೆ. ಮೊದಲ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ವಿಧಾನ ಮತ್ತು ವ್ಯಾಪ್ತಿಯನ್ನು ಕುರಿತು ವಿವರಿಸಲಾಗಿದೆ. ಎರಡನೆಯ ಅಧ್ಯಾಯದಲ್ಲಿ ಜಿಲ್ಲೆಯ ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆಯನ್ನು ಕುರಿತು ತಿಳಿಸಲಾಗಿದೆ. ಇದರಲ್ಲಿ ದಾವಣಗೆರೆ ಪ್ರದೇಶ ಭೌಗೋಳಿಕವಾಗಿ ಕಾಡು, ಬೆಟ್ಟಗುಡ್ಡ, ಹಳ್ಳಕೊಳ್ಳ, ಕೆರೆ, ಕಟ್ಟೆ, ಹಾಗೂ ಕಬ್ಬಿಣ, ಚಿನ್ನ ಮುಂತಾದ ಖನಿಜ ಸಂಪತ್ತುಗಳಿಂದ ಮಹತ್ವ ಪಡೆದಿರುವುದರ ಜೊತೆಗೆ ಜಿಲ್ಲೆಯ ವಿಸ್ತಾರದ ಬಗ್ಗೆ ಹೇಳಲಾಗಿದೆ. ಹಾಗೆಯೇ ದಾವಣಗೆರೆ ಪ್ರದೇಶ ಇತಿಹಾಸ ಪೂರ್ವ ಕಾಲದಿಂದ ಆಧುನಿಕ ಇತಿಹಾಸದ ಕಾಲದವರೆಗೆ ತನ್ನದೇ ಆದ ಚಾರಿತ್ರಿಕ ಮಹತ್ವವನ್ನು ಪಡೆದುಕೊಂಡಿರುವುದರ ಬಗ್ಗೆ ವಿಶ್ಲೇಷಿಸಲಾಗುವುದು.

ಮೂರನೆಯ ಅಧ್ಯಾಯದಲ್ಲಿ ದಾವಣಗೆರೆ ಜಿಲ್ಲೆ ಕುರಿತ ಅಧ್ಯಯನಗಳ ಅವಲೋಕನ ಮಾಡಲಾಗಿದೆ. ಇಲ್ಲಿ ಚರಿತ್ರೆ, ಜನಾಂಗೀಯ, ಕಲೆ ಮತ್ತು ವಾಸ್ತುಶಿಲ್ಪ, ಸಾಹಿತ್ಯ ಕುರಿತ ಅಧ್ಯಯನಗಳ ಜೊತೆಗೆ ಚರಿತ್ರೆಯೇತರ ಕೃತಿಗಳ ಅವಲೋಕನವನ್ನು ಮಾಡಲಾಗಿದೆ. ಮುಖ್ಯವಾಗಿ ಕೈಗಾರಿಕೆ, ಕಾರ್ಮಿಕ, ರಾಜಕೀಯ, ಆರ್ಥಿಕ, ಶೈಕ್ಷಣಿಕ ಕ್ಷೇತ್ರಗಳಿಗೆ ಸಂಬಂಧಿಸಿದ ಕೃತಿಗಳ ಅವಲೋಕನವನ್ನು ಸಹ ಮಾಡಲಾಗಿದೆ. ಇವು ಜಿಲ್ಲೆಯ ಚರಿತ್ರೆಯ ವಿವಿಧ ಮುಖಗಳನ್ನು ಪರಿಚಯಿಸಲು ಹೇಗೆ ಪೂರಕವಾಗಿವೆ ಎಂಬುದನ್ನು ತಿಳಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಚರಿತ್ರೆ ರಚನಾಶಾಸ್ತ್ರದ ಹಿನ್ನೆಲೆಯಲ್ಲಿ ದಾವಣಗೆರೆ ಜಿಲ್ಲೆಯ ಕುರಿತ ಅಧ್ಯಯನದ ಬಗ್ಗೆ ವಿಶ್ಲೇಷಣಾತ್ಮಕವಾಗಿ ಚರ್ಚಿಸಲಾಗಿದೆ. ಹಾಗೆಯೇ ದಾವಣಗೆರೆ ಪ್ರದೇಶದ ಪ್ರಾಚೀನ ಇತಿಹಾಸಕ್ಕೆ ಸಂಬಂಧಿಸಿದಂತೆ ಮಧ್ಯಕಾಲೀನ (ಪಾಳೆಯಗಾರರ) ಚರಿತ್ರೆ ಕುರಿತಂತೆ ಹಾಗೂ ಆಧುನಿಕ ಇತಿಹಾಸ ಕಾಲಕ್ಕೆ

ಸಂಬಂಧಿಸಿದ ಅಂಶಗಳನ್ನು ಚಾರಿತ್ರಿಕ ಕೃತಿಗಳ ಅವಲೋಕನ ಮಾಡುವುದರ ಮೂಲಕ ವಿಶ್ಲೇಷಣೆಗೆ ಒಳಪಡಿಸಿ ಚರ್ಚಿಸಲಾಗಿದೆ. ಹಾಗೂ ಚರಿತ್ರೆಯ ವಿವಿಧ ಆಯಾಮಗಳನ್ನು ಗಮನಿಸುವದಲ್ಲದೆ, ಚರ್ಚೆಗೊಳಪಡಿಸಿ ಸತ್ಯಾಸತ್ಯತೆಗಳನ್ನು ತಿಳಿಯುವ ಪ್ರಯತ್ನ ಮಾಡಲಾಗಿದೆ.

ಐದನೆಯ ಅಧ್ಯಾಯದಲ್ಲಿ ದಾವಣಗೆರೆ ಜಿಲ್ಲೆಯ ಸಮಕಾಲೀನ ಚರಿತ್ರೆ ಅಧ್ಯಯನ ಕುರಿತಾಗಿ ಹಾಗೂ ಪ್ರಸ್ತುತ ಜಿಲ್ಲೆಯ ಚರಿತ್ರೆ ರಚನೆಯಲ್ಲಿನ ಸಾಧ್ಯತೆ ಮತ್ತು ಸವಾಲುಗಳೇನು ಎಂಬುದರ ಬಗ್ಗೆ ಚರ್ಚಿಸಲಾಗಿದೆ. ಮುಖ್ಯವಾಗಿ ಜಿಲ್ಲೆಯ ಚರಿತ್ರೆ ರಚಿಸುವಲ್ಲಿ ಸಾಧ್ಯತೆಗಳೇನು ಎನ್ನುವ ವಿಷಯಕ್ಕೆ ಸಂಬಂಧಿಸಿದಂತೆ ಗ್ರಾಮೀಣ ಜನಜೀವನ, ಶಿಕ್ಷಣ, ಕೃಷಿ, ಕಲೆ, ಸಾಹಿತ್ಯ, ಜನಾಂಗೀಯ, ಧಾರ್ಮಿಕ, ಕೈಗಾರಿಕೆಗಳ ಬಗ್ಗೆ ತಿಳಿಸಲಾಗುತ್ತದೆ. ಪ್ರಸ್ತುತ ದಾವಣಗೆರೆ ಜಿಲ್ಲೆ ಕುರಿತಾಗಿ ಐತಿಹಾಸಿಕ ಸ್ಮಾರಕಗಳ ರಕ್ಷಣೆ, ಜಗಳೂರು ತಾಲ್ಲೂಕಿನ ಮಠ-ಮಂದಿರಗಳ, ಶಾಸನಗಳ ಪರಿಶೀಲನೆ, ಕ್ರೀಡೆ, ತುಂಗಭದ್ರ ನದಿತೀರದಲ್ಲಿನ ಧಾರ್ಮಿಕ ಕ್ಷೇತ್ರಗಳ ಮಹತ್ವ, ವಿಜ್ಞಾನ, ತಂತ್ರಜ್ಞಾನ, ದೇವಾಲಯಗಳಲ್ಲಿರುವ ಭಿತ್ತಿಚಿತ್ರ, ಮೂರ್ತಿಶಿಲ್ಪ, ಮಿಥುನಶಿಲ್ಪಗಳು, ಕೆರೆ, ಬಾವಿ, ಕಾಲುವೆಗಳ, ಹಬ್ಬ ಹರಿದಿನ, ಶೈಕ್ಷಣಿಕ ಪ್ರಗತಿ, ತುಂಗಭದ್ರ ನದಿಪ್ರದೇಶದಲ್ಲಿನ ಜನರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ ಮತ್ತು ಗ್ರಾಮಗಳ ಸ್ಥಿತಿಗತಿಗಳ ಕುರಿತಂತೆ ಅಧ್ಯಯನಗಳಾಗುವ ಸಾಧ್ಯತೆಯನ್ನು ತಿಳಿಸಲಾಗಿದೆ. ಮುಂದುವರಿದು ೧೯೯೭ ರ ನಂತರ ಜಿಲ್ಲೆಯ ಚರಿತ್ರೆ ರಚಿಸುವ ಸಂದರ್ಭದಲ್ಲಿ ಎದುರಾಗುವ ಸಮಸ್ಯೆಗಳೇನು ಎಂಬುದರ ಬಗ್ಗೆ ಚರ್ಚಿಸಲಾಗಿದೆ. ಹಾಗೆಯೇ ಪ್ರಸ್ತುತವಾಗಿ ಜಿಲ್ಲೆಯು ಯಾವ ಸಮಸ್ಯೆಗಳನ್ನು ಎದುರಿಸುತ್ತಿದೆ ಎನ್ನುವುದನ್ನು ಅನುಲಕ್ಷಿಸಿ ಚರ್ಚಿಸಲಾಗಿದೆ. ಅಂಥ ಸಮಸ್ಯೆಗಳಲ್ಲಿ ಜಲಸಮಸ್ಯೆಯೂ ಒಂದು. ಭದ್ರ ನದಿ ನೀರು ಹಂಚಿಕೆಯ ಸಮಸ್ಯೆಯು ಜಿಲ್ಲೆಯನ್ನು ಕಾಡುತ್ತಿದೆ. ಕೈಗಾರಿಕೆ ಕ್ಷೇತ್ರದಲ್ಲಿ ಹತ್ತಿಗಿರಣಿ ಉಗಮ ಮತ್ತು ಅವನತಿ ಹಾಗೂ ಕಾರ್ಮಿಕ ಸಮಸ್ಯೆ ಕುರಿತಂತೆ, ಪರಿಸರ ಚಳವಳಿ, ಬಾಲಕಾರ್ಮಿಕರ ಸಮಸ್ಯೆಗಳು ಜೀವಂತವಾಗಿರುವುದರ ಕುರಿತಂತೆ ಚರ್ಚಿಸಲಾಗಿದೆ. ಕೊನೆಯ ಅಧ್ಯಾಯದಲ್ಲಿ ಫಲಿತಗಳನ್ನು ಕುರಿತು ವಿಶ್ಲೇಷಿಸಲಾಗಿದೆ.

೧.೩ ಅಧ್ಯಯನ ವಿಧಾನ

'ಚರಿತ್ರೆ ರಚನಾಶಾಸ್ತ್ರ ಹಿನ್ನೆಲೆಯಲ್ಲಿ ದಾವಣಗೆರೆ ಜಿಲ್ಲೆಯ ಚರಿತ್ರೆಯನ್ನು ಕುರಿತ ಅಧ್ಯಯನಗಳ ಸಮೀಕ್ಷೆ' ಎಂಬ ಅಧ್ಯಯನವು ಚರಿತ್ರೆ ಸಂಶೋಧನೆಯ ವಿಧಿ-ವಿಧಾನಗಳನ್ನೊಳಗೊಂಡಿದೆ. ದಾವಣಗೆರೆ ಜಿಲ್ಲೆಯನ್ನು ಕುರಿತು ನಡೆದಿರುವ ಅಧ್ಯಯನ, ಸಂಶೋಧನೆಗಳನ್ನು, ಇಲ್ಲಿ ಸಮೀಕ್ಷಿಸುವ ಮುಖ್ಯ ಉದ್ದೇಶವನ್ನು ಈ ಅಧ್ಯಯನವು ಹೊಂದಿದೆ. ಇಲ್ಲಿ ಪ್ರಾಥಮಿಕ ಮತ್ತು ಆನುಷಂಗಿಕ ಆಕರಗಳನ್ನು ಬಳಸಿಕೊಂಡು ಅಧ್ಯಯನ ಮಾಡಲಾಗಿದೆ. ದಾವಣಗೆರೆ ಜಿಲ್ಲೆಯ ಬಗ್ಗೆ ನಡೆಸಿದ ಚಾರಿತ್ರಿಕ ದಾಖಲೆ ಮತ್ತು ವರದಿಗಳಿಂದಲೂ ಮಾಹಿತಿ ಸಂಗ್ರಹಿಸಲಾಗಿದೆ. ಸರ್ಕಾರದ ಗ್ಯಾಸೆಟಿಯರ್, ಸಂಶೋಧನಾ ಪ್ರಬಂಧ, ದಿನಪತ್ರಿಕೆ, ನಿಯತಕಾಲಿಕೆ, ಸ್ಮರಣಸಂಚಿಕೆ, ಬಿಡಿಲೇಖನ ಮುಂತಾದವುಗಳಿಂದ ಮಾಹಿತಿ ಸಂಗ್ರಹಿಸಿ ಪ್ರಸ್ತುತ ಅಧ್ಯಯನದಲ್ಲಿ ಚರ್ಚಿಸಲಾಗಿದೆ. ಪ್ರಾಚೀನ, ಮಧ್ಯಕಾಲೀನ ಮತ್ತು ಆಧುನಿಕವಾಗಿ ದಾವಣಗೆರೆ ಜಿಲ್ಲೆಯ ಚರಿತ್ರೆ ರಚನಾಶಾಸ್ತ್ರ ಕುರಿತು ಸೂಕ್ಷ್ಮವಾಗಿ ಗಮನಿಸಿ ಹೊಸಬೆಳಕನ್ನು ಚೆಲ್ಲುವ ಪ್ರಯತ್ನ ಮಾಡಲಾಗಿದೆ. ದಾವಣಗೆರೆ ಜಿಲ್ಲೆಯನ್ನು ಕುರಿತು ಚರಿತ್ರೆ ರಚನಾಶಾಸ್ತ್ರದ ಹಿನ್ನೆಲೆಯಲ್ಲಿ ವಿವಿಧ ಬಗೆಯ ಅಧ್ಯಯನಗಳನ್ನು ಇಲ್ಲಿ ತೌಲನಿಕ ವಿಮರ್ಶೆಗೊಳಪಡಿಸಲಾಗಿದೆ. ಆ ಮೂಲಕ ಚರಿತ್ರೆಯಿಂದ ಮರೆಯಾದ ಸಂಗತಿಗಳನ್ನು ಬೆಳಕಿಗೆ ತರುವ ಪ್ರಯತ್ನ ಮಾಡಲಾಗಿದೆ. ಇಲ್ಲಿ ಚರಿತ್ರೆ ಕುರಿತು ಬಂದಿರುವ ಕೃತಿಗಳನ್ನು ಅವಲೋಕಿಸುವುದರ ಮೂಲಕ ಅಂತರಶಿಸ್ತು, ಬಹುಶಿಸ್ತುಗಳ ಬಗ್ಗೆ ಒಳನೋಟಗಳನ್ನು ಗ್ರಹಿಸಲಾಗಿದೆ. ದಾವಣಗೆರೆ ಜಿಲ್ಲೆಯ ಚರಿತ್ರೆ ರಚನೆಯಲ್ಲಿ ಆಗಿರುವ ಏರು-ಪೇರುಗಳನ್ನು ಗಮನಿಸಿ, ನೈಜವಾದ ರಚನಾಶಾಸ್ತ್ರದ ಲಕ್ಷಣಗಳ ಮೂಲಕ ಚರಿತ್ರೆಯನ್ನು ಬೆಳಕಿಗೆ ತರಲಾಗುವುದು.

೧.೪ ಅಧ್ಯಯನ ವ್ಯಾಪ್ತಿ

ಭೌಗೋಳಿಕವಾಗಿ ದಾವಣಗೆರೆ ಜಿಲ್ಲೆಯು ಆರು ತಾಲ್ಲೂಕುಗಳನ್ನು ಒಳಗೊಂಡಿದೆ. ದಾವಣಗೆರೆ ೧೫.೦೮.೧೯೯೭ ರವರೆಗೆ ಚಿತ್ರದುರ್ಗ ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರವಾಗಿತ್ತು. ೧೯೯೭ ಆಗಸ್ಟ್ ೧೫ ರಂದು ಕರ್ನಾಟಕದ ಹೊಸ ಜಿಲ್ಲೆಯಾಗಿ ಹೊರಹೊಮ್ಮಿತು. ನೂತನ ಜಿಲ್ಲೆಯಾದ ನಂತರ ಹರಿಹರ, ಜಗಳೂರು.

ದಾವಣಗೆರೆ ಜಿಲ್ಲೆಯಲ್ಲಿ ಉಳಿದವು. ಇದಕ್ಕೆ ಪೂರಕವಾಗಿ ಶಿವಮೊಗ್ಗ ಜಿಲ್ಲೆಯಿಂದ ಹೊನ್ನಾಳಿ ಮತ್ತು ಚನ್ನಗಿರಿ ತಾಲ್ಲೂಕುಗಳನ್ನು ಹಾಗೂ ಬಳ್ಳಾರಿ ಜಿಲ್ಲೆಯಿಂದ ಹರಪನಹಳ್ಳಿ ತಾಲ್ಲೂಕುಗಳನ್ನು ನೂತನ ಜಿಲ್ಲೆಗೆ ಸೇರ್ಪಡೆ ಮಾಡಲಾಯಿತು.[೯] ದಾವಣಗೆರೆ ಜಿಲ್ಲೆಯ ಉತ್ತರದಲ್ಲಿ ಬಳ್ಳಾರಿ ಜಿಲ್ಲೆ, ಪೂರ್ವದಲ್ಲಿ ಚಿತ್ರದುರ್ಗ ಜಿಲ್ಲೆ, ದಕ್ಷಿಣದಲ್ಲಿ ಚಿಕ್ಕಮಗಳೂರು ಜಿಲ್ಲೆ, ಪಶ್ಚಿಮದಲ್ಲಿ ಶಿವಮೊಗ್ಗ ಹಾಗೂ ಹಾವೇರಿ ಜಿಲ್ಲೆಗಳಿಂದ ಸುತ್ತುವರಿದಿದೆ. ಪ್ರಸ್ತುತ ಅಧ್ಯಯನವು ಈ ಜಿಲ್ಲೆಯ ಆರು ತಾಲ್ಲೂಕುಗಳ ಕುರಿತು ಪ್ರಕಟವಾಗಿರುವ ಕೃತಿಗಳನ್ನು ಅವಲೋಕಿಸುವುದರ ಮೂಲಕ ಚರಿತ್ರೆ ರಚನಾಶಾಸ್ತ್ರ ಸ್ವರೂಪ ಮತ್ತು ವಿವಿಧ ಹಂತಗಳನ್ನು ಗುರುತಿಸುವ ಪ್ರಯತ್ನವನ್ನು ಮಾಡಲಾಗಿದೆ.

ಪ್ರಸ್ತುತ ಅಧ್ಯಯನವು ಚರಿತ್ರೆ ಕುರಿತು ರಚಿಸುವ ಕೃತಿಗಳನ್ನು ತಾರ್ಕಿಕವಾಗಿ ವಿಶ್ಲೇಷಿಸುವುದಾಗಿದ್ದರೂ ಇತರೇ ಕ್ಷೇತ್ರಗಳಿಗೆ ಸಂಬಂಧಿಸಿದ ಕೃತಿಗಳನ್ನು ಅವಲೋಕನ ಮಾಡಲಾಗಿದೆ. ದಾವಣಗೆರೆ ಪ್ರದೇಶದ ರಾಜಕೀಯ ಚರಿತ್ರೆ, ಸಾಮಾಜಿಕ ಸ್ಥಿತಿ-ಗತಿ, ಆರ್ಥಿಕ ಸ್ಥಿತಿ-ಗತಿ, ಶೈಕ್ಷಣಿಕ ಸ್ಥಿತಿ-ಗತಿ, ಕಲೆ ವಾಸ್ತುಶಿಲ್ಪ, ಜನಾಂಗೀಯ, ಸಂಸ್ಕೃತಿ ಹಲವು ಬಗೆಯ ಅಧ್ಯಯನಗಳನ್ನು ಈ ವ್ಯಾಪ್ತಿಗೆ ಸೇರಿಸಿಕೊಂಡು ಅಧ್ಯಯನ ಮಾಡಲಾಗಿದೆ. ವಿಶೇಷವಾಗಿ ದಾವಣಗೆರೆ ಜಿಲ್ಲೆಯ ಚರಿತ್ರೆ ಮತ್ತು ಸಂಸ್ಕೃತಿ ಕುರಿತು ಪ್ರಕಟಗೊಂಡ ಕೃತಿಗಳು, ಸಂಶೋಧನಾ ಪ್ರಬಂಧಗಳು ಇಲ್ಲಿ ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ. ಅಧ್ಯಯನದ ಅನುಕೂಲಕ್ಕಾಗಿ ಪ್ರಾಚೀನ ಚರಿತ್ರೆ ಕುರಿತು ಅಧ್ಯಯನಗಳು, ಮಧ್ಯಕಾಲೀನ ಚರಿತ್ರೆ ಕುರಿತ ಅಧ್ಯಯನಗಳು ಮತ್ತು ಆಧುನಿಕ ಚರಿತ್ರೆ ಕುರಿತಂತೆ ಅಧ್ಯಯನಗಳೆಂದು ವಿಗಂಡಸಿಕೊಂಡು ಅಧ್ಯಯನ ಮಾಡಲಾಗಿದೆ. ಅಂತೆಯೇ ಈ ಕುರಿತು ಬಂದಿರುವ ಕೃತಿಗಳನ್ನು ಈ ಅಧ್ಯಯನದ ವ್ಯಾಪ್ತಿಗೆ ಬಳಸಿಕೊಳ್ಳಲಾಗಿದೆ.

ಕೊನೆ ಟಿಪ್ಪಣಿಗಳು

೧. ತಂಬಂಡ ವಿಜಯಪೂಣಚ್ಚ (ಸಂ.), **ಚರಿತ್ರೆ ವಿಶ್ವಕೋಶ,** ಪ್ರಸಾರಾಂಗ, ಕ.ವಿ.ವಿ.ಹಂ. ಪು. ೪

೨. ಮಜುಮ್‌ದಾರ್ ಪಿ. ಆರ್., ಮತ್ತು ಭಾರಧ್ವಾಜ್, **ಇತಿಹಾಸ ಸಂಶೋಧನ ಮಾರ್ಗ,** ಪು. ೩

೩. **ಅದೇ,** ಪು. ೭

೪. **ಪೂರ್ವೋಕ್ತ,** ಪು. ೪

೫. ಶಂಕರನಾರಾಯಣರಾವ್ ಎಸ್.ಪಿ., **ಸ್ವತಂತ್ರ ಗಂಗೆಯ ಸಾವಿರ ತೊರೆಗಳು,** ಪು. ೧, ೨

ಅಧ್ಯಾಯ ಎರಡು

ದಾವಣಗೆರೆ ಜಿಲ್ಲೆಯ ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ

೨.೧ ಭೌಗೋಳಿಕ ಹಿನ್ನೆಲೆ

೨.೨ ಚಾರಿತ್ರಿಕ ಹಿನ್ನೆಲೆ

೨.೧ ಭೌಗೋಳಿಕ ಹಿನ್ನೆಲೆ

ಕರ್ನಾಟಕ ರಾಜ್ಯದ ಮ್ಯಾಂಚೆಸ್ಟರ್ ನಗರವೆಂದು ಖ್ಯಾತಿಗೊಂಡಿದ್ದ ದಾವಣಗೆರೆ ಚಾರಿತ್ರಿಕ, ರಾಜಕೀಯ, ಭೌಗೋಳಿಕ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ವೈಜ್ಞಾನಿಕವಾಗಿ ವಿಶಿಷ್ಟ ಸ್ವರೂಪವನ್ನು ಪಡೆದುಕೊಂಡಿದೆ. ಈ ಜಿಲ್ಲೆಯನ್ನು ಸುತ್ತಲಿನ ಪ್ರಾದೇಶಿಕ ಇತಿಹಾಸದ ಚೌಕಟ್ಟಿನಲ್ಲಿಟ್ಟು ನೋಡಿದಾಗ ಇದರ ಚಾರಿತ್ರಿಕ ಮಹತ್ವವನ್ನು ತಿಳಿಯಬಹುದು. ದಾವಣಗೆರೆ ಹುಟ್ಟಿನ ಬಗ್ಗೆ ಚಾರಿತ್ರಿಕ ಅಂಶಗಳು ಇರದಿದ್ದರೂ ಪ್ರಚಲಿತವಾಗಿರುವ ಸ್ಥಳೀಯ ಹೇಳಿಕೆಗಳನ್ನು ಗಮನಿಸಬಹುದು. ಪ್ರಚಲಿತವಾಗಿರುವ ಹೇಳಿಕೆಯೆಂತೆ ದಾವಣ್ಣನ ಕೆರೆಯಾಗಿದ್ದ ಈ ಪ್ರದೇಶದ ಕೆರೆಯಂಗಳದಲ್ಲಿ ದೊಡ್ಡ ಹುಲ್ಲುಗಾವಲು ಇದ್ದಿತೆಂದು ಆಗಿನ ಕಾಲದಲ್ಲಿಯ ಕುದುರೆ ಸವಾರರು ಮತ್ತು ಎತ್ತಿನಗಾಡಿಗಳು ಮುಂತಾದವುಗಳು ಈ ಒಂದು ಮಾರ್ಗವಾಗಿ ಪ್ರಯಾಣ ಮಾಡುತ್ತಿದ್ದಂತೆ ಈ ಕೆರೆಯಂಗಳದ ಹುಲ್ಲುಗಾವಲಿನಲ್ಲಿ ಕುದುರೆಗಳನ್ನು, ದನಗಳನ್ನು ಎತ್ತುಗಳನ್ನೂ ದವಣಗಳಿಂದ (ದವಣಿ - ಹಗ್ಗ) ಬಿಗಿದು ಕಟ್ಟಿ ವಿಶ್ರಾಂತಿ ಪಡೆದು ಮುಂದೆ ಪ್ರಯಾಣ ಮಾಡುತ್ತಿದ್ದರಂತೆ. ಅಲ್ಲದೆ ದನ-ಎತ್ತುಗಳನ್ನು ಒಂದೇ ಹಗ್ಗದಿಂದ ಕಟ್ಟುತ್ತಿದ್ದು, ಇದೊಂದು ವಿಶಿಷ್ಟ ರೀತಿಯ ಕಟ್ಟಾಗಿದ್ದು 'ದವಣೆಕಟ್ಟು' ಎಂದು ಹೇಳುತ್ತಿದ್ದುದು ಪ್ರಚಲಿತದಲ್ಲಿದೆ. ದವಣೆಕಟ್ಟು ಬಿಗಿದು ದನಗಳನ್ನು ಕಟ್ಟುವ ಸ್ಥಳದ ಪಕ್ಕದಲ್ಲೇ ಕೆರೆ ಇದ್ದುದರಿಂದ 'ದಾವಣಕೆರೆ' ಎಂದು ಹೇಳುತ್ತಿದ್ದರಂತೆ.[೧] ಕಾಲಕ್ರಮದಲ್ಲಿ 'ದವಣಕೆರೆ'ಯನ್ನು ದಾವಣಗೆರೆ ಎಂದು ಹೆಸರಾಗಿರಬೇಕು(ಹೆಚ್ಚಿನ ವಿವರಕ್ಕೆ ಅಡಿಟಿಪ್ಪಣಿ ೨ ಮತ್ತು ೩ನ್ನು ನೋಡಿ).

ದಾವಣಗೆರೆ ನೂರಾರು ದೇವಾಲಯಗಳ ತವರೂರು. ಇಲ್ಲಿ ಹಲವು ದೇವಾಲಯಗಳು ಇದ್ದುದರಿಂದ ಮೊದಲು ದೇವನಕೆರೆ ಎಂದು ಕರೆದಿದ್ದಿರಬಹುದು. ಕ್ರಮೇಣ ಅದು ದಾವಣಗೆರೆಯಾಗಿದೆ. ಹಾಗೆಯೇ ಉಚ್ಚಂಗಿ ದುರ್ಗದಲ್ಲಿ ಆಳ್ವಿಕೆ ನಡೆಸುತ್ತಿದ್ದು ತ್ರಿಭುವನಮಲ್ಲ ಪಾಂಡ್ಯನು ತನ್ನ ಹೆಸರಿನಲ್ಲಿಯೇ ಶಿಬಾರದ ಬಳಿ (ದಾವಣಗೆರೆ ಉಪನಗರ) ಕೆರೆಯೊಂದನ್ನು ಕಟ್ಟಿಸಿದ. ಇದನ್ನು ಶಾಸನವು ಕದಂಬಃ ದೇಸ ಸಹಸ್ರಾಂತರ್ಗತ ಬೆಳ್ಳೂರು ದ್ವಾದಶ ಮದ್ಯ ಬೆಳ್ಳೂರು ಸೀಮಾಂತರ್ಗತ ಚಾಲುಕ್ಯ ಸಮುದ್ರಂ ನಾಮ ತಟಾಕಂ[೨] ಎಂದು ವರ್ಣಿಸಿದೆ. ತ್ರಿಭುವನ ಮಲ್ಲ ಪಾಂಡ್ಯನನ್ನು ತ್ರಿಭುವನ ಮಲ್ಲದೇವ ಎಂದು ಶಾಸನಗಳು ಉಲ್ಲೇಖಿಸಿವೆ. ತ್ರಿಭುವನ ಮಲ್ಲದೇವನು ತನ್ನ ಹೆಸರಿನಲ್ಲಿಯೇ ಕಟ್ಟಿಸಿದ ಕೆರೆ ಸಮೀಪದಲ್ಲಿ ಈ ಗ್ರಾಮವಿದ್ದಿರಬಹುದು. ಆ ಕೆರೆಯ ಬಳಿ ಈ ಗ್ರಾಮ ಇದ್ದುದರಿಂದಾಗಿ ದೇವನ ಕೆರೆ ಎಂದು ಮೊದಲಿಗೆ ಕರೆದಿರಬೇಕು. ಕಾಲಾನಂತರ ದೇವನ ಕೆರೆ ಹೋಗಿ ದಾವಣಗೆರೆ ಆಗಿರಬೇಕು.

ಕರ್ನಾಟಕ ರಾಜ್ಯದ ಮಧ್ಯಭಾಗದಲ್ಲಿರುವ ದಾವಣಗೆರೆ ಸಮುದ್ರ ಮಟ್ಟಕ್ಕಿಂತ ಸರಾಸರಿ ೬೦೨.೬ ಮೀಟರ್ ಎತ್ತರದಲ್ಲಿದೆ. ೧೪°.೨೮ ಅಕ್ಷಾಂಶ ಮತ್ತು ೭೫°.೫೫ ರೇಖಾಂಶದಲ್ಲಿರುವ ಈ ನಗರವು ಬಯಲು ಹಾಗೂ ಸಮತಲದಲ್ಲಿರುವುದರಿಂದ ವರ್ಷದ ಬಹುಕಾಲ ಒಣಹವೆಯಿಂದ ಕೂಡಿರುತ್ತದೆ. ಜನವರಿ ಕೊನೆಯಿಂದ ಪ್ರಾರಂಭವಾದ ಬೇಸಿಗೆಯ ತಾಪಮಾನ ಮಾರ್ಚ್, ಏಪ್ರಿಲ್, ಮೇ ತಿಂಗಳಲ್ಲಿ ಹೆಚ್ಚಿರುತ್ತದೆ. ೭೭.೩° ಫ್ಯಾರನ್‌ಹೀಟ್‌ನಷ್ಟು ವರ್ಷದ ಸರಾಸರಿ ಉಷ್ಣಾಂಶವಿರುತ್ತದೆ. ೫೦ ಶೇಕಡಾ ಸಾಪೇಕ್ಷ ಆರ್ದ್ರತೆಯು ಮಾರ್ಚ್ ತಿಂಗಳಲ್ಲಿರುತ್ತದೆ. ಆದರೆ ಜುಲೈ ಆಗಸ್ಟ್‌ನಲ್ಲಿ ೮೦ ಶೇಕಡಾ ರವರೆಗೂ ಏರುತ್ತದೆ. ಜೂನ್ ತಿಂಗಳಿನಿಂದ ಮಳೆಗಾಲ ಪ್ರಾರಂಭವಾದರೂ ಜುಲೈ, ಆಗಸ್ಟ್, ಸೆಪ್ಟಂಬರ್‌ನಲ್ಲಿ ಹೆಚ್ಚು ಮಳೆಯಾಗಿ ಅಕ್ಟೋಬರ್‌ನವರೆಗೂ ಮಳೆಬರುತ್ತದೆ. ಸರಾಸರಿ ೫೭೮ ಮಿ.ಮೀ ಮಳೆ ಬೀಳುತ್ತದೆ.[೩]

ಪ್ರಸ್ತುತ ಜಿಲ್ಲೆಯ ಪ್ರಮುಖ ನದಿ ತುಂಗಭದ್ರ. ಇದಲ್ಲದೆ ಚಿಕ್ಕ ನದಿಗಳಾದ ಚಿನ್ನಹಗರಿ, ಚಿಕ್ಕಹಗರಿ, ಹರಿದ್ರಾವತಿಗಳು ಜಿಲ್ಲೆಯಲ್ಲಿ ಹರಿಯುತ್ತವೆ. ದೊಡ್ಡ ಹಳ್ಳಗಳಾದ ಶಾಗಲಿಹಳ್ಳ, ಸೂಳೆಕೆರೆಗಳೂ ಸಹ ರೈತರ ಜೀವನಾಡಿಗಳಾಗಿವೆ. ಭದ್ರ ಜಲಾಶಯದಿಂದ ಎರಡು ಕಾಲುವೆಗಳು ಜಿಲ್ಲೆಯಲ್ಲಿ ಪ್ರವಹಿಸಿ ನೀರಾವರಿಗೆ ಅನುಕೂಲವಾಗಿದೆ. ಮಲೆಬೆನ್ನೂರು, ದಾವಣಗೆರೆಯ ಮೂಲಕ ಹರಿಯುವ ಎರಡು ಕಾಲುವೆಗಳು ೭.೭೬.೮೮೮ ಹೆಕ್ಟೇರ್ ಅಥವಾ ೬೦ ಸಾವಿರ ಎಕರೆಗೆ ನೀರುಣಿಸಿದ್ದು ಇದು ಅಚ್ಚುಕಟ್ಟು ಪ್ರದೇಶವಾಗಿ ಮಾರ್ಪಾಡಾಗಿದೆ.[೬]

ಶಾಗಲಿಹಳ್ಳ, ಹರಿದ್ರಾನದಿ ಸಂಗಮ ಸ್ಥಳವಾಗಿರುವ ದೇವರ ಬೆಳಕೆರೆಯಲ್ಲಿ ಆಣೆಕಟ್ಟು ನಿರ್ಮಿಸಲಾಗಿದೆ. ೬೦೦೦ ಸಾವಿರ ಎಕರೆ ಪ್ರದೇಶದಲ್ಲಿ ನೀರು ಹರಡಿದ್ದು ೧೩.೩೧೩ ಎಕರೆಗೆ ನೀರುಣಿಸುತ್ತದೆ. ಚನ್ನಗಿರಿಗೆ ೨೦ ಕಿ.ಮೀ. ದೂರದಲ್ಲಿರುವ ಶಾಂತಿಸಾಗರ ದಕ್ಷಿಣ ಭಾರತದ ದೊಡ್ಡ ಜಲಾಶಯಗಳಲ್ಲಿ ಒಂದಾಗಿದೆ. ೧೧, ೧೨ ನೇ ಶತಮಾನದಲ್ಲಿ ಹಿರೇಹಳ್ಳ ಮತ್ತು ಸೊಪ್ಪಿನ ಹಳ್ಳಗಳಿಗೆ ಕಟ್ಟೆ ಕಟ್ಟಿ ಜಲಾಶಯ ನಿರ್ಮಿಸಲಾಗಿದೆ. ಇಲ್ಲಿಯ ಮುಖ್ಯ ಕಾಲುವೆಗೆ 'ಹರಿದ್ರಾವತಿ' ಎಂದು ಉತ್ತರದ ನಾಲೆಗೆ 'ಸಿದ್ದನಾಲೆ' ಎಂದು ದಕ್ಷಿಣನಾಲೆಗೆ 'ಬಸವನಾಲೆ' ಎಂದು ಹೆಸರಿಸಲಾಗಿದೆ. ಇವುಗಳು ೧.೭೯೨೫ ಹೆಕ್ಟೇರ್ ಭೂಮಿಗೆ ನೀರನ್ನು ಒದಗಿಸುತ್ತವೆ.[೭]

ತುಂಗಭದ್ರಾ ನದಿ ಚನ್ನಗಿರಿ, ಹೊನ್ನಾಳಿ, ದಾವಣಗೆರೆ, ಹರಿಹರ, ಹರಪನಹಳ್ಳಿ ತಾಲ್ಲೂಕುಗಳಲ್ಲಿ ಹರಿಯುತ್ತದೆ. ಆದರೆ ಜಿಲ್ಲೆಯ ಜಗಳೂರು ತಾಲ್ಲೂಕಿಗೆ ಮಾತ್ರ ಹರಿಯುತ್ತಿಲ್ಲ. ಜಿನಗಿ ಹಳ್ಳಕ್ಕೆ ಸಂಗೇನಹಳ್ಳಿ ಬಳಿ ದೊಡ್ಡ ಕೆರೆಯನ್ನು ಕಟ್ಟಿಸಿ ಜಗಳೂರು ತಾಲ್ಲೂಕಿಗೆ ನೀರಾವರಿಗೆ ಅನುಕೂಲ ಮಾಡಲಾಗಿದೆ. ಅಲ್ಲದೆ ದಾವಣಗೆರೆ ಜಿಲ್ಲೆಯಲ್ಲಿ ಒಟ್ಟು ೯೧೭ ಕೆರೆಗಳು ೬೮೫೪೨ ಕಾಲುವೆಗಳು, ೨೧೦೧ ಬಾವಿಗಳು, ೪೮೯೯ ಕೊಳವೆಬಾವಿಗಳು ಇದ್ದು, ಒಟ್ಟು ೧೨೪೬೭೨ ಹೆಕ್ಟೇರು ಭೂಮಿ ನೀರಾವರಿಗೆ ಒಳಪಟ್ಟಿದೆ ಎಂದು ೨೦೦೩-೦೪ರ ಸಮೀಕ್ಷೆಯ ವರದಿ ತಿಳಿಸುತ್ತದೆ.[೮]

ಇಷ್ಟೆಲ್ಲಾ ಜಲಸಂಪತ್ತು ಹೊಂದಿದ ದಾವಣಗೆರೆ ಜಿಲ್ಲೆ ಪ್ರಾಗೈತಿಹಾಸಿಕ ಕಾಲದಿಂದಲೂ ಜನರಿಗೆ ಅಗತ್ಯವಾದ ಜೀವಸೆಲೆಯನ್ನು ಒದಗಿಸುತ್ತಾ ಬಂದಿದೆ. ಪರಿಣಾಮವಾಗಿ ಇಲ್ಲಿನ ನದಿ, ಹಳ್ಳ, ಕೆರೆಗಳ ಸನಿಹದಲ್ಲಿ ಪ್ರಾಗೈತಿಹಾಸಿಕ ಜನವಸತಿಯ ತಾಣಗಳು ಕಂಡುಬರುತ್ತವೆ. ಪ್ರಕೃತಿಗೆ ಹೊಂದಿಕೊಂಡು ಬದುಕುತ್ತಿದ್ದ ಮಾನವರಿಗೆ ಶಿಲಾಯುಧಗಳನ್ನು ತಯಾರಿಸಲು ಉಪಯುಕ್ತವಾದ ಬಂಡೆಕಲ್ಲುಗಳು ಸಹ ನದಿಯ ಇಕ್ಕೆಲಗಳಲ್ಲಿ ಸ್ವಾಭಾವಿಕವಾಗಿ ದೊರಕುವುದರಿಂದ ಪ್ರಾಗೈತಿಹಾಸಿಕ ಕಾಲದ ಮಾನವ ಜಿಲ್ಲೆಯ ವಿವಿಧೆಡೆ ನೆಲೆಸಿರುವುದರ ಬಗೆಗೆ ಮಾಹಿತಿಗಳು ದೊರಕುತ್ತವೆ. ಅಲ್ಲದೆ ಈ ಪ್ರದೇಶದಲ್ಲಿ ಹಲವು ರಾಜವಂಶಗಳು ಆಳ್ವಿಕೆ ನಡೆಸಿ ಕಣ್ಮರೆಯಾಗಿವೆ. ಅವರ ಪರಂಪರೆ, ಸಂಸ್ಕೃತಿಯ ಕುರುಹಾಗಿ ನದಿ ಕೆರೆಯ ಇಕ್ಕೆಲಗಳಲ್ಲಿ ನಿರ್ಮಿಸಿದ ಸ್ಮಾರಕಗಳನ್ನು ಕಾಣಬಹುದಾಗಿದೆ.

ದಾವಣಗೆರೆ ತಾಲ್ಲೂಕಿನಲ್ಲಿ ಮಾಯಕೊಂಡದಿಂದ ಅಣಜಿವರೆಗೆ ಪೂರ್ವದಲ್ಲಿ ಬಹಳಷ್ಟು ಎತ್ತರವಲ್ಲದ ಗುಡ್ಡದ ಸಾಲು ಹಬ್ಬಿದೆ. ದಾವಣಗೆರೆ ಪಕ್ಕದಲ್ಲಿ ಬಾತಿಗುಡ್ಡದ ಸಾಲು, ಹೊನ್ನಾಳಿ ತಾಲ್ಲೂಕಿನ ದಕ್ಷಿಣದಿಂದ ಉತ್ತರಕ್ಕೆ ಬೋಳು ಬೆಟ್ಟದ ದೊಡ್ಡ ಶ್ರೇಣಿ ಇದೆ. ಕಲ್ಲುರಂಗನ ಬೆಟ್ಟವು ಜಿಲ್ಲೆಯಲ್ಲಿ ಅತ್ಯಂತ ಎತ್ತರದ ಬೆಟ್ಟವಾಗಿದೆ(೧೦೩೧ ಅಡಿಗಳು). ಹಾಗೆಯೇ ಕುದುರೆ ಕೊಂಡನ ಬೆಟ್ಟಗಳಿವೆ. ಚನ್ನಗಿರಿ ತಾಲ್ಲೂಕಿನ ದಕ್ಷಿಣ ಮತ್ತು ಪಶ್ಚಿಮ ಭಾಗದಲ್ಲಿ ಬೆಟ್ಟದ ಸಾಲುಗಳಿವೆ. ಹರಪನಹಳ್ಳಿ ತಾಲ್ಲೂಕಿನಲ್ಲಿ ಕಲ್ಲಳ್ಳಿಗುಡ್ಡದ ಶ್ರೇಣಿ ಇದ್ದು, ತಿಮ್ಮಪ್ಪನಬೆಟ್ಟ, ಕಲ್ಲಳ್ಳಿ ಬೆಟ್ಟ, ನರಸಿಂಹದೇವರ ಬೆಟ್ಟ, ತೆಲಗಿ ಗುಡ್ಡದ ಸಾಲುಗಳಿವೆ. ಹರಿಹರ ತಾಲ್ಲೂಕಿನಲ್ಲಿ ಮಲೆಬೆನ್ನೂರು, ಕೊಮಾರನಹಳ್ಳಿ, ಐರಣಿ, ಬಾತಿಗುಡ್ಡದ ಸಾಲುಗಳಿವೆ. ಜಗಳೂರು ತಾಲ್ಲೂಕಿನ ವಾಯವ್ಯದಲ್ಲಿ ಬೆಟ್ಟದ ಸಾಲುಗಳಿದ್ದು ಅವುಗಳಲ್ಲಿ ಕಣಕುಪ್ಪೆಗುಡ್ಡದ ಸಾಲು ಕೊಣಚಗಲ್ಲು ರಂಗಪ್ಪನ ಬೆಟ್ಟ, ಕೊಡದಗುಡ್ಡ, ಹುಲಿಕಲ್ಲು ಗುಡ್ಡದ ಸಾಲುಗಳು, ಬಂಗಾರಕ್ಕನಗುಡ್ಡ, ಮರೆನಹಳ್ಳಿಗುಡ್ಡ ಪ್ರಮುಖವಾಗಿ ಕಂಡುಬರುತ್ತವೆ.

ಇಂಥ ನೈಸರ್ಗಿಕ ಬೆಟ್ಟಗುಡ್ಡಗಳನ್ನು ಹೊಂದಿದ ಈ ಜಿಲ್ಲೆ ವಿವಿಧ ರೀತಿಯ ಶಿಲಾಸಂಪತ್ತನ್ನು, ಖನಿಜ ಸಂಪತ್ತನ್ನು ಹೊಂದಿದೆ. ಮೇಲೆ ತಿಳಿಸಿದಂಥ ಭಾಗವು ಪ್ರಾಚೀನ ಆರ್ಕಿಯನ್ ಕಾಂಪ್ಲೆಕ್ಸ್‌ಗೆ ಸೇರಿದ್ದು[೯] ಇಲ್ಲಿನ ಶಿಲೆಯನ್ನು ಧಾರವಾಡ ಶಿಲಾವರ್ಗ ಮತ್ತು ಜಿರಾಸಿಕ್ ಶಿಲಾವರ್ಗವೆಂದು ಎರಡು ಭಾಗವನ್ನು ಮಾಡಬಹುದು. ಈ ಬೆಟ್ಟಗಳಲ್ಲಿ ಗ್ರಾನೈಟ್ ಶಿಲೆ ಹೇರಳವಾಗಿ ದೊರೆಯುತ್ತಿದ್ದು ಹಾಗೆ ಧಾರವಾಡ ಶಿಲಾವರ್ಗದಲ್ಲಿ ಕಾಣುವ

ಶಿಲೆಯು ಹೊನ್ನಾಳಿ ತಾಲ್ಲೂಕಿನಲ್ಲಿ ಹೆಚ್ಚಿಗೆ ಕಾಣಬಹುದು. ಇದು ಹೊನ್ನಾಳಿ ಗ್ರಾನೈಟ್ ಎಂದೆ ಹೆಸರಾಗಿದೆ. ಅಲ್ಲಲ್ಲಿ ಕಾಂಗ್ಲಾ ಮರೇಟ್, ಬೆಣಚುಕಲ್ಲು ಅಥವ ಸ್ಫಟಿಕದಂತ ಶಿಲೆ ಡೋಲರೈಟ್‌ಡೈ, ವಾಲ್ಕನಿಕ್ ರಾಕ್ಸ್, ಸುಣ್ಣದಕಲ್ಲು, ಸೋಪ್‌ಸ್ಟೋನ್‌ಗಳು ದೊರೆಯುತ್ತವೆ.

ಹೊನ್ನಾಳಿ ತಾಲ್ಲೂಕಿನ ಬಲಭಾಗದಲ್ಲಿ ಕಂಕರ್ ಎಂಬ ಹೆಸರಿನ ಶಿಲೆ ದೊರೆಯುತ್ತದೆ. ಚನ್ನಗಿರಿ ದಕ್ಷಿಣಭಾಗದಲ್ಲಿ ಹೊನ್ನಾಳಿ ಈಶಾನ್ಯ ಮತ್ತು ವಾಯುವ್ಯ ಭಾಗಗಳಲ್ಲಿ ಜಗಳೂರು ತಾಲ್ಲೂಕಿನ ಹೊಸಕೆರೆಯಲ್ಲಿ ಹಾಗೂ ದಾವಣಗೆರೆ ದೇವರ ಬೆಳಕೆರೆಯ ಬಳಿ ಸುಣ್ಣದ ಕಲ್ಲು ಹೇರಳವಾಗಿ ದೊರೆಯುತ್ತದೆ. ದಾವಣಗೆರೆಯ ಹತ್ತಿರವಿರುವ ಮಲೆಬೆನ್ನೂರಿನಲ್ಲಿ ಉತ್ತಮ ಜೇಡಿಮಣ್ಣು ದೊರೆಯುತ್ತದೆ.

ದಾವಣಗೆರೆ ಜಿಲ್ಲೆಯಲ್ಲಿ ಖನಿಜ ಸಂಪತ್ತು ಸಹ ದೊರಕುತ್ತಿದ್ದು ದಾವಣಗೆರೆ ಬಳಿ ತಾಮ್ರ, ಜಗಳೂರು ತಾಲ್ಲೂಕಿನಲ್ಲಿರುವ ಹೊನ್ನೆಮರಡಿಯಲ್ಲಿ ಚಿನ್ನ, ಮರೇನಹಳ್ಳಿಯಲ್ಲಿ ಕಬ್ಬಿಣ, ಹುಲಿಕಟ್ಟೆ ಮತ್ತು ಜಗಳೂರು ತಾಲ್ಲೂಕಿನಲ್ಲಿ ಮ್ಯಾಂಗನೀಸ್ ದೊರೆಯುತ್ತದೆ. ಹಾಗೂ ಉಂಬ್ರಾಣಿ, ಚಿಲಾನಹಳ್ಳಿಗಳಲ್ಲಿ ಟೈಟಾನಿಯಂ ಖನಿಜ ದೊರೆಯುತ್ತದೆ. ಹರಪನಹಳ್ಳಿ ತಾಲ್ಲೂಕಿನಲ್ಲಿ ಕಬ್ಬಿಣದ ಅದಿರು ಸಹ ದೊರೆಯುತ್ತದೆ.

ದಾವಣಗೆರೆ ಜಿಲ್ಲೆಯು ಹೆಚ್ಚಾಗಿ ಬಯಲು ಪ್ರದೇಶದಿಂದ ಕೂಡಿದ್ದರೂ ಸಹ ಸುಮಾರು ೫೦ ಸಾವಿರ ಹೆಕ್ಟೇರ್‌ಗಳಲ್ಲ ಅರಣ್ಯವಿದೆ. ಚನ್ನಗಿರಿ ಮತ್ತು ಹೊನ್ನಾಳಿ ಭಾಗದ ಅರಣ್ಯದಲ್ಲಿ ವಿವಿಧ ರೀತಿಯ ಮರಗಿಡಗಳನ್ನು ಕಾಣುತ್ತೇವೆ. ಹಲಸು, ಬೀಟೆ, ತೇಗ, ಹೊನ್ನೆ, ನಂದಿ, ಶ್ರೀಗಂಧ, ಸಂಪಿಗೆ ಮತ್ತು ದಿಂಡಿಗ, ಬಿದಿರು ಕಾಣಸಿಗುತ್ತದೆ. ಉಳಿದ ತಾಲ್ಲೂಕುಗಳಲ್ಲಿ ಅರಣ್ಯ ಪ್ರದೇಶ ಕಂಡುಬರುವುದಿಲ್ಲ. ಕುರುಚಲು ಗಿಡಗಂಟೆ ಹೆಚ್ಚಾಗಿ ಬೆಳೆಯುತ್ತದೆ. ಜಿಲ್ಲೆಯು ಕೈಗಾರಿಕೆಗಳಿಗೆ ಬೇಕಾಗುವ ಕಚ್ಚಾಪದಾರ್ಥಗಳನ್ನು ಪೂರೈಸುತ್ತಿದ್ದು ಪ್ರಮುಖವಾಗಿ ಕಾಗದ, ಗಂಧ ಮತ್ತು ಬೆಂಕಿಕಡ್ಡಿ ಕಾರ್ಖಾನೆಗಳಿಗೆ ಈ ವಸ್ತುಗಳನ್ನು ಪೂರೈಸುತ್ತಿದೆ. ಕಟ್ಟಡ ನಿರ್ಮಾಣಕ್ಕೆ ಬೇಕಾದ ಮರಮುಟ್ಟುಗಳನ್ನು ಸಹ ಪೂರೈಸುತ್ತಿದೆ. ಬಿಳಿಎಲೆ, ಎಣ್ಣೆಬೀಜ, ಹುಣಸೆಹಣ್ಣು, ಸೀಗೆಕಾಯಿ, ಹಾಲುವಾಣ, ಅಂಟುವಾಳದಕಾಯಿ, ಗೇರುಬೀಜ ಇವು ಸಣ್ಣಪ್ರಮಾಣದ ಅರಣ್ಯ ಉತ್ಪಾದನೆ ವಸ್ತುಗಳಾಗಿವೆ.[೨೦] ಇಂತಹ ಸಂಪತ್ತನ್ನು ಹೊಂದಿದ ದಾವಣಗೆರೆ ಜಿಲ್ಲೆ ಸಂಪತ್ಭರಿತವಾದ ಭೌಗೋಳಿಕ ಪರಿಸರವನ್ನು ಹೊಂದಿದೆ.

೨.೨ ಚಾರಿತ್ರಿಕ ಹಿನ್ನೆಲೆ

ದಾವಣಗೆರೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ದೊರೆತ ಇತಿಹಾಸಪೂರ್ವ ಮಾನವನು ಉಪಯೋಗಿಸಿ ಬಿಟ್ಟು ಹೋದಂಥ ಶಿಲಾ ಸಾಮಾಗ್ರಿಗಳು, ಮಡಿಕೆಕುಡಿಕೆಗಳು, ಶಿಲಾಸಮಾಧಿಗಳು ಪ್ರಾಗೈತಿಹಾಸಿಕ ಮಾನವನ ಬದುಕನ್ನು ಚಿತ್ರಿಸುತ್ತವೆ. ಇತಿಹಾಸ ಕಾಲಕ್ಕೆ ಬಂದಾಗ ಶಾಸನಗಳು, ನಾಣ್ಯಗಳು, ಚೈತ್ಯಾಲಯಗಳು, ದೇವಾಲಯಗಳು, ವೀರಗಲ್ಲು, ಮಾಸ್ತಿಕಲ್ಲುಗಳು, ಕೋಟೆ-ಕೊತ್ತಲಗಳು ಮುಂತಾದವುಗಳ ನಿರ್ಮಾಣದಿಂದ ಜಿಲ್ಲೆಯು ಅರಸರ ಆಳ್ವಿಕೆಗೆ ಒಳಪಟ್ಟಿತ್ತು ಎಂಬುದಕ್ಕೆ ದಾಖಲೆ ಒದಗಿಸುವಲ್ಲಿ ಸಹಕಾರಿಯಾಗಿವೆ. ಜಿಲ್ಲೆಯಲ್ಲಿ ಮೌರ್ಯರು, ಶಾತವಾಹನ, ಕದಂಬ, ಗಂಗ, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಬೆಳಗತ್ತಿ ಸಿಂಧರು, ಉಚ್ಚಂಗಿ ಪಾಂಡ್ಯರು, ನೊಳಂಬರು, ಸೇವುಣರು, ಹೊಯ್ಸಳರು, ವಿಜಯನಗರದ ಅರಸರು, ವಿಜಯನಗರೋತ್ತರ ಪಾಳೆಯಗಾರರಾದ ಚಿತ್ರದುರ್ಗ, ಹರಪನಹಳ್ಳಿ, ಬಸವಪಟ್ಟಣ, ಸಂತೇಬೆನ್ನೂರು ಪಾಳೆಯಗಾರರು, ಹೈದರ್ ಮತ್ತು ಟಿಪ್ಪು ಸುಲ್ತಾನರು, ಆಂಗ್ಲರು, ಮೈಸೂರು ಒಡೆಯರು ಹೀಗೆ ಹತ್ತು ಹಲವು ರಾಜಮನೆತನಗಳು ಆಡಳಿತ ನಡೆಸಿರುವುದನ್ನು ಕಾಣಬಹುದು.

ದಾವಣಗೆರೆ ಜಿಲ್ಲೆಯ ಇತಿಹಾಸವು ಆದಿ ಹಳೆಶಿಲಾಯುಗ ಮಾನವನಿಂದ ಪ್ರಾರಂಭವಾಗುತ್ತದೆ. ಹಳೆಶಿಲಾಯುಗದ ಮಾನವನ ಹಲ ಕುರುಹುಗಳು ದೊರೆತಿರುವುದೇ ಈ ಚರಿತ್ರೆಗೆ ಸಾಕ್ಷಿ. ಶಿಲಾಯುಗದ ನೆಲೆಗಳನ್ನು ಅವುಗಳ ಅವಶೇಷಗಳು, ಬೆಳವಣಿಗೆ ಮತ್ತು ಕುಶಲತೆಯನ್ನು ಅನುಸರಿಸಿ ನಾಲ್ಕು ಹಂತಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ

೧. ಹಳೆಯ ಶಿಲಾಯುಗ

೨. ಸೂಕ್ಷ್ಮಶಿಲಾಯುಗ

೩. ನೂತನ ಶಿಲಾಯುಗ

೪. ಬೃಹತ್ ಶಿಲಾಯುಗ

ರಾಬರ್ಟ್ ಬ್ರೂಸ್‌ಫೂಟ್ ಎಂಬ ವಿದ್ವಾಂಸರು ಈ ಕುರಿತು ಮೊದಲು ಸರ್ವೇಕ್ಷಣ ಕಾರ್ಯ ಮಾಡಿದವರಾಗಿದ್ದಾರೆ. ದಾವಣಗೆರೆ ಜಿಲ್ಲೆಯ ಪ್ರಾಗೈತಿಹಾಸಿಕ ನೆಲೆಗಳ ಕುರಿತಂತೆ ಹಾಗೂ ಶಿವತಾರಕ, ಪ್ರೊ. ಲಕ್ಷ್ಮಣ್ ತೆಲಗಾವಿ, ಸಂಶೋಧಕ ಹೆಚ್. ತಿಪ್ಪೇಸ್ವಾಮಿ, ಇದಕ್ಕೆ ಪೂರಕವಾಗಿ ಸರ್ಕಾರಿ ಗ್ಯಾಸೆಟಿಯರ್, ಕರ್ನಾಟಕ ಚರಿತ್ರೆ ಸಂಪುಟ ಭಾಗ ಒಂದು, ಕರ್ನಾಟಕ ಪರಂಪರೆ ಭಾಗ ಒಂದರ ಅಧ್ಯಯನಗಳಲ್ಲಿ ಇತಿಹಾಸ ಪೂರ್ವಕಾಲದ ಮಾನವನ ನೆಲೆಗಳ ಕುರುಹುಗಳನ್ನು ಪತ್ತೆಹಚ್ಚಬಹುದು. ಹಳೆಶಿಲಾಯುಗಕ್ಕೆ ಸಂಬಂಧಿಸಿದಂತೆ ನೆಲೆಗಳಾದ ಗೋವಿನಕೋವಿ, ಚಿಕ್ಕಬಸೂರು, ಲಿಂಗದಹಳ್ಳಿ, ಹಾಡೋನಹಳ್ಳಿ, ನ್ಯಾಮತಿ, ತಕ್ಕನಹಳ್ಳಿಗಳಲ್ಲಿ ಕುರುಹುಗಳು ದೊರೆತಿವೆ.

ಸೂಕ್ಷ್ಮಶಿಲಾಯುಗಕ್ಕೆ ಸಂಬಂಧಿಸಿದ ನೆಲೆಗಳು ದಾವಣಗೆರೆ ಪ್ರದೇಶದಲ್ಲಿ ಕೊಂಡಜ್ಜಿ, ಮಾಡಲಗೇರಿ, ಕೋನಾಯನಕನಹಳ್ಳಿ, ಚಿಕ್ಕಬಸೂರು, ತಕ್ಕನಹಳ್ಳಿ, ಬೆನಕನಹಳ್ಳಿ, ಹಳೆ ಆಲನಹಳ್ಳಿ, ಹಳೆಚಿಟ್ನಹಳ್ಳಿ, ಹಳೇಲಿಂಗಾಪುರ ಮತ್ತು ಹೊನ್ನಾಳಿ ಪ್ರದೇಶಗಳಲ್ಲಿವೆ.

ನೂತನ ಶಿಲಾಯುಗಕ್ಕೆ ಸಂಬಂಧಪಟ್ಟನೆಲೆಗಳು ದಾವಣಗೆರೆ ಪ್ರದೇಶದಲ್ಲಿ ಮಾಡಲಗೇರಿ, ಹರಿಹರ, ಹಳಸಬಾಳು, ಅಯ್ಯನೂರು, ರಿಡಗೂರು, ನ್ಯಾಮತಿ, ಬೆನಕನಹಳ್ಳಿ, ಸಾಸಿವೆ ಹಳ್ಳಿ, ಹರಪನಹಳ್ಳಿ, ಹಳೆಲಿಂಗಾಪುರ, ಹಾಡೋನಹಳ್ಳಿ, ಹೊಸಳ್ಳಿ[೧೧] ತೆಲಗಿ, ನೀಲಗುಂದ, ಬಾಗಳಿಗಳಲ್ಲಿ ದೊರಕಿವೆ.

ಆಕನೂರು, ತೆಲಗಿ, ನೀಲಗುಂದ, ಮಾಡಲಗೇರಿ, ಕೊಕ್ಕನೂರು, ಕುಮಾರನಹಳ್ಳಿ, ಕಮ್ಮಾರಗಟ್ಟೆ, ರಿಡಗೂರು, ಬನ್ನಿಕೋಡು, ಬೆನಕನಹಳ್ಳಿ, ಬೇಲಿಮಲ್ಲೂರು, ಸಾಸ್ವೆಹಳ್ಳಿ, ಸಿದ್ದಾಪುರ, ಹನುಮಾನಹಳ್ಳಿ, ಹರಗನಹಳ್ಳಿ, ಹಳೆಲಿಂಗಾಪುರ, ಹಾಡೇನಹಳ್ಳಿಗಳಲ್ಲಿ ಬೃಹತ್‌ಶಿಲಾಯುಗಕ್ಕೆ ಸಂಬಂಧಪಟ್ಟ ನೆಲೆಗಳು ದೊರಕಿವೆ.[೧೨]

ಕರ್ನಾಟಕದ ಶಿಲಾಯುಗದ ಜನರು ಪ್ರೋಟೋಅಸ್ಟ್ರಾಯಿಡ್ ಮತ್ತು ಮೆಡಿಟೇರಿಯನ್ ಎಂಬ ಜನಾಂಗಿಯ ವರ್ಗಕ್ಕೆ ಸೇರಿದವರು. ಆದ್ದರಿಂದ ಕರ್ನಾಟಕದ ದಾವಣಗೆರೆಯ ಪ್ರದೇಶದ ಶಿಲಾಯುಗದ ಜನರು ಅಪ್ರೋಅಸ್ಟ್ರಾಲಾಯಿಡ್ ಮತ್ತು ಮೆಡಿಟೇರಿಯನ್ ಜನಾಂಗೀಯ ವರ್ಗಕ್ಕೆ ಸೇರಿದರಾಗಿದ್ದವರೆಂದು ಅಭಿಪ್ರಾಯಪಡುವರು.

ಆದಿಮಾನವನ ಕಾಲದಲ್ಲಿ ಪ್ರಸಿದ್ಧಿಯನ್ನು ಪಡೆದ ದಾವಣಗೆರೆಯ ಪ್ರದೇಶವು ಪುರಾಣಕಾಲದಲ್ಲಿಯೂ ಪ್ರಸಿದ್ಧಿಯನ್ನು ಪಡೆದಿತ್ತು. ಗುಹಾಸುರನೆಂಬ ರಾಕ್ಷಸನು ಇಲ್ಲಿ ನೆಲೆಸಿದ್ದರಿಂದ ಗುಹಾಕ್ಷೇತ್ರವೆಂದು ಹೆಸರಾಗಿತ್ತು. ಮುಂದೆ ಗುಹಾಸುರನು ಪ್ರಜಾಪೀಡಕನಾದಾಗ ದೇವತೆಗಳ ಪ್ರಾರ್ಥನೆಯಂತೆ ಹರಿ ಮತ್ತು ಹರರು ಒಂದಾಗಿ ಅವನನ್ನು ಸಂಹಾರ ಮಾಡಿದರು. ಮುಂದೆ ಹರಿಹರರು ಇಲ್ಲಿಯೇ ನೆಲೆಸಿದರು. ಅಂದಿನಿಂದ ಈ ಕ್ಷೇತ್ರಕ್ಕೆ ಹರಿಹರ ಎಂದೇ ಹೆಸರು ಪಡೆಯಿತು.[೧೩] ಹೀಗೆ ದಾವಣಗೆರೆ ಪ್ರದೇಶ ಪುರಾಣಕಾಲದಲ್ಲೂ ಮಹತ್ವ ಪಡೆದಿರುವುದು ಕಂಡುಬರುತ್ತದೆ.

ಪ್ರಾಗೈತಿಹಾಸಿಕ ಮತ್ತು ಪುರಾಣ ಕಾಲದಲ್ಲಿ ಪ್ರಸಿದ್ಧಿಪಡೆದ ದಾವಣಗೆರೆ ಪ್ರದೇಶವು ಅನೇಕ ಅರಸರ ಆಳ್ವಿಕೆಗೆ ಒಳಪಟ್ಟಿದೆ. ದಾವಣಗೆರೆ ಪ್ರದೇಶವನ್ನು ಮೊದಲು ಆಳ್ವಿಕೆ ನಡೆಸಿದ ರಾಜವಂಶವೆಂದರೆ ಮೌರ್ಯರದು. ಕ್ರಿ.ಪೂ. ಮೂರನೇ ಶತಮಾನದಲ್ಲಿ ಅವರು ಆಳ್ವಿಕೆ ನಡೆಸಿದ್ದರು ಎಂಬುದಕ್ಕೆ ದಾಖಲೆಗಳಿವೆ. ಅಸಗೋಡು ಅಶೋಕನ ಪಟ್ಟಣವಾಗಿತ್ತೆಂದು ದಾವಣಗೆರೆಯ ಭಾಗವಾಗಿರುವ ಶಾಮನೂರು, ಬೇತೂರು ಹಾಗೂ ಹತ್ತಿರದ ಲೋಕಿಕೆರೆಗಳ ಅವಲೋಕೇಶ್ವರ, ತೀರ್ಥಕರ ವಿಗ್ರಹಗಳು ಶಾಸನಗಳಿಂದ ದಾವಣಗೆರೆ ಮೌರ್ಯರ ಆಡಳಿತಕ್ಕೆ ಒಲಪಟ್ಟಿದ್ದಿತೆಂದು ತಿಳಿದುಬರುತ್ತದೆ. ನಂತರ ಮೌರ್ಯರ ಸಮಕಾಲೀನರಾಗಿ ಆಳ್ವಿಕೆ ನಡೆಸಿದವರು. ಶಾತವಾಹನರು ಇವರು ಕ್ರಿ.ಪೂ. ೨೨೦ ರಿಂದ ಕ್ರಿ.ಶ ೨೩೦ ರವರೆಗೆ ಆಳ್ವಿಕೆ ನಡೆಸಿದರು. ದಾವಣಗೆರೆ ಪ್ರದೇಶ ಶಾತವಾಹನರ ಆಡಳಿತದ ಒಂದು

ಪ್ರದೇಶವಾಗಿತ್ತು. ಶಾಸನಗಳಲ್ಲಿ ಶಾತವಾಹನರನ್ನು ಕುಂತಳ ಸ್ವಾಮಿಗಳೆಂದು ಕರೆಯಲಾಗಿದೆ. ಇದಕ್ಕೆ ಪೂಕವಾಗಿ ಜಿಲ್ಲೆಯಲ್ಲಿ ಅಣಜಿಗ್ರಾಮ[೧೪], ಜಗಳೂರು ತಾಲ್ಲೂಕಿನ ಆಕನೂರು ಗ್ರಾಮದಲ್ಲಿ[೧೫] ಸಿಕ್ಕ ಅವಶೇಷಗಳ ಮಾಹಿತಿ ಕೊಡುತ್ತದೆ. ಕರ್ನಾಟಕದ ಮೊದಲ ರಾಜವಂಶವೆಂದು ಖ್ಯಾತಿ ಪಡೆದ ಕದಂಬರು ದಾವಣಗೆರೆ ಪ್ರದೇಶದಲ್ಲಿ ಆಳ್ವಿಕೆಯನ್ನು ನಡೆಸಿದವರು. ದಾವಣಗೆರೆ ಹತ್ತಿರ ಅಣಜಿ ಗ್ರಾಮ ಐತಿಹಾಸಿಕ ಸ್ಥಳವಾಗಿದೆ.[೧೬] ಶಿವಸ್ಕಂಧವರ್ಮನಿಗೆ ಸಂಬಂಧಿಸಿದ ಶಾಸನ ಹಾಗೂ ಕಾಶಿಪುರ ಶಾಸನಗಳಿಂದ ಕ್ರಿ.ಶ. ೩-೬ ಶತಮಾನದವರೆಗೆ ಬನವಾಸಿ ಕದಂಬರ ಆಳ್ವಿಕೆಗೆ ಒಳಪಟ್ಟಿತ್ತು. ಹಾಗೆಯೇ ಕದಂಬರು ಉಚ್ಚಂಗಿ ದುರ್ಗವನ್ನು ತಮ್ಮ ರಾಜ್ಯದ ಪೂರ್ವ ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದರು.[೧೭] ಕದಂಬರ ನಂತರ ಆಳ್ವಿಕೆಗೆ ಬಂದವರು ಬಾದಾಮಿ ಚಾಲುಕ್ಯರು. ಇವರ ಕಾಲಕ್ಕೆ ಸಂಬಂಧಿಸಿದಂತೆ ದಾವಣಗೆರೆ ಪ್ರದೇಶದಲ್ಲಿ ಹರಿಹರ, ಚನ್ನಗಿರಿಗಳಲ್ಲಿ ವಿನಯಾದಿತ್ಯನ ಕಾಲಕ್ಕೆ ಸೇರಿದ ಶಾಸನಗಳು ದೊರೆಕಿವೆ. ಇದರಿಂದ ದಾವಣಗೆರೆ ಪ್ರದೇಶ ಬಾದಾಮಿ ಚಾಲುಕ್ಯರ ಆಳ್ವಿಕೆಗೆ ಒಳಪಟ್ಟಿತ್ತು ಎಂಬುದನ್ನು ಖಚಿತಪಡಿಸುತ್ತದೆ. ಚಾಲುಕ್ಯರನ್ನು ಮೂಲೆಗೊತ್ತಿ ಅಧಿಕಾರಕ್ಕೆ ಬಂದವರು ರಾಷ್ಟ್ರಕೂಟರು. ಕ್ರಿ.ಶ. ೭೯೮ ರಿಂದ ಕ್ರಿ.ಶ. ೯೮೨ ರವರೆಗೆ ಕರ್ನಾಟಕದಲ್ಲಿ ಆಳ್ವಿಕೆ ನಡೆಸಿದ ಇವರು ದಾವಣಗೆರೆ ಪ್ರದೇಶವನ್ನು ತಮ್ಮ ಆಡಳಿತ ವ್ಯಾಪ್ತಿಗೆ ಸೇರಿಸಿಕೊಂಡು ಆಳ್ವಿಕೆ ನಡೆಸಿದರು. ಇದಕ್ಕೆ ಪೂರಕವಾಗಿ ಬಾಗಳಿ, ಚಿರಸ್ತಹಳ್ಳಿ, ಖ್ಯಾಸಾಪುರ, ಕಾಡಜ್ಜಿ ಪ್ರದೇಶಗಳಲ್ಲಿ ದೊರೆತ ಶಾಸನಗಳು ಮಾಹಿತಿ ನೀಡುತ್ತವೆ. ಇವರ ನಂತರ ಆಳ್ವಿಕೆಗೆ ಬಂದವರು ಕಲ್ಯಾಣಿ ಚಾಲುಕ್ಯರು ಕ್ರಿ.ಶ. ೯೭೩ ರಲ್ಲಿ ಎರಡನೇ ತೈಲಪನು ರಾಷ್ಟ್ರಕೂಟರನ್ನು ಮೂಲೆಗೊತ್ತಿ ಕಲ್ಯಾಣಿ ಚಾಲುಕ್ಯ ಮನೆತನವನ್ನು ಸ್ಥಾಪಿಸಿದನು. ಬಾಗಳಿಶಾಸನ, ಹದಡಿ ಶಾಸನಗಳು ಇವರ ಚರಿತ್ರೆಯ ಮೇಲೆ ಬೆಳಕು ಚೆಲ್ಲುತ್ತವೆ. ನೊಳಂಬವಾಡಿ ೩೨೦೦೦, ಕೋಗಳಿ ೫೦೦, ಬಲಕುಂದಿ ೩೦೦ ನಾಡುಗಳನ್ನು ಕಲ್ಯಾಣಿ ಚಾಲುಕ್ಯರ ಸಾಮ್ರಾಜ್ಯಕ್ಕೆ ಒಳಗೊಂಡಿತ್ತು. ಈ ಒಂದು ಕಾಲದಲ್ಲಿ ಚಾಲುಕ್ಯ ಮತ್ತು ಚೋಳರ ನಡುವೆ ನಡೆದ ಯುದ್ಧದಲ್ಲಿ ಕೊನೆಗೆ ಕಲ್ಯಾಣಿ ಚಾಲುಕ್ಯರು ಮೇಲುಗೈ ಸಾಧಿಸಿದರು. ಚಿತ್ರದುರ್ಗ, ತುಮಕೂರು, ಬಳ್ಳಾರಿ, ಅನಂತಪುರಜಿಲ್ಲೆ ಮತ್ತು ಕೋಲಾರ ಜಿಲ್ಲೆಯ ಕೆಲವು ಪ್ರದೇಶಗಳನ್ನು ಒಟ್ಟಾರೆಯಾಗಿ ನೊಳಂಬವಾಡಿ ಎಂದು ಕರೆಯಲಾಗುತ್ತಿತ್ತು. ಇದೇ ಅವಧಿಯಲ್ಲಿ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನ ಬೆಳಗುತ್ತಿಯಲ್ಲಿ ಸಿಂಧರು ಕ್ರಿ.ಶ. ೯೦೦-೧೨೫೦ ರವರೆಗೆ ಆಳ್ವಿಕೆ ನಡೆಸಿದರು. ಇವರನ್ನು ಬೆಳಗುತ್ತಿ ಸಿಂಧರು ಎಂದು ಕರೆಯುವರು. ದಾವಣಗೆರೆಯು ಇವರ ಆಳ್ವಿಕೆಯ ಭೂಭಾಗದ ಪ್ರದೇಶವಾಗಿತ್ತು ಎನ್ನಲಾಗಿದೆ.

೧೧ ಮತ್ತು ೧೨ ನೇ ಶತಮಾನದ ಕರ್ನಾಟಕದ ಇತಿಹಾಸದಲ್ಲಿ ಕ್ರಾಂತಿಕಾರಕ ಶತಮಾನವಾಗಿತ್ತು. ಈ ಕಾಲಾವಧಿಯಲ್ಲಿ ಕಲ್ಯಾಣಿ ಚಾಲುಕ್ಯರ ಸಾಮಂತರಾಗಿ ಉಚ್ಚಂಗಿ ಪಾಂಡ್ಯರು ಆಳ್ವಿಕೆ ನಡೆಸಿದರು. ಇದರಿಂದ ದಾವಣಗೆರೆ ಉಚ್ಚಂಗಿ ಪಾಂಡ್ಯರ ಪಾಂಡ್ಯಮಂಡಲದ ಒಂದು ಬಿಂದುವಾಗಿತ್ತು. ನೊಳಂಬವಾಡಿಯ ಮೂವತ್ತೆರಡು ಸಾವಿರದಲ್ಲಿ ಒಂದಾಗಿತ್ತು. ಈ ಭಾಗಕ್ಕೆ ಎಲೆಬೇತೂರು, ಆನೆಕೊಂಡಗಳು ರಾಜಧಾನಿಯಾಗಿ ಮೆರೆಯುತ್ತಿದ್ದ ಸಂದರ್ಭದಲ್ಲಿ ಪ್ರಪ್ರಥಮವಾಗಿ ಕ್ರಿ.ಶ. ೧೧೨೧ ನೇ ಕಾಲದ ದಾವಣಗೆರೆ ೩ನೇ ಶಾಸನದಲ್ಲಿ 'ದಾವಣಗೆಯ ಸೀಮೆಯಂ' ಎಂದು ಉಲ್ಲೇಖಿಸಲಾಗಿದೆ. ಉಚ್ಚಂಗಿ ಪಾಂಡ್ಯರ ತ್ರಿಭುವನಮಲ್ಲ, ವಿಜಯ, ವೀರರಾಯ, ಪಾಂಡ್ಯರ ಕಾಲದ ಐತಿಹಾಸಿಕ ದಾಖಲೆಗಳು ದಾವಣಗೆರೆಯ ಇತಿಹಾಸಕ್ಕೆ ಬುನಾದಿಯಾಗಿದೆ. ದಾವಣಗೆರೆಯಲ್ಲಿ ಗುಡ್ಡ-ಬೆಟ್ಟಗಳು, ಕೋಟೆ-ಕೊತ್ತಲಗಳು ಕಡಿಮೆ ಇದ್ದರೂ ಜಿಲ್ಲೆಯಲ್ಲಿ ಉಚ್ಚಂಗಿ ದುರ್ಗದ ಕೋಟೆ, ಚನ್ನಗಿರಿ ಕೋಟೆ, ಕಣಕುಪ್ಪೆ ಕೋಟೆ ಇತ್ಯಾದಿ ಕೋಟೆಗಳನ್ನು ಪ್ರಮುಖವಾಗಿ ಕಾಣಬಹುದು.[೧೮]

ಈ ಕಾಲಾವಧಿಯಲ್ಲಿ ನೊಳಂಬರು, ಗಂಗರ, ಚಾಲುಕ್ಯರು, ಚೋಳ ಮತ್ತು ಹೊಯ್ಸಳರ ಮಹಾಸಾಮಂತರಾಗಿ ಆಳ್ವಿಕೆ ನಡೆಸಿದವರಾಗಿದ್ದಾರೆ. ಇದನ್ನು ದೃಢೀಕರಿಸುವಲ್ಲಿ ಕ್ರಿ.ಶ. ೯೨೦ ರ ಜಗಳೂರು ತಾಲ್ಲೂಕಿನ ಮುಷ್ಟೂರು ಗ್ರಾಮದಲ್ಲಿನ ಕಲ್ಲೇಶ್ವರ ದೇವಾಲಯದ ಶಾಸನ, ನಿಟ್ಟೂರಿನ ಕಲ್ಲೇಶ್ವರ ದೇವಾಲಯದಲ್ಲಿನ ಶಾಸನ, ಚನ್ನಗಿರಿ ಮತ್ತು ಹೊನ್ನಾಳಿ ಭಾಗದಲ್ಲಿ ದೊರೆತ ಶಾಸನಗಳು ಮೇಲೆ ಸೂಚಿಸಿದ ರಾಜಮನೆತನಗಳು ಈ ಪ್ರದೇಶವನ್ನೂ ತಮ್ಮ ಆಳ್ವಿಕೆಯ ವ್ಯಾಪ್ತಿಗೆ ಸೇರಿಸಿಕೊಂಡಿದ್ದಕ್ಕೆ ಆಧಾರಗಳನ್ನು ಒದಗಿಸುತ್ತವೆ. ದಾವಣಗೆರೆ ಪ್ರದೇಶದಲ್ಲಿ ಸೇವುಣರು ಸಹ ಆಳ್ವಿಕೆ ನಡೆಸಿದರು. ಹರಿಹರ, ಜಗಳೂರು, ಹರಪನಹಳ್ಳಿ, ಚನ್ನಗಿರಿ, ಹೊನ್ನಾಳಿ ತಾಲ್ಲೂಕುಗಳಲ್ಲಿ ದೊರೆತ ಶಾಸನಗಳು ಸೇವುಣರ ಆಳ್ವಿಕೆಯನ್ನು ಪ್ರಸ್ತಾಪಿಸುತ್ತವೆ.

ಕ್ರಿ.ಶ. ೧೦೦೦ ದಿಂದ ಕ್ರಿ.ಶ. ೧೩೪೦ ರವರೆಗೆ ಕರ್ನಾಟಕದಲ್ಲಿ ಆಳ್ವಿಕೆನಡೆಸಿದ ರಾಜಮನೆತನಗಳಲ್ಲಿ ಹೊಯ್ಸಳ ವಂಶವು ಪ್ರಮುಖವಾದುದಾಗಿದೆ. ಇವರ ಆಳ್ವಿಕೆಗೆ ದಾವಣಗೆರೆಯೂ ಸೇರಿತ್ತು ಎನ್ನುವುದಕ್ಕೆ ಕುಂದಗ್ರಾಮ, ಜಗಳೂರು ತಾಲ್ಲೂಕಿಗೆ ಕಲ್ಲೇದೇವರಪುರ, ಹರಿಹರ, ಉಚ್ಚಂಗಿದುರ್ಗದ ಶಾಸನಗಳೇ ಸಾಕ್ಷಿಯಾಗಿವೆ.[೧೯] ಹಾಗೆಯೇ ಕೆರೆ, ಕಾಲುವೆ, ದೇವಾಲಯ, ಅಗ್ರಹಾರ ಇತ್ಯಾದಿಗಳು ಸಹ ಇವರ ಚರಿತ್ರೆಯನ್ನು ಸಾರುತ್ತಿವೆ. ದೆಹಲಿ ಸುಲ್ತಾನರ ದಾಳಿಗೆ ತುತ್ತಾದ ದಕ್ಷಿಣಭಾರತ ನಂತರ ಮಲ್ಲಿಕಾಫರ್‌ನ ದಾಳಿಗೆ ಸಿಕ್ಕಿ ನಲುಗಿತು. ಆನಂತರ ದಕ್ಷಿಣಭಾರತದ ಆಡಳಿತದಲ್ಲಿ ಸ್ಥಿರತೆ ಮತ್ತು ಶಾಂತಿ ನೆಲೆಗೊಳ್ಳಲು ಕ್ರಿ.ಶ. ೧೩೩೬ ರವರೆಗೆ ಕಾಯಬೇಕಾಯಿತು. ಕ್ರಿ.ಶ. ೧೩೩೬ ರಿಂದ ಕ್ರಿ.ಶ. ೧೫೬೫ ರವರೆಗೂ ಕರ್ನಾಟಕದಲ್ಲಿ ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯು ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಇದಕ್ಕೆ ಪೂರಕವಾಗಿ ವಿದೇಶಿ ಪ್ರವಾಸಿಗರ ಬರವಣಿಗೆಗಳು ಗಮನಸೆಳೆಯುತ್ತವೆ. ದಾವಣಗೆರೆ ಜಿಲ್ಲೆ ವಿಜಯನಗರ ಸಾಮ್ರಾಜ್ಯಕ್ಕೆ ಒಳಪಟ್ಟಿತ್ತೆಂದು ತಿಳಿಯಲು ಆ ಕಾಲದ ಕೆಲವು ದೇವಾಲಯಗಳು ಮತ್ತು ಅಲ್ಲೊಂದು ಇಲ್ಲೊಂದು ದೊರೆತ ಶಾಸನಗಳು, ನಾಣ್ಯಗಳ ಆಧಾರಗಳಿಂದ ದಾವಣಗೆರೆ ಪ್ರದೇಶ ಇವರ ಆಳ್ವಿಕೆಗೆ ಒಳಪಟ್ಟಿತ್ತೆಂದು ತಿಳಿದುಬರುತ್ತದೆ. ದಾವಣಗೆರೆಯ ಶಾಸನ, ಹರಪನಹಳ್ಳಿಯ ಮುತ್ತಿಗೆ ಗ್ರಾಮದ ಶಾಸನ, ಜಗಳೂರು ತಾಲ್ಲೂಕಿನ ಬಿಳಿಚೋಡಿನಲ್ಲಿ ದೊರೆತ ಇಮ್ಮಡಿ ಹರಿಹರನ ನಾಣ್ಯಗಳು, ಚನ್ನಗಿರಿ ತಾಲ್ಲೂಕಿನ ಕೆರೆಬಿಳಿಚಿಯಲ್ಲಿ ದೊರೆತ ತಾಮ್ರದ ನಾಣ್ಯಗಳು ಇವುಗಳಲ್ಲದೆ ನೀರ್ಥಡಿ, ಮಾಯಕೊಂಡ, ಕೊಣಚಗಲ್ಲು, ಕೊಡದಗುಡ್ಡ ಮೊದಲಾದ ಕಡೆ ದೊರೆತ ದೇವಾಲಯಗಳಿಂದ ದಾವಣಗೆರೆ ವಿಜಯನಗರ ಅರಸರ ಅಧೀನದಲ್ಲಿತ್ತೆಂದು ತಿಳಿದು ಬರುತ್ತದೆ.[೨೦] ಕರ್ನಾಟಕದಲ್ಲಿ ವಿಜಯನಗರೋತ್ತರವಾಗಿ ಅಂದರೆ ೧೫೬೫ ರಲ್ಲಿ ವಿಜಯನಗರ ಸಾಮ್ರಾಜ್ಯ ಮಹಮದೀಯರ ದಾಳಿಗೆ ತುತ್ತಾಗಿ ಅಂತ್ಯಗೊಂಡಾದನಂತರ ವಿಜಯನಗರದ ಅರಸರ ಅಧೀನರಾಗಿದ್ದ ಸಾಮಂತರು, ಕಿರುಪಾಳೆಯಗಾರರು ಸರ್ವಸ್ವತಂತ್ರರೆಂದು ಸಾರಿಕೊಂಡರು. ಅವರಲ್ಲಿ ಪ್ರಮುಖವಾಗಿ ಚಿತ್ರದುರ್ಗ ಪಾಳೆಯಗಾರರು ೨೧೧ ವರ್ಷಗಳ ಕಾಲ ಆಳ್ವಿಕೆ ನಡೆಸಿದರು. ಈ ಅವಧಿಯಲ್ಲಿ ದಾವಣಗೆರೆ, ಚಿತ್ರದುರ್ಗ ಪಾಳೆಯಪಟ್ಟಿನ ಸ್ಥಾಪಕ ಮತ್ತಿತಿಮ್ಮಣ್ಣನಾಯಕ ದಾವಣೆಗೆರೆ ತಾಲ್ಲೂಕಿನವನು.[೨೧] ೧೫೬೫ ರಿಂದ ೧೭೭೯ ರವರೆಗೆ ತಿಮ್ಮಣ್ಣನಾಯಕ, ಓಬಣ್ಣನಾಯಕ, ಕಸ್ತೂರಿರಂಪ್ಪನಾಯಕ, ರಾಜಾಮದಕರಿನಾಯಕ ಮುಂತಾದವರು ಆಳ್ವಿಕೆ ನಡೆಸಿದರು. ಕ್ರಿ.ಶ. ೧೭೪೭-೪೮ ರಲ್ಲಿ ಬಿದನೂರಿನ ಪಾಳೆಯಪಟ್ಟಿನ ಆಳ್ವಿಕೆಗೂ ಸೇರಿತ್ತು. ಕ್ರಿ.ಶ. ೧೫೬೫ ರಲ್ಲಿ ಹರಪನಹಳ್ಳಿ ಪಾಳೆಯಗಾರನಾದ ಹಾಗೂ ಸ್ಥಾಪಕನಾದ ದಾದಾನಾಯಕನೆಂಬುವನು ಆಳಿದನು.[೨೨] ಹರಪನಹಳ್ಳಿಯ ಪಾಳೆಯಪಟ್ಟನ್ನು ಒಟ್ಟು ೧೫ ಅರಸರು ಆಳಿದರು. ಇದಕ್ಕೂ ಪ್ರಪ್ರಥಮ ಸೋಮಶೇಖರನಾಯಕ ಪ್ರಸಿದ್ಧ ಅರಸನಾಗಿದ್ದನು. ಕೊನೆಗೆ ಟಿಪ್ಪು ಹರಪನಹಳ್ಳಿ ಪಾಳೆಯಗಾರರನ್ನು ಸೋಲಿಸಿ ಬಂಧನದಲ್ಲಿಟ್ಟನು. ಹಾಗೆಯೇ ಈಗಿನ ಚನ್ನಗಿರಿ ತಾಲ್ಲೂಕಿನ ಬಸವಪಟ್ಟಣದ ಪಾಳೆಯಗಾರರು, ಸಂತೇಬೆನ್ನೂರು ಪಾಳೆಯಗಾರರು ಒಂದು ಶತಮಾನ, ತರಿಕೇರೆ ಪಾಳೆಯಗಾರರು ೧೫೦ ವರ್ಷಗಳ ಕಾಲ ದಾವಣಗೆರೆಯನ್ನೊಳಗೊಂಡಂತೆ ಹಲವು ಜಿಲ್ಲೆಗಳಲ್ಲೂ ಆಳ್ವಿಕೆ ನಡೆಸಿದರು.[೨೩] ಒಂದು ವಿಶೇಷವೆಂದರೆ ದಾವಣೆಗೆರೆ ಪ್ರದೇಶದಲ್ಲೂ ಆಳ್ವಿಕೆ ನಡೆಸಿದ ಎಲ್ಲಾ ಪಾಳೆಯಗಾರರು ಬೇಡ ಅಥವಾ ನಾಯಕ ಸಮುದಾಯದವರು ಎಂದು ಖಚಿತವಾಗುತ್ತದೆ.

ಈ ಎಲ್ಲಾ ಪಾಳೆಯಗಾರರನ್ನು ಹೈದರ್ ಮತ್ತು ಟಿಪ್ಪು ಸುಲ್ತಾನರು ಹತ್ತಿಕ್ಕಿದ್ದಲ್ಲದೆ, ಅವರ ಪಾಳೆಯಗಾರಿಕೆಯ ಪ್ರದೇಶಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡು ಆಳ್ವಿಕೆ ನಡೆಸಿದರು. ೧೭೯೯ ರಲ್ಲಿ ಟಿಪ್ಪು ನಾಲ್ಕನೇ ಆಂಗ್ಲೋ-ಮೈಸೂರು ಕದನದಲ್ಲಿ ಹೋರಾಡಿ ವಿಧಿವಶನಾದ ನಂತರ ಮೈಸೂರು ಸಂಸ್ಥಾನಕ್ಕೆ ಆಂಗ್ಲರು ಅಧಿಕಾರಿ ನೀಡಿ ಮುಮ್ಮಡಿ ಕೃಷ್ಣರಾಜ ಒಡೆಯರನ್ನು ಅಧಿಕಾರಕ್ಕೆ ತಂದರು. ಈ ಕಾಲಾವಧಿಯಲ್ಲಿ ದಾವಣಗೆರೆ ಮೈಸೂರು ಸಂಸ್ಥಾನದ ಉತ್ತರದ ಗಡಿಯಾಗಿತ್ತು. ಅಂದರೆ ೧೭೯೯ ರ ನಂತರ ದಾವಣಗೆರೆ ಪ್ರದೇಶದಲ್ಲಿ ಬ್ರಿಟಿಷರು ಪರೋಕ್ಷವಾಗಿ ಆಡಳಿತ ನಡೆಸತೊಡಗಿದರು ಎನ್ನಬಹುದು.

೧೮೦೦ ರಿಂದ ೧೮೫೭ ರ ಕಾಲಾವಧಿಯಲ್ಲಿ ಬ್ರಿಟಿಷರ ನೀತಿಯನ್ನು ಕಂಡು ಕರ್ನಾಟಕದ ಹಲವಾರು ಕಡೆಗಳಲ್ಲಿ ಪ್ರತಿಭಟನೆಗಳು ನಡೆದವು. ಅಂಥ ಪ್ರತಿಭಟನೆಯನ್ನು ಮಾಡಿದವರಲ್ಲಿ ಚನ್ನಗಿರಿ ಧೊಂಡಿಯವಾಘನು ಪ್ರಮುಖನಾಗಿದ್ದಾನೆ. ಈತನನ್ನು ಆಂಗ್ಲರು ಬಂಧಿಸಿ ರಾಯಚೂರಿನ ಗೊಂಡಿಯಾರ್‌ನಲ್ಲಿ ನೇಣುಗಂಬಕ್ಕೆ

ಏರಿಸಿದರು.[೨೪] ನಂತರ ಮುಮ್ಮಡಿ ಕೃಷ್ಣರಾಜ ಒಡೆಯರ ಆಡಳಿತಾವಧಿಯಲ್ಲಿ ಹಲವಾರು ಕಡೆ ರೈತರಪ್ರತಿಭಟನೆಗಳು ನಡೆದವು. ಈ ಪ್ರತಿಭಟನೆಗಳನ್ನು ಅಡಗಿಸಲು ಆಂಗ್ಲರ ಸಹಾಯವನ್ನು ಪಡೆದು ದಮನಗೊಳಿಸಿದರು. ಇದರಿಂದ ಆಂಗ್ಲರು ಮುಮ್ಮಡಿ ಕೃಷ್ಣರಾಜ ಒಡೆಯರು ಅಸಮರ್ಥರೆಂದು ಗ್ರಹಿಸಿ ಅಧಿಕಾರದಿಂದ ಕೆಳಗಿಳಿಸಿ ಕಮಿಷನರ್‌ರ ಆಳ್ವಿಕೆ ಪ್ರಾರಂಭಿಸಿದರು. ಈ ಅವಧಿಯಲ್ಲಿ ದಾವಣಗೆರೆ ಪ್ರದೇಶ ಹಲವು ರೀತಿಯ ಯೋಜನೆಗಳಿಂದ ಮೈಸೂರು ಸಂಸ್ಥಾನಕ್ಕೆ ಸಂಪರ್ಕ ಪಡೆಯಿತು. ೧೮೮೧ ರವರೆಗೂ ಕಮಿಷನರ ಆಡಳಿತ ವ್ಯಾಪ್ತಿಗೆ ಈ ಪ್ರದೇಶ ಸೇರಿತ್ತು. ಈ ಅವಧಿಯಲ್ಲಿ ಬೆಂಗಳೂರಿನಿಂದ ಹರಿಹರಕ್ಕೆ ರಸ್ತೆಮಾರ್ಗ ಕಲ್ಪಿಸಲಾಯಿತು. ೧೮೬೮ ರಲ್ಲಿ ಹರಿಹರದಲ್ಲಿ ಹರಿಯುವ ತುಂಗಭದ್ರಾ ನದಿಗೆ ಸೇತುವೆ ನಿರ್ಮಾಣ ಮಾಡಲಾಯಿತು. ೧೮೭೬-೭೮ ರ ಅವಧಿಯಲ್ಲಿ ಭೀಕರ ಬರಗಾಲದಿಂವ ಸಂಸ್ಥಾನದ ಪ್ರದೇಶಗಳು ತತ್ತರಿಸಿದವು. ಇವುಗಳಲ್ಲಿ ಚನ್ನಗಿರಿ, ಹೊನ್ನಾಳಿ ತಾಲ್ಲೂಕುಗಳು ಸಹ ಸಾಕಷ್ಟು ನಷ್ಟವನ್ನು ಅನುಭವಿಸಿ ಸಂಕಷ್ಟಕ್ಕೆ ಈಡಾದವು. ಇದಕ್ಕಾಗಿ ಸರ್ಕಾರ ಪ್ರಯೋಜನಕ ಯೋಜನೆಗಳನ್ನು ಕೈಗೊಂಡರೂ ಸಹ ಪ್ರತಿಫಲ ಸಿಗಲಿಲ್ಲ.[೨೫]

೧೮೮೫ ರಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯಾಯಿತು. ಕರ್ನಾಟಕ ರಾಜ್ಯವು ಸ್ವಾತಂತ್ರ್ಯಹೋರಾಟದ ನಾಯಕರೊಂದಿಗೆ ಸಂಪರ್ಕವಿಟ್ಟುಕೊಂಡಿತ್ತು. ಗಾಂಧೀಜಿಯವರ ಪ್ರವೇಶದಿಂದ ಸ್ವಾತಂತ್ರ್ಯ ಚಳವಳಿ ನೂರ್ಮಡಿಗೊಂಡಿತು. ಗಾಂಧೀಜಿಯವರ ಸತ್ಯ, ಅಹಿಂಸೆ, ಶಾಂತಿ ಮಂತ್ರಗಳಿಗೆ ಓಗೊಟ್ಟು ಈ ಪ್ರದೇಶದ ಜನರು ಸ್ವದೇಶಿ ಚಳವಳಿಯಲ್ಲಿ ಭಾಗಿಯಾದರು. ದೇಶಾದ್ಯಂತ ಈ ಚಳವಳಿ ತೀವ್ರಗೊಂಡಂತೆ ಕರ್ನಾಟಕದ ದಾವಣಗೆರೆ ಪ್ರದೇಶದ ಹಲವಾರು ಗ್ರಾಮಗಳಲ್ಲಿ ತೀವ್ರತರವಾದ ಪ್ರತಿಭಟನೆಗಳು ನಡೆದವು. ೧೯೩೨ ರ ಶಿವಪುರ ಧ್ವಜ ಸತ್ಯಾಗ್ರಹ, ೧೯೩೯ ರ ಅರಣ್ಯ ಚಳವಳಿ, ೧೯೩೯-೪೦ ರ ಕಾನೂನುಭಂಗ ಚಳವಳಿ, ೧೯೪೨ ರ ಕ್ವಿಟ್‌ಇಂಡಿಯಾ ಚಳವಳಿಗಳಲ್ಲಿಯೂ ಭಾಗಿಯಾಗಿ ೧೯೪೭ ರ ಸ್ವತಂತ್ರ್ಯ ಗಳಿಕೆಗೆ ತನ್ನದೇ ಆದ ಕೊಡುಗೆಯನ್ನು ನೀಡಿದೆ.[೨೬]

ಕರ್ನಾಟಕದ ಏಕೀಕರಣಕ್ಕೆ ದಾವಣಗೆರೆ ಜಿಲ್ಲೆಯ ಕೊಡುಗೆ ಸಹ ಪ್ರಮುಖವಾಗಿದೆ. ಸ್ವಾತಂತ್ರ್ಯ ಚಳವಳಿಯ ಜೊತೆಯಲ್ಲಿಯೇ ಹರಿದು ಹೋದ ಕನ್ನಡನಾಡು ಒಂದೇ ಆಡಳಿತದಡಿ ಬರಲು ಕರ್ನಾಟಕದಲ್ಲಿ ಭಾಷಾವಾರು ಪ್ರಾಂತ ರಚನೆಯನ್ನು ಕೈಗೊಳ್ಳಲು ಒತ್ತಾಯಿಸಿದರು. ೨೦ ನೇ ಶತಮಾನದ ಮೊದಲ ದಶಕಗಳಲ್ಲಿ ನಡೆದ ಹಲವು ಏಕೀಕರಣ ಕುರಿತಾದ ಹೋರಾಟದಲ್ಲಿ ದಾವಣೆಗೆರೆ ಜಿಲ್ಲೆಯ ಪಾತ್ರ ಮಹತ್ವಪೂರ್ಣವಾಗಿದೆ. ಮೊದಲನೆಯದಾಗಿ ಏಕೀಕರಣ ಕುರಿತ ಹೋರಾಟವು ದಾವಣಗೆರೆ, ಹರಿಹರ ಇನ್ನಿತರ ಸ್ಥಳಗಳಲ್ಲ ೧೯೩೭ ರಲ್ಲಿ ನಡೆದ ಹೋರಾಟದ ನಾಯಕರುಗಳಾಗಿದ್ದ ಎಸ್. ನಿಜಲಿಂಗಪ್ಪನವರಿಗೆ ಇಲ್ಲಿನ ಜನರು ತಮ್ಮ ಸಂಪೂರ್ಣವಾದ ಬೆಂಬಲ ವ್ಯಕ್ತಪಡಿಸಿದರು. ೧೯೪೬ ರಲ್ಲಿ ದಾವಣಗೆರೆಯಲ್ಲಿ ಏಕೀಕರಣ ಸಭೆ ನಡೆಯಿತು. ಇದರಲ್ಲಿ ದೇಶಿ ಸಂಸ್ಥಾನಗಳ ಪ್ರಜೆಗಳಿಗೆ ಸಂಬಂಧಪಟ್ಟ ನಿರ್ಣಯವೊಂದು ಅಂಗೀಕೃತವಾಯಿತು. ಇದು ಅಖಿಲಕರ್ನಾಟಕ ಸ್ಥಾಪನೆಯ ದೃಷ್ಟಿಯಿಂದ ದೇಶೀಯ ಹಾಗೂ ಬ್ರಿಟಿಷ್ ಕರ್ನಾಟಕ ಎಂಬ ಭಿನ್ನತೆಗಳು ಅಳಿಸಿ ಹಾಕುವುದರ ಹಿನೆಲೆಯಲ್ಲಿ ಕೈಗೊಂಡ ನಿರ್ಣಯವಾಗಿತ್ತು. ಭಾಷಾವಾರು ಪ್ರಾಂತ್ಯ ರಚನೆಯ ವಿಷಯವನ್ನು ಮಹತ್ವದ ವಿಷಯವೆಂದು ಕರ್ನಾಟಕ ಏಕೀಕರಣ ಸಮಿತಿಯವರು ತಿಳಿದು ಕರ್ನಾಟಕ ಏಕೀಕರಣ ಕಾರ್ಯವು ಬೇಗನೇ ಮುಗಿಯಬೇಕೆಂದು ಈ ಮೂಲಕ ಪರಿಷತ್ತು ಸೂಚಿಸಿ ನಿರ್ಣಯವನ್ನು ಅಂಗೀಕರಿಸಿತು. ಹಾಗೆಯೇ ೧೯೪೮ ರಲ್ಲಿ ದಾವಣಗೆರೆಯಲ್ಲಿ ಕರ್ನಾಟಕ ಯುವ ಅಧಿವೇಶನ ನಡೆಯಿತು. ಈ ಸಭೆಯು ಸಹ ಕರ್ನಾಟಕ ಏಕೀಕರಣಕ್ಕೆ ಬೆಂಬಲ ವ್ಯಕ್ತಪಡಿಸಿತು. ೧೯೪೯ ರಲ್ಲಿ ದಾವಣಗೆರೆಯಲ್ಲಿ ವಾಣಿಜ್ಯಸಂಘವು ಸಂಯುಕ್ತ ಕರ್ನಾಟಕದ ಪ್ರಾಂತ್ಯದ ಚಳವಳಿಗೆ ಸಹಾಯಮಾಡುವುದಕ್ಕಾಗಿ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಗೆ ಹತ್ತು ಲಕ್ಷರೂಪಾಯಿಗಳ ನಿಧಿಯನ್ನು ಕೊಡಿಸಿಕೊಡಬೇಕೆಂದು ನಿರ್ಧರಿಸಿತು. ಇದಾದನಂತರ ೧೯೪೯ ರಲ್ಲಿ ಕೆ.ಪಿ.ಸಿ. ಸಭೆ ಜರುಗಿತು. ಈ ಸಮ್ಮೇಳನ ಅಖಂಡ ಕರ್ನಾಟಕ ರಚಿಸಬೇಕೆಂದು ಒತ್ತಾಯಿಸಿತು. ಇಂತಹ ಹಲವಾರು ಹೋರಾಟಗಳ ಫಲವಾಗಿ ವಿಶಾಲ ನವೀಕೃತ ಮೈಸೂರು ರಾಜ್ಯವು ನವೆಂಬರ್ ಒಂದು ೧೯೫೬ ರಲ್ಲಿ ಅಸ್ತಿತ್ವಕ್ಕೆ ಬಂದಿತು.[೨೭] ಈ ನಿಟ್ಟಿನಲ್ಲಿ ಕರ್ನಾಟಕ ಏಕೀಕರಣ ಪೂರ್ವದಲ್ಲಿ ನಡೆದ ಘಟನೆಗಳು ಸಹ ಮಹತ್ವವೆನಿಸವೆ. ಆದರೆ ಕರ್ನಾಟಕವೆಂದು ನಾಮಕರಣಗೊಂಡಿದ್ದು ೧೯೭೩ ರ ನವೆಂಬರ್ ಒಂದರಂದು. ಹಂತಹಂತವಾಗಿ ಅಭಿವೃದ್ಧಿ ಹೊಂದಿದ ದಾವಣಗೆರೆ

ಕ್ರಮೇಣ ಕೈಗಾರಿಕೆ, ವಾಣಿಜ್ಯ ಕೇಂದ್ರವಾಗಿ ಬೆಳೆಯಿತು. ೨೦೦೧ ರ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿ ಒಟ್ಟು ೧೭೮೯.೬೯೩ ರಷ್ಟಿದೆ. ಮಹಿಳೆಯರು ೭.೩೭.೫೭೮ ರಷ್ಟು, ಪುರುಷರು ೯.೧೭.೩೪೦ ರಷ್ಟಿದ್ದಾರೆ.[೨೮] ಹೀಗೆ ದಾವಣಗೆರೆ ಜಿಲ್ಲೆ ಭೌಗೋಳಿಕವಾಗಿ ಇತಿಹಾಸಪೂರ್ವಕಾಲದಿಂದ ಆಧುನಿಕ ಇತಿಹಾಸ ಕಾಲದವರೆಗೂ ತನ್ನದೇ ಆದ ಚಾರಿತ್ರಿಕ ಮಹತ್ವವನ್ನು ಪಡೆದುಕೊಂಡಿದೆ.

ಟಿಪ್ಪಣಿಗಳು

೧. ಗಿರಿಜ.ಟಿ., ಚಿತ್ರದುರ್ಗ ಜಿಲ್ಲಾದರ್ಶಿನಿ, ರೇಖಾಪ್ರಕಾಶನ, ದಾವಣಗೆರೆ, ೧೯೯೧, ಪು. ೪೮೯

೨. ಗಿರಿಜ.ಟಿ., ದಾವಣಗೆರೆ ದರ್ಶಿನಿ, ನಿಹಾರಿಕಾ ಪ್ರಕಾಶನ, ದಾವಣಗೆರೆ, ೧೯೮೮, ಪು. ೫

ಶ್ರೀ ಹಿ. ಚಿ. ಶಾಂತವೀರಯ್ಯನವರು ದಾವಣಗೆರೆಯನ್ನು ಹೀಗೆ ವಿವೇಚಿಸಿದ್ದಾರೆ.

ಅ) ದಾವಣ + ಕೆರೆ

ದಾವಣಿ = ದಾವಣಿ, ಹಗ್ಗ, ಕಣ್ಣಿ: ದಾವ = ಅಡವಿ, ಕಾಡು, ಕಾಡ್ಗಿಚ್ಚು

ದಾವಣ = ದಾವಣಿ ಸಂಸ್ಕೃತ: ದಾವನಿ = ಕಟ್ಟುವ ಹಗ್ಗ

ದಮರ = ಗುಂಪು, ಸಮೂಹ

ಬ) ಕೆರೆ = ಪ್ರವಾಹವನ್ನು ತಡೆದು ಏರಿ ಹಾಕಿ ನಿಲ್ಲಿಸಿದ ಪ್ರದೇಶ ಜಲಾಶಯ

ದೇವನ ಕೆರೆ = ದೇವ ಒಂದು ಹೆಸರು ಆ ಹೆಸರಿನ ಸೂಚಕವಾಗಿ ಕಟ್ಟಿದ ಕೆರೆ ಅಥವಾ ದೇವನು ಕಟ್ಟಿದ ಕೆರೆ.

ಕ) ದಾವನ + ನಗರಿ: ದಾವ = ಯಾವ

ನಗರಿ = ನಗರಗಳಲ್ಲಿ ದೊಡ್ಡದು

ಡ) ದಾವನ + ಕೇರಿ = ದಾವನ ಎಂಬುವನ ಕೇರಿ - ಬೀದಿ

ಇ) ದೇವನ ಕೇರಿ + ದೇವರು ನೆಲೆಸಿದ ಬೀದಿ - ರಸ್ತೆ, ಸ್ಥಳ

ದೇವನ ಕೆರೆ ದ್ಯಾವನಕೆರೆ ದ್ಯಾವನಕೆರೆ ದಾವಣಗೆರೆ ಎಂದು ಹೆಸರಾಗಿರಬಹುದು.[2]

೩. ಗಿರಿಜ.ಟಿ., ದಾವಣಗೆರೆ ಇದು ನಮ್ಮ ಜಿಲ್ಲೆ, ನಿಹಾರಿಕ ಪ್ರಕಾಶನ, ದಾವಣಗೆರೆ, ೨೦೦೧, ಪು. ೩೦

ಚಿತ್ರದುರ್ಗದ ಸಂಶೋಧಕರಾದ ಪ್ರೊ. ಬಿ. ರಾಜಶೇಖರಪ್ಪನವರು ದಾವಣಗೆರೆ, ದಾವಣ ಕೆರೆ ಎಂಬ ಎರಡು ಭಾಗಗಳಿಂದ ಕೂಡಿದೆಯೆಂದೂ 'ದಾವಣ' ಎಂಬುದು 'ದಾವಣಿ' ಅರ್ಥದ ಶಬ್ದವಾಗಿಲ್ಲವೆಂದೂ ಅಭಿಪ್ರಾಯಪಡುತ್ತಾರೆ. ಇವರು ಮಂಡ್ಯ ಜಿಲ್ಲೆಯ ನಾಗಮಂಗಲದ ೧೨ ನೇ ಶತಮಾನದ ದಾನಶಾಸನ ಒಂದರಲ್ಲಿ 'ದಾವಂಣ್ಣನ ಕೇರಿ' ಎಂದು ಉಲ್ಲೇಖವಿರುವ ಕಾರಣ ದಾವಣಗೆರೆ ಜಿಲ್ಲೆಯ ದಾವಣಗೆರೆ ಸಹ 'ದಾವಣ' ಎನ್ನುವ ವ್ಯಕ್ತಿಯೊಬ್ಬನ ಊರು ಎಂದು ಅಭಿಪ್ರಾಯ ಪಟ್ಟಿದ್ದಾರೆ. ಮೇಲ್ಕಂಡ ಹೆಸರಿನ ಶಾಸನದಲ್ಲಿ ವ್ಯಕ್ತಿಯ ಹೆಸರಿನ ಕೆರೆಯೊಂದಿದೆ. ಈ ಹಿನ್ನೆಲೆಯಲ್ಲಿ ದಾವಣಗೆರೆಯು ಸಹ ವ್ಯಕ್ತಿಯೊಬ್ಬನ ಹೆಸರಿನ ಊರಾಗಿರಬೇಕು ಎನ್ನುವ ಅಭಿಪ್ರಾಯ ಇಟ್ಟುಕೊಂಡಿದ್ದಾರೆ.[3]

೪. ತಿಪ್ಪೇಸ್ವಾಮಿ ಹೆಚ್., ದಾವಣಗೆರೆ ಜಿಲ್ಲೆಯ ದೇವಾಲಯಗಳ ಅಧ್ಯಯನ, ಪಿಎಚ್.ಡಿ.ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫. ಅದೇ, ಪು. ೭

೬. ಸತ್ಯನಾರಾಯಣ್ ನಾಡಿಗ್ (ಸಂ.), ವಿಜಯ, ೧೯೯೯, ಪು.೫೧-೫೩

೭. ಸುಂದರರಾಮರಾವ್ ಕೆ., ಸುವರ್ಣ ಕರ್ನಾಟಕ ದರ್ಶನ, ಕರ್ನಾಟಕ ಸಾಹಿತ್ಯಪರಿಷತ್ತು, ೨೦೦೬, ಪು.೮೪೧

೮. ತಿಪ್ಪೇಸ್ವಾಮಿ, ಹೆಚ್., ಪೂರ್ವೋಕ್ತ, ಪು.೯

೯. ಪ್ರೊ.ಷೇಕ್ ಅಲಿ. ಬಿ. ಮತ್ತು ಅ.ಸುಂದರ (ಸಂ.), ಕರ್ನಾಟಕ ಚರಿತ್ರೆ, ಸಂಪುಟ ಒಂದು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭, ಪು.೩೪

೧೦. ತಿಪ್ಪೇಸ್ವಾಮಿ ಹೆಚ್., **ಪೂರ್ವೋಕ್ತ**, ಪು. ೫೬೨, ೫೭೨, ೫೭೩

೧೧. ಶಿವತಾರಕ್ ಕೆ. ಬಿ., **ಕರ್ನಾಟಕದ ಪುರಾತತ್ವನೆಲೆಗಳು**, ಪ್ರಸಾರಾಂಗ, ಕ.ವಿ.ವಿ.ಹಂಪಿ, ೨೦೦೧, ಪು. ೩೩೦-೩೪೨

೧೨. ಲಕ್ಷ್ಮಣ್ ತೆಲಗಾವಿ, **ಮೌರ್ಯ ಮತ್ತು ಶಾತವಾಹನ ಯುಗ**, ಪ್ರಸಾರಾಂಗ, ಕ.ವಿ.ವಿ.ಹಂಪಿ, ೨೦೦೪ ಪು. ೨೦೬

೧೩. ಸತ್ಯನ್ ಬಿ. ಎನ್., **ಚಿತ್ರದುರ್ಗ ಡಿಸ್ಟ್ರಿಕ್ಟ್ ಗ್ಯಾಸೆಟಿಯರ್**, ಗವರ್ನಮೆಂಟ್ ಪ್ರೆಸ್, ಬೆಂಗಳೂರು, ೧೯೬೭, ಪು. ೨೭

೧೪. ಗಿರಿಜ ಟಿ., ಮತ್ತು ಶೋಭ, ಎಚ್.ಜಿ, ಸಂ., **ಕರ್ಪೂರ ಸ್ಮರಣಸಂಚಿಕೆ**, ರಾಜ್ಯಮಟ್ಟದ ಮೂರನೇ ಮಹಿಳಾ ಸಮಾವೇಶ, ದಾವಣಗೆರೆ, ೨೦೦೨, ಪು.೩೬

೧೫. ಸೋಮಶೇಖರ್ ಎಸ್.ವೈ., **ಆಕನೂರು ಗ್ರಾಮದ ಬಳಿ ಆದಿಇತಿಹಾಸ ಕಾಲದ ಕುರುಹುಗಳು**, ಇತಿಹಾಸದರ್ಶನ, ಸಂಪುಟ ೧೨, ೧೯೯೭, ಪು. ೧೨, ೧೩

೧೬. ವಿರೂಪಾಕ್ಷಿಪೂಜಾರಹಳ್ಳಿ, **ಚಿನ್ನಹಗರಿಸಿರಿ**, ಚಿನ್ನಹಗರಿ ಪ್ರಕಾಶನ, ಪೂಜಾರಹಳ್ಳಿ, ೨೦೦೬, ಪು.೫೧

೧೭. ಮಹದೇವ ಸಿ., ಸುಬ್ಬಣ್ಣರೈ ಮತ್ತು ಮಾಧವಪೆರಾಜೆ, **ಹೊಸಪೇಟೆ ತಾಲ್ಲೂಕು ದರ್ಶನ**, ಪ್ರಸಾರಾಂಗ, ಕ.ವಿ.ವಿ.ಹಂ., ೨೦೦೨, ಪು.೧೪

೧೮. ಗಿರಿಜ ಟಿ., ಮತ್ತು ಶೋಭ ಎಚ್.ಜಿ., **ಪೂರ್ವೋಕ್ತ**, ಪು.೩೬

೧೯. ತಿಪ್ಪೇಸ್ವಾಮಿ ಹೆಚ್. **ಪೂರ್ವೋಕ್ತ**, ಪು.೨೨-೫೫

೨೦. **ಅದೇ** ಪು. ೫೯

೨೧. ಸತ್ಯನ್ ಬಿ.ಎನ್., **ಪೂರ್ವೋಕ್ತ**, ಪು.೫೩

೨೨. ಸದಾಶಿವಪ್ಪ ಕುಂಬಾ., **ಹರಪನಹಳ್ಳಿ ಪಾಳೆಯಗಾರರು**, ಕ.ಸಾ.ಪ., ಬೆಂಗಳೂರು, ೧೯೯೯, ಪು. ೭-೧೪

೨೩. ರಾಜರಾಮಹೆಗಡೆ ಮತ್ತು ಅಶೋಕ ಶೆಟ್ಟರ್, ಸಂ., **ಮಲೆಕರ್ನಾಟಕದ ಅರಸು ಮನೆತನಗಳು**, ಕ.ವಿ.ವಿ.ಹಂಪಿ, ೨೦೦೧, ಪು. ೨೪೫

೨೪. ಸೂರ್ಯನಾಥ ಯು. ಕಾಮತ್, **ಕರ್ನಾಟಕ ರಾಜ್ಯ ಗ್ಯಾಸೆಟಿಯರ್**, ಭಾಗ ೧, ಕರ್ನಾಟಕ ರಾಜ್ಯ ಸರ್ಕಾರ, ಬೆಂಗಳೂರು, ೧೯೮೪, ಪು. ೨೭೧

೨೫. ಷೇಕ್‌ಅಲಿ ಬಿ., **ಕರ್ನಾಟಕ ಚರಿತ್ರೆ ಸಂಪುಟ ೬**, ಪ್ರಸಾರಾಂಗ, ಕ.ವಿ.ವಿ.ಹಂ., ೧೯೯೭, ಪು. ೧೯೨-೨೨೫

೨೬. ಹೀರೇಬಿದ್ರಿ ಹೊಳಿಬಸಪ್ಪ, **ದಾವಣಗೆರೆ ಜಿಲ್ಲೆಯ ಸ್ವದೇಶಿ ಚಳವಳಿ**, ಹಂಪಿ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಎಂ.ಫಿಲ್. ಪ್ರಬಂಧ, ೨೦೦೪-೨೦೦೫, ಪು.೩೮

೨೭. ಅಶೋಕ ಶೆಟ್ಟರ್, **ಸ್ಟಡೀಸ್ ಇನ್ ಕರ್ನಾಟಕ ಹಿಸ್ಟರಿ ಅಂಡ್ ಕಲ್ಚರ್**, ವ್ಯಾಲ್ಯೂಮ್೫, ೨೦೦೫, ಪು. ೧೫೩, ೧೫೪

೨೮. ಅಂಜನಪ್ಪ ಬಿ. ಎಚ್., **ಕರ್ನಾಟಕದಲ್ಲಿ ಹತ್ತಿ ಹಿಂಜುವ ಕಾರ್ಖಾನೆಗಳಲ್ಲಿರುವ ಮಹಿಳಾ ಕಾರ್ಮಿಕರ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳು: ಸಮಾಜಶಾಸ್ತ್ರೀಯ ಅಧ್ಯಯನ**, ಕುವೆಂಪು ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪಿಎಚ್.ಡಿ. ಪ್ರಬಂಧ (ಅಪ್ರಕಟಿತ), ೨೦೦೨, ಪು. ೧೦೪

ಅಧ್ಯಾಯ ಮೂರು

ದಾವಣಗೆರೆ ಜಿಲ್ಲೆ ಕುರಿತ ಅಧ್ಯಯನಗಳ ಅವಲೋಕನ

ಕರ್ನಾಟಕ ರಾಜ್ಯದ ೨೯ ಜಿಲ್ಲೆಗಳಲ್ಲಿ ದಾವಣಗೆರೆ ಜಿಲ್ಲೆ ಒಂದಾಗಿದ್ದು, ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೂ ಒಂದಲ್ಲಾ ಒಂದು ರೀತಿಯಿಂದ ಮಹತ್ವವಾದ ಚರಿತ್ರೆಯನ್ನು ಹೊಂದಿದೆ. ಇಂಥ ಮಹತ್ವ ಪಡೆದ ಜಿಲ್ಲೆಯ ಚರಿತ್ರೆ ಕುರಿತ ಅಧ್ಯಯನಗಳ ಅವಲೋಕನದ ಜೊತೆಗೆ ಕೈಗಾರಿಕೆ, ಕಾರ್ಮಿಕ, ರಾಜಕೀಯ, ಸಾಹಿತ್ಯ ಮತ್ತು ಶೈಕ್ಷಣಿಕ ಕ್ಷೇತ್ರಗಳ ಕುರಿತ ಅಧ್ಯಯನಗಳ ಅವಲೋಕನವನ್ನು ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ. ಒಂದು ಪ್ರಾಂತ್ಯದ ಅಥವಾ ಜಿಲ್ಲೆಯ ವಿವರಣೆಯನ್ನು ಒದಗಿಸುವ ಸರ್ಕಾರದ ಅಂಗೀಕೃತವಾದ ಪ್ರಕಟಣೆಯೇ ಗ್ಯಾಸೆಟಿಯರ್ ಎನ್ನಬಹುದಾಗಿದೆ.

೧. ಚಿತ್ರದುರ್ಗ ಡಿಸ್ಟ್ರಿಕ್ಟ್ ಗ್ಯಾಸೆಟಿಯರ್, ಬಿ. ಎನ್. ಸತ್ಯನ್, ೧೯೬೭

ದಾವಣಗೆರೆ ನೂತನ ಜಿಲ್ಲೆಯಾಗುವ ಮೊದಲು ಈ ಕೃತಿ ಪ್ರಕಟವಾಗಿದೆ. ಪ್ರಸ್ತುತ ಸರ್ಕಾರಿ ಗ್ಯಾಸೆಟಿಯರ್ ಈಗಿನ ದಾವಣಗೆರೆ ಜಿಲ್ಲೆಯ ದಾವಣಗೆರೆ, ಹರಿಹರ, ಜಗಳೂರು ತಾಲ್ಲೂಕುಗಳನ್ನು ಒಳಗೊಂಡಂತೆ ಸಮಸ್ತ ಚಿತ್ರದುರ್ಗ ಜಿಲ್ಲೆಯ ಪ್ರತಿಯೊಂದು ತಾಲ್ಲೂಕಿನ ವಿವರವನ್ನು ಪರಿಚಯಿಸಿಕೊಡುವ ಅತ್ಯಮೂಲ್ಯ ಆಕರ ಸಾಮಾಗ್ರಿಯಾಗಿದೆ. ಹಾಗೆಯೇ ಸಮಗ್ರ ಚಿತ್ರದುರ್ಗ ಜಿಲ್ಲೆಯ ವಿವರಗಳನ್ನು ಒಳಗೊಂಡಿದೆ.

೨. ಕರ್ನಾಟಕ ಪರಂಪರೆ, ಮೈಸೂರು ರಾಜ್ಯ ಸರ್ಕಾರ, ೧೯೭೦

ಕರ್ನಾಟಕ ಇತಿಹಾಸಕ್ಕೆ ಸಂಬಂಧಿಸಿದಂತೆ ಮಧ್ಯಕಾಲ ಹಾಗೂ ಆಧುನಿಕ ಕಾಲದ ಚರಿತ್ರೆಯನ್ನು ಪರಿಚಯಿಸುತ್ತದೆ. ಜೊತೆಗೆ ಜಿಲ್ಲೆಗೆ ಸಂಬಂಧಿಸಿದಂತೆ ಹರಪನಹಳ್ಳಿಯ ಮತ್ತು ಚಿತ್ರದುರ್ಗದ ಪಾಳೆಯಗಾರರ ಕುರಿತು ಸಂಕ್ಷಿಪ್ತ ವಿವರ ನೀಡುತ್ತದೆ. ಹೀಗೆ ಇನ್ನು ಹಲವು ಕೃತಿಗಳು ಈ ಬಗ್ಗೆ ಬೆಳಕು ಚೆಲ್ಲುತ್ತವೆ.

೩. ಬಳ್ಳಾರಿ ಡಿಸ್ಟ್ರಿಕ್ಟ್ ಗ್ಯಾಸೆಟಿಯರ್, ಗವರ್ನಮೆಂಟ್ ಆಫ್ ಕರ್ನಾಟಕ, ೧೯೭೨

ಈ ಗ್ಯಾಸೆಟಿಯರ್ ಬಳ್ಳಾರಿ ಜಿಲ್ಲೆಯ ಸಮಗ್ರ ವಿವರಗಳನ್ನು ನೀಡುತ್ತದೆ. ಹಾಗೆಯೇ ಬಳ್ಳಾರಿ ಜಿಲ್ಲೆಯಿಂದ ದಾವಣಗೆರೆ ಜಿಲ್ಲೆಗೆ ಸೇರ್ಪಡೆಯಾದ ಹರಪನಹಳ್ಳಿ ತಾಲ್ಲೂಕಿನ ಭೌಗೋಳಿಕ, ಚಾರಿತ್ರಿಕ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ ಇನ್ನು ಮುಂತಾದ ವಿಷಯಗಳನ್ನು ತಿಳಿಸುವ ಅಮೂಲ್ಯ ಆಕರವಾಗಿದೆ.

೪. ಗ್ಯಾಸೆಟಿಯರ್ ಆಫ್ ಇಂಡಿಯಾ, ಶಿವಮೊಗ್ಗ ಡಿಸ್ಟ್ರಿಕ್ಟ್, ೧೯೭೫

ಹಿಂದೆ ಶಿವಮೊಗ್ಗ ಜಿಲ್ಲೆಯ ವ್ಯಾಪ್ತಿಯಲ್ಲಿದ್ದ ಹೊನ್ನಾಳಿ, ಚನ್ನಗಿರಿ ತಾಲ್ಲೂಕುಗಳ ಚಾರಿತ್ರಿಕ, ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ, ಸಾರಿಗೆ ಸಂಪರ್ಕ, ಪ್ರೇಕ್ಷಣೀಯ ಸ್ಥಳಗಳ, ಜನಸಂಖ್ಯೆ, ಧಾರ್ಮಿಕ, ಕೃಷಿ, ನೀರಾವರಿ, ಕೈಗಾರಿಕೆ ಇನ್ನಿತರ ವಿಷಯಗಳ ಮೂಲಕ ಈಗಿನ ದಾವಣಗೆರೆ ಜಿಲ್ಲೆಯ ಚರಿತ್ರೆಯ ಮೇಲೆ ಬೆಳಕು ಚೆಲ್ಲುತ್ತದೆ.

೫. ಮೈಸೂರು ಗ್ಯಾಸೆಟಿಯರ್, ವ್ಯಾಲ್ಯೂಮ್ ಐದು, ಸಿ. ಹಯವದನ ರಾವ್, ೧೯೮೪

ಕರ್ನಾಟಕ ರಾಜ್ಯದ ಒಟ್ಟು ಎಂಟು ಜಿಲ್ಲೆಗಳ ಕುರಿತಂತೆ ವಿವರಣೆ ನೀಡುತ್ತದೆ. ಮುಖ್ಯವಾಗಿ ದಾವಣಗೆರೆ ಜಿಲ್ಲೆಗೆ ಸಂಬಂಧಿಸಿದಂತೆ ಚಿತ್ರದುರ್ಗ ಜಿಲ್ಲೆಯ ದಾವಣಗೆರೆ, ಹರಿಹರ, ಜಗಳೂರು ತಾಲ್ಲೂಕುಗಳ ಚರಿತ್ರೆಯನ್ನು ಪರಿಚಯಿಸುತ್ತದೆ.

೬. ದಿ ಎನ್ಸೈಕ್ಲೋಪಿಡಿಕ್ ಡಿಸ್ಟ್ರಿಕ್ಟ್ ಗ್ಯಾಸೆಟಿಯರ್ ಆಫ್ ಇಂಡಿಯಾ, ವ್ಯಾಲ್ಯೂಮ್ ೧೧

ಎಸ್. ಸಿ. ಭಟ್, ೧೯೯೮

೧೯೯೭ ರಲ್ಲಿ ಕರ್ನಾಟಕ ರಾಜ್ಯದಲ್ಲಿ ಏಳು ಹೊಸ ಜಿಲ್ಲೆಗಳು ಅಸ್ತಿತ್ವಕ್ಕೆ ಬಂದವು. ಅವುಗಳ ಚರಿತ್ರೆಯನ್ನು ಕುರಿತಂತೆ ಸರ್ಕಾರ ಗ್ಯಾಸೆಟಿಯರ್ ರೂಪಿಸಲಾಯಿತು. ಈ ಗ್ಯಾಸೆಟಿಯರ್‌ನಲ್ಲಿ ದಾವಣಗೆರೆ ಜಿಲ್ಲೆ ಕುರಿತಂತೆ ಭೌಗೋಳಿಕ, ಚಾರಿತ್ರಿಕ, ಜನಸಂಖ್ಯೆ, ಭಾಷೆ, ಧರ್ಮ, ನದಿಗಳು, ಕಾಲುವೆಗಳು, ಮತ್ತು ನೀರಿನ ಮೂಲಗಳು, ನಗರ, ತಾಲ್ಲೂಕಗಳು, ಗ್ರಾಮಗಳು, ಸಾರಿಗೆ ಸಂಪರ್ಕ, ಕೃಷಿ, ನೀರಾವರಿ, ಕೈಗಾರಿಕೆಗಳು, ಆಮದು, ರಫ್ತು, ಪ್ರೇಕ್ಷಣೀಯ ನೆಲೆಗಳು, ಶಿಕ್ಷಣ, ವೈದ್ಯಕೀಯ ಇನ್ನಿತರ ವಿಷಯಗಳು ಇಲ್ಲಿ ಅನಾವರಣಗೊಂಡಿವೆ.

ಕರ್ನಾಟಕ ರಾಜ್ಯ ಗ್ಯಾಸೆಟಿಯರ್‌ಗಳು

೧. ಕರ್ನಾಟಕ ರಾಜ್ಯ ಗ್ಯಾಸೆಟಿಯರ್ (ಭಾಗ ಒಂದು), ಸೂರ್ಯನಾಥ್ ಯು. ಕಾಮತ್, ೧೯೮೪

ಈ ಗ್ಯಾಸೆಟಿಯರ್‌ನಲ್ಲಿ ಕರ್ನಾಟಕದ ಭೂಸ್ವರೂಪ, ಭೌಗೋಳಿಕ ಲಕ್ಷಣ, ನದಿ, ಜಲ ಸಂಪತ್ತು, ವಾಯುಗುಣ, ಸಸ್ಯ ಸಂಪತ್ತು, ಅರಣ್ಯ ಮತ್ತು ಇತಿಹಾಸ, ಇತಿಹಾಸ ಪೂರ್ವ, ಇತಿಹಾಸ ಕಾಲ, ಜನತೆ, ವ್ಯಾಪ್ತಿ, ಕೃಷಿ ಮತ್ತು ನೀರಾವರಿ ಕುರಿತಂತೆ ವಿವರಣೆ ನೀಡುತ್ತದೆ. ಜಿಲ್ಲೆಗೆ ಸಂಬಂಧಿಸಿದಂತೆ ಸಹ ಮಾಹಿತಿ ನೀಡುವಲ್ಲಿ ಉಪಯುಕ್ತವಾಗಿದೆ.

೨. ಕರ್ನಾಟಕ ರಾಜ್ಯ ಗ್ಯಾಸೆಟಿಯರ್ (ಭಾಗ ಎರಡು), ಸೂರ್ಯನಾಥ್ ಯು. ಕಾಮತ್, ೧೯೮೫

ಈ ಸಂಪುಟವು ಕರ್ನಾಟಕದ ಕೈಗಾರಿಕೆ, ಬ್ಯಾಂಕಿಂಗ್, ಹಣಕಾಸು, ವ್ಯಾಪಾರ, ವಾಣಿಜ್ಯ, ಸಾರಿಗೆ ಸಂಪರ್ಕ, ಆರ್ಥಿಕ ಪ್ರವೃತ್ತಿಗಳು, ಮತ್ತು ಆಡಳಿತದ ಪರಿಚಯವನ್ನು ಮಾಡಿಕೊಡುತ್ತದೆ.

೩. ಕರ್ನಾಟಕ ರಾಜ್ಯ ಗ್ಯಾಸೆಟಿಯರ್, (ಭಾಗ ಮೂರು), ಸೂರ್ಯನಾಥ್ ಯು. ಕಾಮತ್, ೧೯೮೬

ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳ ಬಗ್ಗೆ ಮಾಹಿತಿ ಕೊಡುತ್ತದೆ. ಪುಟ. ೫೧೦, ೫೧೧ ರಲ್ಲಿ ಜಗಳೂರು ತಾಲ್ಲೂಕಿನ ಕಣಕುಪ್ಪೆ, ಪುಟ. ೫೨೦ ರಲ್ಲಿ ದಾವಣಗೇರಿ, ೫೭೨ರಲ್ಲಿ ಮಾಯಕೊಂಡ, ೬೨೧ ರಲ್ಲಿ ಹರಪನಹಳ್ಳಿ, ೬೨೨ರಲ್ಲಿ ಹರಿಹರ, ೬೩೪ ರಲ್ಲಿ ಹೊನ್ನಾಳಿ ಇವುಗಳ ಮಹತ್ವವನ್ನು ತಿಳಿಯಪಡಿಸುವುದರಿಂದ ದಾವಣಗೆರೆ ಚರಿತ್ರೆ ಅಧ್ಯಯನಕ್ಕೆ ಪೂರಕ ಮಾಹಿತಿ ಒದಗಿಸಿದಂತಾಗಿದೆ.

ಕರ್ನಾಟಕ ಚರಿತ್ರೆ ಸಂಪುಟಗಳು

೧. ಕರ್ನಾಟಕ ಚರಿತ್ರೆ ಸಂಪುಟ ೧, (ಪ್ರ.ಸಂ.), ಪ್ರೊ. ಬಿ. ಷೇಕ್‌ಅಲಿ, ೧೯೯೭

ಈ ಸಂಪುಟ ಕರ್ನಾಟಕ ಚರಿತ್ರೆಯ ಇತಿಹಾಸ ಪೂರ್ವಕಾಲದ ಎಡೆಗಳಲ್ಲಿ ದೊರೆತಿರುವ ಆಯುಧೋಪಕರಣಗಳಿಂದ ಆದಿಕಾಲದ ಮಾನವನ ಬದುಕನ್ನು ಪರಿಚಯಿಸುತ್ತದೆ. ಹಾಗೆಯೇ ಜಿಲ್ಲೆಗೆ ಸಂಬಂಧಿಸಿದಂತೆ ಹಳೆ ಶಿಲಾಯುಗದ ನೆಲೆಗಳಿಂದ ಹೊನ್ನಾಳಿ ತಾಲ್ಲುಕಿನ ಚಿಕ್ಕಬಸೂರು, ನ್ಯಾಮತಿಗಳಲ್ಲಿ ದೊರೆತ ಉಪಕರಣಗಳ ವಿವರ ಹಾಗೂ ಮಧ್ಯ ಶಿಲಾಯುಗ ಕಾಲದ ನೆಲೆಯಾದ ಹೊನ್ನಾಳಿಯ ಗೋವಿನಕೋವಿಯಲ್ಲಿ ದೊರೆತ ಅವಶೇಷಗಳ ವಿವರದಿಂದ ದಾವಣಗೆರೆ ಜಿಲ್ಲೆಯು ಪ್ರಾಗೈತಿಹಾಸಿಕ ಪ್ರದೇಶವಾಗಿತ್ತು ಎಂಬುದರ ವಿಷಯಕ್ಕೆ ಸ್ಪಷ್ಟ ಆಧಾರ ಒದಗಿಸಿದ ಆಕರವಾಗಿದೆ.

೨. ಕರ್ನಾಟಕ ಚರಿತ್ರೆ ಸಂಪುಟ ೨, (ಪ್ರ.ಸಂ.), ಪ್ರೊ. ಷೇಕ್ ಅಲಿ ಬಿ., ೧೯೯೭

ಕ್ರಿ.ಶ. ೭೪೦ ರಿಂದ ೧೩೩೬ ರವರೆಗಿನ ಕರ್ನಾಟಕದ ಚರಿತ್ರೆಯನ್ನು ತಿಳಿಸುವ ಸಂಪುಟವಾಗಿದೆ. ರಾಷ್ಟ್ರಕೂಟರಿಂದ ಹೊಯ್ಸಳರ ಕಾಲದ ಆಡಳಿತ ಸಾಮಾಜಿಕ, ಧಾರ್ಮಿಕ, ಕಲೆ ಮತ್ತು ವಾಸ್ತುಶಿಲ್ಪ ಹಾಗೂ ಸಾಹಿತ್ಯದ ಕೊಡುಗೆಯ ಕುರಿತ ಹಾಗೆ ಇಲ್ಲಿ ಚರ್ಚಿಸಲಾಗಿದೆ. ದಾವಣಗೆರೆ ಜಿಲ್ಲೆಗೆ ಸಂಬಂಧಿಸಿದಂತೆ ರಾಷ್ಟ್ರಕೂಟರ, ಚಾಲುಕ್ಯರ, ಹೊಯ್ಸಳರ ಕಲೆ ಮತ್ತು ವಾಸ್ತುಶಿಲ್ಪಗಳ ಪರಿಚಯ ಮಾಡಿಕೊಡುತ್ತದೆ.

೩. ಕರ್ನಾಟಕ ಚರಿತ್ರೆ, ಸಂಪುಟ ೩, (ಪ್ರ.ಸಂ.), ಪ್ರೊ. ಷೇಕ್ ಅಲಿ ಬಿ., ೧೯೯೭

ವಿಜಯನಗರ ಅರಸರ ಆಡಳಿತ ಹಾಗೂ ವಿಜಯನಗರೋತ್ತರ ಕಾಲದ ಪಾಳೆಯಗಾರರ ಆಡಳಿತದ ವಿವರ ಕೊಡುವ ಸಂಪುಟವಾಗಿದ್ದು ದಾವಣಗೆರೆ ಜಿಲ್ಲೆಯ ಚರಿತ್ರೆಗೆ ಸಂಬಂಧಿಸಿದಂತೆ ವಿಜಯನಗರ ಅರಸರ ಆಡಳಿತ ಹಾಗೂ ಚಿತ್ರದುರ್ಗದ ಪಾಳೆಯಗಾರರ ವಿವರವನ್ನು ಒದಗಿಸುತ್ತದೆ.

೪. ಕರ್ನಾಟಕ ಚರಿತ್ರೆ ಸಂಪುಟ ೪, (ಪ್ರ.ಸಂ.), ಪ್ರೊ. ಷೇಕ್ ಅಲಿ ಬಿ. ೧೯೯೭

ಕರ್ನಾಟಕದಲ್ಲಿ ಆದಿಲ್‌ಷಾಹಿಗಳ ಆಡಳಿತದ ಚರಿತ್ರೆಯನ್ನು ಚಿತ್ರಿಸುತ್ತದೆ. ಇದರ ಜೊತೆಗೆ ದಾವಣಗೆರೆ ಜಿಲ್ಲೆಯ ಕೆಲವು ಭಾಗಗಳನ್ನು ತನ್ನ ಆಡಳಿತದ ವ್ಯಾಪ್ತಿಗೆ ಸೇರಿತ್ತು ಎಂಬುದನ್ನು ತಿಳಿಯಪಡಿಸುವಲ್ಲಿ ಉತ್ತಮ ಆಧಾರಗಳನ್ನು ಈ ಸಂಪುಟ ಒದಗಿಸುತ್ತದೆ.

೫. ಕರ್ನಾಟಕ ಚರಿತ್ರೆ ಸಂಪುಟ ೫, (ಪ್ರ.ಸಂ.), ಪ್ರೊ. ಷೇಕ್‌ಅಲಿ ಬಿ., ೧೯೯೭

ಹೈದರ್‌ಅಲಿ ಮತ್ತು ಟಿಪ್ಪುಸುಲ್ತಾನರ ಸ್ಥೂಲ ಚರಿತ್ರೆಯನ್ನು ನೀಡುವುದರ ಜೊತೆ ದಾವಣಗೆರೆ ಜಿಲ್ಲೆಯು ಇವರ ಆಡಳಿತ ವ್ಯಾಪ್ತಿಯಲ್ಲಿ ಸೇರಿತ್ತು ಎನ್ನುವುದರ ಖಚಿತ ಮಾಹಿತಿ ಕೊಡುತ್ತದೆ.

೬. ಕರ್ನಾಟಕ ಚರಿತ್ರೆ ಸಂಪುಟ ೬, (ಪ್ರ.ಸಂ.), ಪ್ರೊ. ಷೇಕ್ ಅಲಿ., ೧೯೯೭

ಕರ್ನಾಟಕದಲ್ಲಿ ಟಿಪ್ಪುಸುಲ್ತಾನರ ನಂತರ ಆಂಗ್ಲರು, ನಿಜಾಮರು, ಮರಾಠರು ಹಾಗೂ ಮೈಸೂರು ಸಂಸ್ಥಾನದವರು ಹೀಗೆ ಕರ್ನಾಟಕವನ್ನು ಹರಿದು ಹಂಚಿಕೊಂಡರು. ಆಡಳಿತ ನಡೆಸತೊಡಗಿದರು. ಹಾಗೆಯೇ ೧೮೦೦ ರಿಂದ ೧೮೫೭ ರ ವರೆಗಿನ ಭಾರತ ಸ್ವತಂತ್ರ ಸಂಗ್ರಾಮದಲ್ಲಿ ಚನ್ನಗಿರಿಯ ಧೊಂಢಿಯಾವಾಘನ ಪ್ರತಿಭಟನೆ, ಮುಮ್ಮಡಿ ಕೃಷ್ಣರಾಜ ಒಡೆಯರ ಆಡಳಿತ, ೧೮೩೧ ರಿಂದ ೧೮೮೧ ರ ವರೆಗಿನ ಕಮಿಷನರ ಆಡಳಿತ ಹಾಗೂ ಮೈಸೂರಿನ .... ಹಾಗೂ ದಿವಾನರ ಆಡಳಿತದಲ್ಲಿ ಮೈಸೂರು ಸಂಸ್ಥಾನ ಈ ಒಂದು ವ್ಯಾಪ್ತಿಯಲ್ಲಿ ದಾವಣಗೆರೆ ಜಿಲ್ಲೆಯ ಅಲ್ಪ ಚಿತ್ರಣವನ್ನು ಈ ಸಂಪುಟ ತಿಳಿಯಪಡಿಸುತ್ತದೆ.

೭. ಕರ್ನಾಟಕ ಚರಿತ್ರೆ, ಸಂಪುಟ ೭, (ಪ್ರ.ಸಂ.), ಪ್ರೊ. ಷೇಕ್‌ಅಲಿ ಬಿ., ೧೯೯೭

ಈ ಸಂಪುಟ ೧೯೦೦ ರಿಂದ ೧೯೫೬ ರ ವರೆಗಿನ ಕರ್ನಾಟಕದ ಇತಿಹಾಸದ ಪರಿಚಯವನ್ನು ಮಾಡಿಕೊಡುತ್ತದೆ. ಈ ಕಾಲಾವಧಿಯಲ್ಲಿ ದಾವಣಗೆರೆ ಜಿಲ್ಲೆಯು ಭಾರತ ಸ್ವತಂತ್ರ ಚಳವಳಿಯಲ್ಲಿ ಭಾಗಿಯಾಗಿ ತನ್ನ ಬೆಂಬಲವನ್ನು ಸೂಚಿಸಿದ ವಿಷಯ ಹಾಗು ಕರ್ನಾಟಕ ಏಕೀಕರಣ ಚಳವಳಿಯಲ್ಲಿ ತನ್ನದೇ ಆದ ಕೊಡುಗೆಯನ್ನು ನೀಡುವುದರ ಮಾಹಿತಿ ಕೊಡುತ್ತದೆ.

ಹೀಗೆ ಈ ಸಂಪುಟಗಳು ದಾವಣಗೆರೆ ಜಿಲ್ಲೆಗೆ ಸಂಬಂಧಿಸಿದಂತೆ ಅಲ್ಲೊಂದು, ಇಲ್ಲೊಂದು ವಿವರ ನೀಡುತ್ತವಲ್ಲದೆ ದಾವಣಗೆರೆ ಜಿಲ್ಲೆಯ ಚರಿತ್ರೆಯ ಸಮಗ್ರ ಅಧ್ಯಯನಕ್ಕೆ ಮಾರ್ಗದರ್ಶನ ನೀಡುವಲ್ಲಿ ಪ್ರಮುಖ ಆಕರಗಳಾಗಿವೆ ಎಂದರೆ ತಪ್ಪಾಗಲಾರದು.

ದಾವಣಗೆರೆ ಜಿಲ್ಲೆ ಚರಿತ್ರೆ ಕುರಿತ ಅಧ್ಯಯನಗಳ ಅವಲೋಕನ

೧. ಚಂದ್ರವಳ್ಳಿ, ಡಾ. ಎಂ. ವಿ. ಶ್ರೀನಿವಾಸ್, ಲಕ್ಷ್ಮಣ್‌ತೆಲಗಾವಿ, (ಸಂ.), ೧೯೭೬

ಈ ಕೃತಿಯು ಚಿತ್ರದುರ್ಗ ಜಿಲ್ಲೆಯ ಇತಿಹಾಸ, ಚಿತ್ರದುರ್ಗದ ಪಾಳೆಯಗಾರರು, ಭೂಶೋಧನೆಗಳು, ಐತಿಹಾಸಿಕ ಸ್ಥಳಗಳು, ದೇವಾಲಯಗಳು, ಪ್ರಕಟಿತ ಶಾಸನಗಳು, ಐತಿಹಾಸಿಕ ವ್ಯಕ್ತಿಗಳು, ದಾಖಲೆಗಳು, ಸಂಶೋಧನೆಗಳು, ಹೀಗೆ ಹತ್ತು ಹಲವು ವಿಷಯುಗಳ ಸಂಗ್ರಹವಾಗಿದೆ. ಪ್ರಸ್ತುತ ದಾವಣಗೆರೆ ಜಿಲ್ಲೆಯ ಚರಿತ್ರೆಗೆ ಸಂಬಂಧಿಸಿದಂತೆ ಚಿತ್ರದುರ್ಗ ಪಾಳೆಯಗಾರರು, ದಾವಣಗೆರೆಯ ಇತಿಹಾಸ, ಹರಿಹರದ ಇತಿಹಾಸ, ನೀರ್ಥಡಿ ರಂಗನಾಥ ದೇವಾಲಯ ಕುರಿತಂತೆ ಇಲ್ಲಿನ ಲೇಖನಗಳು ಪೂರಕವಾದ ಮಾಹಿತಿ ಒದಗಿಸುತ್ತವೆ.

೨. ಚನ್ನಗಿರಿ ದರ್ಶನ: ಭಾಗ ಒಂದು, ಕೆ. ಆರ್. ಇಕ್ಬಾಲ್ ಅಹ್ಮದ್, ೧೯೮೦

ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಕಿರು ಪರಿಚಯವನ್ನು ಮಾಡಿಕೊಡುವಲ್ಲಿ ಈ ಪುಟ್ಟ ಪುಸ್ತಕ ಸಂಶೋಧನೆಗೂ ಸಹಕಾರಿಯಾಗಿದೆ. ಕ್ರಿ.ಶ. ೧೯೯೭ ರ ಪೂರ್ವದಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿದ್ದ ಸಂದರ್ಭದಲ್ಲಿ ರಚನೆ ಮಾಡಿದ ಕೃತಿಯಾಗಿದೆ. ಇದು ತಾಲ್ಲೂಕಿನ ಹೋಬಳಿಗಳ, ಕೆರೆಗಳು, ದೇವಾಲಯಗಳು, ಮಸೀದಿಗಳ ವರ್ಣನೆಯನ್ನು ಐತಿಹಾಸಿಕ ಆಧಾರಗಳ ಮೇಲೆ ದಾಖಲಿಸಿಲಾಗಿದೆ. ತಾಲ್ಲೂಕಿನ ವಿಶಿಷ್ಟ ಕ್ಷೇತ್ರಗಳ ಸ್ಥಳ ಪುರಾಣ ಸಾಕಷ್ಟು ಆಸಕ್ತಿಯನ್ನು ಕೆರಳಿಸುವಂತೆ ಮಾಡಿದೆ. ಹಾಗೆಯೇ ತಾಲ್ಲೂಕಿನ ಹಲವು ಪ್ರದೇಶಗಳಲ್ಲಿ ಮಳೆ, ಬೆಳೆ, ಜಾತ್ರೆಗಳು, ಪ್ರಾಣಿಗಳು, ಕೈಗಾರಿಕೆಗಳು, ಮುಂತಾದ ಉಪಯುಕ್ತ ವಿವರಗಳನ್ನು ಅಂಕಿ ಅಂಶಗಳ ಮೂಲಕ ಈ ಕೃತಿ ಪರಿಚಯಿಸುತ್ತದೆ.

೩. ದಾವಣಗೆರೆ ದರ್ಶಿನಿ, ಟಿ. ಗಿರಿಜ, ೧೯೮೫

೧೯೮೫ ರಲ್ಲಿ ದಾವಣಗೆರೆ ತಾಲ್ಲೂಕಿನ ಗ್ರಾಮಾಂತರ ಹಿನ್ನೆಲೆಯನ್ನು ಗಮನದಲ್ಲಿರಿಸಿಕೊಂಡು ಈ ಕೃತಿಯನ್ನು ರಚನೆ ಮಾಡಿದ್ದಾರೆ. ಇದು ತಾಲ್ಲೂಕಿನ ಪ್ರಾಥಮಿಕ ಮಾಹಿತಿಯನ್ನು ಒದಗಿಸುವಲ್ಲಿ ಬಹಳ ಪ್ರಮುಖವಾದ ಕೃತಿಯೆನಿಸಿದೆ.

೪. ಹರತಿಸಿರಿ, (ಸಂ.), ಪ್ರೊ. ಲಕ್ಷ್ಮಣ್‌ತೆಲಗಾವಿ, ೧೯೮೭

ಹಲವಾರು ಲೇಖನಗಳ ಬೃಹತ್ ಸಂಗ್ರಹ ಕೃತಿಯಾದ ಹರತಿಸಿರಿ ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನಲ್ಲಿ ಕಾಣಬರುವ ಸಂತೆಬೆನ್ನೂರಿನ ಕುರಿತಾದ 'ಸಂತೆಬೆನ್ನೂರು: ಒಂದು ಚಾರಿತ್ರಿಕ ದಾಖಲೆ' ಎಂಬ ಲೇಖನವನ್ನು ಡಾ. ಚಿದಾನಂದಮೂರ್ತಿಯವರು ಉತ್ತಮ ಪ್ರಯತ್ನದ ಮೂಲಕ ಆ ಊರಿನ ಹಿನ್ನೆಲೆ, ಪಾಳೆಯಗಾರರ ಆಡಳಿತ, ಕಟ್ಟಡ ನಿರ್ಮಾಣ, ದೇವಾಲಯಗಳ ನಿರ್ಮಾಣ, ಮಸೀದಿಗಳ ನಿರ್ಮಾಣಗಳ ವಿವರವನ್ನು ಈ ಲೇಖನವು ಪರಿಚಯಿಸುತ್ತದೆ.

೫. ಚನ್ನಗಿರಿ ತಾಲ್ಲೂಕು ದರ್ಶಿನಿ, ಬೆನಕನಹಳ್ಳಿ ಜಿ. ನಾಯಕ್, ೧೯೮೯

ಇಕ್ಬಾಲ್ ಅಹ್ಮದರಂತೆ ಇವರೂ ಸಹ ಚನ್ನಗಿರಿ ತಾಲ್ಲೂಕನ್ನು ಅನುಲಕ್ಷಿಸಿ ತಾಲ್ಲೂಕಿನ ಭೌಗೋಳಿಕ ಪರಿಸರ, ಚಾರಿತ್ರಿಕ ಮಹತ್ವ, ಸಂಸ್ಕೃತಿ, ಪ್ರೇಕ್ಷಣೀಯ ಸ್ಥಳಗಳ ಪರಿಚಯ, ಸಾರಿಗೆ ಸಂಪರ್ಕ ಹಾಗೂ ತಾಲ್ಲೂಕಿನ ಆಡಳಿತವನ್ನು ಕುರಿತು ಸ್ಥೂಲ ಪರಿಚಯವನ್ನು ಮಾಡಿಕೊಟ್ಟಿರುವರು.

೬. ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ, ಸಂ., ಕುಂಬಾಸ, ೧೯೯೦

ಹರಪನಹಳ್ಳಿ ಮೊದಲಿನಿಂದಲೂ ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯಲ್ಲಿತ್ತು. ೧೯೯೭ ರಲ್ಲಿ ದಾವಣಗೆರೆ ಜಿಲ್ಲೆಗೆ ಸೇರಿಸಲಾಯಿತು. ಮೇಲಿನ ಅಧ್ಯಯನ ಕೃತಿಯು ಬಳ್ಳಾರಿ ಜಿಲ್ಲೆಯ ಇತಿಹಾಸ, ಆರ್ಥಿಕ, ಸಾಹಿತ್ಯ, ಕಲೆ ಮತ್ತು ವಾಸ್ತು ಶಿಲ್ಪ, ಶಾಸನ ಇನ್ನಿತರ ಅಂಶಗಳ ಕುರಿತು ಚರ್ಚಿಸಲಾಗಿದೆ. ಹಾಗೆಯೇ ಒಟ್ಟು ೯೦ ಸಾಂಸ್ಕೃತಿಕ ನೆಲೆಗಳನ್ನು ಗುರುತಿಸಿಕೊಂಡು ಅಧ್ಯಯನ ನಡೆಸಿದ್ದಾಗಿದೆ. ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಸಾಂಸ್ಕೃತಿಕ ನೆಲೆಗಳಾದ ಉಚ್ಚಂಗಿದುರ್ಗ, ಕಂಚಿಕೇರಿ, ಚಿಗಟೇರಿ, ನೀಲಗುಂದ, ಬಾಗಳಿ, ಹರಪನಹಳ್ಳಿ, ಹಿರೇಮ್ಯಾಗಳಗೇರಿ, ದುಗ್ಗಾವತಿ, ಕುಂಚೂರು, ಕೊಲಹಳ್ಳಿ, ಅಣಿಜಿಗೇರಿ, ಅರಸಿಕೆರೆ, ತೆಲಗಿ, ಗುಂಡಗತ್ತಿ, ಚಿಕ್ಕಕಟ್ಟೆ, ಬೆಣ್ಣೆಹಳ್ಳಿ, ಯರಬಳ್ಳಿ, ತುಂಬಿಗೇರಿ, ಸಿಂಗ್ರಿಹಳ್ಳಿ, ರಾಗಿಮಸಲ್ವಾಡ ಇನ್ನು ಮುಂತಾದ ಸ್ಥಳಗಳ ಮಹತ್ವವನ್ನು ಈ ಅಧ್ಯಯನದಲ್ಲಿ ಪರಿಚಯಿಸಲಾಗಿದೆ.

೭. ಚಿತ್ರದುರ್ಗ ಜಿಲ್ಲಾದರ್ಶಿನಿ, ಟಿ. ಗಿರಿಜ, ೧೯೯೧

ಚಿತ್ರದುರ್ಗ ಜಿಲ್ಲೆಗೆ ಸಂಬಂಧಿಸಿದಂತೆ ಒಂಬತ್ತು ತಾಲ್ಲೂಕುಗಳನ್ನು ಒಳಗೊಂಡಂತೆ ಎಲ್ಲಾ ಮುಖ್ಯ ಮಾಹಿತಿಗಳಿವೆ. ಜಿಲ್ಲೆಯ ವಿವರ ಬಯಸುವ ಎಲ್ಲರಿಗೂ ತಿಳಿಯುವಂಥ ಅಂಶಗಳನ್ನು ಲೇಖಕರು ವಿವರಿಸಿದ್ದಾರೆ. ಜಿಲ್ಲೆಯ ಹಾಗೂ ತಾಲ್ಲೂಕುಗಳ ಪ್ರತ್ಯೇಕ ನಕಾಶೆಗಳಿಂದ ಗ್ರಂಥದ ಮಹತ್ವ ಹೆಚ್ಚಿದಂತಾಗಿದೆ. ಪ್ರತಿ ತಾಲ್ಲೂಕನ್ನು ಪ್ರತ್ಯೇಕವಾಗಿ ವಿವೇಚಿಸಿ ಪ್ರತಿ ತಾಲ್ಲೂಕಿನ ಗ್ರಾಮಗಳ ಪಟ್ಟಿ ನೀಡುವುದರ ಜೊತೆಗೆ ಗ್ರಾಮಗಳ ಊರಿನ ಹೆಸರಿಗೆ

ಸಂಬಂಧಿಸಿದಂತೆ ಸಂಗತಿಗಳು, ಪ್ರೇಕ್ಷಣೀಯ ಸ್ಥಳಗಳು, ಐತಿಹಾಸಿಕ ವಿಚಾರಗಳು, ಸಾಮಾಜಿಕ ಸಂಗತಿಗಳನ್ನು ಓದುಗನ ಮುಂದಿಡುವ ಕೆಲಸ ಮಾಡಿದೆ. ದಾವಣಗೆರೆ ಚರಿತ್ರೆ ರಚನೆಗೆ ಈ ಪುಸ್ತಕ ಪೂರಕವಾಗಿದೆ. ಇಲ್ಲಿ ಚಿತ್ರದುರ್ಗ ಜಿಲ್ಲೆಯ ಒಂಬತ್ತು ತಾಲ್ಲೂಕುಗಳಲ್ಲಿ ಈ ದಾವಣಗೆರೆಯೂ ಸೇರಿದಂತೆ ಒಟ್ಟು ಮೂರು ತಾಲ್ಲೂಕುಗಳ ಪರಿಚಯವನ್ನು ಈ ಮೂಲಕ ನೀಡಲಾಗಿದೆ.

೮. ಹರಿಹರ ಕ್ಷೇತ್ರದ ಮಹಾತ್ಮೆ, ಶ್ರೀ ಕಮಲದಾನಿ ಗುರುರಾಯರು, ೧೯೯೬

ಈ ಪುಟ್ಟ ಪುಸ್ತಕ ಹರಿಹರ ಪ್ರದೇಶ ಪರಿಸರ, ಈ ಕ್ಷೇತ್ರದ ಮಹಿಮೆ, ಚಾರಿತ್ರಿಕ ಹಿನ್ನೆಲೆ ಮತ್ತು.... ಹರಿಹರಕ್ಷೇತ್ರ ಇನ್ನಿತರ ಅಂಶಗಳನ್ನು ಕೂಡಿಹಾಕಿ ವಿಶ್ಲೇಷಿಸುವುದರ ಮೂಲಕ ಹರಿಹರ ಕ್ಷೇತ್ರದ ಮಹಾತ್ಮೆಯನ್ನು ಓದುಗರಿಗೆ ತಿಳಿಯಪಡಿಸುವಲ್ಲಿ ಯಶಸ್ವಿಯಾಗಿದ್ದಾರೆ.

೯. ೬೬ ಹಳ್ಳಿಯ ಒಡತಿ ಊರಮ್ಮನ ಚರಿತ್ರೆ, ಹಿ. ಗೂ. ದುಂಡ್ಯಪ್ಪ, ೧೯೯೬

ಪ್ರತಿ ಊರಿಗೆ ಒಂದಲ್ಲೊಂದು ಗ್ರಾಮದೇವತೆ ಇರುತ್ತಾಳೆ. ಏಳು ಹಳ್ಳಿಗೆ ಸೇರಿದಂತೆ ಒಬ್ಬ ದೇವತೆ ಇರುವುದು, ಏಳು ಹಳ್ಳಿಗಳೂ ಸೇರಿ ಹಬ್ಬ ಮಾಡುವುದು ಸಹಜವಾಗಿ ನಡೆಯುತ್ತದೆ. ಆದರೆ ಈ ಕೃತಿಯಲ್ಲಿ ಬರುವ ಗ್ರಾಮದಮ್ಮ ಅರವತ್ತಾರು ಹಳ್ಳಿಗಳಿಂದ ಪೂಜೆಗೊಳ್ಳುತ್ತಿರುವುದು ವಿಶೇಷ. ಇಂತಹ ಗ್ರಾಮದೇವತೆಗಳ ಕುರಿತು ದಂತಕಥೆಗಳು, ಅಮ್ಮನನ್ನು ತರುವುದು, ಮೆರೆಸುವುದು, ಹಬ್ಬ ಹಬ್ಬದ ಹಿನ್ನೆಲೆ, ಕೋಣವನ್ನು ಬಿಡುವುದು, ಹಬ್ಬ ಸಾರುವುದು, ಕೋಣನ ಬಲಿ, ಚರಗ ಚಲ್ಲುವುದು, ಮೊದಲಾದವುಗಳು ಈ ಅಧ್ಯಯನದಲ್ಲಿ ಅಡಗಿವೆ.

೧೦. ಹರಪನಹಳ್ಳಿ ಪಾಳೆಯಗಾರರು, ಕುಂ. ಭಾ. ಸದಾಶಿವಪ್ಪ, ೧೯೯೬

ಕರ್ನಾಟಕ ಇತಿಹಾಸವನ್ನು ಅವಲೋಕಿಸಿದಾಗ ಪ್ರಧಾನ ರಾಜವಂಶಗಳನ್ನು ಗುರುತಿಸಿ ಸ್ಥಳೀಯ ಆಳ್ವಿಕೆ ಮತ್ತು ಪಾಳೆಯಪಟ್ಟುಗಳನ್ನು ಕಡೆಗಾಣಿಸಿದ್ದು ಕಂಡುಬರುವುದು. ಕೆಳದಿ, ಚಿತ್ರದುರ್ಗ ಪಾಳೆಯಗಾರರ ಬಗ್ಗೆ ಹಲವು ಕಥೆ ಕಾದಂಬರಿಗಳು ದೊರಕುತ್ತವೆ. ಆದರೆ ಸುಮಾರು ಎರಡು ಶತಮಾನಗಳಿಗೂ ಹೆಚ್ಚುಕಾಲ ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ಪಾಳೆಯಪಟ್ಟಣವನ್ನು ಸ್ಥಾಪಿಸಿ ಆಳ್ವಿಕೆಯ ನಂತರದ ಹರಪನಹಳ್ಳಿ ಪಾಳೆಯಗಾರ ಕುರಿತಂತೆ ವಿವರಣೆಗಳಿವೆ. ಈ ಕೃತಿಯು ಮುಂದಿನ ಅಧ್ಯಯನಕಾರರಿಗೆ ಪ್ರಾಥಮಿಕ ಆಕರಗಳನ್ನು ಒದಗಿಸುತ್ತದೆ.

ಈ ಅಧ್ಯಯನದಲ್ಲಿ ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳ ಮಧ್ಯ ಅವಿನಾಭಾವ ಸಂಬಂಧವನ್ನು ಹೊಂದಿದ್ದು ಪಾಳೆಯಗಾರಿಕೆ ಆಳ್ವಿಕೆಯನ್ನು ಪರಿಚಯ ಮಾಡಿಕೊಡುತ್ತದೆ.

೧೧. ಚನ್ನಗಿರಿ ದರ್ಶನ ಭಾಗ ೨, ಪ್ರೊ. ಕೆ. ಆರ್. ಇಕ್ಬಾಲ್ ಅಹಮದ್, ೨೦೦೦

ಇದು ತಾಲ್ಲೂಕು ದರ್ಶನ ಅಧ್ಯಯನದ ಕೃತಿಯಾಗಿದೆ. ಚನ್ನಗಿರಿ ತಾಲ್ಲೂಕಿನ ಸ್ಥಳೀಯ ವೈಶಿಷ್ಟ್ಯ ಅಲ್ಲಿ ಹುಟ್ಟಿ ಬೆಳೆದು ಖ್ಯಾತಿ ಗಳಿಸಿದ ಬೇರೆ ಬೇರೆ ಕ್ಷೇತ್ರಗಳ ಪ್ರಸಿದ್ಧ ವ್ಯಕ್ತಿಗಳ ಪರಿಚಯ ಮಾಡಿಕೊಡುತ್ತದೆ. ಅಲ್ಲದೆ ತಾಲ್ಲೂಕಿನ ಸಸ್ಯವರ್ಗ, ಪ್ರಾಣಿಸಮೃದ್ಧಿ, ಮಳೆ, ಬೆಳೆ, ಭೂಗುಣ, ಐತಿಹಾಸಿಕ ಮತ್ತು ಧಾರ್ಮಿಕ ಪ್ರೇಕ್ಷಣೀಯ ಸ್ಥಳಗಳು, ನಾಡಿನ ಅತಿದೊಡ್ಡ ಕೆರೆಗಳಲ್ಲಿ ಒಂದಾದ ಸೂಳೆಕೆರೆ ಅಥವಾ ಶಾಂತಿಸಾಗರದ ವಿವರಗಳನ್ನು ನೀಡಿದ ಅಧ್ಯಯನವಾಗಿದೆ. ಹಾಗೂ ಸ್ವಾತಂತ್ರ್ಯಹೋರಾಟಗಾರರ ಬಗ್ಗೆ ಸಂಕ್ಷಿಪ್ತವಾದ ವಿವರಗಳನ್ನು ಈ ಕೃತಿಯಿಂದ ಪಡೆಯಬಹುದಾಗಿದೆ.

೧೨. ಇತಿಹಾಸ ಕಥನ, ಪ್ರೊ. ಬಿ. ರಾಜಶೇಖರಪ್ಪ, ೨೦೦೦

ಈ ಕೃತಿಯಲ್ಲಿ ಒಟ್ಟು ೨೫ ಅಧ್ಯಾಯಗಳಿವೆ. ಶಾಸನಗಳು, ನಾಣ್ಯಗಳು, ಪಾಳೆಯಗಾರರು, ಜನಾಂಗೀಯ, ಸ್ಥಳನಾಮ, ಕ್ರೀಡೆ, ಇನ್ನಿತರ ಅಂಶಗಳು ಕೃತಿಯಲ್ಲಿ ಬಿಚ್ಚಿಡಲಾಗಿದೆ. ದಾವಣಗೆರೆ ಚರಿತ್ರೆಗೆ ಸಂಬಂಧಿಸಿದಂತೆ 'ದಾವಣಗೆರೆ ಸ್ಥಳನಾಮ ನಿಷ್ಪತ್ತಿ: ಒಂದು ಅಧ್ಯಯನ', 'ಜಗಳೂರು ತಾಲ್ಲೂಕಿನ ಶಾಸನಗಳು: ಒಂದು ಪರಿಚಯ', ಮತ್ತು 'ಜಾನಪದ ಕಲಾವಿದೆಯಾದ ಹೆಳವನಕಟ್ಟೆಗಿರಿಯಮ್ಮನವರ ಕಾಲದ ಮೇಲೆ ಹೊಸ ಬೆಳಕು' ಎಂಬ ಅಂಶಗಳಿಂದ ಕೂಡಿದ ಅಧ್ಯಯನ ಪ್ರಸ್ತುತ ಜಿಲ್ಲೆಯ ಚರಿತ್ರೆಗೆ ಸಹಾಯಕವಾಗಿ ನಿಂತಿದೆ.

೧೩. ನಿರಂತರ, ಪ್ರೊ. ಬಿ. ರಾಜಶೇಖರಪ್ಪ, ೨೦೦೧

ಇದರಲ್ಲಿ ಒಟ್ಟು ೧೨ ಅಧ್ಯಾಯಗಳಲ್ಲಿ ಒಂದಾದ ದಾವಣಗೆರೆ ಸ್ಥಳನಾಮ ನಿಷ್ಪತ್ತಿ ಒಂದು ಅಧ್ಯಯನ, ದಾವಣಗೆರೆ ಹೆಸರಿನ ಉತ್ಪತ್ತಿಯ ಕುರಿತು ಚರ್ಚಿಸಲಾದ ಅಧ್ಯಾಯ ಗಮನಾರ್ಹವಾದುದು.

೧೪. ಶತಮಾನದ ದಾವಣಗೆರೆ, (ಸಂ.),ಎಂ. ಜಿ. ಈಶ್ವರಪ್ಪ, ೨೦೦೧

ಸುಮಾರು ಇಪ್ಪತ್ತು ಲೇಖನಗಳ ಸಂಪುಟವಾದ ಕೃತಿಯಾಗಿದ್ದು ದಾವಣಗೆರೆ ನಗರಕ್ಕೆ ಸೀಮಿತಗೊಂಡು ರಚಿತವಾಗಿದೆ ಎಂದು ಹೇಳಬಹುದು. ನಗರದ ಹೆಸರಿನ ಉತ್ಪತ್ತಿ, ಚಾರಿತ್ರಿಕ ಹಿನ್ನೆಲೆ, ಚಳವಳಿಗಳು, ಹತ್ತಿಗಿರಣಿಗಳ ಹುಟ್ಟು, ಬೆಳವಣಿಗೆ ಹಾಗೂ ಅವನತಿ, ಕಾರ್ಮಿಕ ಸಂಘಟನೆ, ಶೈಕ್ಷಣಿಕ, ವಾಣಿಜ್ಯ, ಪತ್ರಿಕೋದ್ಯಮ, ಸಾಂಸ್ಕೃತಿಕ ನಗರ, ದಾನಿಗಳ ತವರು ಎಂಬ ಹಲವು ವಿವರಗಳನ್ನು ಈ ಅಧ್ಯಯನದಲ್ಲಿ ಕಾಣಬಹುದು. ದಾವಣಗೆರೆ ತಾಲ್ಲೂಕನ್ನು ಕುರಿತು ಚಾರಿತ್ರಿಕವಾಗಿ ತಿಳಿಸುವ ಪ್ರಮುಖ ಗ್ರಂಥವಾಗಿದೆ.

೧೫. ದಾವಣಗೆರೆ ಇದು ನಮ್ಮ ಜಿಲ್ಲೆ, ಟಿ. ಗಿರಿಜ, ೨೦೦೧

೧೯೯೭ ರಲ್ಲಿ ದಾವಣಗೆರೆಗ ಜಿಲ್ಲೆಯ ಪ್ರತ್ಯೇಕ ಸ್ಥಾನಮಾನ ಸಿಕ್ಕ ನಂತರ ಜಿಲ್ಲೆಗೆ ಒಂದು ಭೌಗೋಳಿಕ ಚೌಕಟ್ಟು ದೊರೆತಂತಾಯಿತು. ಸುಮಾರು ೭೪೦ ಪುಟಗಳ ಬೃಹತ್ ಪುಸ್ತಕವಾಗಿದ್ದು, ಆರು ತಾಲ್ಲೂಕುಗಳನ್ನೊಳಗೊಂಡಂತೆ ಪ್ರತ್ಯೇಕ ಭೂಪಟಗಳು ಅಥವಾ ನಕ್ಷೆಗಳನ್ನು ರಚಿಸಿ ಪ್ರತಿ ತಾಲ್ಲೂಕಗಳ ಭೌಗೋಳಿಕ ಲಕ್ಷಣಗಳು, ಚರಿತ್ರೆ, ಪ್ರತಿಗ್ರಾಮಗಳ ಪರಿಚಯ ಮಾಡಿಕೊಡುತ್ತಾ, ಸ್ಥಳದ ಮಹಿಮೆ, ಪುರಾಣ, ಕಟ್ಟುಕಥೆ, ಐತಿಹ್ಯಗಳು, ದೇವಾಲಯಗಳ, ಮಠಮಾನ್ಯಗಳ, ಶಾಸನಗಳ, ಸ್ಮಾರಕಗಳ, ರಾಜಕೀಯ ಮುತ್ಸದ್ದಿಗಳ, ಸಾಹಿತಿಗಳ, ಕಲಾವಿದರ, ಕ್ರೀಡಾಭಿಮಾನಿಗಳ, ಹಬ್ಬಹರಿದಿನಗಳ, ವಾಣಿಜ್ಯಕೇಂದ್ರಗಳ, ಕೈಗಾರಿಕೆಗಳ, ಶಿಕ್ಷಣಸಂಸ್ಥೆಗಳ, ಸ್ವಾತಂತ್ರ್ಯ ಹೋರಾಟಗಾರರ, ಕವಿಗಳ, ಪತ್ರಕರ್ತರು, ವೈದ್ಯಕೀಯ ಕ್ಷೇತ್ರಗಳ ಕುರಿತು ಇಡೀ ಜಿಲ್ಲೆಯ ಸಂಪೂರ್ಣ ಚರಿತ್ರೆಯನ್ನೆ ಮುಂದಿಡುವ ಕೆಲಸವನ್ನು ಲೇಖಕರು ಮಾಡಿರುವರು. ಅಲ್ಲದೆ ಜಿಲ್ಲೆಯ ಅಕ್ಷರಸ್ಥರೆಲ್ಲರೂ ಈ ಕೃತಿಯನ್ನು ಕೊಂಡುಕೊಂಡು ಇಟ್ಟುಕೊಳ್ಳಲೇಬೇಕಾದುದಾಗಿದೆ. ಈ ಕೃತಿಯು ಮೌಖಿಕ ಆಕರಗಳನ್ನು ಮತ್ತು ಪ್ರಾಥಮಿಕ ಆಕರಗಳನ್ನು ಬಳಸಿಕೊಂಡು ಜಿಲ್ಲೆಯ ಒಟ್ಟು ಆರು ತಾಲ್ಲೂಕಗಳ ಸಂಕ್ಷಿಪ್ತ ಚರಿತ್ರೆಯನ್ನು ತಿಳಿಸಿಕೊಡುವಲ್ಲಿ ಮಹತ್ವದ ಕೃತಿಯಾಗಿದೆ.

೧೬. ಮಲೆಕರ್ನಾಟಕದ ಅರಸು ಮನೆತನಗಳು, ಸಂ., ರಾಜಾರಾಮ್ ಹೆಗಡೆ ಮತ್ತು ಅಶೋಕ್ ಶೆಟ್ಟರ್, ೨೦೦೧

೧೭ ಲೇಖನಗಳ ಸಂಗ್ರಹವಾದ ಈ ಕೃತಿ ಕರ್ನಾಟಕದ ಚರಿತ್ರೆಯಲ್ಲಿ ಅನೇಕ ಅರಸು ಮನೆತನಗಳು ಚರ್ಚೆಯ ಮತ್ತು ಅಧ್ಯಯನದ ಕಣ್ಣಿಗೆ ಬೀಳದೆ ಸುಪ್ತವಾಗಿಯೇ ಉಳಿದು ಬಿಟ್ಟಿವೆ. ಇತಿಹಾಸ ಸಂಶೋಧನಾ ಹಾದಿಯಲ್ಲಿ ವಿಶಿಷ್ಟವಾದ ವಸ್ತುನಿಷ್ಠತೆ, ಅಧ್ಯಯನಶೀಲತೆ, ವಿಶ್ಲೇಷಣಾ ಸಾಮರ್ಥ್ಯವನ್ನು ತೆರೆದಿಡುವ ೧೭ ಜನ ವಿದ್ವಾಂಸರು ಬಹುಮಟ್ಟಿಗೆ ಇತಿಹಾಸದ ಪುಟಗಳಲ್ಲಿ ಮಿನುಗದ ೧೫ ಅರಸು ಮನೆತನಗಳನ್ನು ಕುರಿತು ಸಂಗ್ರಹಿಸಿದ ಮಾಹಿತಿ ಮತ್ತು ನಡೆಸಿದ ಚಿಂತನೆ ಈ ಪುಟಗಳಲ್ಲಿ ಬಿಚ್ಚಿಕೊಂಡಿದೆ. ಹಾಗೆಯೇ ೧೫ ಅರಸು ಮನೆತನಗಳಲ್ಲಿ ಒಂದಾದ ಸಂತೇಬೆನ್ನೂರು ನಾಯಕರ ಮನೆತನ ಕುರಿತು ನಡೆಸಿದ ಅಧ್ಯಯನ ದಾವಣಗೆರೆ ಜಿಲ್ಲೆಯ ಚರಿತ್ರೆಗೆ ಉಪಯುಕ್ತ ಮಾಹಿತಿ ಒದಗಿಸಿಕೊಡುತ್ತದೆ.

೧೭. ಕರ್ನಾಟಕದ ಪುರಾತತ್ವ ನೆಲೆಗಳು, ಡಾ. ಕೆ. ಬಿ. ಶಿವತಾರಕ್, ೨೦೦೧

ಈ ಅಧ್ಯಯನವು ಕರ್ನಾಟಕದ ೨೭ ಜಿಲ್ಲೆಗಳ ಪುರಾತತ್ವ ನೆಲೆಗಳ ಬಗ್ಗೆ ಸಂಶೋಧನೆ ಮಾಡಿದ ವಿಶೇಷ ಕೃತಿಯಾಗಿದೆ. ದಾವಣಗೆರೆ ಜಿಲ್ಲೆ ಪುರಾತತ್ವ ನೆಲೆಗಳ ಬಗ್ಗೆ ಸಹ ೩೩೦ ರಿಂದ ೩೪೬ ರವರೆಗಿನ ಪುಟಗಳಲ್ಲಿ ಗುರುತಿಸಿರುವರು. ಅವುಗಳ ಭವಿಷ್ಯದ ಕುರಿತಾಗಿಯೂ ಚರ್ಚಿಸುವ ಪ್ರಯತ್ನ ಮಾಡಲಾಗಿದೆ. ಇತಿಹಾಸ ಶೋಧ, ಪ್ರವಾಸಿ ಮಾರ್ಗದರ್ಶಿ, ಶಾಸನಗಳ, ಜಾನಪದೀಯ ಅಧ್ಯಯನ ಮತ್ತು ಸ್ಥಳ ಪುರಾಣಗಳ ಕೈಗನ್ನಡಿಯಂತೆ ಇದೆ. 'ಸಾಂಸ್ಕೃತಿಕ ಸಿರಿ' ಎಂಬ ಶೀರ್ಷಿಕೆಯಡಿ ಮಾಡಿರುವ ವಿಶ್ಲೇಷಣೆಗಳು ಸೂಕ್ಷ್ಮಸಂವೇದನಾಶೀಲ ಚರಿತ್ರಕಾರನೊಬ್ಬನ ವಿಶ್ಲೇಷಣೆಗಳಾಗಿವೆ. ಇಂಥ ಅಮೂಲ್ಯ ಮಾಹಿತಿ, ವಿಶ್ಲೇಷಣೆಯನ್ನು ಒಳಗೊಂಡಿರುವುದರ

ಜೊತೆಗೆ ಇತಿಹಾಸಕಾರರು, ಸಂಶೋಧಕರು ಕೆಲವೊಂದು ಕ್ಷೇತ್ರಗಳನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನ ನಡೆಸಲು ಮಾರ್ಗಸೂಚಿಯಾದ ಅಂಶಗಳನ್ನು ನೀಡಿರುವುದು ಸಂತೋಷಕರ ಸಂಗತಿಯಾಗಿದೆ.

೧೮. ಹರಿಹರ ತಾಲೂಕ ದರ್ಶನ, ಬಳ್ಳೇಕೆರೆ ಹನುಮಂತಪ್ಪ, ೨೦೦೨

ಹರಿಹರ ತಾಲ್ಲೂಕು ದರ್ಶನ ಕೃತಿಯು ಚಿಕ್ಕದಾದರೂ ಚೊಕ್ಕವಾಗಿದ್ದು, ಸರಳ, ನೇರ ಮತ್ತು ವಸ್ತುನಿಷ್ಠ ನಿರೂಪಣೆಯಿಂದಾಗಿ ಗಮನಸೆಳೆಯುತ್ತದೆ. ನೂತನ ಶಿಲಾಯುಗದಿಂದ ಪ್ರಸ್ತುತ ೨೦೦೨ ರ ಕಾಲದವರೆಗೆ ಸಾಂಸ್ಕೃತಿಕ ವಿಕಾಸದ ವಿವಿಧ ಹಂತಗಳನ್ನು ಈ ಕೃತಿಯು ಪರಿಚಯಿಸಿಕೊಡುತ್ತದೆ.

೧೯. ಹರಿಹರ ಆರೋಗ್ಯ ಮಾತೆಯ ಪುಣ್ಯಕ್ಷೇತ್ರದ ಚರಿತ್ರೆ, ಡಿ. ಫ್ರಾನ್ಸಿಸ್ ಕ್ಸೇವಿಯರ್, ೨೦೦೨

ಹರಿಹರ ಮಾತೆ ಎಂದೇ ಕರೆಯಲ್ಪಡುವ ಮೇರಿಯ ಕಿರುಪರಿಚಯವನ್ನು ಬೈಬಲಿನ ಆಧಾರದ ಮೇಲೆ ಆಕೆಯ ಗುಣಾತಿಶಯಗಳನ್ನು ಲೇಖಕರು ತಿಳಿಸಿಕೊಟ್ಟಿರುವರು. ಹಾಗೆಯೇ ಹರಿಹರ ಕ್ಷೇತ್ರ ಐತಿಹಾಸಿಕ ಪರಿಚಯವನ್ನು ಮಾಡಿಕೊಟ್ಟಿರುವರು.

೨೦. ಹಲವು ಹನ್ನೊಂದು ಹರಪನಹಳ್ಳಿ, ಕುಂ. ಭಾ. ಸದಾಶಿವಪ್ಪ, ೨೦೦೨

ಹರಪನಹಳ್ಳಿಯ ಚರಿತ್ರೆ ಕುರಿತಾಗಿ ರಚಿಸಿರುವ ಕೃತಿ ಇದಾಗಿದೆ. ಹರಪನಹಳ್ಳಿಯ ಹೆಸರಿನ ಹಿನ್ನೆಲೆ, ಭೌಗೋಳಿಕ ವಿಸ್ತೀರ್ಣ, ದೇವಾಲಯ, ಸಾರಿಗೆ ಸಂಪರ್ಕವ್ಯವಸ್ಥೆ, ವಾಣಿಜ್ಯ ಕೇಂದ್ರ, ಶಿಕ್ಷಣ ಸಂಸ್ಥೆಗಳು ಮತ್ತು ಸ್ವಾತಂತ್ರ್ಯ ಸಂಗ್ರಾಮದ ಸೇನಾನಿಗಳ ಕಿರುಪರಿಚಯ ಇದರಲ್ಲಿದೆ. ಇದಲ್ಲದೆ ವ್ಯಕ್ತಿಪರಿಚಯವನ್ನು, ತಾಲ್ಲೂಕಿನ ಶಾಸನಗಳನ್ನು, ವಾಸ್ತುಶಿಲ್ಪ, ಅದರಲ್ಲಿ ವಿಶೇಷವಾಗಿ ಕಂಬ ಮತ್ತು ತೇರು, ದೇವತೆಗಳ, ಹರಿಕೀರ್ತನಾಕಾರ್ತಿ ಭೀಮವ್ವ, ಇಜಾರಿವಸುಪಾಲಪ್ಪ, ಬೀಚಿ ಮುಂತಾದವರ ಕುರಿತಂತೆ ಪ್ರಸ್ತುತ ಅಧ್ಯಯನ ಕೃತಿಯಲ್ಲಿ ಚರ್ಚಿಸಲಾಗಿದೆ.

೨೧. ಮೌರ್ಯ ಮತ್ತು ಶಾತವಾಹನ ಯುಗ, ಪ್ರೊ. ಲಕ್ಷ್ಮಣ್‌ತೆಲಗಾವಿ, ೨೦೦೪

ದಾವಣಗೆರೆ ಜಿಲ್ಲೆಯ ಪುರಾತತ್ವ ನೆಲೆಗಳ ಕುರಿತು ಹಳೆಯ ಶಿಲಾಯುಗ, ಅಂತ್ಯ ಶಿಲಾಯುಗ, ಸ್ಥಿತ್ಯಂತರ ಶಿಲಾಯುಗ, ನೂತನ ಶಿಲಾಯುಗ, ಕಬ್ಬಿಣ ಶಿಲಾಯುಗಗಳ ಕಾಲದ ಕುರುಹುಗಳನ್ನು ಪರಿಚಯಿಸುತ್ತಾ ಜಿಲ್ಲೆಯ ಪ್ರಾಗೈತಿಹಾಸಿಕ ಕಾಲದ ಚರಿತ್ರೆಗೆ ಪೂರಕ ಮಾಹಿತಿ ಕೊಡುವ ಅಧ್ಯಯನ ಕೃತಿಯಾಗಿದೆ.

೨೨. ಹೊನ್ನೆಲೆಗಳು, ಡಾ. ನಾ. ಕೊಟ್ರೇಶ್ ಉತ್ತಂಗಿ, ೨೦೦೪

ದಾವಣಗೆರೆ ಜಿಲ್ಲೆಯ ವ್ಯಾಪ್ತಿಯಲ್ಲಿ ಕಾಣಬರುವ ಹೊನಾಳಿ ತಾಲ್ಲೂಕಿನ ಸಮಗ್ರ ಚರಿತ್ರೆಯನ್ನು ತಿಳಿಸುವಲ್ಲಿ ಈ ಕೃತಿ ಸಫಲವಾಗಿದೆ. ದಿವಂಗತ ಬಿ. ಎಲ್. ರೈಸರು, ಕರ್ನಾಟಕ ರಾಜ್ಯದ ಹಲವೆಡೆ ಹುಡುಕಿ ಪತ್ತೆಹಚ್ಚಿದ ಶಾಸನಗಳನ್ನು ಪರಿಚಯಿಸುತ್ತದೆ. ತಾಲ್ಲೂಕಿನಲ್ಲಿ ಒಟ್ಟು ೧೨೩ ಶಾಸನಗಳನ್ನು ಇದಕ್ಕೆ ಪೂರ್ವದಲ್ಲಿನ ಪುರಾತತ್ವ ನೆಲೆಗಳನ್ನು, ವೀರಗಲ್ಲು, ಮಾಸ್ತಿಕಲ್ಲು, ಮಠಮಾನ್ಯ, ಕೋಟೆಕೊತ್ತಲಗಳ ಮಾಹಿತಿ ಕೊಡುತ್ತದೆ. ಹಾಗೆ ಲೇಖಕರು ಹೊನ್ನಾಳಿ ಮತ್ತು ಸುತ್ತಮುತ್ತಲ ಗ್ರಾಮಗಳ ಇತಿಹಾಸವನ್ನು ಕಟ್ಟಿಕೊಡುವುದರ ಜೊತೆಗೆ ಅವುಗಳ ವರ್ತಮಾನವನ್ನು ಪರಿಚಯಿಸಿದ್ದಾರೆ. ಅಲ್ಲದೆ ಕೆಲವು ಗ್ರಾಮಗಳಲ್ಲಿಯ ಮಹತ್ವದ ಐತಿಹಾಸಿಕ, ಸಾಂಸ್ಕೃತಿಕ, ನೈಸರ್ಗಿಕ ಹಾಗೂ ಗಣ್ಯವ್ಯಕ್ತಿಗಳ ಪರಿಚಯವನ್ನು ಮಾಡಿಕೊಟ್ಟಿದ್ದಾರೆ.

೨೩. ವಿಜಯಶಿಲ್ಪಿ, (ಸಂ.), ಹೆಚ್. ನೀಲಪ್ಪ, ೨೦೦೪

ಚನ್ನಗಿರಿ ತಾಲ್ಲೂಕಿನಲ್ಲಿ ಕಾಣಬರುವ ಐತಿಹಾಸಿಕ ಮಹತ್ವ ಪಡೆದ ಸಂತೇಬೆನ್ನೂರಿನ ಚರಿತ್ರೆಯನ್ನು ನಿರೂಪಿಸುವ ಕಾರ್ಯ ಈ ಪುಸ್ತಕದಲ್ಲಿ ನಡೆದಿದೆ. ಒಟ್ಟು ೬೪ ಲೇಖನಗಳನ್ನು ಒಳಗೊಂಡ ಈ ಅಭಿನಂದನ ಗ್ರಂಥವನ್ನು ನಾಲ್ಕು ನೆಲೆಗಳಲ್ಲಿ ದರ್ಶಿಸಬಹುದಾಗಿದೆ. ಮೊದಲನೆಯದಾಗಿ ವ್ಯಕ್ತಿತ್ವ ದರ್ಶನದಲ್ಲಿ ಶ್ರೀ ಸತ್ಯನಾರಾಯಣ ನಾಡಿಗರ ಬಂಧು-ಮಿತ್ರರ, ಅಭಿಮಾನಿಗಳ ಭಾವನೆಗಳ ಮಹಾಪೂರವೇ ಹರಿದಿದೆ. ಎರಡನೆಯದಾಗಿ ಸಾಹಿತ್ಯದರ್ಶನದಲ್ಲಿ ಸಾಹಿತಿಗಳ ಸಂಗ್ರಹಯೋಗ್ಯ ಲೇಖನಗಳಿವೆ. ಮೂರನೆಯದಾಗಿ ಶಿಕ್ಷಣದರ್ಶನದಲ್ಲಿ ಶ್ರೀ ಸತ್ಯನಾರಾಯಣನಾಡಿಗರು ಕಟ್ಟಿದ ಶಿಕ್ಷಣ ಸಂಸ್ಥೆಗಳು ಮತ್ತು ವಿದ್ಯಾರ್ಥಿಗಳ ಲೇಖನಗಳಿವೆ. ನಾಲ್ಕನೆಯದಾಗಿ

ಜಾಹಿರಾತುದರ್ಶನಕ್ಕೆ ಸಂಬಂಧಿಸಿದ್ದಾಗಿದೆ. ಮುಖ್ಯವಾಗಿ ಗಮನಿಸಬೇಕಾದ ಅಂಶಗಳೆಂದರೆ ಎರಡನೆಯ ಭಾಗದಲ್ಲಿ ಅಂದರೆ ಸಾಹಿತ್ಯ ದರ್ಶನ ಭಾಗದಲ್ಲಿ ಸುಮತೀಂದ್ರನಾಡಿಗರು ಸಂತೇಬೆನ್ನೂರು ನಾಯಕರು ಮತ್ತು ಚನ್ನಗಿರಿ ತಾಲ್ಲೂಕಿನ ಶಾಸನಗಳು ಎಂಬ ಲೇಖನಗಳು ಚನ್ನಗಿರಿ ಚರಿತ್ರೆಯ ಮೇಲಲ್ಲದೆ ದಾವಣಗೆರೆ ಚರಿತ್ರೆ ರಚನೆಗೆ ಸಹಾಯಕವಾಗಿವೆ.

೨೪. ಬಳ್ಳಾರಿ ಜಿಲ್ಲೆಯ ಪಾಳೆಯಗಾರರು, ಡಾ. ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೪

ವಿಜಯನಗರ ಸಾಮ್ರಾಜ್ಯ ಪತನದಿಂದ ಸಣ್ಣಪುಟ್ಟ ಪಾಳೆಯಪಟ್ಟುಗಳು ತಲೆಯೆತ್ತಿ, ತಮ್ಮದೇ ಆದ ಆಡಳಿತವನ್ನು ನಡೆಸಿವೆ. ಇಂಥ ಸಂಸ್ಥಾನ, ಪಾಳೆಯಪಟ್ಟುಗಳು ಇತಿಹಾಸ ಪುಟಗಳಲ್ಲಿ ಕಣ್ಮರೆಯಾದದ್ದೂ ಉಂಟು. ಇಂಥ ಹಲವು ಪಾಳೆಯಗಾರಿಕೆಯ ಕೇಂದ್ರಗಳನ್ನು ಅಧ್ಯಯನದ ಮೂಲಕ ಬೆಳಕಿಗೆ ತಂದಿದ್ದಾರೆ. ಹಾಗೆಯೇ ಬಳ್ಳಾರಿ ಜಿಲ್ಲೆಯ ಗುಡೇಕೋಟೆ, ಜರಿಮಲೆ, ಉಜ್ಜನಿ, ವಡ್ಡು, ದರೋಜಿ, ಬಾಣಾರಾವಿ, ಕುರುತಿನಿ, ಹರಪನಹಳ್ಳಿ, ವೀರನಹಳ್ಳಿಗಳ ಇತರ ಪಾಳೆಯಗಾರರ ಬಗ್ಗೆ ಸಂಶೋಧನೆ ನಡೆಸಿ ಕೃತಿ ಪ್ರಕಟಿಸಿದ್ದಾರೆ. ದಾವಣಗೆರೆ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಹರಪನಹಳ್ಳಿ ಪಾಳೆಯಗಾರರ ಆಡಳಿತದ ಬಗ್ಗೆ ಈ ಕೃತಿಯಲ್ಲಿ ಮಾಹಿತಿಯಿದೆ.

೨೫. ಚಿನ್ನಹಗರಿ ಸಿರಿ, ಡಾ. ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೬

ಇತ್ತೀಚಿಗೆ ಬಿಡುಗಡೆಯಾದ ಈ ಅಧ್ಯಯನದ ಕೃತಿ ನಾಯಕ ಬುಡಕಟ್ಟುಗಳ ಪ್ರಾದೇಶಿಕ, ಸ್ಥಳೀಯ, ಮೌಖಿಕ ಚರಿತ್ರೆಯನ್ನು ಕುರಿತು ಅಧ್ಯಯನ ಮಾಡಿ ಪ್ರಕಟಪಡಿಸಿದ ಶೋಧಗಳು ಇಲ್ಲಿ ಪ್ರಧಾನವಾಗಿವೆ. ಒಟ್ಟು ನಲವತ್ತೆಂಟು ಲೇಖನಗಳನ್ನು ಈ ಕೃತಿಯು ಒಳಗೊಂಡಿದೆ. ಹಾಗೆಯೇ ಬುಡಕಟ್ಟುಗಳಿಗೆ ಸಂಬಂಧಿಸಿದಂತೆ ಚರಿತ್ರೆ, ಸಂಸ್ಕೃತಿ, ಧಾರ್ಮಿಕ ಮತ್ತು ವೈಚಾರಿಕ ಮತ್ತು ವ್ಯಕ್ತಿ ಚಿತ್ರಣಗಳಿರುವ ಈ ಕೃತಿಯು ಅನೇಕ ಹೊಸ ಸಂಗತಿಗಳ ಕಡೆಗೆ ಬೆಳಕು ಚೆಲ್ಲಲು ಮಾಡಿರುವ ಪ್ರಯತ್ನವು ಶ್ಲಾಘನೀಯವಾಗಿದೆ. ದಾವಣಗೆರೆ ಜಿಲ್ಲೆಗೆ ಸಂಬಂಧಿಸಿದಂತೆ ಅಣಜಿ ಗ್ರಾಮದ ಪ್ರಾಚೀನ ಚರಿತ್ರೆ ಕುರಿತಂತೆ ಮಾಡಿದ ಅಧ್ಯಯನ ಪ್ರಸ್ತುತ ಜಿಲ್ಲೆಯ ಚರಿತ್ರೆಯ ಮೇಲೆ ಬೆಳಕು ಬೀರುತ್ತದೆ.

೨೬. ಸುವರ್ಣ ಕರ್ನಾಟಕ ದರ್ಶನ, ಕೆ. ಅನಂತರಾಮುರಾವ್, ೨೦೦೬

ಐವತ್ತು ವರ್ಷಗಳಲ್ಲಿ ಕರ್ನಾಟಕ ಸಾಧಿಸಿದ ಸಾಧನೆಯ ಅಂಶಗಳನ್ನೊಳಗೊಂಡು ಇತ್ತೀಚಿಗೆ ಪ್ರಕಟಗೊಂಡ ಕೃತಿಯಾಗಿದೆ. ರಾಜ್ಯದ ೨೭ ಜಿಲ್ಲೆಗಳ ಸಮಗ್ರ ಸಾಧನೆಯನ್ನು ಅಂಕಿಅಂಶಗಳ ಮೂಲಕ ಪರಿಚಯ ಮಾಡಿಕೊಟ್ಟ ಉತ್ತಮ ಕೃತಿಯಾಗಿದೆ. ಹಾಗೆಯೇ ದಾವಣಗೆರೆ ಜಿಲ್ಲೆಯ ಕುರಿತು ಚಾರಿತ್ರಿಕ, ರಾಜಕೀಯ, ಆರ್ಥಿಕ, ಶೈಕ್ಷಣಿಕ, ಕೃಷಿ, ಸಾಹಿತ್ಯ, ವಾಣಿಜ್ಯ ಮುಂತಾದ ವಿವರಗಳನ್ನು ಈ ಕೃತಿ ಒಳಗೊಂಡಿದೆ.

ಹೀಗೆ ದಾವಣಗೆರೆ ಜಿಲ್ಲೆ ಕುರಿತಂತೆ ಇನ್ನೂ ಅನೇಕ ಕೃತಿಗಳು ಪ್ರಕಟಗೊಂಡಿದ್ದು ಅವು ವಿವಿಧ ಶಿಸ್ತುಗಳು ಮತ್ತು ಕ್ಷೇತ್ರಗಳಿಗೆ ಸಂಬಂಧಿಸಿವೆ.

ಜನಾಂಗೀಯ ಅಧ್ಯಯನ ಕೃತಿಗಳ ಅವಲೋಕನ

೧. ಲಂಬಾಣೆಗರ ಜನಪದ ಗೀತೆಗಳು, ಬೆನಕನಹಳ್ಳಿ ಜಿ. ನಾಯಕ್, ೧೯೮೧

ಜನಪದರಲ್ಲಿ ಕಂಡುಬರುವ ಬಂಧುಬಾಂಧವರ ಸಂಬಂಧ, ಪ್ರೀತಿ ವಿಶ್ವಾಸ, ಹಾಸ್ಯ, ನೀತಿ ಇತ್ಯಾದಿಗಳ ವಿಚಾರವು ಈ ಹಾಡುಗಳಲ್ಲಿ ಅಡಗಿವೆ. ಬುಡಕಟ್ಟು ಜನಾಂಗಗಳ ಸಾಲಿಗೆ ಸೇರಿರುವ ಲಂಬಾಣೆಗರಲ್ಲಿ ರೂಢಿಯಲ್ಲಿರುವ ಹಾಡುಗಳನ್ನು ಸಂಗ್ರಹಿಸಿ ಅವುಗಳನ್ನು ಕನ್ನಡ ಅನುವಾದದೊಂದಿಗೆ ಕೊಟ್ಟಿರುವುದರಿಂದ ಆ ಸಮುದಾಯದ ಬದುಕಿನ ರೀತಿ-ನೀತಿಗಳು, ಸಂಪ್ರದಾಯಗಳು, ನಂಬಿಕೆಗಳು ಮೊದಲಾದವುಗಳ ಪರಿಚಯವನ್ನು ಈ ಅಧ್ಯಯನ ಮಾಡಿಕೊಡುತ್ತದೆ.

೨. ಮ್ಯಾಸಬೇಡರು, ಎಂ. ಜಿ. ಈಶ್ವರಪ್ಪ, ೧೯೮೨

ದಾವಣಗೆರೆ ಪರಿಸರದ ಮ್ಯಾಸಬೇಡರ ಜನ ಜೀವನ ಕುರಿತು ಅಧ್ಯಯನ ಮಾಡಿದ ಚಿಕ್ಕ ಪುಸ್ತಕವಾಗಿದೆ. ಲೋಕಿಕೆರೆ, ಜಗಳೂರು, ಕಾಮಗೇತನಹಳ್ಳಿ ಮುಂತಾದ ಪ್ರದೇಶಗಳಲ್ಲಿನ ಮ್ಯಾಸಬೇಡರ ಕುರಿತು ನಡೆದ ಅರ್ಥಪೂರ್ಣ ಅಧ್ಯಯನ ಇದಾಗಿದೆ.

೩. ಕುಂಬಾರನ ಹಾಡುಗಳು, ಹಿ. ಗೂ. ದುಂಡ್ಯಪ್ಪ, ೧೯೯೮

ಹರಿಹರದವರಾದ ಹಿ. ಗೂ. ದುಂಡ್ಯಪ್ಪನವರು ಹರಿಹರ ಸುತ್ತಮುತ್ತಲಿನ ಹಾಗೂ ದಾವಣಗೆರೆ ಜಿಲ್ಲೆಯ ಕುಂಬಾರ ಸಮುದಾಯದ ಜನಪದ ಹಾಡುಗಳನ್ನು ಸಂಗ್ರಹಿಸಿ, ಕುಂಬಾರ ಸಂಸ್ಕೃತಿಯು ಹಾಡುಗಳಲ್ಲಿ ಹೇಗೆ ಅಭಿವ್ಯಕ್ತಿಗೊಂಡಿದೆಯೆಂಬುದನ್ನು ಅಧ್ಯಯನಾಸಕ್ತರಿಗೆ ತಿಳಿಸುವ ಪ್ರಯತ್ನ ಮಾಡಿದ್ದಾರೆ.

೪. ಮ್ಯಾಸಬೇಡರ ಸಂಸ್ಕೃತಿ, ಡಾ. ಕೃಷ್ಣಮೂರ್ತಿ ಹನೂರು, ೧೯೯೩

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ, ಜಗಳೂರು, ಮೊಳಕಾಲ್ಮೂರು ತಾಲ್ಲೂಕುಗಳನ್ನು ಅನುಲಕ್ಷಿಸಿ ಮ್ಯಾಸಬೇಡರ ಸಂಸ್ಕೃತಿ ಎಂಬ ಜನಾಂಗೀಯ ಅಧ್ಯಯನವಾಗಿದೆ. ದಾವಣಗೆರೆ ಜಿಲ್ಲೆಯ ವ್ಯಾಪ್ತಿಗೆ ಸೇರಿದ ಜಗಳೂರು ತಾಲ್ಲೂಕಿನ ಮ್ಯಾಸಬೇಡರ ರೀತಿನೀತಿಗಳು, ಆಚಾರಪದ್ಧತಿ, ಹಬ್ಬಹರಿದಿನಗಳು ಹಾಗೂ ಜಾತ್ರೆಗಳು, ಸಂತೆ ಮುಂತಾಗಿ ಸಮಗ್ರ ವಿವರಗಳನ್ನು ಒಳಗೊಂಡ ಈ ಕೃತಿ ಜನಾಂಗೀಯ ಅಧ್ಯಯನ ಕೃತಿಗಳಲ್ಲಿಯೇ ಪ್ರಮುಖವಾಗಿದೆಯೆನ್ನಬಹುದು.

೫. ಪಿಂಜಾರರ ಸಂಸ್ಕೃತಿ, ಬಿ. ಸಿ. ದಾದಾಪೀರ್, ೧೯೯೩

ಇಸ್ಲಾಂ ಧರ್ಮ ಸ್ವೀಕರಿಸಿದ ಮುಸ್ಲಿಮೇತರ ಸಮುದಾಯವೊಂದು ತನ್ನ ಮೂಲ ಸಂಸ್ಕೃತಿ, ಸಂಪ್ರದಾಯಗಳನ್ನು ಉಳಿಸಿಕೊಂಡು ಧಾರ್ಮಿಕವಾಗಿ ಮುಸ್ಲಿಮರಾಗಿಯೂ, ಇತ್ತ ಮುಸ್ಲಿಮೇತರರಾಗಿಯೂ ಇರುವ ಪಂಗಡವೇ ಪಿಂಜಾರರು. ಇವರ ಕುರಿತ ಪ್ರಪ್ರಥಮ ಕೃತಿ ಇದಾಗಿದ್ದು ದಾದಾಪೀರ್‌ರವರು ತಮ್ಮ ಸಮುದಾಯದ ಆಚರಣೆ, ನಂಬಿಕೆ, ಜೀವನವಿಧಾನವನ್ನು ಈ ಕೃತಿಯ ಮೂಲಕ ವಿವರಿಸುತ್ತಾರೆ. ಇದೊಂದು ಅರ್ಥಪೂರ್ಣ ಕೃತಿಮಾತ್ರವಲ್ಲದೆ, ಬಹುಸಂಸ್ಕೃತಿ, ದ್ವಿಸಂಸ್ಕೃತಿಯ ಅಂಶಗಳನ್ನು ಚಾರಿತ್ರಿಕ ಹಿನೆಲೆಯಲ್ಲಿ ವ್ಯಾಖ್ಯಾನಿಸುವ ಉತ್ತಮ ಕೃತಿಯಾಗಿದೆ.

೬. ಚಿತ್ರದುರ್ಗ ಜಿಲ್ಲಾ ಬುಡಕಟ್ಟು ವೀರರು, ಡಾ. ವಿರೂಪಾಕ್ಷಿ ಪೂಜಾರಹಳ್ಳಿ, ೧೯೯೯

ಈ ಕೃತಿಯು ನಾಯಕ ಸಮುದಾಯದ ಸಾಂಸ್ಕೃತಿಕ ವೀರರ ಕುರಿತ ವಿವರಗಳನ್ನೊಳಗೊಂಡಿದೆ. ಸಮುದಾಯವೊಂದರ ಆಶಯಗಳು, ಕನಸುಗಳ ಪ್ರತೀಕಗಳಾದ ಈ ವೀರರು ಜನಾಂಗವೊಂದರ ಜೀವನವಿಧಾನವನ್ನು ನಿರ್ದೇಶಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಾರೆಂಬುದನ್ನು ಈ ಕೃತಿಯಲ್ಲಿ ಸೊಗಸಾಗಿ ನಿರೂಪಿಸಲಾಗಿದೆ.

ಹೀಗೆ ದಾವಣಗೆರೆ ಜಿಲ್ಲೆಯನ್ನು ಅನುಲಕ್ಷಿಸಿದಂತೆ ಕೇವಲ ಮ್ಯಾಸಬೇಡ, ಕುಂಬಾರ, ಲಂಬಾಣಿ, ಪಿಂಜಾರ ಸಮುದಾಯಗಳ ಅಧ್ಯಯನಗಳಷ್ಟೇ ಕಂಡುಬರುತ್ತವೆ. ಇನ್ನುಳಿದ ಬುಡಕಟ್ಟು ಸಮುದಾಯಗಳ ಅಧ್ಯಯನ ಆಗಬೇಕಿದೆ.

೭. ವಾಲ್ಮೀಕಿ ಸಮುದಾಯದ ಪ್ರಾತಃಸ್ಮರಣೀಯರು, ಸಂ., ಡಾ. ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೬

ಈ ಕೃತಿಯ ಸಂಪಾದಕರ ಹತ್ತೊಂಬತ್ತು ಲೇಖನಗಳ ಜೊತೆಗೆ ಇನ್ನುಳಿದ ವಿದ್ವಾಂಸರ ಲೇಖನಗಳೂ ಇಲ್ಲಿವೆ. ಜನಾಂಗೀಯ ಅಧ್ಯಯನದಲ್ಲಿ ಚರಿತ್ರೆಯ ಶಿಸ್ತನ್ನು ಅಳವಡಿಸಿಕೊಂಡು ಸಂಶೋಧನಾ ಕ್ಷೇತ್ರದಲ್ಲಿ ವಿಶಿಷ್ಟವಾದುದನ್ನು ಸಾಧಿಸುತ್ತಿರುವ ಡಾ. ವಿರೂಪಾಕ್ಷಿ ಪೂಜಾರಹಳ್ಳಿಯವರ ಈ ಸಂಕಲನದ ಲೇಖನಗಳ ಮೌಲಿಕತೆ ಮಾತ್ರವಲ್ಲದೆ ಉಳಿದ ವಿದ್ವಾಂಸರ ಲೇಖನಗಳು ಸಹ ಅತ್ಯುತ್ತಮವಾದುವುಗಳಾಗಿವೆ. ಲೇಖನಗಳ ಆಯ್ಕೆ, ಸಂಪಾದನೆಯಲ್ಲಿನ ಶಿಸ್ತು, ಪರಿಶ್ರಮ ಇವೆಲ್ಲವುಗಳಿಂದಾಗಿ ಜನಾಂಗೀಯ ಅದ್ಯಯನಕಾರರಿಗೆ ಉಪಯುಕ್ತ ಆಕರ ಗ್ರಂಥವಾಗಿರುವ ಈ ಕೃತಿಯಲ್ಲಿ ಜಗಳೂರು ತಾಲ್ಲೂಕಿನ ಬಿಳಿಚೋಡು ಗ್ರಾಮದ ವಾಲ್ಮೀಕಿ ಸಮುದಾಯದ ಸಂಸ್ಕೃತಿ, ಜೀವನ ಚಿತ್ರಣ ಕುರಿತಂತೆ ಲೇಖನವೊಂದಿದೆ.

೮. ಕಾಮಗೇತಿ ವಂಶಜರ ಚರಿತ್ರೆ, ಡಾ. ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೬

ಜಗಳೂರು ತಾಲ್ಲೂಕಿನ ಕಾಮಗೇತನ ಹಳ್ಳಿ ಕಟ್ಟೆಮನೆಯ ವಿವರಗಳು, ಆಚಾರ, ವಿಚಾರಗಳ ಮಾಹಿತಿಯಿಂದ ಬೇಡ ಸಮುದಾಯದಲ್ಲೊಂದಾದ ಕಾಮಗೇತಿ ವಂಶದ ಚರಿತ್ರೆಯನ್ನು ಈ ಕೃತಿಯು ಪರಿಚಯಿಸುತ್ತದೆ.

ಕಲೆ ಮತ್ತು ವಾಸ್ತುಶಿಲ್ಪ

ಕಲೆ: ಸೇರು, ಬೆರೆತುಕೊಳ್ಳು, ಕೂಡು, ಹಳೆಯಗಾಯದ ಹುಣ್ಣಿನ ಗುರುತು, ಚಂದ್ರಬಿಂಬದ ಹದಿನಾರನೆಯ ಒಂದು ಅಂಶ, ಜಾಣ್ಮೆ, ಕೌಶಲ್ಯ, ತೇಜಸ್ಸು, ಶೋಭೆ ಮುಂತಾದ ಅರ್ಥವನ್ನು ಕೊಡುತ್ತದೆ.

ವಾಸ್ತುಶಿಲ್ಪ: ಕಟ್ಟಡ ನಿರ್ಮಾಣದ ವಿಧಾನ, ಕಟ್ಟಡಗಳ ನಕ್ಷೆಯನ್ನು ತಯಾರಿಸಿ ನಿರ್ಮಾಣ ಮಾಡುವ ಕಲೆಯೆಂದು ಅರ್ಥವನ್ನು ಕೊಡುತ್ತದೆ. ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರದ ಬಗ್ಗೆ ಜಿಲ್ಲೆಯನ್ನು ಅನುಲಕ್ಷಿಸಿ ನಡೆದಿರುವ ಕೆಲವು ಅಧ್ಯಯನಗಳನ್ನು ಅವಲೋಕಿಸಬಹುದಾಗಿದೆ.

೧. ಡಿ. ಮಂಜುನಾಥ, ಹರಿಹರೇಶ್ವರ ದೇವಾಲಯ, ೧೯೮೨

ಹರಿಹರದಲ್ಲಿರುವ ಹರಿಹರೇಶ್ವರ ದೇವಾಲಯದ ಕುರಿತಂತೆ ನಡೆಸಿದ ಅಧ್ಯಯನವಾಗಿದೆ. ಹರಿಹರರ ಚರಿತ್ರೆ, ದೇವಾಲಯದ ವರ್ಣನೆ, ಸ್ಥಳಪುರಾಣ, ಶಿಲ್ಪಕಲೆ ಇನ್ನಿತರ ಅಂಶಗಳನ್ನು ಅಡಕಗೊಳಿಸಿದ ಕೃತಿಯಾಗಿದೆ. ಹಾಗೆಯೇ ದಾವಣಗೆರೆ ಜಿಲ್ಲೆಯ ಕಲೆ ಮತ್ತು ವಾಸ್ತು ಶಿಲ್ಪ ಚರಿತ್ರೆಗೆ ಹೊಸ ಬೆಳಕು ಬೀರುವ ಅಪೂರ್ವ ಮಾಹಿತಿಗಳನ್ನು ಈ ಕೃತಿಯು ಒದಗಿಸುತ್ತದೆ.

೨. ಬಾಗಿಲಿಯೇ ಬಾಗಳಿಗೆ, ಮಹಾಬಲೇಶ್ವರ ಕಾಟ್ರಹಳ್ಳಿ, ೧೯೯೩

ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ 'ಬಾಗಳಿ' ಎಂಬ ಚಿಕ್ಕ ಹಳ್ಳಿ ಇತಿಹಾಸ ಪ್ರಸಿದ್ಧವಾಗಿದೆ. ಈ ಕೃತಿಯು ಈ ಹಳ್ಳಿಯ ಅಧ್ಯಯನವನ್ನೂ ಒಳಗೊಂಡಿದೆ. ೧೦ ದೇವಾಲಯಗಳಿರುವ ಹಾಗೂ ಹೊಯ್ಸಳರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಅಗ್ರಹಾರ, ಪಟ್ಟಣವಾಗಿದ್ದಿತಲ್ಲದೇ ೧೬-೧೭ ನೇ ಶತಮಾನದಲ್ಲಿ ವಿಶಿಷ್ಟ ಪಾಳೆಯಗಾರರ ರಾಜಧಾನಿ ಸಹ ಆಗಿದ್ದಿತು. ಚಾಲುಕ್ಯರ ಅಪೂರ್ವ ಶಿಲ್ಪಗಳಿರುವ ದೇವಾಲಯಗಳ ತಾಣವಾಗಿತ್ತು ಎಂದು ತಿಳಿದುಬರುತ್ತದೆ. ಈ ದೇವಾಲಯಗಳ ವಿವರಗಳು ಮತ್ತು ಸ್ಥಳದ ಚಾರಿತ್ರಿಕ ಹಿನ್ನೆಲೆಯನ್ನು ಈ ಕೃತಿಯು ವಿವರಿಸುತ್ತದೆ.

೩. ಬಾಗಳಿಯ ದೇಗುಲಗಳು, ಬಣಕಾರ ರಾಜಶೇಖರ, ೧೯೯೯.

ಬಾಗಳಿ ಮೊದಲು ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯ ಚಾಲುಕ್ಯ ಮತ್ತು ಹೊಯ್ಸಳ ಶಿಲ್ಪಕಲೆಯ ಪ್ರಯೋಗ ಶಾಲೆಯಾಗಿತ್ತು. ಕರ್ನಾಟಕದ ಖಜುರಾಹೋ, ಹಾಗೂ ಚಾಲುಕ್ಯ ಮತ್ತು ಹೊಯ್ಸಳ ಶಿಲ್ಪಕಲೆಯ ಸಂಗಮವೆಂದು ಖ್ಯಾತಿ ಪಡೆದ ಐತಿಹಾಸಿಕ ಸ್ಥಳವಾಗಿದೆ. ಇದು ಹಲವಾರು ದೇವಾಲಯಗಳ ಸಂಗಮವಾಗಿದೆ ಎಂದು ಹೇಳಬಹುದು. ಕಲ್ಲೇಶ್ವರ, ವೀರಭದ್ರ, ಸಂಗಮಬಸವೇಶ್ವರ ಮುಂತಾದ ದೇವಾಲಯಗಳಿವೆ. ಅಲ್ಲದೆ ವೀರಗಲ್ಲು, ಮಾಸ್ತಿಕಲ್ಲು, ಶಿಲಾಶಾಸನಗಳು ದೊರೆತಿವೆ. ಇದರಿಂದ ಬಾಗಳಿಯ ಕಲೆ ಮತ್ತು ವಾಸ್ತುಶಿಲ್ಪದ ಚಿತ್ರಣವನ್ನು ಕಣ್ಣ ಮುಂದೆ ಇಡುವ ಪ್ರಯತ್ನ ನಡೆದಿದೆ.

ಚರಿತ್ರೆ ಕುರಿತ ಎಂ.ಫಿಲ್. ಸಂಶೋಧನಾ ಪ್ರಬಂಧಗಳು

ಜಿಲ್ಲೆಯ ಚರಿತ್ರೆಯನ್ನು ಅನುಲಕ್ಷಿಸಿ ನಡೆಸಿದ ಅಧ್ಯಯನಗಳನ್ನು ಕೆಳಕಂಡಂತಿವೆ.

೧. ಕೋಗಳಿನಾಡು: ಸಮಗ್ರ ಅಧ್ಯಯನ, ಎಚ್. ಎಸ್. ವಸಂತ್ - ೧೯೯೦

ಈ ಎಂ.ಫಿಲ್. ಪ್ರಬಂಧವು ಕೋಗಳಿ ೫೦೦ ರಲ್ಲಿ ಹರಪನಹಳ್ಳಿ, ದಾವಣಗೆರೆ ಮತ್ತು ಹರಿಹರ ತಾಲ್ಲೂಕುಗಳ ಕೆಲಭಾಗಗಳನ್ನು ಒಳಗೊಂಡ ಅಂಶಗಳನ್ನು ತಿಳಿಯಪಡಿಸುವುದರ ಜೊತೆಗೆ ಜಿಲ್ಲೆಯ ಚರಿತ್ರೆಯ ಹಿನ್ನೆಲೆಯನ್ನು ವಿಶ್ಲೇಷಿಸಲಾಗಿದೆ.

೨. ಚನ್ನಗಿರಿ ತಾಲ್ಲೂಕಿನ ಪಶ್ಚಿಮ ಭಾಗದ ಪುರಾತತ್ವ: ಒಂದು ಅಧ್ಯಯನ, ಕೆ. ಜಿ. ಸುರೇಶ್, ೧೯೯೪-೯೫

ದಾವಣಗೆರೆ ಜಿಲ್ಲೆಯ ದಕ್ಷಿಣಭಾಗದಲ್ಲಿ ಕಾಣಬರುವ ಚನ್ನಗಿರಿ ತಾಲ್ಲೂಕಿನ ಪಶ್ಚಿಮ ಭಾಗದ ಸೂಳೆಕೆರೆ, ಬಸವಾಪಟ್ಟಣ, ಚನ್ನಗಿರಿ, ಕಂಚುಗಾರನಹಳ್ಳಿ, ನಿಲ್ಲೋಗಲ್ಲು, ಬೆನಕನಹಳ್ಳಿ, ಕೊಮಾರನಹಳ್ಳಿ, ಹಿರೇಮಳಲಿ, ಸಾರಥಿ, ಚಿಕ್ಕಲಿಕೆರೆ, ನಲ್ಲೂರು, ತಿಳಿನೀರಿನ ಕಟ್ಟೆ, ದೇಣಿಹಳ್ಳಿ ನೆಲೆಗಳ ಭೌಗೋಳಿಕ ಹಿನ್ನೆಲೆ ದೊರಕಿದ ಪ್ರಾಚ್ಯಾವಶೇಷಗಳ, ಆದಿಮಾನವನು ಬಳಸುತ್ತಿದ್ದ ಕಲ್ಲಿನ ಉಪಕರಣಗಳು, ಲೋಹದ ಉಪಕರಣಗಳು,

ಆದಿಮಾನವನ ಜೀವನದ ಮಾಹಿತಿಯನ್ನು ತಿಳಿಸುತ್ತದೆ. ಹಾಗೆಯೇ ಪ್ರತಿಗ್ರಾಮದ ನೆಲ-ಜಲ, ಜನಸಂಖ್ಯೆ, ಬೆಳೆಗಳು, ಸಸ್ಯವರ್ಗ, ಜನವಸತಿ ವ್ಯವಸ್ಥೆ, ಗ್ರಾಮಗಳ ಹಿನ್ನೆಲೆ, ಹಬ್ಬಹರಿದಿನಗಳ, ದೇವಾಲಯಗಳು, ಇನ್ನಿತರ ವಿವರ ನೀಡಿ ಜಿಲ್ಲೆಯ ದಕ್ಷಿಣಭಾಗದ ಚನ್ನಗಿರಿ ತಾಲ್ಲೂಕಿನ ಪಶ್ಚಿಮಭಾಗದ ಪುರಾತತ್ವ ಅಧ್ಯಯನದಿಂದ ಪ್ರಾಗೈತಿಹಾಸಿಕ ಕಾಲವನ್ನು ಪರಿಚಯ ಮಾಡಿಕೊಟ್ಟಂತಾಗಿದೆ.

೩. ಉಚ್ಚಂಗಿದುರ್ಗ (ಐತಿಹಾಸಿಕ ಮತ್ತು ಸಾಂಸ್ಕೃತಿಕ) ಒಂದು ಅಧ್ಯಯನ, ಎಂ. ಕೊಟ್ರೇಶ್, ೧೯೯೭

ಪ್ರಸ್ತುತ ಕೃತಿಯಲ್ಲಿ ಹರಪನಹಳ್ಳಿ ತಾಲ್ಲೂಕಿನ ಉಚ್ಚಂಗಿ ದುರ್ಗದಲ್ಲಿನ ಕೆಲವು ದೇವಾಲಯಗಳ ಉಲ್ಲೇಖವಿದೆ. ಉಳಿದಂತೆ ಉಚ್ಚಂಗಿ ದುರ್ಗದ ಐತಿಹಾಸಿಕ, ಸಾಂಸ್ಕೃತಿಕ ಅಂಶಗಳನ್ನು ಅತ್ಯಂತ ಸಾಮಾನ್ಯವಾಗಿ ನಿರೂಪಿಸುವ, ಅಂತಹ ಹೇಳಿಕೊಳ್ಳುವ ಒಳನೋಟಗಳ್ಯಾವವೂ ಇಲ್ಲದ ನಿರರ್ಥಕ ಅಧ್ಯಯನವಾಗಿದೆ.

ದಾವಣಗೆರೆ ಜಿಲ್ಲೆಯ ಚರಿತ್ರೆಗೆ ಸಂಬಂಧಿಸಿದಂತೆ ಕಲೆ ಮತ್ತು ವಾಸ್ತುಶಿಲ್ಪಗಳ ಕುರಿತು ಎಂ.ಫಿಲ್., ಪಿಎಚ್.ಡಿ., ಅಧ್ಯಯನಗಳು ನಡೆದಿರುವುದರಿಂದ ಈ ವಿಷಯದ ಕುರಿತು ತಕ್ಕಮಟ್ಟಿನ ಸಂಶೋಧನೆ ನಡೆದಿದೆ ಎನ್ನಬಹುದು.

೪. ದಾವಣಗೆರೆ ಜಿಲ್ಲೆಯ ಸ್ವದೇಶಿ ಚಳವಳಿ, ಹಿರೇಬಿದ್ರಿ ಹೊಳಿಬಸಪ್ಪ, ೨೦೦೪-೦೫

ಕರ್ನಾಟಕದ ಹೃದಯ ಭಾಗದಲ್ಲಿರುವ ದಾವಣಗೆರೆ ಜಿಲ್ಲೆಯ ಭೌಗೋಳಿಕ ಹಾಗೂ ಚಾರಿತ್ರಿಕವಾಗಿ ಮಹತ್ವ ಪಡೆದಿದೆ. ಇಂಥ ಜಿಲ್ಲೆಯ ಕುರಿತಂತೆ ಸ್ವಾತಂತ್ರ್ಯ ಹೋರಾಟಗಾರರ ಸಂದರ್ಭವನ್ನಿಟ್ಟುಕೊಂಡು ನಡೆಸಿದ ಸಂಶೋಧನಾ ಪ್ರಬಂಧವಾಗಿದೆ. ದಾವಣಗೆರೆ ಜಿಲ್ಲೆ ಸ್ವದೇಶಿ ಚಳವಳಿಯಲ್ಲಿ ವಹಿಸಿದ ಪಾತ್ರವನ್ನು ವಿವರಿಸುತ್ತಾ ಆಂಗ್ಲರ ವಿರುದ್ಧ ಪ್ರತಿಭಟಿಸಿದ್ದಲ್ಲದೆ ವಿದೇಶಿ ವಸ್ತುಗಳನ್ನು ದಹನ ಮಾಡುವದರೊಂದಿಗೆ ಸ್ವದೇಶಿ ವಸ್ತುಗಳ ಬಳಕೆಗಾಗಿ ರಾಷ್ಟ್ರದಾದ್ಯಂತ ಮಾತ್ರವಲ್ಲದೆ ರಾಜ್ಯ, ಜಿಲ್ಲೆ, ತಾಲ್ಲೂಕು, ಓಬಳಿ ಹಾಗೂ ಗ್ರಾಮಗಳಲ್ಲಿ ತೀವ್ರತರವಾದ ಚಳವಳಿ ನಡೆಸಿರುವುದನ್ನು ಪರಿಚಯಿಸುತ್ತದೆ. ಅಲ್ಲದೆ ಗಾಂಧೀಜಿಯವರ ಪಾದಸ್ಪರ್ಶದಿಂದ ಚಳವಳಿಕಾರರನ್ನು ಎಲ್ಲರೂ ಬೆಂಬಲಿಸಿದ್ದಲ್ಲದೆ, ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮ ಆತ್ಮವನ್ನು ಮುಡುಪಾಗಿಟ್ಟರು. ೧೯೩೭ ರ ಶಿವಪುರ ಧ್ವಜಿ ಸತ್ಯಾಗ್ರಹ, ೧೯೩೮ ರ ಅರಣ್ಯ ಸತ್ಯಾಗ್ರಹ, ೧೯೩೮ ರಿಂದ ೪೦ ರವರೆಗಿನ ಕಾನೂನುಭಂಗ ಚಳವಳಿ, ೧೯೪೨ ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಜಿಲ್ಲೆಯ ಪ್ರಜೆಗಳು ಸಕ್ರಿಯವಾಗಿ ಭಾಗಿಯಾದ ವಿವರವನ್ನು ನೀಡುತ್ತದೆ. ಇದಲ್ಲದೆ ದಾವಣಗೆರೆಯಲ್ಲಿ ಹತ್ತಿಗಿರಣಿಗಳ ಉಗಮ ಮತ್ತು ಅವನತಿ ಕುರಿತು ಹೇಳುತ್ತದೆ. ಒಟ್ಟಾರೆಯಾಗಿ ಹೇಳಬೇಕೆಂದರೆ ದಾವಣಗೆರೆ ಜಿಲ್ಲೆಯಲ್ಲಿ ನಡೆದ ಸ್ವದೇಶಿ ಚಳವಳಿ ಬಗ್ಗೆ ತಿಳಿಸಿಕೊಡುವ ಪ್ರಮುಖ ಪ್ರಬಂಧವಾಗಿದೆ.

ಚರಿತ್ರೆಗೆ ಸಂಬಂಧಿಸಿದಂತೆ ಜನಾಂಗೀಯ ಅಧ್ಯಯನಗಳು ಜನಾಂಗ ಎನ್ನುವ ಪದ ಬುಡಕಟ್ಟು, ಸಮುದಾಯ ಎಂಬರ್ಥವನ್ನು ಪಡೆದುಕೊಂಡಿದೆ. ದಾವಣಗೆರೆ ಜಿಲ್ಲೆಯಲ್ಲಿ ಹಲವಾರು ಜನಸಮುದಾಯಗಳು ನೆಲೆಸಿರುವವು. ಬ್ರಾಹ್ಮಣ, ವೈಶ್ಯ, ಲಿಂಗಾಯಿತ, ಜೈನ, ನಾಯಕ, ಗೊಲ್ಲ, ಕುರುಬ, ಲಂಬಾಣಿ, ಮಾದಿಗ, ಚಲುವಾದಿ, ಅಕ್ಕಸಾಲಿಗ, ಬಡಗಿ, ಕುಂಬಾರ, ಈಡಿಗ, ಮಡಿವಾಳ, ಕ್ಷೌರಿಕ, ದೊಂಬಿದಾಸರು, ರೆಡ್ಡಿಗರು, ಕಿಳ್ಳೆಕ್ಯಾತರು, ಹಕ್ಕಿಪಿಕ್ಕಿ ಇನ್ನು ಮುಂತಾದ ಸಮುದಾಯಗಳು ತಮ್ಮದೇ ಆದ ಸಂಸ್ಕೃತಿಯನ್ನು ಹೊಂದಿದ್ದು ಆಚಾರ-ವಿಚಾರಗಳಲ್ಲಿ ಭಿನ್ನ ಭಿನ್ನವಾಗಿ ಕಂಡುಬರುತ್ತವೆ.

ಚರಿತ್ರೆಯನ್ನು ಪೂರಕವಾಗಿಟ್ಟುಕೊಂಡು ನಡೆದ ಅಂತರಶಿಸ್ತೀಯ ಅಧ್ಯಯನಗಳು ಇವಾಗಿದ್ದು ಇವನ್ನು ಕೆಳಗಿನಂತೆ ಗಮನಿಸಬಹುದಾಗಿದೆ.

೫. ಹರಪನಹಳ್ಳಿ ತಾಲ್ಲೂಕಿನ ಆರ್ಥಿಕತೆಯಲ್ಲಿ ಮಹಿಳಾ ಕೃಷಿ ಕಾರ್ಮಿಕರ ಸ್ಥಾನ, ಸಿ. ಅಶೋಕ, ೧೯೯೭

ಪ್ರಸ್ತುತ ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕನ್ನು ಅನುಲಕ್ಷಿಸಿದಂತೆ ಆರ್ಥಿಕ ವಿಷಯ ಕುರಿತು ನಡೆಸಿದ ಪ್ರಮುಖ ಸಂಶೋಧನಾ ಪ್ರಬಂಧವಾಗಿದೆ. ಈ ಪ್ರಬಂಧವು ಹರಪನಹಳ್ಳಿ ತಾಲ್ಲೂಕಿನ ಮಹಿಳೆಯರು ಶೈಕ್ಷಣಿಕ ವ್ಯವಸ್ಥೆಯಲ್ಲಿ ಹೊಂದಿರುವ ಸ್ಥಾನ ಹಾಗೂ ಪ್ರತ್ಯೇಕವಾಗಿ ಕೃಷಿ ಕಾರ್ಮಿಕರ ಮಹಿಳೆಯರ ಸಮಸ್ಯೆ, ಶೈಕ್ಷಣಿಕ ಸಮಸ್ಯೆಗಳ ಬಗ್ಗೆ ಸಂಕ್ಷಿಪ್ತ ವಿವರಣೆ ಒದಗಿಸುತ್ತದೆ. ಅಲ್ಲದೆ ಆರ್ಥಿಕ ದುಡಿಮೆಯ ಕಾಲಾವಧಿ,

ಕೂಲಿಯ ಪ್ರಮಾಣ, ವಲಸೆ, ಸಾಕ್ಷರತೆ, ಶಿಕ್ಷಣ, ಆರೋಗ್ಯ, ವರಮಾನ ಮುಂತಾದ ಅಂಶಗಳ ಕುರಿತಾಗಿ ಈ ಪ್ರಬಂಧ ವಿವರಣೆಯನ್ನು ಒದಗಿಸಿಕೊಡುತ್ತದೆ.

೬. ಚಿಗಟೇರಿ ನಾರಪ್ಪ, ಅಂಜಿನಪ್ಪ ದನಕಾವರ್, ೨೦೦೩

ಹರಪನಹಳ್ಳಿ ತಾಲ್ಲೂಕಿನ ಚಿಗಟೇರಿ ಪ್ರದೇಶದಲ್ಲಿ ನೆಲೆ ನಿಂತು ಸಾಂಸ್ಕೃತಿಕ ನಾಯಕನಾದ ನಾರಪ್ಪನ ಕುರಿತು ನಡೆಸಿದ ಒಂದು ಸಂಶೋಧನ ಪ್ರಬಂಧವಾಗಿದೆ. ಇದು ಜಾನಪದ ಅಧ್ಯಯನ ಪ್ರಬಂಧವಾಗಿದ್ದು ಚಿಗಟೇರಿ ನಾರಪ್ಪ ಚಿಗಟೇರಿಯನ್ನು ತನ್ನ ಕೇಂದ್ರವನ್ನಾಗಿ ಮಾಡಿಕೊಂಡು ಮಲೆ ಮದೇಶ್ವರ, ಮಂಟೇಸ್ವಾಮಿಯಂತೆ ಭಿನ್ನವಾದ ಸ್ವರೂಪದ ಸಾಧು ಮುನಿಗಳೆಂಬ ಹೆಸರು ಮಾಡಿರುವುದರ ಬಗ್ಗೆ ವಿವರ ನೀಡುತ್ತದೆ. ಹಾಗೂ ಈತನ ಪರಂಪರೆ ಹಾಗೂ ಈತನ ಕುರಿತಂತೆ ಆಚರಣೆಗಳು ಸಾಹಿತ್ಯದ ಅಂಶಗಳನ್ನು ಕುರಿತು ಮಾಹಿತಿ ಕೊಡುವಂತ ಉತ್ತಮ ಪ್ರಬಂಧವಾಗಿದೆ.

೭. ದಿ ಹರಿಹರ ಟೆಂಪಲ್ ಆರ್ಟ್ ಅಂಡ್ ಪ್ಯಾರ್ಟನೈಜ್, ಡಿ. ಮಂಜುನಾಥ್

ಹರಿಹರದ ಹರಿಹರ ದೇವಾಲಯದ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಸಂಬಂಧಿಸಿದಂತೆ ಎಂ.ಫಿಲ್. ಅಧ್ಯಯನವಾಗಿದೆ. ಈ ಅದ್ಯಯನವು ಸಹ ದಾವಣಗೆರೆ ಜಿಲ್ಲೆಯ ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರಕ್ಕೆ ಉಪಯುಕ್ತ ಮಾಹಿತಿ ದೊರಕಿಸಿಕೊಡುತ್ತದೆ.

ಚರಿತ್ರೆ ಕುರಿತ ಪಿಎಚ್. ಡಿ. ಮಹಾಪ್ರಬಂಧಗಳು

೧. ದಾವಣಗೆರೆ ಜಿಲ್ಲೆಯ ದೇವಾಲಯಗಳು, ಹೆಚ್. ತಿಪ್ಪೇಸ್ವಾಮಿ, ೨೦೦೦

ದಾವಣಗೆರೆ ಜಿಲ್ಲೆಯಲ್ಲಿ ಪ್ರಾಚೀನ ಮತ್ತು ಮಧ್ಯಕಾಲೀನ ಯುಗದಲ್ಲಿ ಹಲವು ದೇವಾಲಯಗಳ ನಿರ್ಮಾಣಕ್ಕೆ ಮೌರ್ಯರು, ಶಾತವಾಹನರು, ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಬೆಳಗುತ್ತಿ ಸಿಂಧರು, ಉಚ್ಚಂಗಿ ಪಾಂಡ್ಯರು, ನೊಳಂಬರು, ಸೇವುಣರು, ಹೊಯ್ಸಳ ಮತ್ತು ವಿಜಯನಗರ ಅರಸರ ಆಳ್ವಿಕೆಯು ಕಾರಣವಾಗಿದೆ. ಈ ಪ್ರಬಂಧವು ಪ್ರಾಚೀನ ಮತ್ತು ಮಧ್ಯಕಾಲೀನ ಯುಗದ ದೇವಾಲಯಗಳ ವಾಸ್ತು ಕಲೆ ಮತ್ತು ಮೂರ್ತಿ ಶಿಲ್ಪಗಳನ್ನು ಕುರಿತು ತಿಳಿಯ ಪಡಿಸುತ್ತದೆ. ಜಿಲ್ಲೆಯ ಆರು ತಾಲ್ಲೂಕುಗಳಲ್ಲಿನ ದೇವಾಲಯಗಳ ಅಧ್ಯಯನವನ್ನು ಇಲ್ಲಿ ಕೈಗೊಳ್ಳಲಾಗಿದೆ. ಪ್ರಸ್ತುತ ಅಧ್ಯಯನವು ಈ ಜಿಲ್ಲೆಯ ಕಲೆ ಮತ್ತು ವಾಸುಶಿಲ್ಪ ಚರಿತ್ರೆಗೆ ಅತ್ಯಂತ ಉಪಯುಕ್ತವಾದುದಾಗಿದೆ.

೨. ಕೋಟೆ ಕೊತ್ತಲಗಳು ಒಂದು ಅಧ್ಯಯನ, ಎಂ. ಕೊಟ್ರೇಶ್, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ ನಡೆಸಿದ ಸಂಶೋಧನಾ ಮಹಾಪ್ರಬಂಧವಾಗಿದೆ. ಈ ಪ್ರಬಂಧದಲ್ಲಿ ಕೋಟೆ ಕೊತ್ತಲಗಳು: ಅರ್ಥ ವಿವರಣೆ, ಪ್ರಾಚೀನತೆ, ಮಹತ್ವ, ಲಕ್ಷಣಗಳು ಹಾಗೂ ಪ್ರಕಾರಗಳ ಬಗ್ಗೆ ವಿವರಿಸುತ್ತದೆ. ಒಟ್ಟಾರೆಯಾಗಿ ಬಳ್ಳಾರಿ ಜಿಲ್ಲೆಯ ಸಂಡೂರು, ಶಿರುಗುಪ್ಪ, ಹಗರಿಬೊಮ್ಮನಹಳ್ಳಿ, ಹಡಗಲಿ, ಹರಪನಹಳ್ಳಿ, ಹೊಸಪೇಟೆ, ಕೂಡ್ಲಿಗಿ ಮತ್ತು ಬಳ್ಳಾರಿ ತಾಲ್ಲೂಕುಗಳಲ್ಲಿರುವ ಕೋಟೆ-ಕೊತ್ತಲಗಳ ಮಾಹಿತಿಯನ್ನು ಒದಗಿಸುತ್ತದೆ. ಪ್ರಸ್ತುತ ದಾವಣಗೆರೆ ಪ್ರದೇಶದ ಚರಿತ್ರೆಗೆ ಸಂಬಂಧಿಸಿದಂತೆ ಹರಪನಹಳ್ಳಿ ತಾಲ್ಲೂಕಿನ ಉಚ್ಚಂಗಿದುರ್ಗ, ಕರಡಿದುರ್ಗ, ಬಂಡ್ರಿ, ಹರಪನಹಳ್ಳಿ, ಹಲವಾಗಿಲು ಪ್ರದೇಶಗಳಲ್ಲಿ ದೊರೆತಿರುವ ಕೋಟೆಗಳನ್ನು ಅಧ್ಯಯನ ಮಾಡಿದ ಪ್ರಬಂಧವಾಗಿದೆ.

ನೊಳಂಬರ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಎಚ್. ಜಯಮ್ಮ, ೨೦೦೨

ಕರ್ನಾಟಕ ಇತಿಹಾಸದಲ್ಲಿ ನೊಳಂಬರ ಶಾಸನಗಳ ಕುರಿತಂತೆ ಅಧ್ಯಯನ ಮಾಡಿದ ಸಂಶೋಧನಾ ಮಹಾಪ್ರಬಂಧವಾಗಿದೆ. ಈ ಪ್ರಬಂಧವು ಒಟ್ಟು ೧೦ ಅಧ್ಯಾಯಗಳನ್ನು ಒಳಗೊಂಡಿದೆ. ದಾವಣಗೆರೆ ಪ್ರದೇಶ ನೊಳಂಬರ ಆಡಳಿತದ ವ್ಯಾಪ್ತಿಯಲ್ಲಿತ್ತು ಎಂಬುದಕ್ಕೆ ಪ್ರಮುಖ ಆಕರಗಳನ್ನು ಒದಗಿಸಿಕೊಡುತ್ತದೆ. ಅಲ್ಲದೆ

ನೊಳಂಬರ ಆಡಳಿತ ವಿಭಾಗಗಳು ಎಂಬ ಅಧ್ಯಾಯದಲ್ಲಿ ನೊಳಂಬರು ಬಾದಾಮಿ ಚಾಲುಕ್ಯರ, ಗಂಗರ ಸಾಮಂತರಾಗಿ ಆಡಳಿತ ನಡೆಸಿರುವುದರ ಬಗ್ಗೆ ಇವರು ಆಳ್ವಿಕೆ ನಡೆಸಿದ ನಾಡನ್ನು ನೊಳಂಬವಾಡಿ - ೩೨೦೦ ಎಂಬುದರ ಬಗ್ಗೆ ಮಾಹಿತಿ ಕೊಡುತ್ತದೆ. ದಾವಣಗೆರೆ ಪ್ರದೇಶ ನೊಳಂಬರ ಚರಿತ್ರೆಗೆ ಸಂಬಂಧಪಟ್ಟಂತೆ ಉಚ್ಚಂಗಿ ದುರ್ಗ- ೩೦, ಎಡೆದೊರೆ - ೨೦೦೦(ಹರಪನಹಳ್ಳಿ), ಕರಿವಿಡಿ - ೩೦, ಬಾವನೂರು - ೧೨ (ದಾವಣಗೆರೆ), ಬಿಕ್ಕಿಗ - ೭೦ (ಹರಪನಹಳ್ಳಿ), ಮಾಸೆವಾಡಿ - ೧೪೦ (ಹರಪನಹಳ್ಳಿ), ಬಾಗಳಿ (ಹರನಪನಹಳ್ಳಿ) ಪ್ರದೇಶಗಳನ್ನು ನೊಳಂಬರ ಆಡಳಿತ ವಿಭಾಗಗಳಾಗಿದ್ದವು ಎಂಬುದರ ಬಗ್ಗೆ ಉತ್ತಮ ಮಾಹಿತಿಯನ್ನು ಒದಗಿಸಿಕೊಡುವಂತ ಪ್ರಮುಖ ಸಂಶೋದನಾ ಪ್ರಬಂಧವಾಗಿದೆ.

ಬಾಗಳಿ ಶಾಸನಗಳು ಮತ್ತು ಸಂಸ್ಕೃತಿ, ಭಾರತಿ ಅಳವಂಡಿ ಮಠ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩, ಸಿ. (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ)

ಈ ಪ್ರಬಂಧವು ಪ್ರಸ್ತುತ ಹರಪನಹಳ್ಳಿ ತಾಲ್ಲೂಕಿನ ಬಾಗಳಿ ಪ್ರದೇಶದಲ್ಲಿ ಶಾಸನಗಳ ಮತ್ತು ಸಂಸ್ಕೃತಿ ಕುರಿತ ನಡೆಸಿದ ಅಧ್ಯಯನವಾಗಿದೆ. ಒಟ್ಟು ಎಂಟು ಅಧ್ಯಾಯಗಳನ್ನು ಒಳಗೊಂಡಿದೆ. ಬಾಗಳಿಯಲ್ಲಿ ದೊರೆತ ಶಾಸನಗಳಿಂದ ಮೌರ್ಯ, ಶಾತವಾಹನ, ಕದಂಬ, ಗಂಗ, ರಾಷ್ಟ್ರಕೂಟ, ಕಲ್ಯಾಣಿ ಚಾಲುಕ್ಯ, ಪಾಂಡ್ಯ, ಸೇವುಣ, ಹೊಯ್ಸಳ, ವಿಜಯನಗರ ಅರಸರು, ಪಾಳೆಯಗಾರರು, ಮಹಾ ಬಲಿವಂಶೀಯರು ಆಳ್ವಿಕೆ ನಡೆಸಿದ್ದಾರೆ ಎಂಬುದಾಗಿ ತಿಳಿದುಬರುತ್ತದೆ. ಜೊತೆಗೆ ಆಳಿದ ಅರಸರ ಆಡಳಿತ ವ್ಯವಸ್ಥೆ, ಶಾಸನಗಳು, ಶಾಸನ ಶಿಲ್ಪಗಳು, ಸಂಸ್ಕೃತಿ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗ-ತಿಗಳ ಬಗ್ಗೆ ವಿವರ ನೀಡುತ್ತದೆ.

ಸ್ಮರಣ ಸಂಚಿಕೆಗಳು

೧. **ತರಳಬಾಳು ಹುಣ್ಣಿಮೆ ಸ್ಮರಣ ಸಂಚಿಕೆ** - (ಸಂ.), ಡಾ. ಆರ್. ಎಸ್. ಮರುಳಪ್ಪ, ರಾ. ವೆಂಕಟೇಶ ಶೆಟ್ಟಿ, ಚನ್ನಗಿರಿ, ೧೯೯೨,

ಈ ಸಂಚಿಕೆಯು ಚನ್ನಗಿರಿ ತಾಲ್ಲೂಕಿನ ಚರಿತ್ರೆಗೆ ಸಂಬಂಧಿಸಿದ ಲೇಖನಗಳನ್ನು ಸಂಗ್ರಹಿಸಿ ಓದುಗರಿಗೆ ಅನುಕೂಲ ಮಾಡಿದೆ. ಚನ್ನಗಿರಿಯ ಜನಪದರ ಧರ್ಮದ ಸುದ್ದಿ ಮತ್ತು ಸಾಹಿತ್ಯ, ಪ್ರೇಕ್ಷಣೀಯ ಸ್ಥಳಗಳ ಛಾಯಚಿತ್ರಗಳು, ಚನ್ನಗಿರಿ ಐತಿಹ್ಯ: ಒಂದು ಪಕ್ಷಿ ನೋಟ, ಚನ್ನಗಿರಿ ಹೆಸರು ಮತ್ತು ಹಿನ್ನೆಲೆ, ಸಂತೇಬೆನ್ನೂರು ಚರಿತ್ರೆ: ಒಂದು ಚಾರಿತ್ರಿಕ ದಾಖಲೆ, ಚನ್ನಗಿರಿ ತಾಲ್ಲೂಕಿನ ಸಾಹಿತಿ-ಕಲಾವಿದರು, ಕೆಳದಿಯ ರಾಣಿ ಚನ್ನಮ್ಮ, ಇನ್ನಿತರ ಲೇಖನಗಳಿಂದ ತುಂಬಿಕೊಂಡು ಚನ್ನಗಿರಿ ತಾಲ್ಲೂಕಿನ ಚರಿತ್ರೆ ಮತ್ತು ಸಾಂಸ್ಕೃತಿ ಸಂಗತಿಗಳ ಬಗ್ಗೆ ಬೆಳಕು ಚೆಲ್ಲುತ್ತದೆ.

೨. **ತರಳಬಾಳು ಹುಣ್ಣಿಮೆ ಸ್ಮರಣ ಸಂಚಿಕೆ,** - (ಸಂ.), ಎಂ. ಬಿ. ಬಣಕಾರ, ಜಗಳೂರು, ೧೯೯೩

ಜಗಳೂರು ತಾಲ್ಲೂಕಿನ ಇತಿಹಾಸವನ್ನು ಪರಿಚಯಿಸುವಂತಹ ಲೇಖನಗಳು ಇದರಲ್ಲಿ ಕಾಣಬರುತ್ತವೆ. ಅವುಗಳಲ್ಲಿ ಶ್ರೀ. ಜಿ. ಮಹಮದ್ ಇಮಾಮ್, ತಾಲ್ಲೂಕಿನ ಸ್ವಾತಂತ್ರ್ಯ ಹೋರಾಟಗಾರರ, ತಾಲ್ಲೂಕಿನ ಪ್ರಮುಖ ದೇವಸ್ಥಾನಗಳ, ಶೈಕ್ಷಣಿಕ ಸಂಸ್ಥೆಗಳ, ಜಗಳೂರು ನೆಲ-ಜಲ, ಜಾನಪದ ವೈಶಿಷ್ಟ್ಯ, ಮಹಾದಾಸೋಹಿ ಹುಚ್ಚಪ್ಪಸ್ವಾಮಿ, ಎ. ಭೀಮಪ್ಪನಾಯಕ, ನಾಲಂದ ಕಲಾಭಾರತಿ ಕುರಿತಂತೆ ಲೇಖನಗಳು ಚರಿತ್ರೆ ಅಧ್ಯಯನಕ್ಕೆ ಉಪಯುಕ್ತವಾಗಿವೆ.

೩. **ಕುಂಭಕಲೆ - ಸ್ಮರಣ ಸಂಚಿಕೆ** - (ಸಂ.), ಹಿ. ಗೂ. ದುಂಡ್ಯಪ್ಪ ಹಾಗೂ ಸಹಚರರು, ಹರಿಹರ, ೧೯೯೪

ಸುಮಾರು ೩೭ ಲೇಖನಗಳ ಸಂಗ್ರಹವಾದ ಈ ಸಂಚಿಕೆ ಕುಂಬಾರರು ನಾವು ಎಂಬ ಹಾಡು, ಕುಂಭ ಕಲೆ, ಜನಾಂಗದ ವಿಶಿಷ್ಟ ಸ್ಮೃತಿಗಳು, ಮೋಜಿನ ತಿಗುರಿ, ಕುಂಬಾರ ಕಲೆ ಮತ್ತು ಶೋಷಣೆ, ಅವ್ವ ಮಾಡಿದ ಕುಡಿಕೆ, ಇತಿಹಾಸದಲ್ಲಿ ಕುಂಬಾರ ಗುಂಡಯ್ಯ, ಕುಂಬಾರಿಕೆಯ ಪದಕೋಶ, ಗುಂಡಯ್ಯನ ಚರಿತೆ, ನಶಿಸುತ್ತಿರುವ ಕುಂಬಾರಿಕೆ,

ಕುಂಬಾರ ಜನಾಂಗಕ್ಕೊಂದು ಭದ್ರ ಬುನಾದಿ, ನಾವೇಕೆ ಹಿಂದೆ ಉಳಿದಿದ್ದೇವೆ ಇಂತಹ ಹಲವಾರು ಲೇಖನಗಳಿಂದ ಕೂಡಿದ ಈ ಸಂಚಿಕೆ ಜನಾಂಗೀಯ ಅಧ್ಯಯನವಾಗಿದೆ.

೪. ಚಿಲುಮೆ - ಸ್ಮರಣ ಸಂಚಿಕೆ - (ಸಂ.), ಗಡಿಕಟ್ಟೆ ಧನಂಜಯಪ್ಪ, ಹೊನ್ನಾಳಿ, ೧೯೯೯

ಇದು ೫ನೇ ಸಾಹಿತ್ಯ ಸಮ್ಮೇಳನ ನಡೆದ ಸಮಯದಲ್ಲಿ ಬಿಡುಗೊಡೆಗೊಂಡ ಸಂಚಿಕೆಯಾಗಿದೆ. ಹೊನ್ನಾಳಿ ಇತಿಹಾಸ ಅಧ್ಯಯನಕ್ಕೆ ಪೂರಕ ಮಾಹಿತಿಯನ್ನು ಒದಗಿಸುತ್ತದೆ. ಹೊನ್ನಾಳಿ ತಾಲ್ಲೂಕಿನ ಜನಪದ ಸಾಹಿತ್ಯ, ಹೊನ್ನಾಳಿ ತಾಲ್ಲೂಕಿನ ಇತಿಹಾಸ (೧೯ನೇ ಶತಮಾನದವರೆಗೆ), ಹೊನ್ನಾಳಿ ತಾಲ್ಲೂಕು - ಒಂದು ಪಕ್ಷಿನೋಟ ಇನ್ನಿತರ ಲೇಖನಗಳು ಹೊನ್ನಾಳಿಯ ತಾಲ್ಲೂಕಿನ ಚರಿತ್ರೆಯ ವಿವರ ನೀಡುವಲ್ಲಿ ಸಹಾಯಕವಾಗಿವೆ.

೫. ತರಳಬಾಳು ಹುಣ್ಣಿಮೆ - ಸ್ಮರಣ ಸಂಚಿಕೆ - (ಸಂ.), ಬಿ. ತಿಪ್ಪೇರುದ್ರಪ್ಪ, ಹರಪನಹಳ್ಳಿ, ೧೯೯೯

ಹರಪನಪಳ್ಳಿಯಲ್ಲಿ ನಡೆದ ತರಳಬಾಳು ಹುಣ್ಣಿಮೆ ಸಮ್ಮೇಳನ ತಾಲ್ಲೂಕಿನ ಹಲವು ಕ್ಷೇತ್ರಗಳನ್ನಲ್ಲದೆ ಚರಿತ್ರೆಯ ಲೇಖನಗಳನ್ನು ರಚಿಸಿ ಬಿತ್ತರಿಸುವ ಕೆಲಸ ಮಾಡಿದೆ. ಹರಪನಹಳ್ಳಿಯ ಸಾಹಿತ್ಯ ಸಂಗಾತಿಗಳು, ಬೆಳಕು ಬೀರಿದ ದೇವ ಕವಿ, ಹರಪನಹಳ್ಳಿಯ ಭೀಮವ್ವ, ಹರಪನಹಳ್ಳಿಯ ಪಾಳೆಯಗಾರರು, ಹರಪನಹಳ್ಳಿ ತಾಲ್ಲೂಕಿನ ಕೆಲವು ಪ್ರಮುಖ ಸ್ಥಳಗಳ, ತಾಲ್ಲೂಕಿನ ಪ್ರಮುಖ ಪ್ರತಿಭಾವಂತರ ಕುರಿತ ಲೇಖನಗಳನ್ನು ಒಳಗೊಂಡಿದೆ. ಇನ್ನುಳಿದಂತೆ ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನ ಚರಿತ್ರೆ ಕುರಿತ ಲೇಖನಗಳೂ ಈ ಸಂಚಿಕೆಯಲ್ಲಿವೆ.

೬. ತರಳಬಾಳು ಹುಣ್ಣಿಮೆ - ಸ್ಮರಣ ಸಂಚಿಕೆ - (ಸಂ.), ರಾ. ವೆಂಕಟೇಶಪ್ಪ ಶೆಟ್ಟಿ, ಹರಿಹರ, ೨೦೦೨

ಈ ಸಂಚಿಕೆಯೂ ಸಹ ಹಲವಾರು ಲೇಖನಗಳನ್ನು ಒಳಗೊಂಡು ಹರಿಹರ ತಾಲ್ಲೂಕಿನ ಚಿತ್ರಣವನ್ನು ಪ್ರತಿನಿಧಿಸುತ್ತದೆ. ವ್ಯಕ್ತಿ ಪರಿಚಯ, ತಾಲ್ಲೂಕಿನ ಶಾಸನಗಳ ಒಂದು ಪರಿಚಯ, ದಾವಣಗೆರೆ-ಹರಿಹರ ವೃತ್ತಿರಂಗಭೂಮಿ, ಹರಿಹರ ತಾಲ್ಲೂಕಿನಲ್ಲಿ ಸಾಕ್ಷರತಾ ಆಂದೋಲನ, ಹರಿಹರ ಪ್ರಾಂತ್ಯದ ಉದ್ಯಮಗಳು, ಹೆಳವನ ಕಟ್ಟೆಗಿರಿಯಮ್ಮ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕಿರು ಪರಿಚಯ, ಸ್ವಾತಂತ್ರ್ಯ ಹೋರಾಟಗಾರರು, ಬೇಸಾಯ ಮತ್ತು ಬೆಳೆಗಳು, ಹರಿಹರ ಪೌರಾಣಿಕ ಹಿನ್ನೆಲೆ, ಹರಿಹರ ದೇವಾಲಯಗಳು, ತುಂಗಭದ್ರೆಯ ಸುತ್ತಮುತ್ತ, ಹರಿಹರ ಪ್ರಾಂತ್ಯದ ಐತಿಹಾಸಿಕ ಹಿನ್ನೆಲೆ, ಹರಿಹರ ಪ್ರಾಂತ್ಯದ ಶಿಕ್ಷಣ ಸಂಸ್ಥೆಗಳು, ಹೀಗೆ ಸಾಕಷ್ಟು ಲೇಖನಗಳು ಹರಿಹರ ತಾಲ್ಲೂಕಿನ ಹಲವು ವಿವರಗಳನ್ನು ಕೊಡುತ್ತಾ ತಾಲ್ಲೂಕಿನ ಮಹತ್ವವನ್ನು ಎತ್ತಿ ಹಿಡಿದಿವೆ. ಎಂದರೆ ತಪ್ಪಾಗಲಾರದು.

೭. ಕರ್ಪೂರ - ಸ್ಮರಣ ಸಂಚಿಕೆ - (ಸಂ.), ಟಿ. ಗಿರಿಜ, ಎಸ್. ಜಿ. ಶೋಭಾ, ದಾವಣಗೆರೆ, ೨೦೦೨

ದಾವಣಗೆರೆಯ ಇತಿಹಾಸ ದರ್ಶನ, ದಾವಣಗೆರೆಯ ಐತಿಹ್ಯ, ದಾವಣಗೆರೆಯ ಸಾಹಿತ್ಯ, ಸಾಂಸ್ಕೃತಿಕ ಕ್ಷೇತ್ರ ಕುರಿತ ಲೇಖನಗಳು ದಾವಣಗೆರೆ ನಗರದ ಚರಿತ್ರೆ ಅಧ್ಯಯನಕ್ಕೆ ಪೂರಕವಾಗಿದೆ.

ಮಾಸ ಪತ್ರಿಕೆ

೧. **ಸ್ಪರ್ಧಾ ಚೈತ್ರ -** (ಸಂ.), ಬಿ. ಎಸ್. ವಸಂತ ಕುಮಾರ್ - ೨೦೦೫, ಜನವರಿ

ಈ ಮಾಸ ಪತ್ರಿಕೆಯು ಕರ್ನಾಟಕದ ಸಾಂಸ್ಕೃತಿಕ ವಿವರಗಳನ್ನು ನೀಡುತ್ತಾ ದಾವಣಗೆರೆಯ ಸ್ಥಳೀಯ ಸಂಗತಿಗಳನ್ನು ಅಚ್ಚುಕಟ್ಟಾಗಿ ಓದುಗರಿಗೆ ನೀಡುವ ಪತ್ರಿಕೆಯಾಗಿದೆ.

ಇತಿಹಾಸ ದರ್ಶನ ಸಂಪುಟಗಳ ಲೇಖಗಳು

೧. **ಬಾಗಳಿ ಕಂಚಿನ ಪತ್ರ,** ಕುಂಭಾ. ಸದಾಶಿವಪ್ಪ, ಡಾ. ಷಡಕ್ಷರಯ್ಯ, ಸಂ.೫, ಪು. ೩೪, ೧೯೯೦

೨. **ಹರಪನಹಳ್ಳಿ ಪಾಳೆಯಗಾರರು ಸ್ಥಾಪಿಸಿದ ಸಂಪ್ರದಾಯಗಳು,** ಕುಂ ಭಾ. ಸದಾಶಿವಪ್ಪ, ಸಂ. ೭, ಪು. ೧೫೫, ೧೯೯೨

೩. **ಹರಿಹರ ಸಂಗಮೇಶ್ವರ ದೇವಾಲಯ,** (ಸಂ.), ಶ್ರೀಮತಿ ಚಂದನ್, ಸಂ.೮. ಪು. ೫೨, ೧೯೯೩

೪. **ಹರಪನಹಳ್ಳಿ ಪಾಳೆಯಗಾರರು ಸ್ಥಾಪಿಸಿದ ಕೆಲವು ದೇವಾಲಯಗಳ ಬಗ್ಗೆ ಐತಿಹ್ಯಗಳು,** ಕುಂಭಾ. ಸದಾಶಿವಪ್ಪ, ಸಂ. ೧೧, ಪು. ೨೦೩, ೧೯೯೬

೫. ಆಕನೂರು ಗ್ರಾಮದ ಬಳಿ ಆದಿ ಇತಿಹಾಸಕಾಲದ ಕುರುಹುಗಳು, ಎಸ್. ವೈ. ಸೋಮಶೇಖರ್, ಸಂಚಿಕೆ-೧೨, ಪು. ೧೨, ೧೩, ೧೯೯೭

೫.೧. **ಚಿನ್ನಹಗರಿ ನದಿ ಪರಿಸರದ ಪ್ರಾಚ್ಯಾವೇಷಗಳು: ಒಂದು ಶೋಧನೆ,** ಡಾ. ವಿರೂಪಾಕ್ಷಿ ಪೂಜಾರಹಳ್ಳಿ, (ಅದೇ ಸಂಪುಟ), ಪು. ೨೦

೫.೨. **ಹರಪನಹಳ್ಳಿ ಪಾಳೆಯಗಾರರಿಗೆ ಸಂಬಂಧಿಸಿದ ನಕ್ಷೆ ಮತ್ತು ಪತ್ರಗಳ ಪರಿಶೀಲನೆ,** ಕುಂಭಾ. ಸದಾಶಿವಪ್ಪ, (ಅದೇ ಸಂಪುಟ), ಪು. ೫೨

೬. ಹರಿಹರ ಗ್ರಾಮದ ಪ್ರಾಚ್ಯಾವಶೇಷಗಳು: ಒಂದು ಶೋಧನೆ, ಮುತ್ತು ರಾಜು, ಸಂ. ೧೩, ಪು. ೨೧, ೧೯೯೮

೭. **ಹರಿಹರದ ಲಕ್ಷ್ಮೀದೇವಾಲಯ ಒಂದು ಅಧ್ಯಯನ,** ಚಂದನಾ ವೈ. ನೀಲಪ್ಪ, ಸಂ. ೧೪, ಪು. ೧೪೭, ೧೯೯೯

೮. **ಬಳ್ಳಾರಿ ಮತ್ತು ದಾವಣಗೆರೆ ಜಿಲ್ಲೆಯಲ್ಲಿ ಸೂರ್ಯನಿಗೆ ಸಂಬಂಧಿಸಿ ಕೆಲವು ಶಾಸನಗಳು ಮತ್ತು ಸೂರ್ಯ ಮಾಹಿತಿಗಳ ವೈಶಿಷ್ಟ್ಯ,** ಕೆ. ಬಿ. ಸುದರ್ಶನ್, ಸಂ. ೧೫, ಪು. ೬೭, ೨೦೦೦

೮.೧. **ಹರಪನಹಳ್ಳಿ ಪರಿಸರದ ಹೊಸ ಶಾಸನಗಳು ಮತ್ತು ಯಕ್ಷಗಾನ ಕವಿಗಳು ಒಂದು ಟಿಪ್ಪಣಿ,** ಕುಂಭಾ. ಸದಾಶಿವಪ್ಪ, ಪು. ೧೨೯, (ಅದೇ ಸಂಪುಟ)

೮.೨. **ಹರಿಹರದ ಯತಿ ಸಮಾಧಿಗಳು,** ಚಂದನಾ ವೈ. ನೀಲಪ್ಪ, ಪು. ೧೫೨, (ಅದೇ ಸಂಪುಟ)

೮.೩. **ಚಿತ್ರದುರ್ಗ ಮತ್ತು ಹರಪನಹಳ್ಳಿನಾಯಕ ಅರಸರ ಸಂಬಂಧ ಕೆಲವು ಸಮಸ್ಯೆಗಳು,** ಪ್ರೊ. ಲಕ್ಷ್ಮಣ್ ತೆಲಗಾವಿ, ಪು. ೨೭೧, (ಅದೇ ಸಂಪುಟ)

೮.೪. **ಹರಪನಹಳ್ಳಿ ಭೀಮವ್ವನ ಹಾಡುಗಳು,** ಹರಿಹರ ಶ್ರೀನಿವಾಸರಾವ್, ಪು. ೨೩೦, (ಅದೇ ಸಂಪುಟ),

೮.೫. **ದಾವಣಗೆರೆ ಸ್ಥಳನಾಮದ ಬಗ್ಗೆ ಒಂದು ಸಮೀಕ್ಷೆ,** ಎಸ್. ಎ. ಲಕ್ಷ್ಮೀದೇವಿ, ಪು. ೨೦೪, (ಅದೇ ಸಂಪುಟ)

೯. **ಹರಿಹರ ಸುತ್ತಲಿನ ಇತಿಹಾಸ,** ಚಂದನಾ ವೈ. ನೀಲಪ್ಪ, ಸಂ. ೧೬, ಪು. ೧೫, ೨೦೦೧

೯.೧. **ಹರಪನಹಳ್ಳಿ ಶಿಕ್ಷಣ ಸಂಸ್ಥೆ ಮತ್ತು ಹಳೇ ವಿದ್ಯಾರ್ಥಿ ಸಂಘ,** ಕುಂಭಾ. ಸದಾಶಿವಪ್ಪ, ಪು. ೩೧೮, (ಅದೇ ಸಂಪುಟ),

೯.೨. **ಉಚ್ಚಂಗಿ ದುರ್ಗದಲ್ಲಿ ಮುತ್ತು ಕಟ್ಟಿಸುವ ಪದ್ಧತಿ ವಿಧಿವಿಧಾನಗಳು,** ಮಾಡಲಗೇರಿ ಕೊಟ್ರೇಶ್, ಪು. ೩೨೮, (ಅದೇ ಸಂಪುಟ)

೯.೩. **ಚನ್ನಗಿರಿ ತಾಲ್ಲೂಕಿನಲ್ಲಿ ಉಚ್ಚಂಗಿ ಪಾಂಡ್ಯರ ಕಾಲದ ಎರಡು ಅಪ್ರಕಟಿತ ಶಾಸನಗಳು,** ಸಂ. ೧೭, ಪು. ೫೯, (ಅದೇ ಸಂಪುಟ)

೯.೪. **ಅಣಜಿ ಗ್ರಾಮದ ಪುರಾತತ್ವ ಮತ್ತು ಚರಿತ್ರೆ,** ಡಾ. ವಿರೂಪಾಕ್ಷಿ ಪೂಜಾರಹಳ್ಳಿ, ಪು. ೨೧೯, (ಅದೇ ಸಂಪುಟ)

– ಈ ಎಲ್ಲಾ ಲೇಖನಗಳು ದಾವಣಗೆರೆ ಪ್ರದೇಶದ ಚರಿತ್ರೆ ತಿಳಿಯಪಡಿಸುವಲ್ಲಿ ಅತ್ಯುಪಯುಕ್ತವಾಗಿವೆ.

ಸಾಹಿತ್ಯ

ದಾವಣಗೆರೆ ಅನೇಕ ಕವಿಗಳಿಗೆ, ಸಾಹಿತಿಗಳಿಗೆ, ನಾಟಕಕಾರರಿಗೆ, ಕಾದಂಬರಿಕಾರರಿಗೆ, ಕಥೆಗಾರರಿಗೆ, ವಿಮರ್ಶಕರಿಗೆ, ಬರಹಗಾರರಿಗೆ ಮುಂತಾದ ಬುದ್ಧಿ ಜೀವಿಗಳಿಗೆ ಆಶ್ರಯ ನೀಡಿದೆ. ಇಲ್ಲಿ ಇಂದಿನ ಕವಿಗಳ ಪ್ರತಿಭೆಯಂತೆ ಹಿಂದೆಯೂ ಅಂದರೆ ಕ್ರಿ.ಶ. ೧೭ನೇ ಶತಮಾನದಲ್ಲಿ ಜೀವಿಸಿದ್ದ ಮಹಲಿಂಗರಂಗರ ಅನುಭವಾಮೃತ

ಕೃತಿ ಸಾಹಿತ್ಯದ ರಸಗಳನ್ನು ಹೊಂದಿದೆಯೆಂದು ತಿಳಿಯಲಾಗಿದೆ. ಇದಕ್ಕೆ ಮುನ್ನ ೧೦೬೮ ರಲ್ಲಿ ಬಾಗಳಿಯಲ್ಲಿ ಜೀವಿಸಿದ್ದ ರೇವಣಯ್ಯ ಕವಿ, ೧೭ನೇ ಶತಮಾನದಲ್ಲಿದ್ದ ಮತ್ತೊಬ್ಬ ಕವಿ ದೇವಕವಿ ೧೮೮೧ ರಲ್ಲಿದ್ದ ನ್ಯಾಮತಿ ಪ್ರಬಣ್ಣ, ೧೯೭೬ ರಲ್ಲಿದ್ದ ಸಿದ್ದಲಿಂಗಪ್ಪ ಸಾಹಿತ್ಯದ ಸೊಬಗನ್ನು ಉಣಬಡಿಸಿದವರಾಗಿದ್ದಾರೆ. ಈ ಸಾಹಿತ್ಯ ಕ್ಷೇತ್ರದಲ್ಲಿ ದಾವಣಗೆರೆ ಜಿಲ್ಲೆಯ ಸಾಹಿತಿ, ಬರಹಗಾರರ ಕೃತಿಗಳ ರಚನೆಯನ್ನು ಗಮನಿಸಬಹುದು.

ಕವಿಕಾವ್ಯ ಕೃತಿಯನ್ನು ಎಸ್. ಹೆಚ್. ಹೆಗಡೆ ಮತ್ತು ಶಿವಯೋಗಿ ಕಂಬಾಳಿ ಮಠ, ಭಾವನ ಕಾರಂಜಿಯನ್ನು ಶ್ರೀಮತಿ ಚಂದನಾ ವೈ. ನೀಲಪ್ಪ, ಸೂಕ್ತಿ ಸಂಪದವನ್ನು ಡಿ. ಫ್ರಾನ್ಸಿಸ್ ಕ್ಸೆಲಿಯರ್, 'ಹೊನ್ನಮಣಿಗಳು' ಸಾಹಿತ್ಯ ಕೃತಿಯನ್ನು ಡಾ. ನಾ. ಕೊಟ್ರೇಶ್ ಉತ್ತಂಗಿ, 'ಬಂದಾನ ಮತ್ತೊಬ್ಬ ಸರದಾರ' ಕೃತಿಯನ್ನು ಶೈಲಪ್ಪನಾಗರಕಟ್ಟೆ, 'ಬಯಲು' ಕೃತಿಯನ್ನು ಎಂ. ಬಸಪ್ಪ 'ಆನಂದ ಮತ್ತು ಅರಿವು', 'ಸುಳಿಯೊಡೆದ ಬೆಳೆ', 'ಕೆಂಡದ ಮಳೆ ಮತ್ತು ಉದಕ', 'ನಮ್ಮೆಲ್ಲರ ಭಾರತಿ', 'ಬಲ್ಲಿದರೊಡನೆ ಬವರ', 'ಬಸವ ಚೇತನ', ಸ್ವಾತಂತ್ರ್ಯೋತ್ತರ ಕನ್ನಡ ನಾಟಕ ಕೃತಿಗಳನ್ನು ಮುಸ್ಟೂರಿನ ಬಿ. ಎಂ. ಶರಭೇಂದ್ರಯ್ಯ, 'ಎಳ್ಳು ಬೆಲ್ಲ' ಕೃತಿಯನ್ನು ಎಸ್. ನಾಗರಾಜ್, 'ಗಂಗವ್ವ ಮತ್ತು ಚೌಕಿ ನಿಂಬಜ್ಜ' ಕೃತಿಯನ್ನು 'ಬ್ರಹ್ಮದೇವರ ಹದಳಿಗೆ' ಇನ್ನು ಮುಂತಾದವರು ಸಾಹಿತ್ಯದ ರಸದೌತಣವನ್ನು ತಮ್ಮ ಸಾಹಿತ್ಯ ಕೃತಿಗಳ ಮೂಲಕ ನೀಡಿದ್ದಾರೆ.

ದಾವಣಗೆರೆ ನಗರ ಸಾಹಿತ್ಯ ವಲಯದತ್ತ ನೋಟ ಹರಿಸಿದರೆ ಬರವಣಿಗೆಗೆ ಮಾತೃ ಭಾಷೆಯೇ ಶ್ರೇಷ್ಠವೆಂದು ಪ್ರತಿಪಾದಿಸಿದ ಕನ್ನಡದ ಶ್ರೇಷ್ಠತೆಯನ್ನು ಮೆರೆಸಿದ ಅನುಭವಿ ಕವಿ ಮಹಲಿಂಗರಂಗರ ಮತ್ತು ನಾಡಿನ ಶ್ರೇಷ್ಠ ಕವಿಗಳಲ್ಲೊಬ್ಬರಾದ ಡಾ. ಜಿ. ಎಸ್. ಶಿವರುದ್ರಪ್ಪನವರ ಸಂಬಂಧವಿದೆ. ಇದೆ ಈ ವಿದ್ಯಾಕೇಂದ್ರಗಳ ಗಣನೀಯ ಬೆಳವಣಿಗೆಯೊಂದಿಗೆ ಸಾಹಿತ್ಯಕ್ಷೇತ್ರದ ದಿಗ್ಗಜರಾದ ಪ್ರೊ. ಜಿ. ಎಸ್. ಸಿದ್ದಲಿಂಗಯ್ಯ, ಪ್ರೊ. ಜಿ. ಎಸ್. ಶಿವರುದ್ರಪ್ಪ, ಡಾ. ಸಾ. ಶಿ. ಮರುಳಯ್ಯ, ನಾ. ಕಸ್ತೂರಿ, ಪ್ರೊ. ಎಲ್. ಎಸ್. ಶೇಷಗಿರಿರಾವ್ ಮುಂತಾದವರು ಇಲ್ಲಿ ಕೆಲ ಕಾಲ ಸೇವೆ ಸಲ್ಲಿಸಿ ಹೋಗಿರುವುದು ನಗರದ ಹೆಮ್ಮೆಯ ಸಂಗತಿ.

ಬಹಳ ಹಿಂದೆಯೇ ದಿವಗಂತ ಕಣಕುಪ್ಪೆ ಕೊಟ್ರಬಸಪ್ಪನವರು, ದಿವಗಂತ ನಿಶಾನಿಮಠ, ಮಲ್ಲಾಚಾರಿ ವೀರಭದ್ರಪ್ಪ, ಹಿರಿಯರಾದ ಅ. ರಾ. ಶಂಕರಯ್ಯ ನಗರಕ್ಕೆ ಈ ಕ್ಷೇತ್ರದಲ್ಲಿ ಅಪಾರವಾಗಿ ಶ್ರಮಿಸಿದ ಮಹನೀಯರು. ಇವರ ಕಾಲದಲ್ಲಿ ಚಿಗಟೇರಿ ಕೃಷ್ಣಶರ್ಮ, ಜಿ. ಪಿ. ರಾಜರತ್ನಂ, ದ. ರಾ. ಬೇಂದ್ರೆ ಇನ್ನು ಮೊದಲಾದವರು ಸಾಹಿತ್ಯ ಕ್ಷೇತ್ರದ ದಿಗ್ಗಜರು ನಗರಕ್ಕೆ ಆಗಮಿಸಿದ್ದರು.

ಅನಂತರ ಈ ಕ್ಷೇತ್ರಕ್ಕೆ ತಮ್ಮನ್ನು ಮೀಸಲಾಗಿಟ್ಟು ದುಡಿದವರಲ್ಲಿ ಪ್ರಮುಖರು ಬುದ್ಧಿಜೀವಿಗಳು, ವಿಚಾರವಂತರೂ ಎಂದೇ ನಾಡಿನಲ್ಲೆಲ್ಲಾ ಖ್ಯಾತಿ ಗಳಿಸಿರುವ ಅನೇಕ ಪ್ರಶಸ್ತಿ ಪುರಸ್ಕಾರಗಳನ್ನು ಪ್ರೊ. ಬಿ. ವಿ. ವೀರಭದ್ರಪ್ಪ, ಕೊಟ್ರಪ್ಪ ಮೇಷ್ಟ್ರು, ಸೀತಾರಾಮಾಚಾರ್, ಹೆಚ್. ವಿ. ಮೂರ್ತಿ, ಪ್ರೊ. ಎಸ್. ಉಮಾಪತಿ, ಪ್ರೊ. ಡಿ. ಕೆ. ಸೀತಾರಾಮಶಾಸ್ತ್ರಿ ಜನಪದ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮ ಆಳವಾದ ಅಧ್ಯಯನ ಮತ್ತು ಸಂಶೋಧನೆ ಮೂಲಕ ನಾಡಿಗೆ ಹೆಸರಾದ ಶ್ರೀ ಎಂ. ಜಿ. ಈಶ್ವರಪ್ಪ, ಬಾ. ಮ. ಬಸವರಾಜಯ್ಯ, ಬಿ. ಎನ್. ಮಲ್ಲೇಶ್, ಮಲ್ಲಿಕಾರ್ಜುನ ಕಡಕೋಳ, ಈಶ್ವರ ಪ್ರಸಾದ್, ಎ. ಜಿ. ವಿರೂಪಾಕ್ಷಪ್ಪ, ಶಿವನಕೆರೆ ಬಸವಲಿಂಗಪ್ಪ, ಡಾ. ರವೀಂದ್ರ, ಡಾ. ನಾಗರಾಜರಾವ್, ಡಾ. ಮಹಾಬಲರಾಜು, ಡಾ. ಗುರುಪ್ರಸಾದ್, ಟಿ. ಎನ್. ಷಣ್ಮುಖ, ಶಿವಕುಮಾರ ಕುರ್ಕಿ, ಪ್ರೊ. ಎಸ್. ಬಿ. ರಂಗನಾಥ್, ದಿ. ಶಂಕರ್ ಪಾಟೀಲ್ ಇವರೆಲ್ಲಾ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ.

ಈ ಕ್ಷೇತ್ರದಲ್ಲಿ ಪುರುಷರಂತೆ ಮಹಿಳೆಯರು ತಮ್ಮ ಕೊಡುಗೆ ನೀಡಿದ್ದಾರೆ. ಟಿ. ಗಿರಿಜಾ, ಅರುಂಧತಿ ರಮೇಶ್, ಬಿ. ಟಿ. ಜಾಹ್ನವಿ, ಶ್ರೀಮತಿ ಕಿರಣ್‌ಪ್ರಸಾದ್, ಸುಶೀಲಾದೇವಿ ಆರ್. ರಾವ್, ಬಿ. ಪಾರ್ವತಿ ದೇವಿ, ಭಾಗ್ಯಲಕ್ಷ್ಮಿ ಅಮೃತಾಪುರ, ಓಂಕಾರಮ್ಮ, ಗಿರಿಜಾ ಕಾಡಯ್ಯನ ಮಠ, ಸುಕನ್ಯ ತ್ಯಾದಶಿಗೆ, ಶಕುಂತಲಾ ಗುರುಸಿದ್ದಯ್ಯ, ಡಾ. ಎಂ. ಡಿ. ಭಾರತಿ ಮತ್ತು ಸ್ಥಳೀಯ ಪತ್ರಿಕೆಗಳಲ್ಲಿ ಕಥೆ, ಕಾದಂಬರಿ, ಕವನ, ಲೇಖನಗಳ ಮೂಲಕ ತಮ್ಮ ಪ್ರತಿಭೆಯನ್ನು ಹೊರಸೂಸುತ್ತಿರುವ ಅನೇಕ ಯುವ ಬರಹಗಾರರು, ಬರಹಗಾರ್ತಿಯರು ಇದ್ದಾರೆ. ನಗರದ ಸಾಹಿತ್ಯಿಕ ಮುನ್ನಡೆಗೆ ಇವರೆಲ್ಲರ ಶ್ರಮ, ಕೊಡುಗೆ ಅಪಾರ.

ರಾಜಕೀಯ

ದಾವಣಗೆರೆ ಜಿಲ್ಲೆಯಾಗುವ ಪೂರ್ವದಿಂದಲೂ ಹಲವು ರಾಜಕೀಯ ನಾಯಕರ, ಮುತ್ಸದ್ದಿಗಳು ತಮ್ಮ ಸೇವೆಯನ್ನು ನಾಡಿಗಾಗಿ ವಿನಿಯೋಗಿಸಿರುವುದನ್ನು ಕಂಡಿದ್ದೇವೆ. ಹಾಗೆಯೇ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿ, ಸಚಿವ ಸಂಪುಟದ ಸದಸ್ಯರಾಗಿ ರಾಜ್ಯ ಮತ್ತು ಲೋಕ ಸಭೆಯ ಸದಸ್ಯರಾಗಿ ಸಮಾಜ ಸೇವಕರಾಗಿ ತಮ್ಮ ಕಾರ್ಯವನ್ನು ಸಲ್ಲಿಸಿದಂಥ ಗಣ್ಯ ರಾಜಕಾರಣಿಗಳಿಗೆ ಆಶ್ರಯ ನೀಡಿದ ಜಿಲ್ಲೆಯಾಗಿದೆ.

ಜೆ. ಮಹಮ್ಮದ್ ಇಮಾಮ್, ಶ್ರೀ ಹೆಚ್. ಸಿದ್ದವೀರಪ್ಪ, ದಿ. ಜೆ. ಹೆಚ್. ಪಟೇಲ್, ಶ್ರೀಮತಿ ನಾಗಮ್ಮ ಕೇಶವಮೂರ್ತಿ, ಹೆಚ್. ಶಿವಪ್ಪ, ಅಶ್ವಥರೆಡ್ಡಿ, ಶಾಮನೂರು ಶಿವಶಂಕರಪ್ಪ, ರಾಜನಹಳ್ಳಿ ಹನುಮಂತಪ್ಪ, ಚಿಗಟೇರಿ ಮುರಿಗೆಪ್ಪ, ರಾಜನಹಳ್ಳಿ ಮುದ್ದುರಾಯಪ್ಪ, ಕೆ. ಟಿ. ಜಂಬಣ್ಣ, ಗುಂಡಿ ಮಹದೇವಪ್ಪ, ಮಾಗನೂರು ಬಸಪ್ಪ, ಎಸ್. ಕೊಟ್ರಬಸಪ್ಪ ಇತ್ತೀಚಿಗೆ ರಾಜಕೀಯ ರಂಗದಲ್ಲಿ ಕಂಗೊಳಿಸುವಂತವರಲ್ಲಿ ಎಸ್. ಎಸ್. ಮಲ್ಲಿಕಾರ್ಜುನಪ್ಪ, ಎಸ್. ಎಸ್. ಪಟೇಲ್, ಎಸ್. ಹೆಚ್. ಶಿವಶಂಕರ್, ಮಹಿಮಾ ಪಟೇಲ್, ವಡ್ನಾಳ್ ರಾಜಣ್ಣ, ಡಿ. ನಾರಾಯಣ ದಾಸ್, ಜಗಳೂರಿನ ಮಾಜಿ ಶಾಸಕ ಎಂ. ಬಸಪ್ಪ ಅವರು ಇತ್ತೀಚಿಗೆ ನಿಧನರಾದರು. ಭಾರತೀಯ ಕಮ್ಯುನಿಸ್ಟ್ ಪಾರ್ಟಿಯ ಎಚ್. ಕೆ. ರಾಮಚಂದ್ರಪ್ಪ ಇನ್ನೂ ಮುಂತಾದ ಅನೇಕ ದಲಿತ ಮುಖಂಡರು ದಾವಣಗೆರೆ ಜಿಲ್ಲೆಯಲ್ಲಿದ್ದರು. ಹೀಗೆ ದಾವಣಗೆರೆ ಜಿಲ್ಲೆಯು ಅನೇಕ ಗಣ್ಯ ರಾಜಕಾರಣಿಗಳನ್ನು ಸೃಷ್ಟಿಸಿದ ಜಿಲ್ಲೆಯಾಗಿದೆ.

ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ಕೆಲ ರಾಜಕೀಯ ನಾಯಕರ ಕುರಿತು ಅಧ್ಯಯನಗಳು ನಡೆದಿರುವುದನ್ನು ಅವಲೋಕಿಸಲಾಗಿದೆ. ಮೈಸೂರಿನ ಮಂತ್ರಿ ವರ್ಯರಲ್ಲಿ ಜಗಳೂರಿನ ಜೆ. ಮಹಮ್ಮದ್ ಇಮಾಮ್ ಪ್ರಮುಖರು. ಇವರು ಸ್ವತಃ ಅನೇಕ ಕೃತಿಗಳನ್ನು ರಚಿಸಿರುವರು.

೧. ಮೈಸೂರು ಆಗ ಮತ್ತು ಈಗ, ಜೆ. ಮಹಮ್ಮದ್ ಇಮಾಮ್, ೧೯೬೬

ಸಮಾರು ೬೦ ವರ್ಷಗಳ ಅವಧಿಯಲ್ಲಿ ನೋಡಿದ ಮಾಡಿದ ಮತ್ತು ಅನುಭವಿಸಿದ ಮುಖ್ಯವಾದ ಸಂಗತಿ ಸಂಭವಗಳನ್ನು ಸ್ಪಷ್ಟವಾಗಿಯೂ ನೇರವಾಗಿಯೂ ವಿಮರ್ಶಿಸಿ ಈ ಪುಸ್ತಕವನ್ನು ರಚಿಸಿರುವರು. ಶ್ರೀ ಇಮಾಮ್ ಅವರು ತಮ್ಮ ಗ್ರಂಥವನ್ನು ಎರಡು ಭಾಗವಾಗಿ ವಿಂಗಡಿಸಿ ಒಂದನೆಯ ಭಾಗವು ಮೈಸೂರು ಆಗ ಎಂದರೆ ಶ್ರೀ ಚಾಮರಾಜ ಒಡೆಯರು ಬ್ರಿಟಿಷರಿಂದ ಮೈಸೂರು ಸಂಸ್ಥಾನವನ್ನು ಹಿಂದಕ್ಕೆ ಪಡೆದ ೧೮೮೧ ರಿಂದ ೧೯೪೭ ರವರೆಗೆ ೬೬ ವರ್ಷಗಳ ಕಾಲವನ್ನು, ಎರಡನೇ ಭಾಗವು ಮೈಸೂರು ಈಗ ಎಂದರೆ ಈ ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರವು ಜಾರಿಗೆ ಬಂದ ೧೯೪೭ ರಿಂದ ೬೭ ರ ವರೆಗಿನ ಕಾಲವನ್ನು ಒಳಗೊಂಡಿದೆ. ಈ ಎರಡೂ ಅವಧಿಯಲ್ಲಿ ಆದ ಆಡಳಿತದ ಸಾಧಕ ಬಾಧಕಗಳ ವಿವರವನ್ನು ಕೊಡುವ ಮುಖ್ಯ ಕೃತಿಯಾಗಿದೆ.

೨. ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಭಾಗ ಒಂದು ಮತ್ತು ಎರಡು, ಸೂರ್ಯನಾಥ ಯು. ಕಾಮತ್, ೧೯೭೭

ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ, ಬಳ್ಳಾರಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ಸ್ವಾತಂತ್ರ್ಯ ಹೋರಾಟಗಾರರ ಕುರಿತಾದ ಮಾಹಿತಿ ಈ ಕೃತಿಗಳಿಂದ ತಿಳಿದುಬರುತ್ತದೆ.

ಹೀಗೆ ದಾವಣಗೆರೆ ಜಿಲ್ಲೆಯ ರಾಜಕೀಯ ಕ್ಷೇತ್ರದಲ್ಲಿ ಬೆಳ್ಳಿ ಚುಕ್ಕಿಯಂತೆ ಮಿನುಗಿದ ಬಹಳಷ್ಟು ನಾಯಕರ ಕುರಿತಂತೆ ಅಧ್ಯಯನಗಳು ನಡೆದಿರುವುದು ಬೆರಳೆಣಿಕೆಯಷ್ಟೆ ಎಂದು ಹೇಳಬಹುದಾಗಿದೆ. ಈ ಕುರಿತ ಅಧ್ಯಯನಗಳು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ನಡೆಯಬೇಕಾಗಿದೆ.

೩. ಥರ್ಟಿ ಇಯರ್ಸ್ ಆಫ್ ಇಂಡಿಪೆಂಡೆನ್ಸ್ ಫ್ರಮ್ ಕಾಂಗ್ರೆಸ್ ಟು ಜನತಾ ದಳ, ಜೆ. ಮಹಮ್ಮದ್ ಇಮಾಮ್, ೧೯೭೭

ಭಾರತ ಸ್ವತಂತ್ರ್ಯ ಪಡೆದ ಮೂವತ್ತು ವರ್ಷಗಳ ಸಾಧನೆಯನ್ನು ತಿಳಿಸುವ ಅಪ್ರಕಟಿತ ಕೃತಿಯಾಗಿದೆ. ಈ ಕೃತಿ ಇನ್ನೂ ಬೆಳಕು ಕಾಣಬೇಕಾಗಿದೆ.

೪. ನಾಡ ಶಿಲ್ಪಿ, ಕೆ. ರವಿಕುಮಾರ್, ೧೯೮೦

ಈ ಕೃತಿಯು ಜಗಳೂರು ಜೆ. ಮಹಮ್ಮದ್ ಇಮಾಮ್‌ರ ಕುರಿತು ತಿಳಿಸುವಂಥ ಪ್ರಮುಖ ಕೃತಿಯೆನಿಸಿದೆ.

೫. ಜಗಳೂರು ಮಹಮದ್ ಇಮಾಮ್, ಪ್ರೊ. ಜೆ. ಎಸ್. ಸದಾನಂದ, ೨೦೦೦

ಪ್ರತಿಭಾವಂತ ಸಂಸದೀ ಪಟುವಾದ ಜೆ. ಮಹಮ್ಮದ್ ಇಮಾಮ್ ಅವರ ಬದುಕು ಹಾಗೂ ಬರಹವನ್ನು ವಿವರಿಸುವಂತಹ ಕೃತಿಯಾಗಿದೆ.

೬. ಶತಮಾನದ ಶ್ರೇಷ್ಠರು, ಎ. ಜಿ. ಈಶ್ವರಪ್ಪ, ಎಂ. ಎಸ್. ಶಿವಶರಣಪ್ಪ, ೨೦೦೦

ದಾವಣಗೆರೆ ನಗರದ ರಾಜಕೀಯ ನಾಯಕರ ಕುರಿತು ವಿವರಗಳನ್ನು ನೀಡುವ ಕೃತಿಯಾಗಿದೆ. ರಾಜನಹಳ್ಳಿ ಹನುಮಂತಪ್ಪ, ಚಿಗಟೇರಿ ಮುರಿಗೆಪ್ಪ, ಬಿ. ಟಿ. ಚಂದ್ರಣ್ಣ, ಕೆ. ಟಿ. ಜಂಬಣ್ಣ, ಗುಂಡಿ ಮಹದೇವಪ್ಪ, ಮಾಗನೂರು ಬಸಪ್ಪ, ಎಸ್. ಕೊಟ್ರಬಸಪ್ಪ, ಶಾಮನೂರು ಶಿವಶಂಕರಪ್ಪ, ಡಾ. ಎಂ. ಸಿ. ಮೋದಿ, ಡಾ. ಎಸ್. ಎಂ. ಎಲಿ ಎಂಬ ಮಹನೀಯರ ಸಾಧನೆಯನ್ನು ಈ ಕೃತಿಯಲ್ಲಿ ದಾಖಲಿಸಲಾಗಿದೆ.

೭. ನವ ಕರ್ನಾಟಕದ ನಿರ್ಮಾಪಕರು, ಪಾಟೀಲ್ ಪುಟ್ಟಪ್ಪ, ೨೦೦೫

ಕರ್ನಾಟಕದ ಪ್ರಮುಖ ಗಣ್ಯ ರಾಜಕಾರಣಿಗಳ ಸಾಲಿನಲ್ಲಿ ಮಹಮ್ಮದ್ ಇಮಾಮ್‌ರು ಪ್ರಮುಖರು. ಇವರ ರಾಜಕೀಯ ಸಾಧನೆಯನ್ನು ಕುರಿತಂತೆ ಈ ಪುಸ್ತಕದಲ್ಲಿ ಪರಿಚಯಿಸಲಾಗಿದೆ.

೮. ಅಮೃತ ಪುರುಷ, ಎಂ. ಜಿ. ಈಶ್ವರಪ್ಪ, ೨೦೦೫

ಶಾಮನೂರು ಶಿವಶಂಕರಪ್ಪನವರ ೭೫ ನೇ ಹುಟ್ಟು ಹಬ್ಬದ ಸಂದರ್ಭದಲ್ಲಿ ಮೂಡಿ ಬಂದ ರಾಜಕೀಯ ನಾಯಕನ ಜೀವನದ ಸಾಧನೆಯನ್ನು ಈ ಕೃತಿ ಒಳಗೊಂಡಿದೆ. ಈ ಕೃತಿಯಲ್ಲಿ ೩೩ ಲೇಖನಗಳನ್ನು ಕಾಣಬಹುದು. ಶ್ರೀ ಶಾಮನೂರು ಶಿವಶಂಕರಪ್ಪನವರನ್ನು ಕುರಿತು ಭಿನ್ನ ದೃಷ್ಟಿಕೋನಗಳಿಂದ ಕಂಡ ವ್ಯಕ್ತಿಚಿತ್ರಣಗಳನ್ನು ಕಾಣಬಹುದು.

೯. ಜಗಳೂರು ಮಹಮ್ಮದ್ ಇಮಾಮಂ ಸಾಬ್, ಪ್ರೊ. ಬಿ. ವಿ. ವೀರಭದ್ರಪ್ಪ, ೨೦೦೬

ಈ ಪುಟ್ಟ ಪುಸ್ತಕ ಮಹಮ್ಮದ್ ಇಮಾಮರ ಜೀವನ ಕಥೆಯನ್ನು ತಿಳಿಯಪಡಿಸುತ್ತದೆ.

ಆರ್ಥಿಕ

ಈ ಕ್ಷೇತ್ರದಲ್ಲಿ ದಾವಣಗೆರೆ ದೇಶ ವಿದೇಶಗಳಿಗೆ ಹೆಸರಾಗಿದ್ದಿತು. ಕೈಗಾರಿಕೆಗಳ ಬೆಳವಣಿಗೆಯಿಂದ ಕರ್ನಾಟಕದ ಮ್ಯಾಂಚೆಸ್ಟರ್ ನಗರ ಎಂಬ ಖ್ಯಾತಿಗೆ ಪಾತ್ರವಾಗಿತ್ತು. ಕೃಷಿ, ನೀರಾವರಿ, ಉತ್ಪಾದನೆ, ಆಮದು, ರಫ್ತು, ವಾಣಿಜ್ಯ, ಬ್ಯಾಂಕಿಂಗ್ ವ್ಯವಸ್ಥೆ, ಮಾರುಕಟ್ಟೆ ವ್ಯವಸ್ಥೆ ಇನ್ನಿತರ ವಿಷಯಗಳು ಈ ಅಧ್ಯಯನದಲ್ಲಿ ಕಾಣಬಹುದು. ವಸಾಹತುಶಾಹಿ ಕಾಲದಲ್ಲಿ ಕೈಗಾರಿಕಾ ಕ್ಷೇತ್ರದಲ್ಲಿ ದಾವಣಗೆರೆ ಇಂಗ್ಲಿಂಡಿನ ಪ್ರಮುಖ ನಗರವಾಗಿದ್ದಿತು.

೨೦೦೩-೨೦೦೪ರ ಜಿಲ್ಲೆಯ ನೀರಾವರಿಯ ವಲಯದ ಸಮೀಕ್ಷೆಯಂತೆ ೬೮೫೪೨ ಕಾಲುವೆಗಳು, ೯೧೭ ಕೆರೆಗಳು, ೨೧೦೧ ಬಾವಿಗಳು, ೪೯೫೯ ಕೊಳವೆ ಬಾವಿಗಳಿದ್ದು ೧೨೪೬೭೨ ಹೆಕ್ಟೇರ್ ಭೂಮಿಗೆ ನೀರಾವರಿ ವ್ಯವಸ್ಥೆ ಕಲ್ಪಿಸಲಾಗಿದೆ. ಬ್ಯಾಂಕಿಂಗ್ ಚಟುವಟಿಕೆಗಳನ್ನು ೨೦೦೪-೦೫ ರ ಸಮೀಕ್ಷೆಯ ಪ್ರಕಾರ ಒಟ್ಟು ೧೨೭ ಶಾಖೆಗಳಿವೆ. ಮಾರುಕಟ್ಟೆ ವ್ಯವಸ್ಥೆಯ ಸಮೀಕ್ಷೆಯ ಪ್ರಕಾರ ೨೦೦೩-೦೪ ರಲ್ಲಿ ಜಿಲ್ಲೆಯಲ್ಲಿ ೧೪ ಮಾರುಕಟ್ಟೆಗಳಿರುವ ವಿಷಯ ತಿಳಿದು ಬರುತ್ತದೆ. ಸರಕು-ಸಾಗಾಣಿಕೆಗೆ ವ್ಯವಸ್ಥಿತ ರಸ್ತೆ ಮಾರ್ಗವನ್ನು ಜಿಲ್ಲೆಯಲ್ಲಿ ಕಲ್ಪಿಸಿಕೊಳ್ಳಲಾಗಿದೆ.

ಆರ್ಥಿಕ ಕ್ಷೇತ್ರದ ಅಧ್ಯಯನಗಳ ಅವಲೋಕನ ಮಾಡುವುದಾದರೆ ಎಂ. ಜಿ. ಈಶ್ವರಪ್ಪನವರ 'ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ', ಅಧ್ಯಯನ ಚಿತ್ರದುರ್ಗದ ದಾವಣಗೆರೆ ಪ್ರದೇಶಗಳ ವ್ಯಾಪ್ತಿಯನ್ನು

ಒಳಗೊಂಡಿದೆ. ನಾರಾಯಣ ಮಲ್ಲಾಪುರರವರು 'ಎ ಕೇಸ್ ಸ್ಟಡಿ ಆಫ್ ಫೈನಾನ್ಸ್ ಆಫ್ ಅಗ್ರಿಕಲ್ಚರ್ ಬೈ ಜಗಳೂರು ತಾಲ್ಲೂಕ್ ಕೋಆಪರೇಟಿವ್ ಅಗ್ರಿಕಲ್ಚರ್ ಅಂಡ್ ರೂರಲ್ ಡೆವಲೆಪ್‌ಮೆಂಟ್ ಬ್ಯಾಂಕ್ ಲಿಮಿಟೆಡ್, ಜಗಳೂರು' ಎಂಬ ಎಂ.ಫಿಲ್. ಪ್ರಬಂಧ ೨೦೦೬ರಲ್ಲಿ ಹೊರ ಬಂದ ಅಧ್ಯಯನವಾಗಿದೆ. ಈ ಪ್ರಬಂದ ಜಗಳೂರು ಕೋಆಪರೇಟಿವ್ ಅಗ್ರಿಕಲ್ಚರ್ ಬ್ಯಾಂಕಿನ ಕೊಡುಕೊಳ್ಳುವಿಕೆಯ ವಿಷಯದ ಮೇಲೆ ನಡೆದ ಅಧ್ಯಯನವಾಗಿದೆ.

ಹೆಚ್. ಹನುಮಂತಪ್ಪ 'ಎ ಸ್ಟಡಿ ಆಫ್ ರೀಜಿನಲ್ ರೂರಲ್ ಬ್ಯಾಂಕ್ ಇನ್ ಕರ್ನಾಟಕ ವಿತ್ ಸ್ಪೆಶಲ್ ರೆಫರೆನ್ಸ್ ಟು ಚಿತ್ರದುರ್ಗ ರೂರಲ್ ಬ್ಯಾಂಕ್' ಎಂಬ ಅಧ್ಯಯನವು ಪಿಎಚ್. ಡಿ. ಮಹಾಪ್ರಬಂಧವಾಗಿದೆ. ಈ ಪ್ರಬಂಧದ ಅಧ್ಯಯನದ ವ್ಯಾಪ್ತಿಗೆ ದಾವಣಗೆರೆ ಪ್ರದೇಶವೂ ಸೇರುತ್ತದೆ. ಈ ಅಧ್ಯಯನದಲ್ಲಿ ಗ್ರಾಮೀಣ ಆರ್ಥಿಕ ಲೇವಾದೇವಿಗಳ ಕುರಿತಂತೆ ವಿವರ, ವಿಶ್ಲೇಷಣೆ ಇದೆ.

ಶೈಕ್ಷಣಿಕ

ದಾವಣಗೆರೆ ಜಿಲ್ಲೆ ಆರ್ಥಿಕವಾಗಿ ಪ್ರಗತಿ ಸಾಧಿಸಿದಂತೆಯೇ ಶೈಕ್ಷಣಿಕವಾಗಿಯೂ ಸಾಧನೆ ಮಾಡಿರುವುದನ್ನು ಕಾಣುತ್ತೇವೆ. ದಾವಣಗೆರೆಯು ಇಂಗ್ಲೆಂಡಿನ ಆಕ್ಸಫರ್ಡ್ ನಗರದಂತೆ ಎಂದು ಮಾಧ್ಯಮಗಳಲ್ಲಿ ಬಿಂಬಿತವಾದ ನಗರವಾಗಿದೆ. ೨೦೦೧ ರ ಸಮೀಕ್ಷೆಯಂತೆ ಪ್ರಸ್ತುತ ಜಿಲ್ಲೆಯಲ್ಲಿ ಗ್ರಾಮೀಣ ಮತ್ತು ನಗರಗಳಲ್ಲಿ ಶೇಕಡಾವಾರು ಅಕ್ಷರತೆ ಬಗ್ಗೆ ಅಂಕಿ ಅಂಶಗಳ ಪ್ರಕಾರ ಗ್ರಾಮೀಣ ಪ್ರದೇಶದಲ್ಲಿ ಶೇ. ೬೩ ರಷ್ಟು, ಪಟ್ಟಣಗಳಲ್ಲಿ ಶೇ. ೭೮ ರಷ್ಟಿದೆ. ೨೦೦೪-೦೫ ರ ಪ್ರಾಥಮಿಕ ವಿದ್ಯಾಭ್ಯಾಸದ ಕುರಿತಾಗಿ ೧೭೬೨ ವಿದ್ಯಾಸಂಸ್ಥೆಗಳಿವೆ. ಸೆಕೆಂಡರಿ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದಂತೆ ೩೯೩ ವಿದ್ಯಾಸಂಸ್ಥೆಗಳಿವೆ. ಕಾಲೇಜು ವಿದ್ಯಾಭ್ಯಾಸಕ್ಕೆ ಸಂಬಂಧಿಸಿದಂತೆ ಒಟ್ಟು ೩೦ ಕಾಲೇಜುಗಳಿವೆ. ಇವುಗಳಲ್ಲಿ ೬ ತಾಂತ್ರಿಕ ಕಾಲೇಜು, ೪ ವೈದ್ಯಕೀಯ ಕಾಲೇಜುಗಳು ಇರುವುದನ್ನು ಕಾಣಬಹುದು. ಇಂತಹ ಶೈಕ್ಷಣಿಕ ಸಂಸ್ಥೆಗಳಿದ್ದ ಜಿಲ್ಲೆಯಲ್ಲಿ ಹಲವು ಶಿಕ್ಷಕರ ತರಬೇತಿ ಕೇಂದ್ರಗಳು ಸ್ನಾತಕೋತ್ತರ ಪದವಿ ಕೇಂದ್ರಗಳು, ನರ್ಸಿಂಗ್ ಮತ್ತು ಕೈಗಾರಿಕಾ ತರಬೇತಿ ಕೇಂದ್ರಗಳು ಇರುವುದು ಕಾಣಬರುತ್ತವೆ. ಇದರಿಂದ ಜಿಲ್ಲೆಯು ಶೈಕ್ಷಣಿಕವಾಗಿ ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ಆದರೆ ಇಂಥ ಕ್ಷೇತ್ರದ ಕುರಿತಂತೆ ಹೆಚ್ಚಿನ ಅಧ್ಯಯನದ ಅಗತ್ಯವಿದೆಯೆಂದು ಹೇಳಬಹುದಾಗಿದೆ.

ಕೈಗಾರಿಕೆ ಮತ್ತು ಕಾರ್ಮಿಕ

ಈ ವಿಷಯಕ್ಕೆ ಸಂಬಂಧಿಪಟ್ಟಂತೆ ಕೆಲವು ಅಧ್ಯಯನಗಳ ಅವಲೋಕನವನ್ನು ಮಾಡಲಾಗುವುದು. ದಾವಣಗೆರೆಯಲ್ಲಿ ಒಟ್ಟು ಎಷ್ಟು ಕಾರ್ಖಾನೆಗಳಿವೆ ಹಾಗೂ ಎಷ್ಟು ಕಾರ್ಮಿಕರಿರುವರು ಎಂಬುದನ್ನು ೨೦೦೫ರ ಸಮೀಕ್ಷೆಯಂತೆ ಜಿಲ್ಲೆಯಲ್ಲಿ ಒಟ್ಟು ೨೩೧ ಕಾರ್ಖಾನೆಗಳಿದ್ದು ೬೫೮೫ ಜನ ಕಾರ್ಮಿಕರಿರುವ ವಿಷಯ ತಿಳಿದು ಬರುತ್ತದೆ.

ಈ ಕ್ಷೇತ್ರವನ್ನು ಅನುಲಕ್ಷಿಸಿ ಆರ್ಥಿಕ ತಜ್ಞರು, ಸಂಶೋಧಕರು ಅಧ್ಯಯನ ನಡೆಸಿರುವುದನ್ನು ಅವಲೋಕಿಸಬಹುದಾಗಿದೆ.

೧. **'ಕಾರ್ಮಿಕ ರತ್ನ'ರ ಕೆಂಪು ಕಥೆ,** ಶ್ರೀ ಸಿದ್ದೇಶ್ವರ ಮಿಲ್ ಕೆಲಸಗಾರರ ಸಂಘದ ಕಾರ್ಯಕಾರಿ ಸಮಿತಿ, ೧೯೮೧

ದಾವಣಗೆರೆ ನಗರದ ಕಾರ್ಮಿಕರ ಸಂಘಟನೆಯ ಬೆನ್ನಿನ ಹಿಂದೆಯೇ ನೆತ್ತರ ಹೊಳೆಯ ಕೆಂಪು ಇತಿಹಾಸವೇ ನಿರ್ಮಾಣವಾಗಿದೆ ಎನ್ನುವಲ್ಲಿ ನಗರದ ಕಾರ್ಮಿಕ ಕಣ್ಮಣಿಗಳಾದ ಮಹಾನ್ ನಾಯಕ ಕಾಂ. ಪಂಪಾಪತಿಯವರು ನಡೆದು ಬಂದ ದಾರಿಯ ಹೆಜ್ಜೆಗಳಲ್ಲಿ ಸ್ವಲ್ಪ ಭಾಗವನ್ನಾದರೂ ಕ್ರಮಿಸುವುದು ಈ ಕಿರು ಪುಸ್ತಕದ ಆಶಯವಾಗಿದೆ. ಈ ಕಿರು ಪುಸ್ತಕ ಕಾರ್ಮಿಕರ ಚರಿತ್ರೆಗೆ ಸಹಾಯಕವಾಗಿದೆ.

೨. **ಇಂಡಸ್ಟ್ರಿಯಲ್ ರಿಲೇಷನ್ಸ್ ಇನ್ ಟೆಕ್ಸ್‌ಟೈಲ್ ಇಂಡಸ್ಟ್ರಿ ಎ. ಕೇಸ್ ಸ್ಟಡಿ ಆಫ್ ಕಾಟನ್ ಮಿಲ್ಸ್ ಇನ್ ದಾವಣಗೆರೆ,** ಎಸ್. ಎಚ್. ಸಿದ್ದಲಿಂಗಯ್ಯ ಸ್ವಾಮಿ, ೧೯೯೨

ಕರ್ನಾಟಕದ ಹತ್ತಿ ಬಟ್ಟೆ ಕೈಗಾರಿಕೆಗಳಲ್ಲಿ ದಾವಣಗೆರೆಗೆ ವಿಶೇಷ ಸ್ಥಾನವಿದೆ. ನಿರುದ್ಯೋಗದಿಂದ ವಂಚಿತವಾದ ಬಹುತೇಕ ಮಂದಿಗೆ ಉದ್ಯೋಗವನ್ನು ಕಲ್ಪಿಸಿಕೊಟ್ಟು, ಹತ್ತಿ ಉದ್ಯಮದಲ್ಲಿ ಇಡೀ ಭಾರತದ ಗಮನ ಸೆಳೆಯಿತು. ಕೃಷಿಗೆ ಮತ್ತು ಕೈಗಾರಿಕೆಗಳಿಗೆ ಅವಿನಾಭಾವ ಸಂಬಂಧವಿದೆ. ಕೃಷಿಯಲ್ಲಿ ಉತ್ತಮವಾದ ಇಳುವರಿ ಹತ್ತಿಯನ್ನು ಬೆಳೆದರೆ ಕೈಗಾರಿಕೆಗಳಿಗೆ ಹೆಚ್ಚು ಶ್ರೇಯಸ್ಸು. ದಾವಣಗೆರೆ ಪ್ರದೇಶದಲ್ಲಿ ನಡೆಯುತ್ತಿದ್ದ ಕೈಗಾರಿಕೆ ಪ್ರಕ್ರಿಯೆಯಲ್ಲಿ ನೇಯ್ಗೆ, ಡಿಸೈನಿಂಗ್ ಮುಂತಾದ ವಿಚಾರಗಳಲ್ಲಿ ಆಕರ್ಷಣೆಯ ಕೇಂದ್ರವಾಗಿದೆ. ಪ್ರಸ್ತುತ ಅಧ್ಯಯನವು ದಾವಣಗೆರೆ ಜಿಲ್ಲೆಯ ಹತ್ತಿ ಬಟ್ಟೆ ಕೈಗಾರಿಕೆಗಳ ಹುಟ್ಟು ಮತ್ತು ಬೆಳವಣಿಗೆಯನ್ನು ಕುರಿತಂತೆ ಸಮುದಾಯಗಳ ಅವಲಂಬನೆ ಕುರಿತಂತೆ ಹೆಚ್ಚಿನ ಮಾಹಿತಿ ನೀಡುತ್ತದೆ.

೩. **ಗ್ರೌತ್ ಅಂಡ್ ಡೆವಲಪ್ ಮೆಂಟ್ ಆಫ್ ಇಂಡಸ್ಟ್ರೀಸ್ ಇನ್ ಚಿತ್ರದುರ್ಗ ಡಿಸ್ಟ್ರಿಕ್ಟ್,** ೧೯೦೦-೪೭, ಎಸ್. ಬಿ. ರವಿಕುಮಾರ್, ೧೯೯೭

ವಸಾಹತು ಶಾಹಿಯ ಆಳ್ವಿಕೆಯ ಸಂದರ್ಭದಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ಕೈಗಾರಿಕೆಗಳು ಮತ್ತು ಅವುಗಳ ಬೆಳವಣಿಗೆಯನ್ನು ಕುರಿತು ಈ ಅಧ್ಯಯನವು ಒಳಗೊಂಡಿದೆ. ಜೀವನಾಧಾರಕ್ಕಾಗಿ ಕರ್ನಾಟಕದಲ್ಲಿ ಕೃಷಿಯನ್ನೆ ಅವಲಂಬಿಸಿರುವ ಕುಟುಂಬಗಳು ಹೆಚ್ಚು ಕಂಡುಬರುತ್ತವೆ. ವಿವಿಧ ಕುಶಲ ಕರ್ಮಿಗಳು ವಿವಿಧ ಗುಡಿಕೈಗಾರಿಕೆಗಳಲ್ಲಿ ತೊಡಗಿ ಕೊಂಡಿರುವುದು ಕಂಡುಬರುತ್ತದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಕಬ್ಬಿಣ, ಸುಣ್ಣದ ಕಲ್ಲು, ತಾಮ್ರ ಗಣಿಗಳು ಕಂಡುಬರುತ್ತವೆ. ಈ ರೀತಿಯ ಅಧ್ಯಯನಗಳ ಕುರಿತಂತೆ ಈ ಅಧ್ಯಯನ ವಿವರಗಳನ್ನು ತಿಳಿಸುತ್ತದೆ.

೪. **ಹತ್ತಿ ಹಿಂಜುವ ಕಾರ್ಖಾನೆಗಳಲ್ಲಿ ಮಹಿಳಾ ಕಾರ್ಮಿಕರ ಸಾಮಾಜಿಕ ಆರ್ಥಿಕ ಸ್ಥಿತಿ-ಗತಿಗಳು, ದಾವಣಗೆರೆ ನಗರದ ಒಂದು ಅಧ್ಯಯನ,** ಜೆ. ಎಚ್. ಅಂಜನಪ್ಪ, ೧೯೯೮

ಈ ಪ್ರಬಂಧವು ದಾವಣಗೆರೆ ನಗರದ ಹತ್ತಿ ಕಾರ್ಖಾನೆಗಳಲ್ಲಿ ಪುರುಷರಂತೆ ಮಹಿಳೆಯರೂ ದುಡಿಯುತ್ತಿದ್ದುದನ್ನು ಗಮನಿಸಿ ಅವರ ಸ್ಥಿತಿ-ಗತಿ ಬಗ್ಗೆಯೇ ಅಧ್ಯಯನ ಮಾಡಿದ ಎಂ.ಫಿಲ್. ಪ್ರಬಂಧವಾಗಿದೆ.

೫. **ಶತಮಾನದ ದಾವಣಗೆರೆ,** (ಸಂ.), ಎಂ. ಜಿ. ಈಶ್ವರಪ್ಪ, ೨೦೦೧

ಈ ಕೃತಿಯಲ್ಲಿ ಬೆಳೆದು ಕಮರಿದಿ ಕೈಗಾರಿಕೋದ್ಯಮ ಎಂಬ ಲೇಖನ ದಾವಣಗೆರೆ ನಗರದ ಕೈಗಾರಿಕೆ ಕಾರ್ಖಾನೆಗಳ ಹುಟ್ಟು, ಬೆಳವಣಿಗೆ ಹಾಗೂ ಅವನತಿಯ ಅಂಶಗಳನ್ನು ಪರಿಚಯಿಸಿದೆ. ಹಾಗೆಯೇ ಮರೆಯಾದ ಕಾರ್ಮಿಕ ಶಕ್ತಿ ಲೇಖನವೂ ಸಹ ಕಾರ್ಮಿಕರ ಸ್ಥಿತಿಗತಿಯನ್ನು ತಿಳಿಯಪಡಿಸುತ್ತದೆ.

ಹೀಗೆ ಜಿಲ್ಲೆಯ ಕೈಗಾರಿಕೆ ಮತ್ತು ಕಾರ್ಮಿಕ ಕ್ಷೇತ್ರಗಳ ಕುರಿತಂತೆ ಆದ ಅಧ್ಯಯನಗಳ ಅವಲೋಕನದಿಂದ ಜಿಲ್ಲೆಯ ಕೈಗಾರಿಕೆ ಹಾಗೂ ಕಾರ್ಮಿಕರ ಸ್ಥಿತಿ-ಗತಿಗಳ ಕುರಿತಂತೆ ಸ್ಪಷ್ಟ ಚಿತ್ರಣ ದೊರೆಯುತ್ತದೆ.

೬. **ಕರ್ನಾಟಕದಲ್ಲಿ ಹತ್ತಿ ಹಿಂಜುವ ಕಾರ್ಖಾನೆಗಳಲ್ಲಿರುವ ಮಹಿಳಾ ಕಾರ್ಮಿಕರ ಸಾಮಾಜಿಕ-ಆರ್ಥಿಕ ಸ್ಥಿತಿ-ಗತಿಗಳು: ಸಮಾಜಶಾಸ್ತ್ರೀಯ ಅಧ್ಯಯನ,** ಬಿ. ಹೆಚ್. ಅಂಜನಪ್ಪ, ೨೦೦೨

ಈ ಮಹಾಪ್ರಬಂಧವು ಇಡೀ ಕರ್ನಾಟಕದ ಹತ್ತಿ ಗಿರಣಿಗಳ ಕಾರ್ಮಿಕರ ಸಾಮಾಜಿಕಆರ್ಥಿಕ ಸ್ಥಿತಿಗತಿಗಳ ಕುರಿತಂತೆ ದಾವಣಗೆರೆಯ ಮಹಿಳಾ ಕಾರ್ಮಿಕರ ಸ್ಥಿತಿ-ಗತಿಯನ್ನು ಕುರಿತಂತೆ ಅಧ್ಯಯನ ಮಾಡಿರುವುದಾಗಿದೆ. ಇದರಿಂದ ಜಿಲ್ಲೆಯ ಕೈಗಾರಿಕಾ ಮತ್ತು ಕಾರ್ಮಿಕ ಕ್ಷೇತ್ರದಲ್ಲಿನ ಮಹಿಳೆಯ ಪಾತ್ರವನ್ನು ತಿಳಿಯಬಹುದಾಗಿದೆ.

೭. **ಬರೆಯುದ ದಿನಚರಿಯ ಮರೆಯದ ಪುಟಗಳು,** ಬಿ. ಬಿ. ಕಕ್ಕಿಲ್ಲಾಯ, ೨೦೦೩,

ದಾವಣಗೆರೆಯ ದುರಂತ, ಲೇಖನದಲ್ಲಿ ಕಾರ್ಮಿಕರಾದ ಶೇಖರಪ್ಪ ಮತ್ತು ಸುರೇಶರನ್ನು ಹತ್ಯೆ ಮಾಡಿದ ವಿವರವನ್ನು ನೀಡಿರುವರು.

೮. ದಾವಣಗೆರೆ ಹತ್ತಿಗಿರಣಿ ಕಾರ್ಮಿಕರ ಚಳವಳಿಗಳು - ಬಿ. ಪಿ. ಕುಮಾರ್, ೨೦೦೬

ಈ ಮಹಾಪ್ರಬಂಧವು ದಾವಣಗೆರೆ ನಗರದ ಹತ್ತಿಗಿರಣಿಗಳ ಹುಟ್ಟು ಮತ್ತು ಅವನತಿ, ನಂತರ ಕಾರ್ಮಿಕರ ಚಳವಳಿಯ ಪ್ರಾದೇಶಿಕ ವ್ಯಾಪ್ತಿಯ ಹಿನ್ನೆಲೆ, ಕಾರ್ಮಿಕ ಸಂಘಟನೆಗಳ ಹುಟ್ಟು, ಬೆಳವಣಿಗೆ, ಸ್ವಭಾವ ಮತ್ತು ಸಮಸ್ಯೆಗಳ ಕುರಿತಂತೆ ಚರ್ಚಿಸಿರುವುದಲ್ಲದೆ ಕಾರ್ಮಿಕರಿಗೆ ಮೂಲಭೂತವಾಗಿ ದೊರೆಯಬೇಕಾದ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಲಾಗಿದೆ. ಕಾರ್ಮಿಕರ ಕಲ್ಯಾಣಕ್ಕಾಗಿ ರೂಪುಗೊಂಡ ಕಾಯ್ದೆಗಳ ಜಾರಿಗಾಗಿ ಹೋರಾಟ ಮಾಡಿ ಒಟ್ಟು ಹದಿಮೂರು ಕಾಯ್ದೆಗಳನ್ನು ಜಾರಿಗೆ ತಂದ ಅಂಶಗಳನ್ನು ಈ ಅಧ್ಯಯನದಲ್ಲಿ ಕಾಣಬಹುದಾಗಿದೆ. ಅಲ್ಲದೆ ಕಾರ್ಮಿಕರ ಮುಖಂಡರ ಪಾತ್ರದ ವಿವರವೂ ಸಹ ಈ ಪ್ರಬಂಧ ದೊರಕಿಸಿಕೊಡುವುದು. ಒಟ್ಟಾರೆಯಾಗಿ ಈ ಅಧ್ಯಯನ ಕಾರ್ಮಿಕರ ಸ್ಥಿತಿ-ಗತಿಯನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನ ನಡೆಸಲಾಗಿದೆ.

ಅಧ್ಯಾಯ ನಾಲ್ಕು

ಚರಿತ್ರೆ ರಚನಾಶಾಸ್ತ್ರದ ಹಿನ್ನೆಲೆಯಲ್ಲಿ ದಾವಣಗೆರೆ ಜಿಲ್ಲೆಯ ಕುರಿತ ಅಧ್ಯಯನಗಳು

ಅಧ್ಯಯದ ಅನುಕೂಲಕ್ಕಾಗಿ ಪ್ರಸ್ತುತ ವಿಷಯವನ್ನು ಮೂರು ಭಾಗಗಳಾಗಿ ವಿಂಗಡಿಸಿಕೊಳ್ಳಲಾಗಿದೆ. ಮೊದಲನೇ ಭಾಗವು ಕ್ರಿ.ಶ. ೧೩೩೬ ರವರೆಗಿನ ಘಟನಾವಳಿಗಳನ್ನು ಒಳಗೊಂಡಿದೆ. ಎರಡನೇ ಭಾಗವು ಕ್ರಿ.ಶ. ೧೩೩೬ ರಿಂದ ಕ್ರಿ.ಶ. ೧೭೭೯ ರವರೆಗಿನ ಪಾಳೆಯಗಾರರ ಆಳ್ವಿಕೆಯ ಕಾಲವನ್ನು ಒಳಗೊಂಡಿದೆ. ಮೂರನೇ ಭಾಗವು ಕ್ರಿ.ಶ. ೧೭೭೯ ರಿಂದ ಕ್ರಿ.ಶ. ೧೯೫೬ ರವರೆಗಿನ ಆಧುನಿಕ ಕಾಲವನ್ನು ಒಳಗೊಳ್ಳುವುದು. ಚರಿತ್ರೆ ರಚನಾಶಾಸ್ತ್ರದ ಹಿನ್ನೆಲೆಯಲ್ಲಿ ಸಂಬಂಧಿಸಿದ ಕೃತಿಗಳನ್ನು ಮತ್ತು ಕೃತಿಕಾರರನ್ನು ವಿಮರ್ಶಿಸಲು ಈ ಅಧ್ಯಯನದಲ್ಲಿ ಪ್ರಯತ್ನಿಸಲಾಗಿದೆ. ಚರಿತ್ರೆಯ ಬರವಣಿಗೆಯ ವಿಭಿನ್ನ ಸ್ವರೂಪಗಳನ್ನು ಈ ಸಂದರ್ಭದಲ್ಲಿ ನೋಡುವ ಪ್ರಯತ್ನವೊಂದನ್ನು ಮಾಡಲಾಗಿದೆ.

೪.೧ ಪ್ರಥಮ ಹಂತ

ಇತಿಹಾಸ ಪೂರ್ವಕಾಲದಿಂದ ಹೊಯ್ಸಳರ ಕಾಲದವರೆಗೆ

ಶಿಲಾಯುಗ: ದಾವಣಗೆರೆ ಪ್ರದೇಶದಲ್ಲಿ ಇತಿಹಾಸ ಪೂರ್ವಯುಗದ ಮಾನವನ ಸ್ಥಳಗಳು ಹಾಗೂ ಬಳಸಿದ ಉಪಕರಣಗಳು ದೊರೆತಿವೆ. ಅವು ಆದಿಮಾನವನ ಜನಜೀವನದ ಕೆಲವು ವಿಚಾರಗಳ ಮೇಲೆ ಬೆಳಕು ಚೆಲ್ಲುವಲ್ಲಿ ಯಶಸ್ವಿಯಾಗಿವೆ. ದಾವಣಗೆರೆ ಪ್ರದೇಶದಲ್ಲಿ ದೊರೆತ ಹಳೆಯ ಶಿಲಾಯುಗದ ಮಾನವನ ನೆಲೆಗಳ ಬಗೆಗೆ ಮೊದಲಿಗೆ ಗ್ಯಾಸೆಟಿಯರ್‌ಗಳಲ್ಲಿ ಕಾಣಬಹುದು. ಪ್ರಸ್ತುತ ದಾವಣಗೆರೆ ಜಿಲ್ಲೆಯ ಪುರಾತತ್ವ ನೆಲೆಗಳು, ಚಿತ್ರದುರ್ಗ, ಶಿವಮೊಗ್ಗ ಮತ್ತು ಬಳ್ಳಾರಿ ಜಿಲ್ಲಾ ಗ್ಯಾಸೆಟಿಯರ್‌ಗಳಲ್ಲಿ ಕಾಣಬರುವವು. ಆದರೆ ಅವುಗಳಲ್ಲಿ ಕೆಲವು ಸ್ಥಳಗಳನ್ನು ಮಾತ್ರ ಹೆಸರಿಸಲಾಗಿದೆ. ನಂತರ ಹಲವು ಕೃತಿಗಳಲ್ಲಿ ಇಂಥ ಮಾದರಿಗಳನ್ನೇ ಕಾಣಬಹುದು. ಕರ್ನಾಟಕ ಚರಿತ್ರೆ ಸಂಪುಟ ಒಂದರಲ್ಲಿ ಪ್ರೊ. ಅ. ಸುಂದರರವರು ದಾವಣಗೆರೆ ಪ್ರದೇಶಕ್ಕೆ ಸಂಬಂಧಪಟ್ಟ ಹಳೆಶಿಲಾಯುಗದ ನೆಲೆಗಳಾದ ಚಿಕ್ಕ ಬಸೂರು, ನ್ಯಾಮತಿ[೧], ಹಾಗೂ ಮಧ್ಯಶಿಲಾಯುಗದ ನೆಲೆಯಾದ ಗೋವಿನ ಕೋಲಿ, ಇವುಗಳನ್ನು ಗುರುತಿಸಿರುವರು.[೨] ಈ ಸಂಪುಟವು ಸಹ ಜಿಲ್ಲೆಯ ಕೆಲವೇ ಪ್ರದೇಶಗಳನ್ನು ಗುರುತಿಸಿರುವುದು ಕಾಣಬರುತ್ತವೆ. ನಂತರ ೨೦೦೧ ರಲ್ಲಿ ಕೆ. ಬಿ. ಶಿವತಾರಕರವರು ರಚಿಸಿದ 'ಕರ್ನಾಟಕದ ಪುರಾತತ್ವ ನೆಲೆಗಳು' ಕೃತಿಯಲ್ಲಿ ದಾವಣಗೆರೆ ಪ್ರದೇಶದಲ್ಲಿ ದೊರೆತ ಆದಿಹಳೆಯ ಶಿಲಾಯುಗದ ಐದು ನೆಲೆಗಳು, ಮಧ್ಯಶಿಲಾಯುಗದ ಮೂರು ನೆಲೆಗಳನ್ನು, ಅಂತ್ಯಶಿಲಾಯುಗದ ಒಂದು ನಿವೇಶನವನ್ನು ಸೂಕ್ಷ್ಮಶಿಲಾಯುಗದ ಹದಿನೆಂಟು ನೆಲೆಗಳನ್ನು, ನೂತನ ಶಿಲಾಯುಗದ ಹನ್ನೆರಡು ನಿವೇಶನಗಳನ್ನು, ಬೃಹತ್ ಶಿಲಾಯುಗದ ಇಪ್ಪತ್ತೊಂದು ನೆಲೆಗಳನ್ನು, ಇತಿಹಾಸದ ಆರಂಭಯುಗದ ಎಂಟು ನಿವೇಶನಗಳನ್ನು ಗುರುತಿಸಿ[೩] ವಿವರಗಳನ್ನು ನೀಡಿದ್ದಾರೆ. ನಂತರ ಹೆಚ್. ತಿಪ್ಪೇಸ್ವಾಮಿಯವರು 'ದಾವಣಗೆರೆ ಜಿಲ್ಲೆಯ ದೇವಾಲಯಗಳು' ಎಂಬ ಪಿಎಚ್.ಡಿ. ಮಹಾಪ್ರಬಂಧದಲ್ಲಿ ಜಿಲ್ಲೆಯ ಪ್ರಾಗೈತಿಹಾಸಿಕ ನೆಲೆಗಳನ್ನು ಪರಿಚಯಿಸಿರುವರು. ಅವುಗಳಲ್ಲಿ ಆದಿಶಿಲಾಯುಗಕ್ಕೆ ಸೇರಿದ ನ್ಯಾಮತಿ ನಿವೇಶನವನ್ನು, ಬೃಹತ್‌ಶಿಲಾಯುಗಕ್ಕೆ ಸಂಬಂಧಿಸಿದ ಉಚ್ಚಂಗಿದುರ್ಗ ಪ್ರದೇಶವನ್ನು, ಶಿಲಾತಾಮ್ರಯುಗಕ್ಕೆ ಸೇರಿದ ಹೊನ್ನಾಳಿ ತಾಲ್ಲೂಕಿನ ಹೊಳಲೂರು ಸ್ಥಳವನ್ನು, ನವಶಿಲಾಯುಗಕ್ಕೆ ಸೇರಿದ ಜಗಳೂರು ತಾಲ್ಲೂಕಿನ ಕೊಣಚಗಲ್ ರಂಗನಾಥಸ್ವಾಮಿ ಬೆಟ್ಟವನ್ನು ಗುರುತಿಸಿ ಇಲ್ಲಿ ದೊರೆತಿರುವ ಕೈಗೊಡಲಿಗಳು ಮತ್ತು ಬೂದು, ಕಪ್ಪುಬಣ್ಣದ ಮಡಿಕೆ ಚೂರುಗಳನ್ನು ತಿಳಿಸಿರುವರು. ದೊರೆತಿರುವುದನ್ನು ತಿಳಿಸಿರುವರು. ಹಾಗೆ ಅದೇ ಯುಗಕ್ಕೆ ಸೇರಿದ ಜಗಳೂರು ತಾಲ್ಲೂಕಿನ ಅರಿಶಿಣಗುಂಡಿಯಲ್ಲಿ ದೊರೆತ ಎರಡು ಕೈಗೊಡಲಿಗಳನ್ನು ಶೋಧನೆ ಮಾಡಲಾಗಿದ್ದು ತಮ್ಮ ಪ್ರಬಂಧದಲ್ಲಿ ತಿಳಿಸಿರುವರು. ಹರಿಹರ ತಾಲ್ಲೂಕಿನ ಕೊಮಾರನಹಳ್ಳಿಯಲ್ಲಿ

ನಡೆಸಿದ ಉತ್ಖನನದ ಫಲಿತವಾಗಿ ರಾಗಿ, ನವಣೆಗಳನ್ನು ಬೆಳೆದ ಬಗ್ಗೆ ಆಧಾರಗಳಿವೆ. ಈ ನಿವೇಶನ ನವ ಶಿಲಾಯುಗಕ್ಕೆ ಸೇರಿದೆ ಎಂದು ವ್ಯಕ್ತಪಡಿಸಿರುವರು ಹಾಗೂ ಉಚ್ಚಂಗಿದುರ್ಗ ಮತ್ತು ಕಣಕುಪ್ಪೆ ಪ್ರದೇಶಗಳಲ್ಲಿ ಬೃಹತ್ ಶಿಲಾಯುಗದ ಸ್ವಸ್ತಿಕ್ ಮತ್ತು ಆಯತಾಕಾರದ ಸಮಾಧಿಗಳು ಇರುವುದನ್ನು ಗುರುತಿಸಿರುವರು.[೪] ಪ್ರೊ. ಲಕ್ಷ್ಮಣ್ ತೆಲಗಾವಿಯವರು 'ಮೌರ್ಯ ಮತ್ತು ಶಾತವಾಹನ' ಕೃತಿಯಲ್ಲಿಯೂ ಸಹ ಈ ವಿವರಗಳನ್ನು ನೀಡಿರುತ್ತಾರೆ.[೫] ೧೯೯೭ರಲ್ಲಿ ಇತಿಹಾಸ ದರ್ಶನದಲ್ಲಿ ಪ್ರಕಟವಾದ ಎಸ್.ವೈ. ಸೋಮಶೇಖರ ಅವರ ಲೇಖನವೊಂದರಲ್ಲಿ ಆಕನೂರು ಗ್ರಾಮದ ಬಳಿ ಆದಿ ಇತಿಹಾಸದ ಮಾನವನಕುರುಹುಗಳನ್ನು ಪತ್ತೆಹಚ್ಚಿದ್ದಾರೆ.[೬] ಕೆ. ಬಿ. ಶಿವತಾರಕರ ಕೃತಿಯಲ್ಲಿ ಗುರುತಿಸಿದ ನೆಲೆಗಳನ್ನೆ ಇವರು ಪರಿಚಯಿಸಿರುವರು. ಈ ಮೊದಲು ದಕ್ಷಿಣಭಾರತದಲ್ಲಿ ಈ ಪುರಾತತ್ವ ನೆಲೆಗಳನ್ನು ಅಧ್ಯಯನ ಮಾಡಿದವರು ರಾಬರ್ಟ್ ಬ್ರೂಸ್‌ಫುಟ್. ನಂತರ ಎಂ. ಎಚ್. ಕೃಷ್ಣರವರು ಭದ್ರಾವತಿ ಮತ್ತು ಚಿತ್ರದುರ್ಗಗಳಲ್ಲಿ ನಡೆಸಿದ ಸಂಶೋಧನೆಯಲ್ಲಿ ಹಲವು ತಾಮ್ರದ ಮೀನು ಕೊಕ್ಕೆಗಳು, ಕಬ್ಬಿಣದ ಸರಪಳಿಯ ಚೂರುಗಳು ಮುಂತಾದವು ದೊರೆತಿವೆ ಎಂಬ ವಿವರಗಳನ್ನು ನೀಡುವರು.[೭] ಆದರೆ ಚಿತ್ರದುರ್ಗದ ಯಾವ ಪ್ರದೇಶದಲ್ಲಿ ದೊರೆತಿವೆ ಎಂಬುದನ್ನು ಸ್ಪಷ್ಟಪಡಿಸಿಲ್ಲ. ಇವು ಹೊಸ ಶಿಲಾಯುಗದ ನೆಲೆಗಳು ಎಂದು ಹೇಳಬಹುದು. ಬಳ್ಳಾರಿ ಪ್ರದೇಶವನ್ನು ಅಧ್ಯಯನ ಮಾಡಿದ ಮಹದೇವ, ಸುಬ್ಬಣ್ಣ ರೈ ಮತ್ತು ಮಾಧವ ಪೆರಾಜೆಯವರು ಶಿಲಾಯುಗದ ಮಾನವನು ಪ್ರೋಟೋ ಅಸ್ಟ್ರಾಲಾಯಿಡ್ ಮತ್ತು ಮೆಡಿಟೇರಿಯನ್ ಜನಾಂಗಕ್ಕೆ ಸೇರಿದವರೆಂದು ತಿಳಿಸುತ್ತಾರೆ. ಆದರೆ ಈ ಬಗ್ಗೆ ಅಧ್ಯಯನ ಮಾಡಿದ ಚರಿತ್ರೆಕಾರರು ದಾವಣಗೆರೆ ಪ್ರದೇಶದಲ್ಲಿ ಶಿಲಾಯುಗದ ಮಾನವನು ಯಾವ ಜನಾಂಗಕ್ಕೆ ಸೇರಿದವರೆಂದು ತಿಳಿಸಿಲ್ಲವೆಂದು ಹೇಳಬಹುದು. ಬಳ್ಳಾರಿ, ಚಿತ್ರದುರ್ಗ, ಕೋಲಾರ, ಶಿವಮೊಗ್ಗ, ರಾಯಚೂರು, ಬಿಜಾಪರ ಮುಂತಾದ ನೆಲೆಗಳಲ್ಲಿ ನೆಲೆಸಿದ ಶಿಲಾಯುಗದ ಮಾನವನು ಮೇಲಿನವರು ವಿವರಿಸಿದಂತೆ ಮೆಡಿಟೇರಿಯನ್ ಜನಾಂಗಕ್ಕೆ ಸೇರಿದವರೆಂದು ಹೇಳಬಹುದು.

ಪುರಾಣಕಾಲ

ಆದಿ ಮಾನವನ ಕಾಲದ ನೆಲೆಗಳು ದಾವಣಗೆರೆ ಪ್ರದೇಶದಲ್ಲಿ ದೊರೆತಿವೆ. ಈ ಹಿನ್ನೆಲೆಯಲ್ಲಿ ದಾವಣಗೆರೆ ಪ್ರದೇಶವು ಪುರಾಣ ಪ್ರಸಿದ್ಧಿಯನ್ನು ಪಡೆದಿತ್ತು. ದಾವಣಗೆರೆ ಪ್ರದೇಶದಡಿಯಲ್ಲಿ ಬರುವ ಹರಿಹರ ಪುರಾಣ ಪ್ರದೇಶವೆಂದು ಗುರುತಿಸಿಕೊಂಡಿದೆ. ಈ ಹಿಂದೆ ಚಿತ್ರದುರ್ಗ ಜಿಲ್ಲೆಯಲ್ಲಿದ್ದ ಹರಿಹರ ಪ್ರಸ್ತುತ ದಾವಣಗೆರೆ ಜಿಲ್ಲೆಗೆ ಸೇರಿದೆ. ಪುರಾಣ ಪ್ರಸಿದ್ಧಿಗೆ ಹೆಸರಾದ ಹರಿಹರ ಪ್ರದೇಶದ ಬಗ್ಗೆ ಚಿತ್ರದುರ್ಗ ಗ್ಯಾಸೆಟಿಯರ್ ಹಾಗೂ ದಿ ಎನ್‌ಸೈಕ್ಲೋಪಿಡಿಕ್ ಗ್ಯಾಸೆಟಿಯರ್ ಆಫ್ ಇಂಡಿಯಾದಲ್ಲಿ ವಿವರ ದೊರೆಯುತ್ತದೆ. ಅಸುರ ಎಂಬ ಪದವು ಹರಿಹರ ಶಬ್ದದೊಂದಿಗೆ ಸಮ್ಮಿಳಿತಗೊಂಡಿದೆ. ಪುರಾಣದ ಪ್ರಕಾರ ಗುಹಾಸುರನೆಂಬ ರಾಕ್ಷಸ ಹರಿಹರದಲ್ಲಿ ವಾಸವಾಗಿದ್ದನು. ಇವನಿಂದ ಕಿರುಕುಳಕ್ಕೆ ಒಳಗಾದ ದೇವತೆಗಳು ಹರಿಹರರಲ್ಲಿ ಮೊರೆಯಿಟ್ಟರು. ಆಗ ಹರಿಹರರು ಒಂದಾಗಿ ದೈತ್ಯ ಗುಹಾಸುರನನ್ನು ಸಂಹಾರ ಮಾಡಿದರು. ಅಂದಿನಿಂದ ಹರಿಹರದಲ್ಲಿ ವಾಸಮಾಡಿದರು. ನಂತರ ಗುಹಾಕ್ಷೇತ್ರ ಎಂಬ ಹೆಸರಿಗೆ ಬದಲಾಗಿ ಹರಿಹರ ಎಂದು ಪ್ರಸಿದ್ಧಿ ಪಡೆಯಿತು.[೮] 'ಚಂದ್ರವಳ್ಳಿ ಮತ್ತು 'ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು' ಕೃತಿಯಲ್ಲಿ ಈ ವಿವರಣೆಯನ್ನು ಗಮನಿಸಬಹುದಾಗಿದೆ. ಕಮಲದಾನಿ ಗುರುರಾಯರು ಅವರು ಹರಿಹರಕ್ಷೇತ್ರ ಮಹಾತ್ಮೆ ಕೃತಿಯಲ್ಲಿ ಹಾಗೂ ಫ್ರಾನ್ಸಿಸ್ ಡಿ ಕ್ಸೇವಿಯರ್‌ರವರು ಹರಿಹರ 'ಆರೋಗ್ಯಮಾತೆಯ ಸಂಕ್ಷಿಪ್ತ ಚರಿತ್ರೆ' ಕೃತಿಯಲ್ಲಿ ಈ ಅಂಶವನ್ನು ಕಾಣಬಹುದು. ನಂತರ ಟಿ. ಗಿರಿಜರವರು 'ದಾವಣಗೆರೆ ಇದು ನಮ್ಮ ಜಿಲ್ಲೆ' ಕೃತಿಯಲ್ಲಿಯೂ ಸಹ ತಿಳಿಸಿರುವರು. ಆದರೆ ಇವೆಲ್ಲಾ ಕೃತಿಗಳು ಗ್ಯಾಸೆಟಿಯರ್‌ಗಳನ್ನು ಆಧರಿಸಿ ರಚಿಸಿರುವುದು ತಿಳಿದು ಬರುತ್ತದೆ. ಈ ಆಧಾರಗಳನ್ನು ಇಟ್ಟುಕೊಂಡು ದಾವಣಗೆರೆ ಪ್ರದೇಶವನ್ನು ಪುರಾಣ ಕಾಲದ ಹರಿಹರ ಕ್ಷೇತ್ರವಾಗಿತ್ತು ಎಂದು ಅಭಿಪ್ರಾಯ ಪಡಬಹುದು. ಆದರೆ ಯಾವ ಕೃತಿಯಲ್ಲಿಯೂ ಸಹ ದಾವಣಗೆರೆ ಪ್ರದೇಶ ಹರಿಹರ ಕ್ಷೇತ್ರವಾಗಿತ್ತು ಎಂದು ಕಾಣಬರುವುದಿಲ್ಲ.

ದಾವಣಗೆರೆಯ ರಾಜಕೀಯ ಚರಿತ್ರೆಯನ್ನು ಮೊದಲು ಪರಿಚಯಿಸುವಂತಹವು ಮೌರ್ಯರ ಆಡಳಿತದಲ್ಲಿ ದೊರೆತ ಲಿಖಿತ ಆಧಾರಗಳಾಗಿವೆಯೆಂಬುದು ಗಮನಾರ್ಹ ಸಂಗತಿ. ಅಲ್ಲದೆ ಮೌರ್ಯರ ಆಡಳಿತದಲ್ಲಿ ದೊರೆತ ಲಿಖಿತ ಆಧಾರಗಳಲ್ಲಿ ದಾವಣಗೆರೆಯ ರಾಜಕೀಯ ಚರಿತ್ರೆಯನ್ನು ಮೊದಲು ಪರಿಚಯಿಸುವುದು ಗಮನಾರ್ಹ.

ಮೌರ್ಯರ ಚರಿತ್ರೆ

ಕ್ರಿ.ಪೂ. ೪ ನೇ ಶತಮಾನದ ಪೂರ್ವದಲ್ಲಿ ನಂದರನ್ನು ಮೂಲೆಗೊತ್ತಿ ನಂದರ ಕುಂತಳ ನಾಡನ್ನು ವಶಕ್ಕೆ ತೆಗೆದುಕೊಂಡು ಆಳ್ವಿಕೆ ನಡೆಸಿದರು ಎಂದು ಇತಿಹಾಸ ತಿಳಿಸುತ್ತದೆ. ಮುಖ್ಯವಾಗಿ ಪುರಾಣಗಳು ಕುಂತಳ ರಾಜ್ಯಕ್ಕೆ ನಂದರು ಅಧಿಪತಿಗಳಾಗಿದ್ದರೆಂದು ಮಹದೇವ, ಸುಬ್ಬಣ್ಣರೈ, ಮಾಧವ ಪೆರಾಜೆಯವರು ತಿಳಿಸಿದ್ದಾರೆ. ಆದರೆ ನಂದರು ದಾವಣಗೆರೆ ಪ್ರದೇಶದಲ್ಲಿ ಆಳ್ವಿಕೆ ನಡೆಸಿದರೆಂಬುದಕ್ಕೆ ಖಚಿತ ಆಕರಗಳಿಲ್ಲದಿರುವುದು ವ್ಯಕ್ತವಾಗುತ್ತದೆ. ಕ್ರಿ.ಪೂ. ೩೨೨ ರಲ್ಲಿ ನಂದರನ್ನು ಅಧಿಕಾರದಿಂದ ಕೆಳಗಿಳಿಸಿ ಚಂದ್ರಗುಪ್ತ ಮೌರ್ಯ ಮೌರ್ಯ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಕರ್ನಾಟಕವು ಮೌರ್ಯರ ಆಡಳಿತಕ್ಕೆ ಒಳಪಟ್ಟಿತ್ತು. ಚಂದ್ರಗುಪ್ತ ಮೌರ್ಯ ತನ್ನ ಅಂತಿಮ ದಿನಗಳಲ್ಲಿ ಜೈನಗುರುವಾದ ಭದ್ರಬಾಹುವಿನೊಂದಿಗೆ ಶ್ರವಣಬೆಳಗೊಳಕ್ಕೆ ಬಂದು ಸಲ್ಲೇಖನ ವ್ರತವನ್ನು ಆಚರಿಸಿದನು. ಇದನ್ನು ಕ್ರಿ.ಶ. ೯ ಮತ್ತು ೧೫ ನೇ ಶತಮಾನದ ಶಾಸನಗಳು ತಿಳಿಸುತ್ತವೆ. ದಾವಣಗೆರೆ ಪ್ರದೇಶದ ಸುತ್ತಮುತ್ತಲ ಜಿಲ್ಲೆಗಳಲ್ಲಿ ದೊರೆತಿರುವ ಶಾಸನಗಳನ್ನು ಆಧರಿಸಿ ದಾವಣಗೆರೆ ಪ್ರದೇಶ ಮೌರ್ಯರ ಆಳ್ವಿಕೆಗೆ ಒಳಪಟ್ಟಿತ್ತು ಎಂದು ತಿಳಿಯಬಹುದು. ಚಿತ್ರದುರ್ಗ ಜಿಲ್ಲೆಯಲ್ಲಿ ಕಾಣಬರುವ ಅಶೋಕನ ಶಾಸನ ನೆಲೆಗಳಾದ ಸಿದ್ದಾಪುರ, ಬ್ರಹ್ಮಗಿರಿ, ಪ್ರದೇಶಗಳಲ್ಲಿ ಇರುವುದನ್ನು 'ಚಿತ್ರದುರ್ಗ ಜಿಲ್ಲಾ ಗ್ಯಾಸೆಟಿಯರ್'ನಲ್ಲಿ ಗುರುತಿಸಲಾಗಿದೆ.[೯] ಈ ಮೊದಲು ಚಂದ್ರಗುಪ್ತ ಹಾಗೂ ಬಿಂದುಸಾರನ ಆಳ್ವಿಕೆಯ ಕುರಿತು ವಿವರ ನೀಡುವುದಲ್ಲದೆ ಜಿಲ್ಲೆಯಲ್ಲಿ ಮೌರ್ಯರ ಆಳ್ವಿಕೆಯಿದ್ದುದನ್ನು ಈ ಗ್ಯಾಸೆಟಿಯರ್ ದೃಢೀಕರಿಸುತ್ತದೆ. ಹಾಗೆಯೇ ಕ್ರಿ.ಪೂ. ೨೭೩ ರಲ್ಲಿ ಅಶೋಕ ಚಕ್ರವರ್ತಿ ಅಧಿಕಾರ ಪಡೆದು ಆಳ್ವಿಕೆ ನಡೆಸಿದನು. 'ಮೌರ್ಯ ಮತ್ತು ಶಾತವಾಹನ ಯುಗ' ಕೃತಿಯಲ್ಲಿ ಪ್ರೊ. ಲಕ್ಷ್ಮಣ್‌ತೆಲಗಾವಿಯವರು ಕರ್ನಾಟಕದಲ್ಲಿ ಅಶೋಕನ ಶಾಸನಗಳ ಒಟ್ಟು ಸಂಖ್ಯೆ ೧೪ ಮತ್ತು ೧೭ ಎಂಬ ವಿದ್ವಾಂಸರ ಭಿನ್ನಾಭಿಪ್ರಾಯವನ್ನು ಮಂಡಿಸುತ್ತಾ ಕರ್ನಾಟಕದ ಗುಲ್ಬರ್ಗ, ರಾಯಚೂರು, ಕೊಪ್ಪಳ, ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಗಳ ಕೆಲವು ಪ್ರದೇಶಗಳು ಮೌರ್ಯರ ನೇರ ಆಳ್ವಿಕೆಗೆ ಒಳಪಟ್ಟಿದ್ದವು ಎಂದು ತಿಳಿಸಿರುವರು.[೧೦] ಹೆಚ್. ವಿ. ಶ್ರೀನಿವಾಸ್ ಮತ್ತು ಆರ್. ರಾಮಕೃಷ್ಣನ್ ಅವರು ಸಮಗ್ರ ಕರ್ನಾಟಕ ಚರಿತ್ರೆಯಲ್ಲಿ ಕರ್ನಾಟಕದಲ್ಲಿ ದೊರೆತ ಅಶೋಕನ ಶಾಸನಗಳ ಒಟ್ಟು ಸಂಖ್ಯೆ ೧೬ ಎಂದು ತಿಳಿಸುತ್ತ ಚಿತ್ರದುರ್ಗ ಜಿಲ್ಲೆಯ ಜಟಿಂಗರಾಮೇಶ್ವರ, ಬ್ರಹ್ಮಗಿರಿ, ಸಿದ್ದಾಪುರಗಳಲ್ಲಿ ಶಾಸನಗಳು ದೊರೆತಿರುವುದನ್ನು ಖಚಿತ ಪಡಿಸಿರುವರು.[೧೧] ಈ ವಿವರಗಳಿಂದ ದಾವಣಗೆರೆ ಪ್ರದೇಶ ಮೌರ್ಯ ಆಳ್ವಿಕೆಗೆ ಒಳಪಟ್ಟಿತ್ತು ಎಂಬುದನ್ನು ಡಾ. ಎಂ. ವಿ. ಶ್ರೀನಿವಾಸ್, ಪ್ರೊ. ಲಕ್ಷ್ಮಣ್‌ತೆಲಗಾವಿಯವರ ಸಂಪಾದಿತ 'ಚಂದ್ರವಳ್ಳಿ' ಕೃತಿಯಲ್ಲಿ ಎಂ. ವಿ. ಶ್ರೀನಿವಾಸ್ ಜಗಳೂರು ತಾಲ್ಲೂಕಿನ 'ಅಸಗೋಡು', 'ಅಶೋಕ ಪಟ್ಟಣ'ವಾಗಿತ್ತೆಂದು ಖಚಿತಪಡಿಸಿರುವರು.[೧೨] ಬ್ರಹ್ಮಗಿರಿಯಲ್ಲಿ ದೊರೆತ ಅಶೋಕನ ಶಾಸನದಿಂದ ಚನ್ನಗಿರಿ ಪ್ರಾಂತ್ಯವು ಮೌರ್ಯರ ಸಾಮ್ರಾಜ್ಯಕ್ಕೆ ಸೇರಿತ್ತು ಎಂದು ಚನ್ನಗಿರಿ ತಾಲ್ಲೂಕಿನ ತರಳಬಾಳು ಹುಣ್ಣಿಮೆ ಸ್ಮರಣಸಂಚಿಕೆಯಲ್ಲಿ (ಸಿರಿಗೆರೆ ಮಠ ನಡೆಸುವ) ವಿವರ ಸಿಗುತ್ತದೆ.

ಹೆಚ್. ತಿಪ್ಪೇಸ್ವಾಮಿಯವರು 'ದಾವಣಗೆರೆ ಜಿಲ್ಲೆಯ ದೇವಾಲಯಗಳು' ಎಂಬ ಪಿಎಚ್.ಡಿ. ಮಹಾಪ್ರಬಂಧದಲ್ಲಿ ದಾವಣಗೆರೆ ಪ್ರದೇಶದ ಅಸಗೋಡು, ದಾವಣಗೆರೆ ಸಮೀಪದ ಶಾಮನೂರು, ಬೇತೂರು ಹಾಗೂ ಲೋಕಿಕೆರೆಯಲ್ಲಿ ಬೌದ್ಧರಿಗೆ ಸಂಬಂಧಿಸಿದ ಅವಶೇಷಗಳಿರುವುದನ್ನು ತಿಳಿಸಿರುವರು.[೧೩] ಸಂಶೋಧಕ ಡಾ. ವಿರೂಪಾಕ್ಷಿ ಪೂಜಾರಹಳ್ಳಿಯವರು ತಮ್ಮ 'ಚಿನ್ನಹಗರಿ ಸಿರಿ' ಕೃತಿಯಲ್ಲಿ ದಾವಣಗೆರೆಯ ಅಣಜಿ ಗ್ರಾಮದ ಚರಿತ್ರೆ ಕುರಿತು ವಿವರ ನೀಡುತ್ತಾ ಅಣಜಿ ಗ್ರಾಮ ಮೌರ್ಯರ ಕಾಲಕ್ಕೆ ಬೌದ್ಧ ನೆಲೆಯಾಗಿರಬೇಕೆಂದು ಅಭಿಪ್ರಾಯಿಸುವರು.[೧೪] ಈ ರೀತಿ ಹಲವು ಅಧ್ಯಯನಗಳ ಮೂಲಕ ದಾವಣಗೆರೆ ಪ್ರದೇಶದಲ್ಲಿ ಮೌರ್ಯರಿಗೆ ಸಂಬಂಧಿಸಿದಂತೆ ಹೆಚ್ಚಿನ ಆಕರಗಳು ದೊರಕಿರದಿದ್ದರೂ ಸಹ ಸುತ್ತಮುತ್ತಲ ಜಿಲ್ಲೆಗಳ ಪ್ರದೇಶಗಳಲ್ಲಿ ದೊರೆತ ಆಕರಗಳಿಂದ ದಾವಣಗೆರೆ ಪ್ರದೇಶ ಮೌರ್ಯರ ಆಳ್ವಿಕೆಗೆ ಒಳಪಟ್ಟಿತ್ತು ಎಂದು ತಿಳಿಯಬಹುದಾಗಿದೆ.

ಸೂರ್ಯನಾರಾಯಣ ರಾವ್‌ರವರು 'ಮರೆಯಲಾಗದ ಮಹಾಸಾಮ್ರಾಜ್ಯ' ಕೃತಿಯಲ್ಲಿ ದಕ್ಷಿಣ ಭಾರತ ಮೌರ್ಯರ ಆಡಳಿತಕ್ಕೆ ಒಳಪಟ್ಟಿತ್ತೇ ಎಂಬ ಪ್ರಶ್ನೆಯನ್ನು ಮುಂದಿಡುತ್ತಾರೆ. ಏಕೆಂದರೆ ಅಶೋಕ ತನ್ನ ಶಾಸನಗಳಲ್ಲಿ ದಕ್ಷಿಣದಲ್ಲಿ ಸ್ತೂಪಗಳನ್ನು ನಿರ್ಮಿಸುವಾಗ ಸ್ಥಳೀಯ ಅರಸರ ನೆರವನ್ನು ಪಡೆದನು. ಹಾಗೂ ಸ್ಥಳೀಯ ಅರಸರು

ಸ್ವತಂತ್ರರಾಗಿದ್ದರು ಎಂಬ ವಾದವನ್ನು ಮಂಡಿಸುತ್ತಾರೆ.[೧೫] ಆದ್ದರಿಂದ ದಕ್ಷಿಣ ಭಾರತ ಅಶೋಕನ ಆಳ್ವಿಕೆಗೆ ಒಳಪಟ್ಟಿತ್ತೇ ಅಥವಾ ದಕ್ಷಿಣ ರಾಜಮನೆತನಗಳಾದ ಪಾಂಡ್ಯ ಮತ್ತು ಚೇಳರ ಆಳ್ವಿಕೆಗೆ ಒಳಪಟ್ಟಿತ್ತೇ ಎಂಬುದು ಸ್ಪಷ್ಟವಾಗಿ ತಿಳಿದು ಬರುವುದಿಲ್ಲ. ಇದರ ಬಗೆಗೆ ಬಹುತೇಕ ಎಲ್ಲಾ ಇತಿಹಾಸಕಾರರು ಮತ್ತು ವಿದ್ವಾಂಸರು ಮೌನತಾಳಿದ್ದಾರೆ.

ಶಾತವಾಹನರು

ಮೌರ್ಯರ ನಂತರ ದಕ್ಷಿಣ ಭಾರತದಲ್ಲಿ ಶಾತವಾಹನರು ಏಳಿಗೆಗೆ ಬಂದರು. ಇವರು ಈ ಭಾಗದಲ್ಲಿ ಸುಮಾರು ೪೫೦ ವರ್ಷಗಳ ಕಾಲ ಆಳ್ವಿಕೆ ನಡೆಸಿರುವರು. ಶಾತವಾಹನರು ಮಹಾರಾಷ್ಟ್ರದ ಪೈಠಾಣ್ ಅಥವಾ ಪ್ರತಿಷ್ಠಾನಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಅಧಿಕಾರಕ್ಕೆ ಬಂದರು. ಶಾತವಾಹನರ ಪ್ರಮುಖ ಅರಸರೆಂದರೆ ಕುಂತಲ ಶಾತಕರ್ಣಿ, ೧೭ನೇ ಹಾಲ, ಗೌತಮಿಪುತ್ರ ಶಾತಕರ್ಣಿ ಪ್ರಮುಖರಾಗಿರುವರು. ಶಾತವಾಹನರ ಮೂಲದ ಬಗೆಗೆ ವಿದ್ವಾಂಸರಲ್ಲಿ ಅನೇಕ ಭಿನ್ನಾಭಿಪ್ರಾಯಗಳಿವೆ. ಕೆಲವು ಇತಿಹಾಸಕಾರರು ಕರ್ನಾಟಕವೇ ಶಾತವಾಹನರ ಮೂಲವೆಂದು ಅಭಿಪ್ರಾಯ ಪಟ್ಟಿರುವರು. ಗ್ಯಾಸೆಟಿಯರ್‌ನಲ್ಲಿ ದೊರೆಯುವ ಮಾಹಿತಿಯಿಂದ ಬಳ್ಳಾರಿ ಪ್ರದೇಶ ಶಾತವಾಹನರ ಆಡಳಿತದ ಒಂದು ಭಾಗವಾಗಿತ್ತು ಎಂದು ತಿಳಿದುಬರುತ್ತದೆ. ಹಾಗೆ ಮಹಾರಾಷ್ಟ್ರ, ಕುಂತಲ ಮತ್ತು ಆಂಧ್ರಪ್ರದೇಶದವರೆಂದೂ ಸಹ ಗ್ಯಾಸೆಟಿಯರ್‌ನಲ್ಲಿ ಉಲ್ಲೇಖಿಸಲಾಗಿದೆ.[೧೬] ಚಂದ್ರವಳ್ಳಿ ಕೃತಿಯಲ್ಲಿ ಎಚ್. ಆರ್. ರಘುನಾಥ್ ಭಟ್ ಅವರು ಸಹ ಶಾತವಾಹನರು ತಮ್ಮನ್ನು ಕುಂತಲಸ್ವಾಮಿಗಳೆಂದು ಕರೆದುಕೊಂಡಿದ್ದುಂಟು ಎಂದಿರುವರು. ಇವರಿಗೆ ಆಂಧ್ರರು, ಆಂಧ್ರಭೃತ್ಯರು, ಶಾತಕರ್ಣಿಗಳು ಎಂಬ ಹೆಸರು ರೂಢಿಯಲ್ಲಿದೆ ಎಂದು ಉಲ್ಲೇಖಿಸಿರುವರು. ಹಾಗೆಯೇ ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿ ಮತ್ತು ಬ್ರಹ್ಮಗಿರಿ ಪ್ರದೇಶಗಳು ಇವರ ಆಡಳಿತದ ಭಾಗಗಳಾಗಿದ್ದವು. ಚಂದ್ರವಳ್ಳಿಯಲ್ಲಿ ವಶಿಷ್ಠಪುತ್ರ ಪುಲುಮಾಯಿಯ ನಾಣ್ಯ ಸಹ ದೊರಕಿದೆ. ಚಂದ್ರವಳ್ಳಿಯನ್ನು ಇ. ಜೆ. ಕ್ಯಾಪ್ಟನ್, ಆರ್. ನರಸಿಂಹಾಚಾರ್, ಡಾ. ಎಂ. ಎಚ್. ಕೃಷ್ಣ ಇವರು ಪ್ರಾಚ್ಯವಸ್ತು ವಿಷಯಗಳ ಕುರಿತು ಅಧ್ಯಯನ ನಡೆಸಿರುವರು.[೧೭] 'ಮೌರ್ಯ ಮತ್ತು ಶಾತವಾಹನರ ಯುಗ' ಕೃತಿಯಲ್ಲಿ ಕರ್ನಾಟಕದ ಪಶ್ಚಿಮದಲ್ಲಿ ಬನವಾಸಿ ಮತ್ತು ಪೂರ್ವದಲ್ಲಿ ಸನ್ನತಿಗಳು ಆಡಳಿತ ಕೇಂದ್ರಗಳಾಗಿದ್ದವು. ಚಿತ್ರದುರ್ಗದ ಚಂದ್ರವಳ್ಳಿ ಮತ್ತು ಬೆಳಗಾವಿಯ ವಡಗಾಂವ್-ಮಾಧವಪುರಗಳು ಉಪಕೇಂದ್ರಗಳಾಗಿದ್ದವು ಎಂದು ತಿಳಿಸುತ್ತಾ ಚಿತ್ರದುರ್ಗ ಪ್ರದೇಶವನ್ನು ತಮ್ಮ ಆಡಳಿತ ವ್ಯಾಪ್ತಿಗೆ ಸೇರಿಸಿಕೊಂಡಿದ್ದರೆಂದು[೧೮] ಉಲ್ಲೇಖಿಸಲಾಗಿದೆ. ಎಸ್. ವೆ. ಸೋಮಶೇಖರ್‌ರವರು ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕಿನ ಆಕನೂರು ಗ್ರಾಮದ ಬಳಿ ಶಾತವಾಹನ ಕಾಲದ ಕುರುಹುಗಳನ್ನು ಪತ್ತೆಹಚ್ಚಿರುವರು. ಹೆಚ್. ತಿಪ್ಪೇಸ್ವಾಮಿಯವರು ತಮ್ಮ ಪಿಎಚ್. ಡಿ. ಮಹಾಪ್ರಬಂಧದಲ್ಲಿ ಆಕನೂರು ಗ್ರಾಮದಲ್ಲಿ ಸಿಕ್ಕಿರುವ ಪ್ರಾಚೀನ ಅವಶೇಷಗಳನ್ನು ಹಾಗೂ ಹೊನ್ನಾಳಿ ತಾಲ್ಲೂಕಿನ ಬೆಳಗುತ್ತಿಯಲ್ಲಿ ದೊರೆತ ಅವಶೇಷಗಳಿಂದ ಶಾತವಾಹನ ಕಾಲಕ್ಕೆ ಸೇರಿದವೆಂದು ತಿಳಿಸಿರುವರು.[೧೯]

ಒಟ್ಟಿನಲ್ಲಿ ದಾವಣಗೆರೆ ಜಿಲ್ಲೆ ಶಾತವಾಹನರ ಆಳ್ವಿಕೆಗೆ ಒಳಪಟ್ಟಿತ್ತು. ಕ್ರಿ.ಶ. ೨೦೦ ರ ತರುವಾಯ ಈ ಜಿಲ್ಲೆಯ ಚಂದ್ರವಳ್ಳಿಯನ್ನು ಅವರು ವಾಸಸ್ಥಾನವನ್ನಾಗಿ ಮಾಡಿಕೊಂಡಿರಬಹುದು. ಶಾತವಾಹನರ ಸಾಂಸ್ಕೃತಿಕ ಅವಶೇಷಗಳು ದೊರೆತ ಪ್ರಮಾಣ ನೋಡಿದರೆ ಇದು ಅವರ ರಾಜಧಾನಿಗಳಲ್ಲಿ ಒಂದಾಗಿತ್ತೆಂದು 'ಚಂದ್ರವಳ್ಳಿ'ಕೃತಿಯಲ್ಲಿ ಎಚ್. ಆರ್. ರಘುನಾಥ್ ಭಟ್ ಅವರು ತಿಳಿಸಿರುವರು.[೨೦] ಪ್ರಸ್ತುತ ದಾವಣಗೆರೆ ಪ್ರದೇಶದಲ್ಲಿ ಶಾತವಾಹನರ ಕುರುಹುಗಳು ಅಲ್ಪ ಪ್ರಮಾಣದಲ್ಲಿ ದೊರೆತಿದ್ದು, ಹಾಗೆ ಚಿತ್ರದುರ್ಗ ಜಿಲ್ಲೆಯಲ್ಲಿ ದೊರೆತ ಸಾಂಸ್ಕೃತಿಕ ಅವಶೇಷಗಳನ್ನು ಆಧಾರವಾಗಿಟ್ಟುಕೊಂಡು ಶಾತವಾಹನರ ಆಳ್ವಿಕೆ ಹಿಂದೆ ಈಗಿನ ದಾವಣಗೆರೆಯ ಕೆಲ ಸ್ಥಳಗಳಿಗೂ ವಿಸ್ತರಿಸಿತ್ತು ಎಂದು ಹೇಳಬಹುದು. ಒಂದು ಅಂಶವೆಂದರೆ ಶಾತವಾಹನರ ಕಾಲಕ್ಕೆ ಸಂಬಂಧಿಸಿದಂತೆ ದಾವಣಗೆರೆ ಪ್ರದೇಶದಲ್ಲಿ ಇನ್ನೂ ಹೆಚ್ಚು ಕುರುಹುಗಳಿರುವ ಸಾಧ್ಯತೆ ಇದೆ. ಆದ್ದರಿಂದ ಇತಿಹಾಸಕಾರರು ಸಂಶೋಧನೆಯಿಂದ, ಉತ್ಖನನದಿಂದ ಶಾತವಾಹನರ ಚರಿತ್ರೆ ರಚನೆಗೆ ಪೂರಕವಾದ ಕಾರ್ಯ ಕೈಗೊಳ್ಳಬೇಕಾಗಿದೆ.

ಕದಂಬರು

ಕದಂಬರು ಬನವಾಸಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದ್ದರಿಂದ ಇವರನ್ನು ಬನವಾಸಿ ಕದಂಬರು ಎಂದು ಕರೆಯಲಾಗಿದೆ. ಕದಂಬ ಸಾಮ್ರಾಜ್ಯದ ಸ್ಥಾಪಕ ಮಯೂರಶರ್ಮ. ಕದಂಬರು ಕನ್ನಡದ ಮೊದಲ ರಾಜವಂಶೀಯರೆಂದು ಕರೆಯಲಾಗಿದೆ. ಕದಂಬರ ಅರಸರಲ್ಲಿ ಮಯೂರಶರ್ಮ, ಕಾಕುತ್ಸವರ್ಮ, ಕೃಷ್ಣವರ್ಮ, ಮೃಗೇಶವರ್ಮ, ಹರಿವರ್ಮ ಮುಂತಾದವರು ಪ್ರಮುಖರೆನಿಸಿರುವರು. ಹಿಂದಿನ ಚಿತ್ರದುರ್ಗ ಜಿಲ್ಲೆಯ ದಾವಣಗೆರೆ ತಾಲ್ಲೂಕಿನ 'ಅಣಜಿ' ಗ್ರಾಮದಲ್ಲಿ ದೊರೆತಿರುವ ಶಿವಸ್ಕಂಧವರ್ಮನ ಶಾಸನ ಪ್ರಮುಖವಾಗಿದೆ.[೨೧] ಇದೇ ವಿಷಯವು 'ಚಿತ್ರದುರ್ಗ ಡಿಸ್ಟ್ರಿಕ್ಟ್ ಗ್ಯಾಸೆಟಿಯರ್'ನಲ್ಲಿ ಹಾಗೂ 'ದಿ ಎನ್‌ಸೈಕ್ಲೋಪಿಡಿಕ್ ಡಿಸ್ಟ್ರಿಕ್ಟ್ ಗ್ಯಾಸೆಟಿಯರ್ ಆಫ್ ಇಂಡಿಯಾ'ದಲ್ಲಿ ಉಲ್ಲೇಖವಾಗಿರುವುದನ್ನು ಕಾಣಬಹುದು. ಹಾಗೇ 'ಚಂದ್ರವಳ್ಳಿ' ಕೃತಿಯಲ್ಲಿ ಮತ್ತು ಡಾ. ವಿರೂಪಾಕ್ಷಿ ಪೂಜಾರಹಳ್ಳಿಯವರ 'ಚಿನ್ನಹಗರಿ ಸಿರಿ' ಕೃತಿಯಲ್ಲಿ, ಹೆಚ್. ತಿಪ್ಪೇಸ್ವಾಮಿಯವರ ಪಿಎಚ್.ಡಿ. ಮಹಾಪ್ರಬಂಧ'ದಲ್ಲಿ ಉಲ್ಲೇಖವಾಗಿರುವುದನ್ನು ಗಮನಿಸಬಹುದು.ಇದಕ್ಕೆ ಮೊದಲು ಚಂದ್ರವಳ್ಳಿಯ ಬಳಿ ದೊರೆತ ಶಾಸನದಿಂದ ಕದಂಬರ ಆರಂಭದ ಇತಿಹಾಸವನ್ನು ತಿಳಿಸುತ್ತದೆ. ಇದನ್ನು 'ಚಂದ್ರವಳ್ಳಿ' ಕೃತಿಯಲ್ಲಿ ಕು. ಎಂ. ಎಚ್. ಉಷಾ ಅವರು ವ್ಯಕ್ತಪಡಿಸಿರುವರು. ಅಣಜಿಯಲ್ಲಿನ ಶಾಸನವು ನೊಣಕ್ಕರಸ ಪಲ್ಲವನಿಗೂ, ಕದಂಬ ಅರಸ ಕೃಷ್ಣವರ್ಮನಿಗೂ ತುಮುಲ ಯುದ್ಧ ನಡೆದು ಆ ಯುದ್ಧದಲ್ಲಿ ಕೃಷ್ಣವರ್ಮನ ಸೈನ್ಯ ಸಂಪೂರ್ಣವಾಗಿ ಸೋತುದುದನ್ನು ಶಾಸನ ವರ್ಣಿಸುತ್ತದೆ.[೨೨] ಇದನ್ನು ಎಂ. ಎಚ್. ಉಷಾ ಅವರು ಚಂದ್ರವಳ್ಳಿ ಕೃತಿಯಲ್ಲಿ ಮತ್ತು ಡಾ. ವಿರೂಪಾಕ್ಷಿ ಪೂಜಾರಹಳ್ಳಿಯವರು ತಮ್ಮ ಕೃತಿಯಲ್ಲಿ ಉಲ್ಲೇಖಿಸಿರುವರು. ಚಂದ್ರವಳ್ಳಿ ಕೃತಿಯಲ್ಲಿ ಪ್ರಸ್ತಾಪಿಸಿರುವ ಹಾಗೆ ದಾವಣಗೆರೆ ತಾಲ್ಲೂಕು ಕಾಶಿಪುರದಲ್ಲಿ ಮೂರು ಹಲಗೆಯುಳ್ಳ, ಸಿಂಹಲಾಂಛನವುಳ್ಳ ರವಿ ಮಹಾರಾಜನ ತಾಮ್ರ ಶಾಸನ ದೊರೆತಿರುವುದನ್ನು ತಿಳಿಸಿದೆ. ಈಗಿನ ದಾವಣಗೆರೆ ಜಿಲ್ಲೆಗೆ ಸೇರಿದ ಹರಪನಹಳ್ಳಿ ತಾಲ್ಲೂಕಿನ ಉಚ್ಚಂಗಿದುರ್ಗ ಕದಂಬರ ರಾಜ್ಯದ ಪೂರ್ವ ರಾಜಧಾನಿಯಾಗಿತ್ತು ಎಂದು ಗ್ಯಾಸೆಟಿಯರ್[೨೩], ಚಂದ್ರವಳ್ಳಿ, ಹೊಸಪೇಟೆ ತಾಲ್ಲೂಕು ದರ್ಶನ, ಹೆಚ್. ತಿಪ್ಪೇಸ್ವಾಮಿಯವರ ಪಿಎಚ್.ಡಿ. ಮಹಾಪ್ರಬಂಧ, ತರಳಬಾಳು ಹುಣ್ಣಿಮೆ ಸ್ಮರಣ ಸಂಚಿಕೆ, ಹರಾಳ ಮಹಬಲೇಶ್ವರವರ ಎಂ.ಫಿಲ್. ಪ್ರಬಂಧದಲ್ಲಿ ಉಲ್ಲೇಖಿಸಿದ ವಿವರಗಳೂ ಸಹ ದಾವಣಗೆರೆ ಪ್ರದೇಶ ಕದಂಬರ ನೇರ ಆಳ್ವಿಕೆಗೆ ಒಳಪಟ್ಟಿತ್ತೆನ್ನುವುದು ಖಚಿತಪಡುತ್ತದೆ. ದಾವಣಗೆರೆ ಜಿಲ್ಲೆಯ ಹರಿಹರದಲ್ಲಿ ೧೨ನೇ ಶತಮಾನದಲ್ಲಿ ಸೋಮನೃಪನೆಂಬ ಕದಂಬ ಅರಸನು ಆಳುತ್ತಿದ್ದನೆಂದು ಎಂದು ತಿಳಿಸುವ ಶಾಸನ ಲಭ್ಯವಿರುವುದನ್ನು ಚಂದ್ರವಳ್ಳಿ ಕೃತಿಯಲ್ಲಿ ವಿವರಿಸಲಾಗಿದೆ. ಹರಪನಹಳ್ಳಿ ತವುಡೂರಿನಲ್ಲಿ ಕದಂಬರ ಶಾಸನ ಇರುವುದನ್ನು ದಿ ಎನ್‌ಸೈಕ್ಲೋಪಿಡಿಕ್ ಡಿಸ್ಟ್ರಿಕ್ಟ್ ಗ್ಯಾಸೆಟಿಯರ್‌ನಲ್ಲಿ ಉಲ್ಲೇಖಿಸಲಾಗಿದೆ.[೨೪] ಹೀಗೆ ದಾವಣಗೆರೆ ಪ್ರದೇಶದಲ್ಲಿ ಕದಂಬರ ಚರಿತ್ರೆ ಕುರಿತಂತೆ ನಡೆಸಿದ ಅಧ್ಯಯನಗಳು ಸ್ಥಳೀಯ ಚರಿತ್ರೆಯೊಂದನ್ನು ಕಟ್ಟಿಕೊಡುವಲ್ಲಿ ಗಮನಾರ್ಹವಾದವುಗಳಾಗಿವೆ. ನಂತರ ಚಾಲುಕ್ಯರು ಬಾದಾಮಿಯಲ್ಲಿ ಪ್ರಾಬಲ್ಯಕ್ಕೆ ಬಂದು ಇವರನ್ನು ಅಧಿಕಾರದಿಂದ ಕೆಳಗಿಳಿಸಿದರು. ಆದರೂ ಸಹ ಕೆಲವು ಪ್ರದೇಶಗಳಲ್ಲಿ ಬೇರೆ ಅರಸರುಗಳ ಕಾಲದಲ್ಲಿ ಮಾಂಡಲಿಕರಾಗಿ ಮುಂದುವರೆದರು. ಕ್ರಿ.ಶ. ೩೮೭ ರ ಬಾಗಳಿ ಶಾಸನದ ಪ್ರಕಾರ ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಆಯ್ಯುವರ್ಮನು ಕೋಗಳಿಯಲ್ಲಿ ಆಳ್ವಿಕೆ ನಡೆಸಿದನು ಎಂದು ತಿಳಿದುಬರುತ್ತದೆ. ನಂತರ ಅವರು ಹಾನಗಲ್ಲು, ಗೋವೆಗಳಲ್ಲಿ ೧೦ನೇ ಶತಮಾನದಲ್ಲಿ ಆಳ್ವಿಕೆ ನಡೆಸಿದರು.[೨೫]

ಬಾದಾಮಿಚಾಲುಕ್ಯರು

ಕ್ರಿ.ಶ. ೫೪೩ ರಿಂದ ೭೫೩ ರವರೆಗೆ ಕರ್ನಾಟಕದಲ್ಲಿ ಆಳ್ವಿಕೆ ನಡೆಸಿದ ರಾಜಮನೆತನಗಳಲ್ಲಿ ಬಾದಾಮಿ ಚಾಲುಕ್ಯರ ಮನೆತನವು ಒಂದಾಗಿದೆ. ಇವರು ಸುಮಾರು ೨೦೦ ವರ್ಷಗಳ ಕಾಲ ಆಳ್ವಿಕೆ ನಡೆಸಿ ನಾಡಿನ ಸಂಸ್ಕೃತಿಗೆ ತಮ್ಮದೇ ಆದ ಕೊಡುಗೆಯನ್ನು ನೀಡಿರುವರು. ಕ್ರಿ.ಶ. ೫೪೩ ರ ಸುಮಾರಿಗೆ ಬಾದಾಮಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಅಧಿಕಾರಕ್ಕೆ ಬಂದರು. ಬಾದಾಮಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದ್ದರಿಂದ ಇವರನ್ನು ಬಾದಾಮಿ ಚಾಲುಕ್ಯರೆಂದು ಕರೆಯುವರು. ಕದಂಬರ ಸಾಮಂತರಾಗಿದ್ದ ಇವರು ಅವರ ಅವನತಿ

ನಂತರ ಸ್ವತಂತ್ರರಾಗಿ ಆಳ್ವಿಕೆ ನಡೆಸಿದರು. ಶಾಸನಗಳು, ಗ್ಯಾಸೆಟಿಯರ್‌ಗಳು ಹಾಗೂ ಎಲ್ಲಾ ಇತಿಹಾಸಕಾರರು ತಿಳಿಯಪಡಿಸಿರುವರಂತೆ ಜಯಸಿಂಹ ಚಾಲುಕ್ಯರ ಮೂಲಪುರುಷ. ನಂತರ ಮೊದಲನೆ ಪುಲಿಕೇಶಿ, ಕೀರ್ತಿವರ್ಮ, ಮಂಗಳೇಶ, ಇಮ್ಮಡಿ ಪುಲಿಕೇಶಿ, ಒಂದನೇ ವಿಕ್ರಮಾದಿತ್ಯ, ವಿನಯಾದಿತ್ಯ, ವಿಜಯಾದಿತ್ಯ, ಎರಡನೇ ವಿಕ್ರಮಾದಿತ್ಯ ಕೊನೆಗೆ ಎರಡನೇ ಕೀರ್ತಿವರ್ಮರು ಕ್ರಮಾನುಸಾರವಾಗಿ ಕರ್ನಾಟಕವನ್ನು ಆಳಿರುವರು. ಒಂದನೇ ಪುಲಿಕೇಶಿ, ಕೀರ್ತಿವರ್ಮ, ಮಂಗಳೇಶ ಮತ್ತು ಇಮ್ಮಡಿ ಪುಲಿಕೇಶಿ ಇವರಲ್ಲಿ ಶ್ರೇಷ್ಠ ಅರಸರಾಗಿದ್ದಾರೆ.

ದಾವಣಗೆರೆ ಪ್ರದೇಶ ಚಾಲುಕ್ಯರ ಆಳ್ವಿಕೆಗೆ ಒಳಪಟ್ಟಿತ್ತೆಂದು ಚಿತ್ರದುರ್ಗ, ಶಿವಮೊಗ್ಗ, ಬಳ್ಳಾರಿ ಡಿಸ್ಟ್ರಿಕ್ಟ್ ಗ್ಯಾಸೆಟಿಯರ್‌ಗಳು ತಿಳಿಯಪಡಿಸುತ್ತವೆ. ಆದರೆ ದಾಖಲಾತಿಗಳ ಅಲಭ್ಯತೆಯಿಂದ ಚಾಲುಕ್ಯರ ಯಾವ ಅರಸ ದಾವಣಗೆರೆ ಪ್ರದೇಶವನ್ನು ವಶಪಡಿಸಿಕೊಂಡು ಆಳ್ವಿಕೆ ನಡೆಸಿದ ಎಂದು ಖಚಿತವಾಗಿ ಹೇಳುವುದು ಕಷ್ಟ. ಬಾದಾಮಿ ಚಾಲುಕ್ಯರ ಕಾಲದಲ್ಲಿ ದಾವಣಗೆರೆ ಪ್ರದೇಶ ಅವರ ಆಳ್ವಿಕೆಗೆ ಒಳಪಟ್ಟಿತ್ತು ಎನ್ನುವುದರ ಬಗ್ಗೆ ಹರಿಹರದಲ್ಲಿ ಮತ್ತು ಚನ್ನಗಿರಿಯಲ್ಲಿ ದೊರೆತ ಶಾಸನಗಳು ಆಧಾರವಾಗಿವೆ ಎಂಬುದನ್ನು ಹೆಚ್. ತಿಪ್ಪೇಸ್ವಾಮಿಯವರು ಉಲ್ಲೇಖಿಸಿರುವರು.[೨೧] ಡಾ. ವಿರೂಪಾಕ್ಷಿ ಪೂಜಾರಹಳ್ಳಿ ಅವರು ದಾವಣಗೆರೆ ತಾಲ್ಲೂಕಿನ ಅಣಜಿ ಗ್ರಾಮ ಕದಂಬ, ಗಂಗ ನಂತರ ಬಾದಾಮಿ ಚಾಲುಕ್ಯರಿಗೆ ಸೇರಿತ್ತು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು.[೨೨] ಇದಕ್ಕೂ ಮೊದಲು ಸಿ. ಕೆ. ವೈ. ದೀಕ್ಷಿತ್ ರವರು ಚಿತ್ರದುರ್ಗ ಪ್ರದೇಶ ಬಾದಾಮಿ ಚಾಲುಕ್ಯರ ಆಳ್ವಿಕೆಗೆ ಸೇರಿತ್ತು ಎಂದು ಉಲ್ಲೇಖಿಸಿರುವರು. ಹಾಗೆ ಮುಂದುವರೆದು ಇಮ್ಮಡಿ ಪುಲಿಕೇಶಿಗೂ ಪಲ್ಲವರ ನರಸಿಂಹವರ್ಮನಿಗೂ ಯುದ್ಧ ನಡೆದು ಬಾದಾಮಿಯಲ್ಲಿ ಹೋರಾಡುತ್ತಲೆ ಪುಲಿಕೇಶಿ ವಿಧಿವಶನಾದನು. ನಂತರ ಒಂದನೇ ಪುಲಿಕೇಶಿ ಅಧಿಕಾರಕ್ಕೆ ಬಂದನೆಂದು ತಿಳಿಸುವರು. ಆದರೆ ಪುಲಿಕೇಶಿಯನ್ನು ಸೋಲಿಸಿ ನರಸಿಂಹವರ್ಮ ಬಾದಾಮಿ ಚಾಲುಕ್ಯರ ಸಾಮ್ರಾಜ್ಯವನ್ನು ಅಧೀನವಾಗಿಟ್ಟುಕೊಂಡು ಆಳಿದನು. ಅಂದರೆ ಈ ಪ್ರದೇಶ ಪಲ್ಲವರ ಆಳ್ವಿಕೆಗೆ ಒಳಪಟ್ಟಿತ್ತು ಎನ್ನುವುದು ಸ್ಪಷ್ಟ. ಆದರೆ ಈ ವಿಚಾರವನ್ನು ಇತಿಹಾಸಕಾರರು ಉಲ್ಲೇಖಿಸಿರುವುದಿಲ್ಲ. ಅಲ್ಲದೆ ಬಾದಾಮಿ ಕೆಲವು ಕಾಲ ಪಲ್ಲವರ ಆಳ್ವಿಕೆಗೂ ಸಹ ಒಳಪಟ್ಟಿರುವ ಸಂಭವವಿದೆ. ಕ್ರಿ.ಶ. ೭೫೩ ರಲ್ಲಿ ಚಾಲುಕ್ಯರ ಕೊನೆಯ ಅರಸನಾದ ೨ನೇ ಕೀರ್ತಿವರ್ಮನನ್ನು ರಾಷ್ಟ್ರಕೂಟರ ಅರಸನಾದ ದಂತಿದುರ್ಗನು ಮೂಲೆಗೊತ್ತಿ ರಾಷ್ಟ್ರಕೂಟ ಸಾಮ್ರಾಜ್ಯವನ್ನು ಸ್ಥಾಪಿಸಿದನು.

ಬಾದಾಮಿ ಚಾಲುಕ್ಯರ ಸಾಮ್ರಾಜ್ಯದ ಎಲ್ಲೆಯನ್ನು ಕುರಿತು ಕನ್ನಡ ವಿಶ್ವಕೋಶ ಸಂಪುಟ ೪ ರಲ್ಲಿ ಉತ್ತರದಲ್ಲಿ ನರ್ಮದಾ, ದಕ್ಷಿಣಕ್ಕೆ ಕಾವೇರಿ, ಪೂರ್ವದಲ್ಲಿ ಕರ್ನೂಲು, ಗುಂಟೂರು ಮತ್ತು ನೆಲ್ಲೂರು ಪ್ರದೇಶಗಳು, ಪಶ್ಚಿಮದಲ್ಲಿ ಅರಬ್ಬಿ ಸಮುದ್ರಗಳಿಂದ ಕೂಡಿತ್ತು.[೨೩] ಎಂದು ಉಲ್ಲೇಖಿಸಲಾಗಿದೆ. ಈ ವಿವರದಿಂದ ದಾವಣಗೆರೆ ಪ್ರದೇಶ ಸಹ ಬಾದಾಮಿ ಚಾಲುಕ್ಯ ಸಾಮ್ರಾಜ್ಯದ ಆಡಳಿತ ವ್ಯಾಪ್ತಿಗೆ ಸೇರಿತ್ತು ಎಂದು ನಿರ್ಧರಿಸಬಹುದು.

ರಾಷ್ಟ್ರಕೂಟರು

ಬಾದಾಮಿ ಚಾಲುಕ್ಯರ ಸಾಮಂತರಾಗಿದ್ದ ರಾಷ್ಟ್ರಕೂಟರು ಕ್ರಿ.ಶ. ೭೫೩ ರ ಸುಮಾರಿಗೆ ಅಸಮರ್ಥರಾದ ಚಾಲುಕ್ಯರನ್ನು ಸೋಲಿಸಿ ಅಧಿಕಾರಕ್ಕೆ ಬಂದರು. ಇವರ ರಾಜಧಾನಿ ಮಳಖೇಡ ಅಥವಾ ಮಾನ್ಯಖೇಟ. ಇವರನ್ನು ಮಾನ್ಯಖೇಟದ ರಾಷ್ಟ್ರಕೂಟರೆಂದು ಕರೆಯುವರು. ರಾಷ್ಟ್ರಕೂಟರ ಸಾಮ್ರಾಜ್ಯದ ಸ್ಥಾಪಕ ದಂತಿದುರ್ಗನೆಂದು ತಿಳಿಯುತ್ತದೆ. ಈತನು ಚಾಲುಕ್ಯರ ಕೊನೆಯ ಅರಸ ಎರಡನೇ ಕೀರ್ತಿವರ್ಮನನ್ನು ಸೋಲಿಸಿ ಇತಿಹಾಸದಲ್ಲಿ ಹೊಸ ರಾಜಮನೆತನ ಸ್ಥಾಪಿಸಿದ. ಪ್ರಮುಖ ಅರಸರುಗಳಲ್ಲಿ ಧ್ರುವ, ಮೂರನೇ ಗೋವಿಂದ, ಅಮೋಘವರ್ಷ ನೃಪತುಂಗ ಮತ್ತು ಮೂರನೇ ಇಂದ್ರ ಪ್ರಮುಖರು. ರಾಷ್ಟ್ರಕೂಟರ ಅರಸರಾದ ಗೋವಿಂದನು ನೊಳಂಬವಾಡಿ ೩೨೦೦೦ ವನ್ನು ಜಯಿಸುವುದರೊಂದಿಗೆ ಚಿತ್ರದುರ್ಗ ಪ್ರದೇಶದಲ್ಲಿ ಆಡಳಿತವನ್ನು ಸ್ಥಾಪಿಸಿದರೆಂದು ಸೀತಾರಾಮ್‌ಜಹಗೀರ್‌ದಾರರು ತಿಳಿಯಪಡಿಸುವರು.[೨೪] ಇದಕ್ಕೆ ಪೂರಕವಾಗಿ ಮೂರನೇ ಕೃಷ್ಣನ ಕಾಲದ ಶಾಸನವೊಂದು ಹರಪನಹಳ್ಳಿ ತಾಲ್ಲೂಕಿನ ಬಾಗಳಿ ಕಲ್ಲೇಶ್ವರ ದೇವಾಲಯದಲ್ಲಿ ದೊರೆತಿರುವುದನ್ನು, ಹೊನ್ನಾಳಿ ಶಾಸನವನ್ನು, ಹರಪನಹಳ್ಳಿ ಚಿರಸ್ತಹಳ್ಳಿ ಗ್ರಾಮದ ಶಾಸನವನ್ನು ಖ್ಯಾಸಾಪುರ ಶಾಸನವನ್ನು, ಬೇವಿನಹಳ್ಳಿ ಶಾಸನವನ್ನು ಆಧರಿಸಿ ದಾವಣಗೆರೆ ಪ್ರದೇಶ ರಾಷ್ಟ್ರಕೂಟರ ಆಳ್ವಿಕೆಗೆ ಒಳಪಟ್ಟಿತ್ತೆಂದು ತಿಳಿಸುತ್ತವೆ. ಹಾಗೆಯೆ

ದಾವಣಗೆರೆ ತಾಲ್ಲೂಕಿನ ಕಾಡಜ್ಜಿಯಲ್ಲಿ ದೊರೆತ ಶಾಸನ ರಾಷ್ಟ್ರಕೂಟರ ಆಡಳಿತಕ್ಕೆ ಸೇರಿತ್ತು ಎಂದು[೬೦] ಹೆಚ್. ತಿಪ್ಪೇಸ್ವಾಮಿ ಅವರು ತಮ್ಮ ಪ್ರಬಂಧದಲ್ಲಿ ಮಂಡಿಸಿರುತ್ತಾರೆ. ಇದೇ ಶಾಸನವನ್ನು ಟಿ. ಗಿರಿಜ ರವರು ಸಹ 'ದಾವಣಗೆರೆ ಇದು ನಮ್ಮ ಜಿಲ್ಲೆ' ಕೃತಿಯಲ್ಲಿ ಉಲ್ಲೇಖ ಮಾಡಿರುವರು. ನಂತರ ಅವರೇ 'ಕರ್ಪೂರ' ಸ್ಮರಣಸಂಚಿಕೆಯಲ್ಲಿ ತಿಳಿಯಪಡಿಸಿರುವರು. ಜಗಳೂರು ತಾಲ್ಲೂಕಿನ ಬಿಳಿಚೋಡು ಹೋಬಳಿಯ ಬಸವನಕೋಟೆಯಲ್ಲಿ ದೊರೆತ ಶಾಸನ ರಾಷ್ಟ್ರಕೂಟರ ಕಾಲಕ್ಕೆ ಸೇರಿದ್ದೆಂದು[೬೧] ಬಿ. ರಾಜಶೇಖರಪ್ಪರವರು ತಮ್ಮ ಕೃತಿಯಲ್ಲಿ ತಿಳಿಯಪಡಿಸಿರುವರು.

ರಾಷ್ಟ್ರಕೂಟರ ಕಾಲಗ ದೇವಾಲಯಗಳು ಚಿತ್ರದುರ್ಗ ಜಿಲ್ಲೆಯ ಜಟಂಗರಾಮೇಶ್ವರ, ಅಡ್ನೂರು, ಈಸಮುದ್ರ, ಚಿಕ್ಕಮಧುರೆ ಪ್ರದೇಶಗಳಲ್ಲಿ ಇರುವುದನ್ನು ಕರ್ನಾಟಕ ಚರಿತ್ರೆ ಸಂಪುಟ ೨ ರಲ್ಲಿ ಉಲ್ಲೇಖಿಸಲಾಗಿದೆ. ರಾಷ್ಟ್ರಕೂಟರ ಕುರಿತಂತೆ ದಾವಣಗೆರೆ ಪ್ರದೇಶದಲ್ಲಿ ದೊರೆತಿರುವ ಶಾಸನಗಳನ್ನು ಆಧಾರವಾಗಿಟ್ಟುಕೊಂಡು ಇತಿಹಾಸಕಾರರು, ಸಂಶೋಧಕರು, ಬರಹಗಾರರು ದಾವಣಗೆರೆ ಪ್ರದೇಶ ರಾಷ್ಟ್ರಕೂಟರ ಆಳ್ವಿಕೆಗೆ ಸೇರಿತ್ತು ಎಂದು ಅಭಿಪ್ರಾಯಪಟ್ಟಿರುವರು. ಈ ಪ್ರದೇಶ ಕುರಿತ ಅಧ್ಯಯನಗಳಲ್ಲಿ ರಾಷ್ಟ್ರಕೂಟ ಅರಸರುಗಳ ಆಡಳಿತದ ಕಾಲಾನುಕ್ರಮಣಿಕೆಯನ್ನು ಗುರುತಿಸಿಲ್ಲವೆಂದು ಹೇಳಬಹುದು. ಚಿತ್ರದುರ್ಗ ಮತ್ತು ಬಳ್ಳಾರಿ ಪ್ರದೇಶಗಳಲ್ಲಿ ಅಧ್ಯಯನ ನಡೆಸಿದ ಅಧ್ಯಯನಕಾರರು ಹೇಳಿರುವಂತೆ ಈ ಪ್ರದೇಶಗಳು ರಾಷ್ಟ್ರಕೂಟರ ಆಳ್ವಿಕೆಗೆ ಸೇರಿತ್ತು ಎನ್ನುವುದನ್ನು ಖಚಿತಪಡಿಸಿರುವುದರಿಂದ ದಾವಣಗೆರೆ ಪ್ರದೇಶವು ರಾಷ್ಟ್ರಕೂಟರ ಅಧೀನದಲ್ಲಿತ್ತು ಎಂದು ಅಭಿಪ್ರಾಯಪಡಬೇಕಾಗುತ್ತದೆ.

ನಂತರ ಅಧಿಕಾರಕ್ಕೆ ಬಂದವರು ತಲಕಾಡಿನ ಗಂಗರು. ಗಂಗರು ದಾವಣಗೆರೆ ಪ್ರದೇಶವನ್ನು ಆಳ್ವಿಕೆಗೆ ಒಳಪಡಿಸಿದ್ದರೆಂದು ಹೇಳುವುದಕ್ಕೆ ಖಚಿತ ಆಧಾರಗಳು ದೊರಕಿಲ್ಲದಿರುವುದರಿಂದ ಈ ಪ್ರದೇಶ ಗಂಗರ ಅಧೀನದಲ್ಲಿ ಇತ್ತೇ ಇಲ್ಲವೆ ಎಂದು ಹೇಳಲು ಸಾಧ್ಯವಾಗಿಲ್ಲ. ಆದರೆ ಬಳ್ಳಾರಿ ಹಾಗೂ ಶಿವಮೊಗ್ಗದ ಕೆಲವು ಪ್ರದೇಶಗಳನ್ನು ರಾಷ್ಟ್ರಕೂಟರ ಸಾಮಂತರಾಗಿ ಆಳ್ವಿಕೆ ನಡೆಸಿದರೆಂಬ ವಿಷಯವನ್ನು ಬಳ್ಳಾರಿ ಮತ್ತು ಶಿವಮೊಗ್ಗ ಜಿಲ್ಲಾ ಗ್ಯಾಸೆಟಿಯರ್‌ಗಳು ಸ್ಪಷ್ಟಪಡಿಸುವುದರಿಂದ ಗಂಗರು ಸಹ ಈಗಿನ ದಾವಣಗೆರೆಗೆ ಜಿಲ್ಲೆಯ ಚನ್ನಗಿರಿ, ಹೊನ್ನಾಳಿ, ಹರಪನಹಳ್ಳಿ ಪ್ರದೇಶಗಳಲ್ಲಿ ಅಧಿಕಾರ ನಡೆಸಿರಬಹುದು.

ಕಲ್ಯಾಣಿ ಚಾಲುಕ್ಯರು

ಇಮ್ಮಡಿ ತೈಲಪನು ರಾಷ್ಟ್ರಕೂಟರನ್ನು ಮೂಲೆಗೊತ್ತಿ ಪುನಃ ಚಾಲುಕ್ಯ ಅರಸು ಮನೆತನವನ್ನು ಸ್ಥಾಪಿಸಿದನು. ಇವರ ರಾಜಧಾನಿ ಕಲ್ಯಾಣವಾದ್ದರಿಂದ ಕಲ್ಯಾಣಿ ಚಾಲುಕ್ಯರೆಂದು ಪ್ರಸಿದ್ಧಿ ಪಡೆದರು. ಕಲ್ಯಾಣಿ ಚಾಲುಕ್ಯರ ಪ್ರಮುಖ ಅರಸರಲ್ಲಿ ಇಮ್ಮಡಿ ತೈಲಪ, ಎರಡನೇ ಸೋಮೇಶ್ವರ, ಆರನೇ ವಿಕ್ರಮಾದಿತ್ಯ ಮತ್ತು ಸತ್ಯಾಶ್ರಯ ಪ್ರಮುಖರು. ಚಾಲುಕ್ಯರಲ್ಲಿಯೇ ಅತ್ಯಂತ ಪ್ರಬಲನೆಂದು ಖ್ಯಾತಿ ಪಡೆದ ರಾಜನೆಂದರೆ ಆರನೇ ವಿಕ್ರಮಾದಿತ್ಯ. ಈತನು ಕ್ರಿ.ಶ. ೧೦೭೬ ರಲ್ಲಿ ಸಿಂಹಾಸನಕ್ಕೆ ಬಂದನು. ಅದರ ನೆನಪಿಗಾಗಿ ಹೊಸ ವಿಕ್ರಮಶಕೆಯನ್ನು ಆರಂಭಿಸಿದನು. ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ದಕ್ಷಿಣಭಾರತದಲ್ಲಿ ಚೋಳರು ಪ್ರಬಲರಾಗಿದ್ದರು. ಆದ್ದರಿಂದ ಈ ಎರಡೂ ಅರಸು ಮನೆತನಗಳು ನೊಳಂಬವಾಡಿ ಮತ್ತು ದಕ್ಷಿಣದಲ್ಲಿ ಪ್ರಾಬಲ್ಯಕ್ಕಾಗಿ ನಿರಂತರ ಹೋರಾಟದಲ್ಲಿ ತೊಡಗಿದ್ದವು. ಈ ಹೋರಾಟದಲ್ಲಿ ಅಂತಿಮವಾಗಿ ಕಲ್ಯಾಣಿ ಚಾಲುಕ್ಯರೇ ಮೇಲುಗೈ ಸಾಧಿಸಿದರು, ಹಾಗೂ ನೊಳಂಬವಾಡಿ ಪ್ರದೇಶವನ್ನು ತಮ್ಮ ಹತೋಟಿಯಲ್ಲಿ ಇಟ್ಟುಕೊಳ್ಳುವಲ್ಲಿ ಯಶಸ್ವಿಯಾದರೆಂದು ಗ್ಯಾಸೆಟಿಯರ್‌ನಲ್ಲಿ ತಿಳಿಸಲಾಗಿದೆ. ದಾವಣಗೆರೆ ಪ್ರದೇಶವು ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಆಳ್ವಿಕೆಗೆ ಒಳಪಟ್ಟಿದ್ದನ್ನು ದೃಢಪಡಿಸಲು ಸಾಕಷ್ಟು ಶಾಸನಗಳು ಸಾಕ್ಷಿಯಾಗಿವೆ.

ರಾಷ್ಟ್ರಕೂಟರ ಕೊನೆಯ ಅರಸನಾದ ಎರಡನೇ ಕರ್ಕನನ್ನು ಚಾಲುಕ್ಯ ವಂಶದ ಸ್ಥಾಪಕನಾದ ಇಮ್ಮಡಿ ತೈಲಪನು ಸೋಲಿಸಿ ಕಲ್ಯಾಣಿ ಚಾಲುಕ್ಯ ಮನೆತನವನ್ನು ಸ್ಥಾಪಿಸಿದನು. ಆದ್ದರಿಂದ ದಾವಣಗೆರೆ ಪ್ರದೇಶ ಚಾಲುಕ್ಯರ ಆರಂಭಕಾಲದಿಂದ ಕಲ್ಯಾಣಿ ಚಾಲುಕ್ಯರ ಆಳ್ವಿಕೆಗೆ ಒಳಪಟ್ಟಿತ್ತೆಂದು ಹರಪನಹಳ್ಳಿ ತಾಲ್ಲೂಕಿನ ಬಾಗಳಿಯಲ್ಲಿ ದೊರೆತ ಶಾಸನವನ್ನು ಆಧಾರವಾಗಿಟ್ಟುಕೊಂಡು ಹೆಚ್. ತಿಪ್ಪೇಸ್ವಾಮಿಯವರು ತಿಳಿಸುತ್ತಾರೆ. ಹಾಗೆಯೇ

ಗ್ಯಾಸೆಟಿಯರ್‌ನಲ್ಲಿಯೂ ಸಹ ಈ ವಿಷಯವನ್ನು ಸ್ಪಷ್ಟಪಡಿಸಲಾಗಿದೆ. ಕ್ರಿ.ಶ. ೧೦೧೦-೧೦೧೧ ರಲ್ಲಿ ಚಾಲುಕ್ಯರ ಐದನೇ ವಿಕ್ರಮಾದಿತ್ಯನ ಕಾಲದಲ್ಲಿ ನೊಳಂಬವಾಡಿ ಪಲ್ಲವರು ಕಲ್ಯಾಣಿ ಚಾಲುಕ್ಯರ ಪರವಾಗಿ ದಾವಣಗೆರೆ ಪ್ರದೇಶದಲ್ಲಿ ಆಳ್ವಿಕೆ ನಡೆಸಿದ್ದನ್ನು ಗ್ಯಾಸೆಟಿಯರ್ ಒಳಗೊಂಡಂತೆ ಹೆಚ್. ತಿಪ್ಪೇಸ್ವಾಮಿಯವರ ಪ್ರಬಂಧದಿಂದ ತಿಳಿದುಬರುತ್ತದೆ. (ಸಿ. ಕೆ. ವೈ. ದೀಕ್ಷಿತ್‌ರವರು ಸತ್ಯಾಶ್ರಯ ಮತ್ತು ೫ ನೇ ವಿಕ್ರಮಾದಿತ್ಯರಿಗೆ ಸಂಬಂಧಿಸಿದ ಶಾಸನಗಳಾವುವೂ ಚಿತ್ರದುರ್ಗ ಜಿಲ್ಲೆಯಲ್ಲಿಲ್ಲವೆಂದು ತಿಳಿಸುತ್ತಾರೆ) ಈ ಒಂದು ಕಾಲದಲ್ಲಿ ಚೋಳರು ನೊಳಂಬವಾಡಿ ಪ್ರದೇಶವನ್ನು ಜಯಿಸಿ ಸ್ವಲ್ಪ ಸಮಯ ತಮ್ಮ ಹತೋಟಿಯಲ್ಲಿಟ್ಟುಕೊಂಡಿರಬಹುದು ಎಂದು ಹೇಳಬಹುದು. ಮುಂದೆ ಎರಡನೇ ಜಯಸಿಂಹನು ಚೋಳರನ್ನು ಹಿಂದಕ್ಕೆ ಅಟ್ಟಿ ರಾಜ್ಯವನ್ನು ವಿಸ್ತರಿಸಿದನು. ಚಳ್ಳಕೆರೆ ತಾಲ್ಲೂಕಿನಲ್ಲಿ ದೊರೆತ ಎರಡು ಶಾಸನಗಳನ್ನೇ ಆಧರಿಸಿ ರೊಡ್ಡ, ಶಿರಾ, ನೊಳಂಬವಾಡಿ, ಕದಂಬಳಿಗೆ ಮುಂತಾದ ಪ್ರಾಂತಗಳನ್ನು ಆಳುತ್ತಿದ್ದನೆಂದು ಸಿ. ಕೆ. ವೈ. ದೀಕ್ಷಿತ್‌ರವರು ತಿಳಿಸಿರುವರು.[೨೨] ಇದರಿಂದ ದಾವಣಗೆರೆ ಪ್ರದೇಶ ಸಹ ಎರಡನೇ ಜಯಸಿಂಹನ ಆಳ್ವಿಕೆಗೆ ಸೇರಿತ್ತು ಎಂದು ತಿಳಿಯಬಹುದು. ಮೊದಲನೇ ಸೋಮೇಶ್ವರನ ಕಾಲದಲ್ಲಿ (ತ್ರೈಲೋಕಮಲ್ಲ) ಚೋಳರ ಮೇಲೆ ಯುದ್ಧ ಸಾರಿದನು. ಪ್ರಾರಂಭದಲ್ಲಿ ಚೋಳರ ಮೇಲೆ ಜಯಸಾಧಿಸಿದರೂ ಸಹ ಕೊನೆಯಲ್ಲಿ ಪರಾಜಿತನಾದನು. ಆದರೂ ಚಾಲುಕ್ಯ ರಾಜ್ಯದ ಪ್ರದೇಶಗಳು ಇವನ ಕೈಬಿಡದೆ ಭದ್ರವಾಗಿದ್ದವು ಎಂಬುದನ್ನು ದೀಕ್ಷಿತ್‌ರವರು ತಿಳಿಸಿರುವರು.

ಒಂದನೇ ಸೋಮೇಶ್ವರ ಅಥವಾ ತ್ರೈಲೋಕಮಲ್ಲನ ಕಾಲದ ಶಾಸನಗಳು ದಾವಣಗೆರೆ ಪ್ರದೇಶಗಳಲ್ಲಿ ದೊರಕಿವೆ. ಅವುಗಳಲ್ಲಿ ದಾವಣಗೆರೆ ಪ್ರದೇಶದಲ್ಲಿನ 'ಹದಡಿ' ಗ್ರಾಮದಲ್ಲಿ ದೊರೆತಿರುವ ಶಾಸನ ತ್ರೈಲೋಕಮಲ್ಲನು ಕದಂಬಳಿಗೆಯನ್ನು ಆಳುತ್ತಿದ್ದನೆಂದು ತಿಳಿಸುತ್ತದೆ. ಹೊನ್ನಾಳಿ ತಾಲ್ಲೂಕಿನ ಅರೆಕೆರೆಯಲ್ಲಿ ದೊರೆತ ದಾನಶಾಸನ ತ್ರೈಲೋಕ್ಯಮಲ್ಲದೇವನ ಕಾಲಕ್ಕೆ ಸೇರಿದೆ ಎನ್ನುವುದನ್ನು[೨೩] ಕೊಟ್ರೇಶ್ ಉತ್ತಂಗಿಯವರು ತಿಳಿಸಿರುವರು. ಹಾಗೆಯೇ ಇದೇ ತಾಲ್ಲೂಕಿನಲ್ಲಿ ತ್ರೈಲೋಕ್ಯಮಲ್ಲ ದೇವನ ಕಾಲದ ಶಾಸನ ೧೦೫೫ ರ ಹೊನ್ನಾಳಿಯ ದಾನಶಾಸನ, ಈತನ ಆಳ್ವಿಕೆಗೆ ಒಳಪಟ್ಟಿತ್ತು ಎಂಬುದನ್ನು ತಿಳಿಸುತ್ತದೆ. ನಂತರ ತ್ರಿಭುವನೈಕ್ಯಮಲ್ಲನೆಂದು ಹೆಸರಾದ ಇಮ್ಮಡಿ ಸೋಮೇಶ್ವರನೂ ಈ ಪ್ರದೇಶಗಳನ್ನು ಆಳಿರುವನೆಂದು ತಿಳಿದುಬರುತ್ತದೆ. ಇದಕ್ಕೆ ಸಹಾಯಕವಾಗಿ ಹೊನ್ನಾಳಿಯ ಜೋಗ ಪ್ರದೇಶದಲ್ಲಿ ತ್ರಿಭುವನಮಲ್ಲದೇವನ ಕಾಲಕ್ಕೆ ಸೇರಿದ ಧರ್ಮಶಾಸನ ಹಾಗೂ ಕುರುವ ಗ್ರಾಮದಲ್ಲಿ ದೊರೆತ ದಾನಶಾಸನ, ನ್ಯಾಮತಿಯಲ್ಲಿ ದೊರೆತ ಶಾಸನ, ಕುರುಬರಗಡ್ಡೆಯಲ್ಲಿ ದೊರೆತ ದಾನಶಾಸನ, ಇವು ಚಾಲುಕ್ಯರ ಅರಸ ತ್ರಿಭುವನಮಲ್ಲನ ಕಾಲದ ಶಾಸನಗಳೆಂದು ಕೊಟ್ರೇಶ್‌ಉತ್ತಂಗಿಯವರು ತಮ್ಮ ಕೃತಿಯಲ್ಲಿ ತಿಳಿಸಿರುವರು. ಚನ್ನಗಿರಿ ಪ್ರದೇಶವು ೧೧ನೇ ಶತಮಾನದಲ್ಲಿ ಚಾಲುಕ್ಯರ ಆಳ್ವಿಕೆಗೆ ಒಳಪಟ್ಟಿತ್ತೆಂದು ಬೆನಕನಹಳ್ಳಿ ಜಿ. ನಾಯಕರವರು ತಿಳಿಸಿದ್ದಾರೆ.

ಚಾಲುಕ್ಯರಲ್ಲಿ ಆರನೇ ವಿಕ್ರಮಾದಿತ್ಯನು ಪ್ರಬಲ ಅರಸನೆಂದು ಕರೆಸಿಕೊಂಡಿರುವನು. ಈ ಅರಸನ ಕಾಲದಲ್ಲಿ ದಾವಣಗೆರೆ ಪ್ರದೇಶದ ಆಳ್ವಿಕೆ ನಡೆಸಿದನೆಂಬುದಕ್ಕೆ ಉಚ್ಚಂಗಿ ಪಾಂಡ್ಯನಾದ ತ್ರಿಭುವನಮಲ್ಲ ಪಾಂಡ್ಯದೇವನು ಆರನೇ ವಿಕ್ರಮಾದಿತ್ಯನ ಸಾಮಂತನಾಗಿ ನೊಳಂಬವಾಡಿಗೆ ಮಹಾಮಂಡಲೇಶ್ವರನಾಗಿದ್ದನೆಂದು ದೀಕ್ಷಿತ್‌ರವರು ತಿಳಿಸಿದ್ದಾರೆ. ಅಂತೆಯೇ ದಾವಣಗೆರೆ ವಾಯುವ್ಯ ಭಾಗದಲ್ಲಿನ 'ಬೇತೂರು' ಇವನ ಆಡಳಿತದ ಕೇಂದ್ರಸ್ಥಾನನಾಗಿದ್ದಿತೆಂದು ತಿಳಿಯುವುದು. ಇದನ್ನೇ ಹೆಚ್. ತಿಪ್ಪೇಸ್ವಾಮಿಯವರು, ಟಿ. ಗಿರಿಜ ರವರು, ತಿಳಿಯಪಡಿಸಿರುವರು. ಈತನ ಆಡಳಿತದಲ್ಲಿ ಹೊಯ್ಸಳರು, ಕಳಚೂರಿಗಳು, ಸೇವುಣರು ಸಾಮಂತರಾಗಿದ್ದರು. ಆರನೇ ವಿಕ್ರಮಾದಿತ್ಯನ ನಂತರ ಮುಮ್ಮಡಿ ಸೋಮೇಶ್ವರನು ಅಧಿಕಾರ ನಡೆಸಿದನು. ಇವನ ಬಗ್ಗೆ ಯಾವ ಶಾಸನಾಧಾರಗಳು ದಾವಣಗೆರೆ ಪ್ರದೇಶದಲ್ಲಿ ದೊರೆತಿಲ್ಲ. ನಂತರ ಎರಡನೇ ಜಗದೇಕಮಲ್ಲ ಅಧಿಕಾರ ಪಡೆದು ಈ ಪ್ರದೇಶಗಳನ್ನು ಆಳ್ವಿಕೆಗೆ ಒಳಪಡಿಸಿಕೊಂಡಿದ್ದನೆಂದು ಹರಪನಹಳ್ಳಿ ತಾಲ್ಲೂಕಿನ ಮಾಡಲಗೇರಿಯಲ್ಲಿ ದೊರೆತ ಶಾಸನ ವಿವರ ನೀಡುತ್ತದೆ. ತರಿವೈಯ ಕಳಚೂರಿ ಬಿಜ್ಜಳನು ಕಲ್ಯಾಣವನ್ನು ವಶಪಡಿಸಿಕೊಂಡು ಆಳ್ವಿಕೆ ನಡೆಸಿದ. ಮುಂದೆ ಕಲ್ಯಾಣಿಚಾಲುಕ್ಯರು ಅವನತಿಯತ್ತ ಸಾಗಿದರು. ದಕ್ಷಿಣಭಾರತದಲ್ಲಿ ಹೊಯ್ಸಳರು ಪ್ರಬಲರಾಗಿ ಅಧಿಕಾರ ಪಡೆದರು.

ಹರಿಹರ, ಬಾಗಳಿ ಮುಂತಾದ ಪ್ರದೇಶಗಳಲ್ಲಿ ದಾವಣಗೆರೆ ಪ್ರದೇಶದ ಚಾಲುಕ್ಯ ದೇವಾಲಯಗಳು ದೊರೆತಿವೆ. ಈವರೆಗಿನ ಎಲ್ಲಾ ಶೋಧಗಳ ಮೂಲಕ ಒಟ್ಟಾರೆಯಾಗಿ ದಾವಣಗೆರೆ ಪ್ರದೇಶ ಕಲ್ಯಾಣಿ ಚಾಲುಕ್ಯರ ಆಡಳಿತದ ವ್ಯಾಪ್ತಿಗೆ ಸೇರಿತ್ತು ಎಂಬುದನ್ನು ತಿಳಿಯಬಹುದು. ಆದರೆ ಈ ಪ್ರದೇಶವನ್ನು ಅಧ್ಯಯನ ಮಾಡಿರುವ ಅಧ್ಯಯನಕಾರರು ಕೇವಲ ಅರಸರ ಆಡಳಿತ ಕ್ಷೇತ್ರ ಮತ್ತು ಅವರ ಶಾಸನ, ದೇವಾಲಯಗಳ ಪರಿಚಯ ಮಾಡಿಕೊಟ್ಟಿರುವರು. ಇಲ್ಲಿನ ಜನರ ಬದುಕನ್ನು ಆಹಾರ, ಉಡುಗೆ, ತೊಡುಗೆಗಳನ್ನು, ಆ ಕಾಲದ ಆರ್ಥಿಕ ಜೀವನವನ್ನಾಗಲಿ, ಸೈನಿಕರ, ಬಡಬಗ್ಗರ ವಿವರಗಳನ್ನಾಗಲಿ ತಿಳಿಸಿಲ್ಲ.

ಬೆಳಗುತ್ತಿ ಸಿಂಧರು

ಕ್ರಿ.ಶ. ೯೦೦ ರಿಂದ ೧೨೭೯ ರವರೆಗೆ ಈಗಿನ ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲ್ಲೂಕು ಕೇಂದ್ರದಿಂದ ಹನ್ನೆರಡು ಕಿ.ಮೀ. ದೂರದಲ್ಲಿರುವ ಬೆಳಗುತ್ತಿಯನ್ನು ಕೇಂದ್ರವಾಗಿಟ್ಟುಕೊಂಡು ಕಲ್ಯಾಣಿ ಚಾಲುಕ್ಯರು, ಕಳಚೂರ್ಯರ ಮತ್ತು ಸೇವುಣರ ಸಾಮಂತರಾಗಿ ಆಳ್ವಿಕೆ ನಡೆಸಿದರು. ಈ ಮನೆತನದ ಮೂಲ ಪುರುಷ ನಿಡುದೋಳನೆಂದು ತಿಳಿದುಬರುತ್ತದೆ. ಈ ವಂಶದವರನ್ನು 'ಕರಹಾಟಪುರವರಾಧೀಶ್ವರ' ಎಂದು ಕರೆಯಲಾಗಿದೆ. ನನ್ನಿಯ ಎಂಬುವನು ಸಂತತಿಯ ಮೂಲಪುರುಷನಿರಬಹುದೆಂದು ದಿನಕರ ದೇಸಾಯಿ ತಿಳಿಸಿರುವರು. ಈ ವಂಶದ ಮೂಲಪುರುಷನ ಬಗ್ಗೆ ವಿದ್ವಾಂಸರಲ್ಲಿ ಜಿಜ್ಞಾಸೆಯಿದೆ. ಇವನ ನಂತರ ಸುಮಾರು ೯೦ ವರ್ಷಗಳ ಇತಿಹಾಸ ಅಸ್ಪಷ್ಟವಾಗಿದೆ. ನಂತರ ಪಿರಿಯಚಟ್ಟರಸ, ಅಯ್ಯಣ, ಜೋಗರಪರ, ಎರಡನೇ ಚಟ್ಟರಸ, ಮಾಚರಸ, ಎರಡನೇ ಈಶ್ವರದೇವ, ಎರಡನೇ ಮಲ್ಲದೇವ, ಮೂರನೇ ಈಶ್ವರದೇವ, ಮತ್ತು ಕೇಶವ ಎಂಬುವರು ಸಿಂಧ್ ಮನೆತನವನ್ನು ಆಳಿದರು. ಕೊನೆಯ ಅರಸನಾದ ಕೇಶವನು ಸೇವುಣರ ಅಧಿಕಾರಿಯಾಗಿದ್ದ ಮಾಯದೇವನ ವಿರುದ್ಧ ಯುದ್ಧಮಾಡಿ ಕೊನೆಗೆ ೧೨೩೯ ರಲ್ಲಿ ಮಡಿದನು. ಇಲ್ಲಿಗೆ ಬೆಳಗುತ್ತಿ ಸಿಂಧರ ವಂಶವು ಕಣ್ಮರೆಯಾಯಿತು.

ಬೆಳಗುತ್ತಿ ಸಿಂಧರ ಕುರಿತ ವಿವರಗಳಿಗೆ ಗ್ಯಾಸೆಟಿಯರ್‌ನ್ನು ಪರಿಶೀಲಿಸಬಹುದಾಗಿದೆ.[೩೫] ಈ ಸಂಬಂಧ ಹೆಚ್. ತಿಪ್ಪೇಸ್ವಾಮಿಯವರ ಅಧ್ಯಯನದಲ್ಲಿ, ಜಗದೀಶರವರ ಅಧ್ಯಯನದಲ್ಲಿ ಹಾಗೂ ಕೊಟ್ರೇಶ್ ಉತ್ತಂಗಿಯವರ ಕೃತಿಯಲ್ಲಿ ಕಾಣಬಹುದು. ಒಟ್ಟಿನಲ್ಲಿ ದಾವಣಗೆರೆ ಜಿಲ್ಲೆಯನ್ನು ಒಳಗೊಂಡಂತೆ ಹಲವು ಪ್ರದೇಶಗಳನ್ನು ಬೆಳಗುತ್ತಿ ಸಿಂಧರು ಆಳ್ವಿಕೆ ನಡೆಸಿರುವುದನ್ನು ಈ ಅಧ್ಯಯನಗಳ ಮೂಲಕ ತಿಳಿಯಬಹುದು.

ಉಚ್ಚಂಗಿ ಪಾಂಡ್ಯರು

೧೧ ಮತ್ತು ೧೨ ನೇ ಶತಮಾನದಲ್ಲಿ ಕರ್ನಾಟಕದ ಮುಖ್ಯ ಮಾಂಡಲಿಕ ಅರಸರಲ್ಲಿ ಉಚ್ಚಂಗಿ ಪಾಂಡ್ಯರು ಪ್ರಮುಖರಾಗಿದ್ದಾರೆ. ಇವರು ತಮ್ಮನ್ನು ಚಂದವಂಶೀಯರೆಂದು ಕರೆದುಕೊಂಡಿರುವರು. ಮಂಗಯ್ಯ ಅಥವಾ ಆದಿತ್ಯದೇವ ಎಂಬುವನು ಪಾಂಡ್ಯ ಕುಲದ ಸ್ಥಾಪಕ ಎಂದು ಗ್ಯಾಸೆಟಿಯರ್‌ನಲ್ಲಿ ತಿಳಿಯಪಡಿಸಲಾಗಿದೆ. ಚೇದಿರಾಜ, ಪಾಂಡ್ಯ, ತ್ರಿಭುವನಮಲ್ಲಪಾಂಡ್ಯ ಅಧಿಕಾರ ನಡೆಸಿದರು. ತ್ರಿಭುವನಮಲ್ಲಪಾಂಡ್ಯನು ಚಾಲುಕ್ಯರ ಮಾಂಡಲಿಕನಾಗಿ ೧೦೮೩ ರಲ್ಲಿ ನೊಳಂಬವಾಡಿಯನ್ನು ಆಳುತ್ತಿದ್ದನು. ನಂತರ ಬಲ್ಲಕುಂದೆ ೩೦೦ ನಾಡಿಗೂ ಮಾಂಡಲಿಕನಾಗಿದ್ದನು ಎಂಬುದನ್ನು ಹಾಗೂ ದಾವಣಗೆರೆ ಸಮೀಪದಲ್ಲಿರುವ 'ಬೇತೂರು' ಪ್ರದೇಶವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದನೆಂಬ ವಿವರಗಳನ್ನು ಗ್ಯಾಸೆಟಿಯರ್‌ನಲ್ಲಯೂ[೩೬] ಹೆಚ್. ತಿಪ್ಪೇಸ್ವಾಮಿಯವರ ಅಧ್ಯಯನದಲ್ಲಿಯೂ ಮತ್ತು ಟಿ. ಗಿರಿಜರ ಅವರ ಕೃತಿಯಲ್ಲಿಯೂ ಕಾಣಬಹುದಾಗಿದೆ. ಮೇಲ್ಕಂಡ ಬರಹಗಳಲ್ಲಿ ದಾವಣಗೆರೆಯ ಶಾಸನದಿಂದ ದಾವಣಗೆರೆ ಸೀಮೆಯಂ ಎಂದು ಉಲ್ಲೇಖವಾಗಿರುವುದರಿಂದ ಪಾಂಡ್ಯರು ದಾವಣಗೆರೆ ಪ್ರದೇಶವನ್ನು ಆಳಿದರು ಎಂದು ಅಭಿಪ್ರಾಯಿಸಿರುವರು. ಹಾಗೆಯೇ ಮಹದೇವ, ಸುಬ್ಬಣ್ಣರೆರವರು ಹರಪನಹಳ್ಳಿ ತಾಲ್ಲೂಕಿನಲ್ಲಿ ಉಚ್ಚಂಗಿದುರ್ಗವನ್ನು ಕೇಂದ್ರವಾಗಿಟ್ಟುಕೊಂಡು ಪಾಂಡ್ಯರು ಆಳಿರುವರು ಎಂಬುದಾಗಿ ಹೇಳಿರುವರು.[೩೭] ಇದೇ ವಿಷಯವನ್ನು ಕುಂಬಾ. ಸದಾಶಿವಪ್ಪನವರು ದೃಢಪಡಿಸುತ್ತಾರೆ. ಟಿ. ಗಿರಿಜರವರು ದಾವಣಗೆರೆ ಉಚ್ಚಂಗಿ ಸಾಂಡ್ಯರ ಪಾಂಡ್ಯಮಂಡಲದ ಒಂದು ಕೇಂದ್ರವಾಗಿತ್ತು. ನೊಳಂಬವಾಡಿ ಮೂವತ್ತೆರಡು ಸಾಪಿರದಲ್ಲಿ ಒಂದಾಗಿದ್ದು, ಎಲೆಬೇತೂರು, ಆನೆಕೊಂಡಗಳು ರಾಜಧಾನಿಯಾಗಿ ಮೆರೆದಿದ್ದವು ಎಂಬುದನ್ನು

ಉಲ್ಲೇಖಿಸಿರುವರು. ರಾಜಶೇಖರಪ್ಪನವರು ಹರಿಹರ ಪ್ರದೇಶವು ಉಚ್ಚಂಗಿ ಪಾಂಡ್ಯರ ಆಳ್ವಿಕೆಯಲ್ಲಿತ್ತು ಎಂದು ತಿಳಿಸಿರುತ್ತಾರೆ. ಕ್ರಿ.ಶ. ೧೨ ನೇ ಶತಮಾದಲ್ಲಿ ಮಂಡಳೇಶ್ವರನಾಗಿ ಉಚ್ಚಂಗಿ ಪಾಂಡ್ಯವಂಶದ ವಿಜಯಪಾಂಡ್ಯನು ಆಳುತ್ತಿದ್ದಾಗ ಒಂದು ಪ್ರಾಂತ್ಯದ ಪ್ರಮುಖನಾಗಿದ್ದು ನಾಗತಿಯರಸನು ತನ್ನ ದೈವದವರು ಬಂಧುಗಳ ಸಮೇತ ವಾದಿರಾಜ ಚರಿತವೆಂಬ ಧರ್ಮಕಥಾ ಶ್ರವಣ ಮಾಡಿದಾಗ, ವೀರಪ್ಪದಡೆಗೆ ಹೇಗೊ ಧರ್ಮದ ಕಡೆಗೂ ಆಸಕ್ತಿಯುಂಟಾಗಿ ಶಂಕರನಾರಾಯಣ ದೇವರ ಅನಾದಿ ಅಗ್ರಹಾರ ಎನಿಸಿದ್ದ ಕೂಡಲೂರಿನ ತಮ್ಮ ಕಾಣಿಕೆಯನ್ನು ಆ ದೇವರಿಗೆ ಕ್ರಿ.ಶ. ೧೧೭೧ ರಲ್ಲಿ ದಾನವಾಗಿ ನೀಡಿದರು ಎಂಬುದಾಗಿ ಡಾ. ಬಿ. ರಾಜಶೇಖರಪ್ಪ ಅವರು ತಿಳಿಸಿರುವರು. ಇದರಿಂದ ಹರಿಹರ ಪ್ರದೇಶವು ಉಚ್ಚಂಗಿ ಪಾಂಡ್ಯರ ಅಧೀನದಲ್ಲಿತ್ತು ಎಂದು ತಿಳಿದುಬರುತ್ತದೆ. ಚನ್ನಗಿರಿ ಪ್ರಾಂತ್ಯವು ಸಹ ಪಾಂಡ್ಯರ ಕದಂಬಳಿಗೆ ಒಂದು ಸಾವಿರ ಪ್ರಾಂತ್ಯಗಳಿಗೆ ಸೇರಿತ್ತು ಎಂದು ಚನ್ನಗಿರಿ ಮತ್ತು ಶಿಕಾರಿಪುರ ತಾಲ್ಲೂಕಿನ ಶಾಸನಗಳನ್ನು ಆಧರಿಸಿ ಎಂ. ಮಲ್ಲೇಶಪ್ಪ ತಿಳಿಯಪಡಿಸಿರುವರು.

ಉಚ್ಚಂಗಿ ಪಾಂಡ್ಯರ ಅರಸರಾದ ರಾಯಪಾಂಡ್ಯ, ಪಂಡಿತ ಪಾಂಡ್ಯ, ವೀರಪಾಂಡ್ಯ, ವಿಜಯಪಾಂಡ್ಯ, ತ್ರಿಭುವನಪಾಂಡ್ಯನು ಚಾಲುಕ್ಯರ ಅರಸನಾದ ನಾಲ್ಕನೇ ಸೋಮೇಶ್ವರನ ವಿರುದ್ಧ ದಂಗೆಯೆದ್ದು ಸ್ವತಂತ್ರನಾಗಲು ಪ್ರಯತ್ನಿಸಿದ. ನಂತರ ಹೊಯ್ಸಳ ೩ನೇ ಬಲ್ಲಾಳನು ಉಚ್ಚಂಗಿದುರ್ಗದ ಮೇಲೆ ದಾಳಿಮಾಡಿ ಈ ಪ್ರದೇಶವನ್ನು ವಶಪಡಿಸಿಕೊಂಡನು. ಇಲ್ಲಿಗೆ ಅಧ್ಯಯನ ಪ್ರದೇಶದಲ್ಲಿ ಉಚ್ಚಂಗಿ ಪಾಂಡ್ಯರ ಆಳ್ವಿಕೆ ಕಣ್ಮರೆಯಾಯಿತು.

ನೊಳಂಬರು

ಕರ್ನಾಟಕ ಚರಿತ್ರೆಯಲ್ಲಿ ಗಂಗ, ಚಾಲುಕ್ಯ, ಚೋಳ ಮತ್ತು ಹೊಯ್ಸಳರ ಮಹಾಸಾಮಂತರಾಗಿ ಆಳ್ವಿಕೆ ನಡೆಸಿದವರಲ್ಲಿ ನೊಳಂಬರು ಪ್ರಮುಖರು. ಇವರು ಆಳುತ್ತಿದ್ದ ಒಟ್ಟುಪ್ರದೇಶವನ್ನು 'ನೊಳಂಬವಾಡಿ ೩೨೦೦೦ ನಾಡು' ಎಂದು ಕರೆಯುವರು. ಇವರು ಈಶ್ವರಿ ವಂಶದವರೆಂದು ಹೇಳಿಕೊಂಡಿರುವರು. ಹಾಗೆಯೇ ನೊಳಂಬರ ಮೂಲಪುರುಷ ಪಲ್ಲವ ಅರಸ 'ತ್ರಿಣಯ' ಎಂಬುವನು ಎಂದು ಐತಿಹ್ಯವಿದೆ. ಇವರಲ್ಲಿ ಮಾಚೀದೇವ, ಅಯ್ಯಪ್ಪದೇವ, ತ್ರೈಲೋಕನನ್ನಿನೊಳಂಬ ಮುಂತಾದವರು ಪ್ರಮುಖರಾಗಿ ಆಳಿರುವರು. ನೊಳಂಬರ ಪ್ರಾಚೀನತೆಗೆ ಸಂಬಂಧಿಸಿದಂತೆ ಗ್ಯಾಸೆಟಿಯರ್‌ನಲ್ಲಿ ವಿವರಿಸಲಾಗಿದೆ.

ನೊಳಂಬರ ಆಳ್ವಿಕೆಗೆ ದಾವಣಗೆರೆ ಪ್ರದೇಶವು ಸೇರಿತ್ತು ಎಂಬುದಕ್ಕಾಗಿ ಸಿ. ಎಸ್. ಬಸವಲಿಂಗಪ್ಪನವರು ಚಂದ್ರವಳ್ಳಿ ಕೃತಿಯಲ್ಲಿ ಚಿತ್ರದುರ್ಗಪ್ರದೇಶದ ದಾವಣಗೆರೆ ಸೇವುಣರಿಗೆ ಸೇರಿತ್ತು ಎನ್ನುವುದರ ವಿವರ ನೀಡಿರುವರು. ಇಲ್ಲಿ ದೊರೆತಿರುವ ಶಾಸನಗಳೇ ಇದಕ್ಕೆ ಸಾಕ್ಷಿಯಾಗಿವೆ. ಜಗಳೂರು ತಾಲ್ಲೂಕಿನ ಮುಸ್ಟೂರು ಗ್ರಾಮದಲ್ಲಿ ದೊರೆತ ಶಾಸನವೊಂದು ನೊಳಂಬಾಧಿರಾಜ ಅಯ್ಯಪ್ಪದೇವನು ನೊಳಂಬವಾಡಿ ೩೨೦೦೦ ನಾಡನ್ನು ಅವನ ಅಧೀನವಾಗಿ ಅಣ್ಣಯ್ಯ ಎಂಬುವನು ಈ ಪ್ರದೇಶವನ್ನು ಆಳುತ್ತಿದ್ದನು ಎಂಬ ಶಾಸನದ ಪಾಠವನ್ನು ಓದಿ ಅರ್ಥೈಸಿರುವರು. ಹಾಗೆಯೇ ಅದೇ ತಾಲ್ಲೂಕಿನ ನಿಟ್ಟೂರು ಗ್ರಾಮದ ಕಲ್ಲೇಶ್ವರ ದೇವಾಲಯದ ಶಾಸನವು ಸಹ ನೊಳಂಬರ ಕಾಲಕ್ಕೆ ಸೇರಿತ್ತು ಎಂಬುದನ್ನು ಗುರುತಿಸಿರುವರು.[೩೮] ಇದೇ ವಿವರವನ್ನು ಹೆಚ್. ತಿಪ್ಪೇಸ್ವಾಮಿಯವರು ತಮ್ಮ ಅಧ್ಯಯನದಲ್ಲಿ ತಿಳಿಸಿರುವರು. ರಾಜಪ್ಪದಳವಾಯಿಯವರು ತಮ್ಮ ಲೇಖನವನ್ನು ದಕ್ಷಿಣಭಾರತದ ಅರಸುಮನೆತನಗಳು ಕೃತಿಯಲ್ಲಿ ಪ್ರಕಟಿಸಿದ್ದಾರೆ. ಇವರ ಸಂಪೂರ್ಣ ಚರಿತ್ರೆ ನೀಡಿರುವರು.[೩೯] ಇವುಗಳಲ್ಲದೆ, ದಾವಣಗೆರೆ ಪ್ರದೇಶದ ಹದಡಿಗ್ರಾಮ, ವಡ್ಡರಹಳ್ಳಿ, ಅಸಗೋಡಿನ ಶಂಭುಲಿಂಗ ದೇವಾಲಯದ, ಚನ್ನಗಿರಿ ಮತ್ತು ಹೊನ್ನಾಳಿಯಲ್ಲಿ ದೊರೆತಿರುವ ಶಾಸನಗಳಿಂದ ನೊಳಂಬರಿಗೆ ಇವುಗಳು ಸೇರಿದ್ದವೆಂದು ತಿಳಿಸಿರುವರು. ಉಚ್ಚಂಗಿದುರ್ಗವು ನೊಳಂಬರ ಅಧೀನದಲ್ಲಿತ್ತು. ಇವರ ಕೊನೆಯ ಅರಸನಾದ ಮಾಚರಸನು ಇಮ್ಮಡಿ ಬಲ್ಲಾಳನು ಮಹಾಸಾಮಂತನಾಗಿ ಪ್ರಭುತ್ವ ನಡೆಸಿದನೆಂದು ಹೆಚ್. ತಿಪ್ಪೇಸ್ವಾಮಿಯವರು ತಿಳಿಸಿರುವರು. ಪ್ರಮುಖವಾಗಿ ಇಲ್ಲಿ ಅಧ್ಯಯನ ನಡೆಸಿರುವ ಇತಿಹಾಸಕಾರರು ದಾವಣೆಗೆರೆ ಪ್ರದೇಶವನ್ನಿಟ್ಟುಕೊಂಡು ಯಾರು ಸಹ ಅಧ್ಯಯನ ಮಾಡಿಲ್ಲವೆಂದು ತಿಳಿದುಬರುತ್ತದೆ. ಹಾಗೆ ನೊಳಂಬ ಅರಸರು ದಾವಣೆಗೆರೆ ಪ್ರದೇಶವನ್ನು ಎಷ್ಟು ವರ್ಷಗಳ ಕಾಲ ಆಳಿದರು ಎಂಬುದರ ಜೊತೆಗೆ ಯಾವ ಅರಸರ ಅಧೀನದಲ್ಲಿತ್ತು ಎಂದು ಖಚಿತವಾಗಿ ಹೇಳಲು ಅಧಿಕೃತ ಆಕರಗಳ ಕೊರತೆ ಇದೆ.

ಸೇವುಣರು

ಸೇವುಣರು ಕರ್ನಾಟಕವನ್ನಾಳಿದ ಪ್ರಮುಖ ಸಾಮಂತ ಮನೆತನಗಳಲ್ಲಿ ಒಂದು. ಚಾಲುಕ್ಯರ ಸಾಮಂತರಾಗಿ ಆಳ್ವಿಕೆ ನಡೆಸಿದರೆಂದು ತಿಳಿದುಬರುತ್ತದೆ. ಇವರು ದಾವಣಗೆರೆ ಪ್ರದೇಶದಲ್ಲಿ ಆಳ್ವಿಕೆ ನಡೆಸಿದ್ದರು ಎಂಬ ವಿಷಯಕ್ಕೆ ದೊರೆತಿರುವ ಅವರ ಶಾಸನಗಳೇ ಸಾಕ್ಷಿಯಾಗಿವೆ. ಗ್ಯಾಸೆಟಿಯರ್‌ಗಳಲ್ಲೂ ಸಹ ಈ ಸಂಬಂಧ ಮಾಹಿತಿ ದೊರೆಯುತ್ತದೆ. ನಂತರ ಇವುಗಳನ್ನು ಆಧರಿಸಿ ಇತಿಹಾಸ ಕೃತಿಗಳಲ್ಲಿಯೂ ಸಹ ತಿಳಿಸಿರುವುದನ್ನು ಕಾಣಬಹುದು. ದ್ವಾರಕೆಯ ದೊರೆ ಸುಬಾಹುವಿನ ಮಗ ದೃಢಪ್ರಹಾರ ಈ ಮನೆತನದ ಮೂಲ ಪುರುಷನೆಂದು ಹೆಚ್. ವಿ. ಶ್ರೀನಿವಾಸಮೂರ್ತಿ ಮತ್ತು ಆರ್. ರಾಮಕೃಷ್ಣನ್ ತಿಳಿಸಿರುವರು. ಸೇವುಣರ ಅರಸರಾದ ಸೇವುಣಚಂದ್ರ, ಮಲ್ಲುಗಿ, ಅಮರಗಂಗೇಯ, ಕರ್ಣ, ಐದನೆಯ ಬಿಲ್ಲಮ, ಜೈತುಗಿ, ಸಿಂಘಣ, ಕೃಷ್ಣ, ಮಹಾದೇವ, ರಾಮಚಂದ್ರ ಪ್ರಮುಖರಾಗಿರುವರು. ಇವರು ಕ್ರಿ.ಶ. ೮೩೫ ರಿಂದ ೧೩೧೩ ರವರೆಗೆ ಆಳ್ವಿಕೆ ನಡೆಸಿದರೆಂದು ತಿಳಿದುಬರುತ್ತದೆ.

ದಾವಣಗೆರೆ ಪ್ರದೇಶ ಸೇವುಣರ ಆಡಳಿತದ ವ್ಯಾಪ್ತಿಯಲ್ಲಿತ್ತು ಎನ್ನುವುದಕ್ಕೆ ಈ ಪ್ರದೇಶದಲ್ಲಿ ಆಧಾರಗಳು ದೊರೆಕಿವೆ. ದಾವಣಗೆರೆ ತಾಲ್ಲೂಕಿನ ಹರಿಹರ ಹಾಗೂ ಭಾನುವಳ್ಳಿ ಶಾಸನಗಳು ಸೇವುಣರ ಏಳಿಗೆಯ ವಿವರ ನೀಡುತ್ತವೆ ಎಂದು[೪೦] ಎಚ್. ಎಂ. ನಾಗರಾಜರಾವ್ ತಿಳಿಸಿರುವರು. ದಾವಣಗೆರೆ ಪ್ರದೇಶದಲ್ಲಿ ಒಟ್ಟು ೧೮ ಕ್ಕೂ ಹೆಚ್ಚು ಶಾಸನಗಳು ಸೇವುಣರ ಕುರಿತಾಗಿವೆಯೆಂದು ಸಹ ಹೇಳುವರು. ಹಾಗೆ ಆವರಗೊಳದ ಶಾಸನ, ಬೇತೂರು ಗ್ರಾಮದ ಶಾಸನ ಸೇವುಣರ ಮಹಾದೇವನ ವಿವರ ನೀಡುತ್ತದೆ. ಭಾನುವಳ್ಳಿ ಗ್ರಾಮದ ಶಾಸನ ಸಿಂಘಣನ ಬಗ್ಗೆ ತಿಳಿಸುತ್ತದೆ. ಜಗಳೂರು ತಾಲ್ಲೂಕಿನ ಕಲ್ಲೇದೇವರಪುರ ಶಾಸನವು[೪೧] ರಾಮಚಂದ್ರನ ಕುರಿತಾಗಿದೆ ಎಂದು ಬಿ. ರಾಜಶೇಖರಪ್ಪನವರು ಉಲ್ಲೇಖಿಸಿರುವರು. ಹೊನ್ನಾಳಿಯ ಕೆಲವು ಪ್ರದೇಶಗಳು ಸೇವುಣರ ಅಧಿಕಾರದಲ್ಲಿದ್ದವು ಎನ್ನುವುದಕ್ಕೆ ಸಾಕ್ಷಿಯಾಗಿ ಸೇವುಣ ದೊರೆ ಸಿಂಹಳದೇವನ ವೀರಗಲ್ಲು ಶಾಸನ ಬೆಳಗುತ್ತಿಯಲ್ಲಿ ದೊರಕಿದೆ. ಅದೇ ಗ್ರಾಮದಲ್ಲಿ ಎರಡನೇ ಸಿಂಘಣನ ವೀರಗಲ್ಲು ಶಾಸನ, ಮಾದನಬಾವಿಯಲ್ಲಿ ಭೂದಾನಶಾಸನದ ಬಗ್ಗೆ ಕೊಟ್ರೇಶ್ ಉತ್ತಂಗಿಯವರು ತಮ್ಮ ಕೃತಿಯಲ್ಲಿ ಉಲ್ಲೇಖಿಸಿರುವರು. ಹೆಚ್. ತಿಪ್ಪೇಸ್ವಾಮಿಯವರು ಈ ಪ್ರದೇಶಗಳಲ್ಲಿ ದೊರೆತ ಸೇವುಣರ ಶಾಸನಗಳನ್ನು ಉಲ್ಲೇಖ ಮಾಡುತ್ತಾ ಚನ್ನಗಿರಿ ಪ್ರದೇಶದಲ್ಲಿ ಬರುವ ಕೋಗಲೂರಿನ ಶಾಸನವು ಸಹ ಸೇವುಣರು ಆಳ್ವಿಕೆ ನಡೆಸಿದರೆಂಬುದನ್ನು ಖಚಿತಪಡಿಸಿರುವರು. ಈ ಅಧ್ಯಯನಗಳ ವಿವರದಿಂದ ದಾವಣಗೆರೆ ಪ್ರದೇಶ ಸೇವುಣರ ಆಳ್ವಿಕೆಗೆ ಒಳಪಟ್ಟಿತ್ತು ಎಂದು ಹೇಳಬೇಕಾಗುತ್ತದೆ.

ಹೊಯ್ಸಳರು

ದ್ವಾರಸಮುದ್ರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಹೊಯ್ಸಳರು ಅಧಿಕಾರಕ್ಕೆ ಬಂದರು. ಪ್ರಾರಂಭದಲ್ಲಿ ಕಲ್ಯಾಣಿ ಚಾಲುಕ್ಯರ ಸಾಮಂತರಾಗಿ ಇವರು ಅಧಿಕಾರಕ್ಕೆ ಬಂದರು. ಚಾಲುಕ್ಯರ ಅವನತಿಯ ನಂತರ ಸ್ವತಂತ್ರರಾಗಿ ಆಳ್ವಿಕೆ ನಡೆಸಿದರು. ಚಾಲುಕ್ಯರ ನಂತರ ದಕ್ಷಿಣಭಾರತದಲ್ಲಿ ಪ್ರಾಬಲ್ಯಕ್ಕಾಗಿ ಹೊಯ್ಸಳರು ಮತ್ತು ಸೇವುಣರ ನಡುವೆ ತಿಕ್ಕಾಟ ಆರಂಭವಾಯಿತು. ಆದ್ದರಿಂದ ಈ ಎರಡು ಅರಸುಮನೆತನಗಳ ನಡುವೆ ಕದನಗಳು ಅನಿವಾರ್ಯವಾಗಿದ್ದವು. ಇತಿಹಾಸಕಾರರು ನಡೆಸಿದ ಅಧ್ಯಯನಗಳ ಮೂಲಕ ಆ ಕಾಲದಲ್ಲಿ ದಾವಣಗೆರೆ ಪ್ರದೇಶ ಹೊಯ್ಸಳರ ಆಳ್ವಿಕೆಯ ವ್ಯಾಪ್ತಿಯಲ್ಲಿತ್ತು ಎನ್ನುವುದು ತಿಳಿದುಬರುತ್ತದೆ.

ಎಲ್ಲಾ ಇತಿಹಾಸಕಾರರು ಗ್ಯಾಸೆಟಿಯರ್‌ಗಳನ್ನು ಆಧಾರವಾಗಿಟ್ಟುಕೊಂಡು ಹಾಗೂ ದೊರಕುವ ಶಾಸನಾಧಾರಗಳ ನೆಲೆಯಲ್ಲಿ ಅಧ್ಯಯನ ನಡೆಸಿರುವುದು ಕಂಡುಬರುತ್ತದೆ. ಹೊಯ್ಸಳರ ಪ್ರಮುಖ ಅರಸರಾದ ವಿನಯಾದಿತ್ಯ, ವಿಷ್ಣುವರ್ಧನ, ಎರಡನೇ ಬಲ್ಲಾಳ, ಮೂರನೇ ಬಲ್ಲಾಳ ಪ್ರಮುಖರು. ಪ್ರಸ್ತುತ ದಾವಣಗೆರೆ ಪ್ರದೇಶದಲ್ಲಿ ಹೊಯ್ಸಳರ ಆಳ್ವಿಕೆಯನ್ನು ಚಿತ್ರಿಸಲು ಸಹಾಯಕವಾಗಿ ಸಾಕಷ್ಟು ಶಾಸನಗಳು ದೊರಕಿವೆ. ಹೊಯ್ಸಳ ಅರಸರಲ್ಲಿ ಪ್ರಮುಖನಾದ ವಿಷ್ಣುವರ್ಧನನು ಹಿಂದೆ ಬಳ್ಳಾರಿ ಪ್ರದೇಶದಲ್ಲಿ ಉಚ್ಚಂಗಿ ಪ್ರಾಂತ್ಯವನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿ ವಿಫಲನಾದನು. ಚಂದ್ರವಳ್ಳಿ ಕೃತಿಯಲ್ಲಿ ವಿಷ್ಣುವರ್ಧನನು ಉಚ್ಚಂಗಿ ಪ್ರದೇಶವನ್ನು ವಶಪಡಿಸಿಕೊಂಡು ಸಮಸ್ತ ಸಂಪತ್ತನ್ನೂ ಸೂರೆ ಮಾಡಿಕೊಂಡನೆಂದು ವ್ಯಕ್ತಪಡಿಸಿರುವರು. ಬಹುಷಃ ಈ ವಿಚಾರದಲ್ಲಿ ವಿದ್ವಾಂಸರ ಭಿನ್ನಾಭಿಪ್ರಾಯವಿದೆ ಎಂದು ಹೇಳಬಹುದು. ನಂತರ ೧೧೭೩ ರಲ್ಲಿ ಎರಡನೇ ಬಲ್ಲಾಳ ಅಧಿಕಾರಕ್ಕೆ ಬಂದನು.

ಈ ಕಾಲಾವಧಿಯಲ್ಲಿ ಕಲ್ಯಾಣಿ ಚಾಲುಕ್ಯರು ದುರ್ಬಲರಾಗಿದ್ದನ್ನು ಕಂಡು ಬಲ್ಲಾಳನು ಸ್ವತಂತ್ರಗೊಂಡು ೧೧೮೯ ರ ಸುಮಾರಿಗೆ ಚಾಲುಕ್ಯ ಸಾಮಂತ ನಾಯಕನಾದ ವೀರಪಾಂಡ್ಯನನ್ನು ಸೋಲಿಸಿ ಉಚ್ಚಂಗಿಯ ಪ್ರದೇಶವನ್ನು ವಶಪಡಿಸಿಕೊಂಡನು ಎಂದು ತಿಪ್ಪೇರುದ್ರಸ್ವಾಮಿಯವರು ಅಭಿಪ್ರಾಯಪಟ್ಟಿರುವರು. ನಂತರ ನೊಳಂಬವಾಡಿ ಪ್ರದೇಶವನ್ನು ಮುತ್ತಿ ರಾಜ್ಯವನ್ನು ವಿಸ್ತರಿಸಿದನು. ಇದರಿಂದ ದಾವಣಗೆರೆ ಪ್ರದೇಶ ಹೊಯ್ಸಳ ಬಲ್ಲಾಳನ ಅಧಿಕಾರದಲ್ಲಿತ್ತು ಎಂದು ತಿಳಿಯಬಹುದು. ಹೊಯ್ಸಳರಲ್ಲಿ ವೀರಬಲ್ಲಾಳನು ಅಧಿಕಾರ ಪಡೆದನು. ಈತನು ದಾವಣಗೆರೆ ಪ್ರದೇಶವನ್ನು ಆಳ್ವಿಕೆ ನಡೆಸಿದನೆಂಬುದಕ್ಕೆ ಖಚಿತ ಆಧಾರಗಳು ದೊರೆತಿರುವ ದಾಖಲಾತಿಗಳು ಚಿತ್ರದುರ್ಗ ಭಾಗದಲ್ಲಿ ದೊರಕುತ್ತಿವೆ. ದಾವಣಗೆರೆ ಪ್ರದೇಶ ಕುಂದವಾಡ ಗ್ರಾಮದಲ್ಲಿ ದೊರೆತ ಶಾಸನ ಚಿತ್ರದುರ್ಗ ಜಿಲ್ಲೆಯ ಆರ್ಥಿಕ ಜೀವನಕ್ಕೆ ಹಿಡಿದ ಕನ್ನಡಿಯಂತಿದೆ ಎಂದು ಶ್ರೀ ಲತೆಯವರು ವ್ಯಕ್ತಪಡಿಸಿರುವರು. ಹರಿಹರದ ಹರಿಹರೇಶ್ವರರ ದೇವಾಲಯದ ಶಾಸನ ವೀರಬಲ್ಲಾಳನ ಆಳ್ವಿಕೆಯನ್ನು ತಿಳಿಸುವುದು ಎನ್ನುವರು.[೪೨] ನಂತರ ಇಮ್ಮಡಿ ನರಸಿಂಹ ಸಿಂಹಾಸನಾಧೀಶನಾದ. ಈ ಅರಸನು ದಾವಣಗೆರೆ ಪ್ರದೇಶವನ್ನು ಆಳಿದನೆಂಬುದಕ್ಕೆ ಈ ಪ್ರದೇಶದಲ್ಲಿ ಯಾವುದೇ ಆಧಾರಗಳು ಲಭ್ಯವಿರುವುದಿಲ್ಲ. ನಂತರ ಸೋಮೇಶ್ವರ ಕ್ರಿ.ಶ. ೧೨೩೫ ರಲ್ಲಿ ಅಧಿಕಾರರೂಢನಾದ. ಜಗಳೂರು ತಾಲ್ಲೂಕಿನ ಕಲ್ಲೇದೇವರಪುರ ದೇವಾಲಯಕ್ಕೆ ಸಮೀಪವಿರುವ ಶಾಸನ ಈತನು ಆಳ್ವಿಕೆ ನಡೆಸಿದ ಎಂದು ತಿಳಿಸುತ್ತದೆ ಈ ವಿಚಾರವನ್ನು ಪ್ರೊ. ಲತೆ ಮತ್ತು ಬಿ. ರಾಜಶೇಖರಪ್ಪನವರು ಚಂದ್ರವಳ್ಳಿ ಕೃತಿಯಲ್ಲಿ ತಿಳಿಯಪಡಿಸಿರುವರು. ಇದೇ ವಿಚಾರವನ್ನು ಹೆಚ್. ತಿಪ್ಪೇಸ್ವಾಮಿಯವರು ತಮ್ಮ ಅಧ್ಯಯನದಲ್ಲಿ ತಿಳಿಯಪಡಿಸಿರುವರು. ದಾವಣಗೆರೆ ತಾಲ್ಲೂಕು ಲೋಕಿಕೆರೆ ಗ್ರಾಮದ ಈಶ್ವರ ದೇವಾಲಯದ ಶಾಸನ ಸೋಮೇಶ್ವರನ ಬಿರುದಾವಳಿಗಳನ್ನು ತಿಳಿಸುತ್ತದೆ ಎಂದು ಶ್ರೀ ಲತೆಯವರು ತಿಳಿಸಿರುವರು. ಇದೇ ಕಾಲಾವಧಿಯಲ್ಲಿ ಅಂದರೆ ೧೨೫೪ ರಲ್ಲಿ ಸೋಮೇಶ್ವರನು ವಿಧಿವಶನಾಗುವ ಮೊದಲೇ ಚಿತ್ರದುರ್ಗ, ದಾವಣಗೆರೆ, ಹೊಳಲ್ಕೆರೆ, ಹಿರಿಯೂರು ಪ್ರದೇಶಗಳು ಆಳ್ವಿಕೆಗೆ ಒಳಪಟ್ಟಿದ್ದವೆಂದು ತಿಳಿಸುವರು. ನಂತರ ಮುಮ್ಮಡಿ ನರಸಿಂಹ ಅರಸೊತ್ತಿಗೆಯನ್ನು ಪಡೆದನು. ಈತನು ಆಡಳಿತ ನಡೆಸಿದನೆಂಬುದಕ್ಕೆ ಹರಿಹರ ಪ್ರದೇಶದ ಹರಿಹರದೇವಾಲಯದ ಉತ್ತರ ಭಾಗದಲ್ಲಿರುವ ವೀರಗಲ್ಲು ತಿಳಿಸಿಕೊಡುತ್ತದೆ. ನಂತರ ಕ್ರಿ.ಶ. ೧೨೯೧ ರಲ್ಲಿ ವೀರಬಲ್ಲಾಳನು ಅಧಿಕಾರಕ್ಕೆ ಬಂದು ಚಿತ್ರದುರ್ಗ, ಬಳ್ಳಾರಿ ಪ್ರದೇಶಗಳಲ್ಲಿ ಅಧಿಕಾರ ನಡೆಸಿದನೆಂದು ಗ್ಯಾಸೆಟಿಯರ್‌ಗಳಲ್ಲಿ ತಿಳಿಯಪಡಿಸಲಾಗಿದೆ. ಈ ವೇಳೆಗೆ ಮಲ್ಲಿಖಾಫ್‌ರನು ದಾಳಿ ಮಾಡಿ ಹೊಯ್ಸಳ ಸಾಮ್ರಾಜ್ಯವನ್ನು ವಶಪಡಿಸಿಕೊಂಡನೆಂದು ಇತಿಹಾಸ ತಿಳಿಸುತ್ತದೆ.

ದಾವಣಗೆರೆ ಪ್ರದೇಶ ಹೊಯ್ಸಳರ ಆಳ್ವಿಕೆಗೆ ಒಳಪಟ್ಟಿತ್ತೆಂದು ದೃಢಪಡಿಸಲು ಗ್ಯಾಸೆಟಿಯರ್ ಮತ್ತು ನಾಗಯ್ಯಂವರ ಬರಹವ ಆಧಾರದ ಮೂಲಕ ಹರಪನಹಳ್ಳಿಯ ಉಚ್ಚಂಗಿದುರ್ಗ, ನೀಲಗುಂದ, ಬಾಗಳಿ, ಅಣಜಿಗೇರೆ ಪ್ರದೇಶಗಳಲ್ಲಿ ದೊರೆತಿರುವ ಶಾಸನಗಳಿಂದ ಈ ಭಾಗ ಹೊಯ್ಸಳರಿಗೆ ಸೇರಿತ್ತೆಂದು ಅಭಿಪ್ರಾಯ ಪಟ್ಟಿರುವರು.[೪೩] ಪ್ರೊ. ಲತೆ ಮತ್ತು ರಾಜಶೇಖರಪ್ಪನವರು ಕಲ್ಲೇದೇವರಪುರ, ಲೋಕಿಕೆರೆ, ಹರಿಹರಗಳಲ್ಲಿ ದೊರೆತಿರುವ ಶಾಸನಗಳಿಂದ ಹೊಯ್ಸಳರು ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿದರೆಂದು ತಿಳಿಸಿರುವರು. ಕೊಟ್ರೇಶ್ ಉತ್ತಂಗಿಯವರು ಹೊನ್ನಾಳಿಯ ಬೇಲಿ ಮಲ್ಲೂರು, ಬೆಳಗುತ್ತಿ, ಕುರವರ ಗಡ್ಡೆ, ಅರಕೆರೆ, ಕಣಿವೆ ಗಲುಗಟ್ಟ, ಮಾವನಕೋಟೆ, ಚಟ್ನಿಹಳ್ಳಿಗಳಲ್ಲಿ ದೊರೆತ ಶಾಸನಗಳನ್ನಾಧರಿಸಿ ಹೊನ್ನಾಳಿ ಪ್ರದೇಶ ಹೊಯ್ಸಳರ ಅಧಿಕಾರದಲ್ಲಿತ್ತು ಎಂದು ತಿಳಿಸಿರುವರು. ಮತ್ತು ಸಮುತೀಂದ್ರನಾಡಿಗರು ಚನ್ನಗಿರಿಯಲ್ಲಿ ದೊರೆತ ೧೨ ಶಾಸನಗಳನ್ನಾಧರಿಸಿ ಚನ್ನಗಿರಿ ತಾಲ್ಲೂಕು[೪೪] ಹೊಯ್ಸಳರ ಆಳ್ವಿಕೆಗೆ ಒಳಪಟ್ಟಿತ್ತೆಂದು ತಿಳಿಸಿದ್ದಾರೆ. ಹಾಗೆಯೇ ಹೆಚ್. ತಿಪ್ಪೇಸ್ವಾಮಿಯವರು ಸಹ ದಾವಣಗೆರೆ ಪ್ರದೇಶದಲ್ಲಿ ದೊರೆತ ಎಲ್ಲಾ ಶಾಸನಗಳಿಂದ ಹೊಯ್ಸಳರು ದಾವಣಗೆರೆ ಪ್ರದೇಶವನ್ನು ಆಳಿರುವರು ಎಂದು ತಮ್ಮ ಅಧ್ಯಯನದಲ್ಲಿ ತಿಳಿಯಪಡಿಸಿರುವರು. ಈ ಕಾಲಾವಧಿಯಲ್ಲಿ ಮಹಮ್ಮದೀಯರ ಆಗಮನವಾಯಿತು. ಆ ಸಂದರ್ಭದಲ್ಲಿ ಅಧ್ಯಯನದ ದೃಷ್ಟಿಯಿಂದ ಪ್ರಾಚೀನ ಇತಿಹಾಸ ಕಾಲ ಮುಕ್ತಾಯವಾಗಿ ಮಧ್ಯಯುಗೀನ ಕಾಲದ ಇತಿಹಾಸ ಆರಂಭವಾಯಿತು. ದಾವಣಗೆರೆ ಪ್ರದೇಶದ ಪ್ರಾಚೀನ ಚರಿತ್ರೆಯನ್ನು ಕುರಿತಾಗಿ ಪ್ರತ್ಯೇಕ ಕೃತಿಗಳು ರಚನೆಯಾಗಿರುವುದು ಕಾಣಬರುವುದಿಲ್ಲ. ಏಕೆಂದರೆ ದಾವಣಗೆರೆ ಜಿಲ್ಲೆಯ ಕೆಲವು ತಾಲ್ಲೂಕುಗಳು ೧೯೯೭ ರ ಪೂರ್ವದಲ್ಲಿ ಚಿತ್ರದುರ್ಗ, ಶಿವಮೊಗ್ಗ

ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಸೇರ್ಪಡೆಯಾಗಿದ್ದವು. ನಂತರ ೧೯೯೭ ಆಗಸ್ಟ್ ೧೫ ರಂದು ಈ ಮೂರು ಜಿಲ್ಲೆಗಳಿಂದ ದಾವಣಗೆರೆ, ಹರಿಹರ, ಜಗಳೂರು, ಚನ್ನಗಿರಿ, ಹೊನ್ನಾಳಿ ಮತ್ತು ಹರಪನಹಳ್ಳಿ ತಾಲ್ಲೂಕುಗಳನ್ನು ಒಟ್ಟುಗೂಡಿಸಿ ದಾವಣಗೆರೆ ಜಿಲ್ಲೆ ಅಸ್ತಿತ್ವ ಪಡೆದುಕೊಂಡಿತು. ಆದ್ದರಿಂದ ದಾವಣಗೆರೆ ಪ್ರದೇಶದ ಪ್ರಾಚೀನ ಚರಿತ್ರೆ ಕುರಿತು ಈ ಮೂರು ಜಿಲ್ಲೆಗಳ ಕೆಲವು ತಾಲ್ಲೂಕುಗಳು ಇಂದಿನ ಜಿಲ್ಲೆಗೆ ಸೇರ್ಪಡೆಯಾಗಿರುವುದರಿಂದ ಅವುಗಳ ಪ್ರಾಚೀನ ಇತಿಹಾಸ ಕುರಿತು ಸಂಕ್ಷಿಪ್ತವಾಗಿ ಸಮೀಕ್ಷೆ ಮಾಡುವುದು ಅತ್ಯವಶ್ಯಕ. ಈ ಹಿನ್ನೆಲೆಯಲ್ಲಿ ಈ ಪ್ರದೇಶಗಳ ಮೇಲೆ ನಡೆದ ಅಧ್ಯಯನಗಳನ್ನು ಪ್ರಸ್ತುತ ಜಿಲ್ಲೆಗೆ ಸೇರಿಸಿಕೊಂಡು ಅಧ್ಯಯನ ಮಾಡಲಾಗಿದೆ.

ಮೊದಲನೆಯದಾಗಿ ಹರಪನಹಳ್ಳಿ ಚರಿತ್ರೆ ಕುರಿತಂತೆ ೧೯೬೪ ರ ಗ್ಯಾಸೆಟಿಯರ್ ಹಾಗೂ ೧೯೭೨ ರಲ್ಲಿ ಕೆ. ಅಭಿಶಂಕರ್ ಅವರು ಮೈಸೂರು, ಬಳ್ಳಾರಿ ಜಿಲ್ಲೆಯ ಗ್ಯಾಸೆಟಿಯರ್ ಸಂಪಾದಿಸಿರುವರು. ಇದು ಹರಪನಹಳ್ಳಿ ಚರಿತ್ರೆಯ ಪ್ರತಿಯೊಂದು ಅಂಶಗಳನ್ನು ತಿಳಿಯಪಡಿಸುತ್ತದೆ. ಸತ್ಯನ್ ಬಿ ಎನ್ ಅವರು ಚಿತ್ರದುರ್ಗ ಜಿಲ್ಲಾ ಗ್ಯಾಸೆಟಿಯರ್ ೧೯೭೨ ರಲ್ಲಿ ಪ್ರಕಟಿಸಿರುವರು. ಇದರಿಂದ ದಾವಣಗೆರೆ, ಹರಿಹರ, ಜಗಳೂರು ತಾಲ್ಲೂಕುಗಳ ಪ್ರತಿಯೊಂದು ಮಾಹಿತಿಯನ್ನು ನೀಡಿರುವರು. ನಂತರ ಕರ್ನಾಟಕ ಸರ್ಕಾರ ಶಿವಮೊಗ್ಗ ಜಿಲ್ಲಾ ಗ್ಯಾಸೆಟಿಯರ್‌ನಲ್ಲಿ ಚನ್ನಗಿರಿ ಮತ್ತು ಹೊನ್ನಾಳಿ ತಾಲ್ಲೂಕುಗಳ ಚರಿತ್ರೆಯನ್ನು ಸಂಪಾದಿಸಲಾಗಿದೆ. ನಂತರ ಕುಂಭಾಸ ರವರ 'ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ', ಮಹಾದೇವ, ಸುಬ್ಬಣ್ಣರೈ, ಮಾಧವ ಪೆರಾಜೆಯವರು 'ಹೊಸಪೇಟೆ ತಾಲ್ಲೂಕು ದರ್ಶನ', ಜಿ. ಎಂ. ನಾಗಯ್ಯ ರವರು 'ಬಳ್ಳಾರಿ ಜಿಲ್ಲೆಯ ಶಾಸನಗಳು' (೧೯೯೧), ಇವು ಈಗಿನ ದಾವಣಗೆರೆ ಜಿಲ್ಲೆಯ ಹಗಪನಹಳ್ಳಿ ತಾಲ್ಲೂಕಿನ ಚರಿತ್ರೆಯನ್ನು ತಿಳಿಸುವಲ್ಲಿ ಪ್ರಮುಖವೆನಿಸಿವೆ. ಇಕ್ಬಾಲ್ ಅಹಮ್ಮದ್‌ರ ಚನ್ನಗಿರಿ ದರ್ಶನಿ (೧೯೮೧) ಭಾಗ ಒಂದು ಮತ್ತು ಎರಡು, ಬೆನಕನಹಳ್ಳಿ ಜಿ. ನಾಯಕರ ಚನ್ನಗಿರಿ ತಾಲ್ಲೂಕು ದರ್ಶನ ೧೯೮೬, ಕೆ.ಜಿ. ಸುರೇಶರವರ ಚನ್ನಗಿರಿ ತಾಲ್ಲೂಕಿನ ಪಶ್ಚಿಮ ಭಾಗದ ಪುರಾತತ್ವ ಒಂದು ಅಧ್ಯಯನ ಇವುಗಳಿಂದ ದಾವಣೆಗೆರೆ ಪ್ರದೇಶದ ಚರಿತ್ರೆಯ ಮೇಲೆ ಬೆಳಕು ಚೆಲ್ಲಿದಂತಾಗುತ್ತದೆ.

ಹೊನ್ನಾಳಿ ತಾಲ್ಲೂಕಿನ ಬಗ್ಗೆ 'ಮಲೆಕರ್ನಾಟಕದ ಅರಸು ಮನೆತನಗಳು' ಕೃತಿಯನ್ನು ರಾಜಾರಾಮ ಹೆಗಡೆ ಮತ್ತು ಅಶೋಕ ಶೆಟ್ಟರ್ ೨೦೦೧ ರಲ್ಲಿ ರಚಿಸಿರುವರು. ಇದರಲ್ಲಿ ಬೆಳಗುತ್ತಿ ಸಿಂಧರ ಬಗ್ಗೆ ವಿವರ ನೀಡಲಾಗಿದೆ. ಡಾ. ಕೊಟ್ರೇಶ್ ಉತ್ತಂಗಿ ಯವರ 'ಹೊನ್ನೆಲೆಗಳು' ಕೃತಿ ಹೊನ್ನಾಳಿ ತಾಲ್ಲೂಕಿನ ಇತಿಹಾಸವನ್ನು ತಿಳಿಸುತ್ತದೆ. ದಾವಣಗೆರೆ, ಹರಿಹರ, ಜಗಳೂರು, ತಾಲ್ಲೂಕುಗಳ ಚರಿತ್ರೆ ಕುರಿತಂತೆ ಎಂ.ವಿ. ಶ್ರೀನಿವಾಸ್, ಪ್ರೊ. ಲಕ್ಷ್ಮಣ್ ತೆಲಗಾವಿಯವರ (ಸಂ.),'ಚಂದ್ರವಳ್ಳಿ' ಕೃತಿ, ೧೯೭೬, ಟಿ. ಗಿರಿಜ ರವರ 'ಚಿತ್ರದುರ್ಗದ ಜಿಲ್ಲಾ ದರ್ಶಿನಿ', 'ದಾವಣಗೆರೆ ದರ್ಶಿನಿ' ೧೯೯೭, 'ದಾವಣಗೆರೆ ಇದು ನಮ್ಮ ಜಿಲ್ಲೆ', ಶಂಕರನಾರಾಯಣರವರು 'ಶ್ರೀ ಹರಿಹರೇಶ್ವರ ದೇವಾಲಯದ ಅಧ್ಯಯನ', ಹೆಚ್. ಎಸ್. ವಸಂತರವರ 'ಕೋಗಳಿ ನಾಡು: ಸಮಗ್ರ ಅಧ್ಯಯನ, ಕಮಲದಾನಿ ಗುರುರಾಯರ 'ಹರಿಹರಕ್ಷೇತ್ರದ ಮಹಾತ್ಮೆ', ಬಳ್ಳಿಕೆರೆ ಹನುಮಂತಪ್ಪರವರ 'ಹರಿಹರ ತಾಲೂಕಾ ದರ್ಶಿನಿ, ಹೆಚ್. ತಿಪ್ಪೇಸ್ವಾಮಿಯವರ 'ದಾವಣಗೆರೆ ಜಿಲ್ಲೆಯ ದೇವಾಲಯಗಳು', ಶಿವತಾರಕ್ ಕೆ.ಬಿ. ಅವರ 'ಕರ್ನಾಟಕದ ಪುರಾತತ್ವ ನೆಲೆಗಳು', ಲಕ್ಷ್ಮಣ್ ತೆಲಗಾವಿಯವರ 'ಮೌರ್ಯ ಮತ್ತು ಶಾತವಾಹನರ ಯುಗ', ಮತ್ತು 'ಚಿತ್ರದುರ್ಗ ಜಿಲ್ಲಾ ಇತಿಹಾಸ ಅಧ್ಯಯನದ ವ್ಯಾಪಕತೆ ಮತ್ತು ಸಾಧ್ಯತೆ' ಇನ್ನಿತರ ಕೃತಿಗಳು ದಾವಣೆಗೆರೆ ಚರಿತ್ರೆ ಕುರಿತಂತೆ ತಿಳಿಸುತ್ತವೆ. ಬಹುತೇಕ ಕೃತಿಗಳು ಗ್ಯಾಸೆಟಿಯರ್‌ಗಳನ್ನು ಅವಲಂಬಿಸಿ ರಚನೆಯಾಗಿವೆಯೆಂದು ಹೇಳಬಹುದು. ಆದರೂ ಸಹ ಇವುಗಳನ್ನು ಕೈಬಿಡುವಂತಿಲ್ಲ. ಏಕೆಂದರೆ ಪ್ರತಿಯೊಂದು ಕೃತಿಯು ಕೆಲವು ಹೊಸ ವಿಚಾರಗಳ ಮೇಲೆ ಬೆಳಕು ಬಿತ್ತರಿಸಿವೆ. ಇವುಗಳ ಜೊತೆಗೆ ಕರ್ನಾಟಕ ಚರಿತ್ರೆ ಸಂಪುಟ ಒಂದು ಮತ್ತು ಎರಡು ಸಹ ದಾವಣೆಗೆರೆ ಪ್ರದೇಶದ ವಿವರ ನೀಡುತ್ತವೆ.

೪.೨ ದ್ವಿತೀಯ ಹಂತ : ಮಧ್ಯಕಾಲ

(ವಿಜಯನಗರ ಅರಸರ ಕಾಲದಿಂದ ಮೈಸೂರಿನ ಟಿಪ್ಪುಸುಲ್ತಾನನ ಕಾಲದವರೆಗೆ)

ಕರ್ನಾಟಕ ಚರಿತ್ರೆಯಲ್ಲಿ ಹೊಯ್ಸಳ ಸಾಮ್ರಾಜ್ಯ ಪತನದ ನಂತರ ದಕ್ಷಿಣಭಾರತದಲ್ಲಿ ಕ್ರಿ.ಶ. ೧೩೩೬ ರಲ್ಲಿ ಹಂಪಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಯಿತು. ಕ್ರಿ.ಶ. ೧೩೩೬

ರಿಂದ ೧೫೬೫ರ ವರೆಗೆ ವಿಜಯನಗರ ಸಾಮ್ರಾಜ್ಯವನ್ನು ಸಂಗಮ, ಸಾಳುವ, ತುಳು ಮತ್ತು ಅರವೀಡು ವಂಶಗಳು ಅಧಿಕಾರ ನಡೆಸಿದ್ದವು. ಈ ವಂಶದ ಅರಸರುಗಳಾದ ಒಂದನೇ ಹರಿಹರ, ಒಂದನೇ ಬುಕ್ಕ, ಎರಡನೇ ಹರಿಹರ, ಮೊದಲನೆ ದೇವರಾಯ, ಇಮ್ಮಡಿ ದೇವರಾಯ, ಕೃಷ್ಣದೇವರಾಯ, ಅಚ್ಯುತರಾಯ, ಒಂದನೇ ವೆಂಕಟ, ಸದಾಶಿವ, ಅಳಿಯ ರಾಮರಾಯ, ಈ ಅರಸರು ಕರ್ನಾಟಕವನ್ನಲ್ಲದೆ ಇಡೀ ದಕ್ಷಿಣ ಭಾರತವನ್ನು ಆಳ್ವಿಕೆ ನಡೆಸಿದರೆಂಬುದನ್ನು ಇತಿಹಾಸಕಾರರು, ವಿದೇಶಿ ಬರಹಗಾರರು ತಿಳಿಸಿರುವರು. ಹಾಗೆಯೇ ೧೫೬೫ ರಲ್ಲಿ ಬಹಮನಿಯರ ದಾಳಿಯಿಂದ ಮತ್ತು ಆಂತರಿಕ ಸಂಘರ್ಷಗಳಿಂದ ವಿಜಯನಗರ ಸಾಮ್ರಾಜ್ಯ ಇತಿಹಾಸದಲ್ಲಿ ಕಾಣದಾಯಿತು.

ದಾವಣಗೆರೆ ಪ್ರದೇಶ ವಿಜಯನಗರ ಸಾಮ್ರಾಜ್ಯದ ಆಳ್ವಿಕೆಗೆ ಒಳಪಟ್ಟಿತ್ತೇ ಇಲ್ಲವೆ ಎಂಬುದಕ್ಕೆ ಹಲವು ಇತಿಹಾಸಕಾರರ ವಿವಿಧ ಪ್ರದೇಶಗಳ ಅಧ್ಯಯನಗಳಿಂದ, ಗ್ಯಾಸೆಟಿಯರ್‌ಗಳಿಂದ ತಿಳಿಯಬಹುದಾಗಿದೆ. ಮುಖ್ಯವಾಗಿ ಈ ಪ್ರದೇಶದಲ್ಲಿ ವಿಜಯನಗರ ಕಾಲದ ಶಾಸನಗಳು, ನಾಣ್ಯಗಳು, ದೇವಾಲಯಗಳು, ಕೈಫಿಯತ್ತುಗಳು, ಅವರ ಆಡಳಿತದ ಪ್ರತೀಕವಾಗಿವೆ ಎನ್ನಬಹುದು. ಗ್ಯಾಸೆಟಿಯರ್‌ಗಳು ಇವರ ಅಡಳಿತ ಕುರಿತು ತಿಳಿಸುವಲ್ಲಿ ಪ್ರಧಾನವಾಗಿವೆ. ಇವುಗಳನ್ನು ಆಧರಿಸಿ ರಚನೆಯಾದ ಅನೇಕ ಕೃತಿಗಳಲ್ಲಿ ದಾವಣಗೆರೆ ಪ್ರದೇಶ ವಿಜಯನಗರದ ಆಳ್ವಿಕೆಗೆ ಒಳಪಟ್ಟಿತ್ತು ಎಂದು ತಿಳಿಸುತ್ತವೆ. ಕೆ. ಎಸ್. ಶಿವಣ್ಣರವರು ಎರಡನೇ ಹರಿಹರನ ಕಾಲಕ್ಕೆ ಸೇರಿದ ದಾವಣಗೆರೆ ಶಾಸನ ಹಾಗೂ ಚಿತ್ರದುರ್ಗ ಜಿಲ್ಲೆಯಲ್ಲಿ ದೊರೆತ ಶಾಸನಗಳನ್ನು ಆಧರಿಸಿ ಈ ಪ್ರದೇಶ ವಿಜಯನಗರ ಆಳ್ವಿಕೆಗೆ ಸೇರಿತ್ತು ಎನ್ನುವ ವಿಚಾರವನ್ನು ಚಂದ್ರವಳ್ಳಿ ಕೃತಿಯಲ್ಲಿ ಉಲ್ಲೇಖಿಸಿದ್ದಾರೆ.[೪೫] ಬಿ. ರಾಜಶೇಖರಪ್ಪನವರು ಜಗಳೂರು ತಾಲ್ಲೂಕಿನ ಗುತ್ತಿದುರ್ಗ, ಕೃಷ್ಣಪುರ, ನಿಟ್ಟೂರುಗಳಲ್ಲಿ ದೊರೆತ ಶಾಸನಗಳು ವಿಜಯನಗರ ಆಳ್ವಿಕೆ ಕಾಲದವು ಎಂದು 'ಇತಿಹಾಸ ಕಥನ'ದಲ್ಲಿ ದಾಖಲಿಸಿರುವರು.[೪೬] ಹರಿಹರನ ಅರ್ಧವರಹಗಳು ಜಗಳೂರು ತಾಲ್ಲೂಕಿನ ಬಿಳಿಚೋಡಿನಲ್ಲಿ ದೊರೆತಿರುವುದನ್ನು ಗಮನಿಸಿ ಹೆಚ್. ತಿಪ್ಪೇಸ್ವಾಮಿಯವರು ತಮ್ಮ ಅಧ್ಯಯನದಲ್ಲಿ ಈ ಪ್ರದೇಶ ವಿಜಯನಗರದ ಆಳ್ವಿಕೆಗೆ ಒಳಪಟ್ಟಿತ್ತೆಂದು[೪೭] ತಿಳಿಸಿರುವರು. ಹೊನ್ನಾಳಿ ತಾಲ್ಲೂಕಿನಲ್ಲಿ ಕಳಸಾಪುರ, ಕುರುವದ ಗುಡ್ಡ, ಸೌಳಂಗ, ಸುರಹೊನ್ನೆ, ಸಿಂಗಟಗೆರೆಗಳಲ್ಲಿ ದೊರೆತ ಶಾಸನಗಳನ್ನು ಹಾಗೂ ನ್ಯಾಮತಿ, ಚಿಕ್ಕ ಗೋಶಿಗೆರೆ, ಕುರುವದಗಡ್ಡೆಗಳಲ್ಲಿ ಲಭ್ಯವಾದ ಶಾಸನಗಳು[೪೮] ವಿಜಯನಗರ ಆಳ್ವಿಕೆಗೆ ಸೇರಿದ್ದವು ಎಂದು ಕೊಟ್ರೇಶ್ ಉತ್ತಂಗಿಯವರು ತಮ್ಮ 'ಹೊನ್ನೆಲೆಗಳು' ಕೃತಿಯಲ್ಲಿ ಉಲ್ಲೇಖಿಸಿರುವರು. ಹರಪನಹಳ್ಳಿ ಪ್ರದೇಶ ವಿಜಯನಗರ ಸಾಮ್ರಾಜ್ಯಕ್ಕೆ ಸೇರಿತ್ತು ಎನ್ನುವುದನ್ನು ಗ್ಯಾಸೆಟಿಯರ್, ಮತ್ತು ಹೊಸಪೇಟೆ ತಾಲ್ಲೂಕು ದರ್ಶನದಲ್ಲಿ ಹಾಗೂ ಮಲ್ಲಿಕಾರ್ಜುನ ಕನ್ನಿಹಳ್ಳಿಯವರು ತಿಳಿಯಪಡಿಸಿರುವರು. ಈ ರೀತಿಯಾದ ಅಧ್ಯಯನ ಕೃತಿಗಳಿಂದ, ಕೃತಿಕಾರರ ಅಭಿಪ್ರಾಯದಿಂದ ಶಿವಮೊಗ್ಗ, ಚಿತ್ರದುರ್ಗ, ಬಳ್ಳಾರಿ ಪ್ರದೇಶಗಳನ್ನು ಕುರಿತು ತಾಲ್ಲೂಕು ದರ್ಶನಗಳು ದಾವಣಗೆರೆ ಪ್ರದೇಶ ವಿಜಯನಗರ ಸಾಮ್ರಾಜ್ಯದ ಆಡಳಿತದ ವ್ಯಾಪ್ತಿಗೊಳಪಟ್ಟಿತ್ತು ಎಂಬುದನ್ನು ಗುರುತಿಸುತ್ತವೆ.

ಪಾಳೆಯಗಾರರು

ವಿಜಯನಗರ ಪತನದನಂತರ ಅಧೀನರಾಗಿದ್ದ ಅನೇಕ ಪಾಳೆಯಪಟ್ಟುಗಳು ಸ್ವತಂತ್ರರಾಗಿ ತಮ್ಮ ಪ್ರಾಂತ್ಯ-ಸೀಮೆಗಳ ಆಡಳಿತವನ್ನು ತಾವೇ ನಡೆಸಿಕೊಂಡು ಬಂದರೆಂದು ಇತಿಹಾಸ ತಿಳಿಸುತ್ತದೆ. ಅಂಥ ರಾಜವಂಶಗಳಲ್ಲಿ ಚಿತ್ರದುರ್ಗ, ಬಸವಾಪಟ್ಟಣ, ಸಂತೇಬೆನ್ನೂರು, ತರೀಕೆರೆ ಮತ್ತು ಹರಪನಹಳ್ಳಿಯ ಪಾಳೆಯಗಾರರು ಪ್ರಮುಖರಾಗಿರುವರು. ಕ್ರಿ.ಶ. ೧೬ ನೇ ಶತಮಾದಿಂದ ಕ್ರಿ.ಶ. ೧೮ ನೇ ಶತಮಾನದವರೆಗೆ ಚಿತ್ರದುರ್ಗ, ದಾವಣಗೆರೆ, ಚಿಕ್ಕಮಗಳೂರು, ಶಿವಮೊಗ್ಗ, ಹಾವೇರಿ, ಬಳ್ಳಾರಿ ಮುಂತಾದ ಜಿಲ್ಲೆಗಳ ವ್ಯಾಪ್ತಿಯಲ್ಲಿ ಅನೇಕ ಭೂಭಾಗಗಳನ್ನು ತಮ್ಮ ಆಡಳಿತ ವ್ಯಾಪ್ತಿಗೆ ಸೇರಿಸಿಕೊಂಡು ಸಮರ್ಥರಾಗಿ ರಾಜ್ಯಾಡಳಿತ ನಡೆಸುತ್ತಿದ್ದುದಾಗಿ ಅವರ ಶಾಸನಗಳು, ಕೈಫಿಯತ್ತುಗಳು, ಲೇಖನಗಳಿಂದ ತಿಳಿದುಬರುತ್ತದೆ.

ದಾವಣಗೆರೆ ಪ್ರದೇಶ ಇತ್ತೀಚಿಗೆ ಜಿಲ್ಲೆಯಾಗಿ ಮಾರ್ಪಟ್ಟಿರುವುದರಿಂದ ಮುಖ್ಯವಾಗಿ ದಾವಣಗೆರೆ ಪ್ರದೇಶದ ಪಾಳೆಯಗಾರರು ಎಂಬ ಶೀರ್ಷಿಕೆಯನ್ನಿಟ್ಟುಕೊಂಡು ಅಧ್ಯಯನ ಮಾಡಿದ ಯಾವ ಪ್ರಯತ್ನವೂ ಕಾಣಬರುವುದಿಲ್ಲ. ದಾವಣಗೆರೆ ಪ್ರದೇಶದಲ್ಲಿ ಚಿತ್ರದುರ್ಗ ಪಾಳೆಯಗಾರರು, ಬಸವಾಪಟ್ಟಣ, ಸಂತೆಬೆನ್ನೂರು, ತರೀಕೆರೆ, ಹರಪನಹಳ್ಳಿ,

ಪಾಳೆಯಗಾರರು ಆಳ್ವಿಕೆ ನಡೆಸಿರುವುದನ್ನು ಅವಲೋಕಿಸಿದರೆ ದಾವಣಗೆರೆ ಪ್ರದೇಶ ಚಾರಿತ್ರಿಕವಾಗಿ ಮಹತ್ವ ಪಡೆದುಕೊಂಡಿದೆ ಎನ್ನಬಹುದು.

ಪಾಳೆಯಗಾರ ಎಂಬ ಅರ್ಥವನ್ನು ನೋಡುವುದಾದರೆ ಚಿಕ್ಕ ಸೀಮೆಯ ಅಧಿಪತಿ, ಮಾಂಡಲಿಕ ಎಂಬ ಅರ್ಥವಿದೆ. ಎಂ.ಸ್. ಪುಟ್ಟಣ್ಣ ಅವರ 'ಚಿತ್ರದುರ್ಗದ ಪಾಳೆಯಗಾರರು' ಕೃತಿಯಲ್ಲಿ ಪಾಳೆಯಗಾರ ಶಬ್ದದ ಕುರಿತಂತೆ ದಂಡಿನೊಡನೆ ಪಾಳೆಯವನ್ನು ಹಾಕಿ ಇಳಿದುಕೊಂಡು ಕದನಕ್ಕೆ ಸಿದ್ಧರಾದವರು ಎಂದು ಅರ್ಥೈಸಿರುವರು. ವಿಜಯನಗರೋತ್ತರವಾಗಿ ಕರ್ನಾಟಕದಲ್ಲಿ ಪಾಳೆಯಗಾರರು ಆಳ್ವಿಕೆ ಕಾಣಬಹುದು. ಅವರಲ್ಲಿ ಮೊದಲು ಚಿತ್ರದುರ್ಗ ಪಾಳೆಯಗಾರರು ಪ್ರಮುಖರು.

ಚಿತ್ರದುರ್ಗದ ಪಾಳೆಯಗಾರರು

ಪ್ರಸ್ತುತವಾಗಿ ಚಿತ್ರದುರ್ಗ ಜಿಲ್ಲೆಯಿಂದ ದಾವಣಗೆರೆ ಪ್ರದೇಶ ಒಳಪಟ್ಟರೂ ಸಹ ಹಿಂದೆ ಚಿತ್ರದುರ್ಗ ಪಾಳೆಯಗಾರಿಕೆಗೆ ಮೂಲ ಪ್ರದೇಶವಾಗಿತ್ತು ಎನ್ನಬಹುದು. ಈ ಪಾಳೆಯಗಾರರ ಆಳ್ವಿಕೆಯನ್ನು ತಿಳಿಸುವಲ್ಲಿ ಗ್ಯಾಸೆಟಿಯರ್‌ಗಳು ಮೂಲ ಆಕರಗಳಾಗಿವೆ. ನಂತರ ಚಿತ್ರದುರ್ಗ ಪಾಳೆಯಗಾರರ ಕುರಿತಂತೆ ಸಾಕಷ್ಟು ಕೃತಿಗಳು ರಚನೆಗೊಂಡಿರುವವು. ಅವುಗಳಲ್ಲಿ ಎಂ. ಎಸ್. ಪುಟ್ಟಣ್ಣನವರ ಚಿತ್ರದುರ್ಗದ ಪಾಳೆಯಗಾರರು, ಟಿ. ಎಸ್. ಗಂಡುಗಲಿ, 'ಪ್ರಮುಖ' ಇವು ಮುಖ್ಯವಾಗಿವೆ. ತ.ರಾ.ಸುರವರ ದುರ್ಗಾಸ್ತಮಾನ ಕೃತಿಯು ಚಿತ್ರದುರ್ಗದ ಚರಿತ್ರೆಯನ್ನು ವಸ್ತುವನ್ನಾಗಿಟ್ಟುಕೊಂಡು ರಚನೆಗೊಂಡ ಸೃಜನಶೀಲ ಕೃತಿಯಾದರೂ ಚಿತ್ರದುರ್ಗದ ಚರಿತ್ರೆಯ ಕುರಿತಾಗಿ ಅರ್ಥಪೂರ್ಣ ವ್ಯಾಖ್ಯಾನ, ಒಳನೋಟಗಳನ್ನು ಹೊಂದಿದೆ. ಪ್ರೊ. ಲಕ್ಷ್ಮಣ್ ತೆಲಗಾವಿ, ಎಂ. ಜಿ. ವೆಂಕಟೇಶಯ್ಯ, ಬಿ. ರಾಜಶೇಖರಪ್ಪ, ಮೀರಾಸಾಬಿಹಳ್ಳಿ ಶಿವಣ್ಣ, ವೈ. ಹೆಚ್. ನಾಯಕವಾಡ, ಶ್ರೀಶೈಲ ಆರಾಧ್ಯ, ಬಿ.ಎಲ್.ವೇಣು, ಮೊದಲಾದವರು ಚಿತ್ರದುರ್ಗ ಚರಿತ್ರೆ, ಸಂಸ್ಕೃತಿ ಕುರಿತಂತೆ ಮೌಲಿಕವಾದ ಅಧ್ಯಯನ ನಡೆಸಿರುತ್ತಾರೆ.

ಚಿತ್ರದುರ್ಗದ ಅರಸರು ಕ್ರಿ.ಶ. ೧೬ನೇ ಶತಮಾನದಲ್ಲಿ ಮಧ್ಯಕಾಲದಿಂದ ಕ್ರಿ.ಶ. ೧೮ನೇ ಶತಮಾನದವರೆಗೆ ಸುಮಾರು ಎರಡು ಶತಮಾನಗಳಿಗೂ ಹೆಚ್ಚು ಕಾಲ ಚಿತ್ರದುರ್ಗವನ್ನು ಕೇಂದ್ರವಾಗಿಟ್ಟುಕೊಂಡು ದಾವಣಗೆರೆ ಪ್ರದೇಶವನ್ನು ಆಳ್ವಿಕೆ ನಡೆಸಿದರು. ಇವರು ಮೂಲತಃ ಬೇಡ ಪಂಗಡಕ್ಕೆ ಸೇರಿದವರೆಂದು ಗ್ಯಾಸೆಟಿಯರ್ ಉಲ್ಲೇಖಿಸುತ್ತದೆ.[೪೯] ಈ ವಂಶಜರ ಪೂರ್ವಿಕರು ಕರ್ನೂಲು ಜಿಲ್ಲೆ ಜಡೆಕಲ್ಲು, ಕರೆಮಲೆ, ರಾಯದುರ್ಗಗಳಲ್ಲಿ ನೆಲೆಸಿದ್ದು ನಂತರ ಚಿತ್ರದುರ್ಗಕ್ಕೆ ಬಂದು ನೆಲೆಸಿದರೆಂದು ಲಕ್ಷ್ಮಣ್ ತೆಲಗಾವಿಯವರು ವಿವರಿಸಿದ್ದಾರೆ.[೫೦] ಇವರು ಚಿತ್ರದುರ್ಗ ಪಾಳೆಯಗಾರರಲ್ಲಿ ಮೊದಲಿಗನು ಮತ್ತಿ ತಿಮ್ಮಣ್ಣನಾಯಕನೆಂದು ಸಹ ತಿಳಿಯಪಡಿಸಿರುವರು. ಚಿತ್ರದುರ್ಗದ ಪಾಳೆಯಗಾರರ ಕಾಲಾವಧಿಯ ಬಗ್ಗೆ ವಿದ್ವಾಂಸರಲ್ಲಿ ಜಿಜ್ಞಾಸೆಯಿದೆ ಎನ್ನುವುದನ್ನು ರಾಜಶೇಖರಪ್ಪನವರು 'ದಕ್ಷಿಣ ಕರ್ನಾಟಕದ ಅರಸುಮನೆತಗಳು' ಕೃತಿಯಲ್ಲಿ ದಾಖಲಿಸಿರುವರು. ೨೧೧, ೨೧೭, ವರ್ಷ, ೧೧೪, ೨೭೨, ೪೧೧, ೪೫೯ ವರ್ಷಗಳೆಂದು ಅಭಿಪ್ರಾಯಿಸಿರುವುದನ್ನು ಉಲ್ಲೇಖಿಸಿರುವರು.[೫೧] ಇಂತ ಅಭಿಪ್ರಾಯಗಳು ಏನೇ ಇದ್ದರೂ ಕೂಡ ೧೪೩ ರಲ್ಲಿ ಮತ್ತಿತಿಮ್ಮಣ್ಣನಾಯಕನ ಪರಾಕ್ರಮ ಮೆಚ್ಚತಕ್ಕದ್ದಾಗಿದೆ. ಸದಾಶಿವರಾಯನ್ನು ಹೊಳಲ್ಕೆರೆಯನ್ನು ಮಾಗಿಣೆ ನೀಡಿದ ನಂತರ ೧೪೫೯ ರಲ್ಲಿ ಚಿತ್ರದುರ್ಗವನ್ನು ತನ್ನ ಆಳ್ವಿಕೆಯ ವ್ಯಾಪ್ತಿಗೆ ಸೇರಿಸಿಕೊಂಡ. ಮತ್ತಿತಿಮ್ಮಣ್ಣನಾಯಕ ಮೂಲತಃ ದಾವಣಗೆರೆ[೫೨] ಪ್ರದೇಶದವನು ಎಂದು ಗ್ಯಾಸೆಟಿಯರ್ ಹಾಗೂ ಇತಿಹಾಸಕಾರರ ಬರಹಗಳಿಂದ ಖಚಿತಪಡುತ್ತದೆ.

ಚಿತ್ರದುರ್ಗವನ್ನು ಆಳಿದ ನಾಯಕ ಮಣೆಗಳಲ್ಲಿ ಓಬಣ್ಣನಾಯಕ, ಕಸ್ತೂರಿ ರಂಗಪ್ಪ ನಾಯಕ, ಬಿಚ್ಚುಗತ್ತಿ ಭರಮಣ್ಣನಾಯಕ, ಹಿರೇಮದಕರಿನಾಯಕ, ಇಮ್ಮಡಿ ಕಸ್ತೂರಿ ರಂಗಪ್ಪನಾಯಕ, ಮತ್ತು ರಾಜಾವೀರಮದಕರಿನಾಯಕ ಪ್ರಮುಖರು. ಕಸ್ತೂರಿರಂಗಪ್ಪನ ಕಾಲದಲ್ಲಿ ಜಗಳೂರು ಪ್ರಾಂತ್ಯವನ್ನು ಚಿತ್ರದುರ್ಗಕ್ಕೆ ಸೇರಿಸಿಕೊಂಡಿದ್ದನೆಂದು ಲಕ್ಷ್ಮಣ್ ತೆಲಗಾವಿಯವರು ತಿಳಿಸಿರುವರು. ಚಿಕ್ಕಣ್ಣನಾಯಕನು ಹರಪನಹಳ್ಳಿ ಪಾಳೆಯಗಾರರ ಸಹಾಯದಿಂದ ಅಣಜಿ ಕೋಟೆಯನ್ನು ವಶಪಡಿಸಿಕೊಂಡನೆಂದು ತಿಳಿಸಿದ್ದಾರೆ. ಆದರೆ ಅಣಜಿಕೋಟೆಯಲ್ಲಿ ಯಾರು ಆಳುತ್ತಿದ್ದರು ಎನ್ನುವುದನ್ನು ತಿಳಿಯಪಡಿಸಿಲ್ಲ. ನಂತರ ಹರಿಹರ,

ಹರಪನಹಳ್ಳಿಯನ್ನು ವಶಪಡಿಸಿಕೊಂಡನೆಂದು ರಾಜಶೇಖರಪ್ಪನವರು ಅಭಿಪ್ರಾಯಪಟ್ಟಿರುವರು. ಆದರೆ ಲಕ್ಷ್ಮಣ್ ತೆಲಗಾವಿಯವರು ಕುರಿತು ಪ್ರಸ್ತಾಪಿಸಿದಂತೆ ಕಾಣುವುದಿಲ್ಲ. ಇವರು ಜಗಳೂರು ಸೀಮೆಯ ಕಣ್ಣಕುಪ್ಪೆಯಲ್ಲಿ ಒಂದು ಕೋಟೆಯನ್ನು ಕಟ್ಟಿಸಿದರೆಂದು ಹೇಳುತ್ತಾರೆ. ಚಿಕ್ಕಣ್ಣನಾಯಕನ ಮಗ ಮದಕರಿನಾಯಕನು ಜಗಳೂರು ಸೀಮೆಯ ಕಪದನಹಳ್ಳಿ ಗ್ರಾಮವನ್ನು ಅಗ್ರಹಾರವನ್ನಾಗಿ ಮಾಡಿದನೆಂದು ತಿಳಿಸುತ್ತಾ ಬಿಳಿಚೂಡು ಸೀಮೆಯಲ್ಲಿ ಬಿಚ್ಚುಗತ್ತಿ ಭರಮಣ್ಣನಾಯಕ ಕಲ್ಲೇದೇವನಹಳ್ಳಿ ಗ್ರಾಮದ ಅಗ್ರಹಾರವನ್ನು ಉಗ್ರಾಣದ ರಂಗಪ್ಪನಿಗೆ ವಹಿಸಿಕೊಟ್ಟಿರುವ ವಿವರವನ್ನು ಕಸ್ತೂರಿ ರಂಗಪ್ಪನಾಯಕನ ದಳವಾಯಿ ಭರಮಪ್ಪನಾಯಕನು ಜಗಳೂರು ವಿರಕ್ತ ಮಠಕ್ಕೆ ಗ್ರಾಮದಾನ ಮಾಡುವುದರ ಮೂಲಕ ವೀರಶೈವ ಧರ್ಮವನ್ನು ಪ್ರೋತ್ಸಾಹಿಸದನೆಂದು[೨೫] ಲಕ್ಷ್ಮಣ್ ತೆಲಗಾವಿಯವರು ಚಂದ್ರವಳ್ಳಿ ಕೃತಿಯಲ್ಲಿ ಹೇಳಿರುವರು. ದಾವಣಗೆರೆ ಪ್ರದೇಶ ಚಿತ್ರದುರ್ಗ ಪಾಳೆಯಗಾರರಿಗೆ ಸೇರಿತ್ತು ಎನ್ನುವುದಕ್ಕೆ ಈ ಮಾಹಿತಿ ಪೂರಕವಾಗಿದೆ.

ಚಿತ್ರದುರ್ಗ ಸಂಸ್ಥಾನವನ್ನು ಆಳಿದ ಎರಡು ಮನೆತನಗಳು ಮೂಲತಃ ದಾವಣಗೆರೆ ಪ್ರದೇಶಕ್ಕೆ ಸೇರಿದವುಗಳಾಗಿವೆ. ಅವುಗಳಲ್ಲಿ ಒಂದು ಮತ್ತಿ ಮನೆತನ ಎರಡನೆಯದು ಬಿಳಿಚೋಡು ಮನೆತನ ಈ ವಿಚಾರವನ್ನು ಗ್ಯಾಸೆಟಿಯರ್‌ನಲ್ಲಿ, 'ಚಂದ್ರವಳ್ಳಿ' ಕೃತಿಯಲ್ಲಿ, 'ಮಹಾಮಾರ್ಗ'ಕೃತಿಯಲ್ಲಿ, 'ದಾವಣಗೆರೆ ಇದು ನಮ್ಮ ಜಿಲ್ಲೆ' ಕೃತಿಗಳಲ್ಲಿ ಕಾಣಬಹುದು. ಈ ನಾಯಕರು ಚಿಕ್ಕಮಗಳೂರು, ಶಿವಮೊಗ್ಗ, ಬಳ್ಳಾರಿ ಮುಂತಾದ ಪ್ರದೇಶಗಳ ಮೇಲೆ ತಮ್ಮ ಪ್ರಭುತ್ವವನ್ನು ಸ್ಥಾಪಿಸಿದ್ದರು. ನಂತರ ಹೈದರ್‌ಅಲಿ ದೊಡ್ಡಮದಕರಿನಾಯಕನನ್ನು ತನ್ನ ವಶಕ್ಕೆ ತೆಗೆದುಕೊಂಡು ಚಿತ್ರದುರ್ಗ ಪಾಳೆಯಪಟ್ಟನ್ನು ವಶಪಡಿಸಿಕೊಂಡನು. ನಂತರ ಳನೇ ಆಂಗ್ಲೋ ಮೈಸೂರು ಕದನದಿಂದ ಟಿಪ್ಪು ಸೋತು ಮಡಿದನು. ಕೊನೆಗೆ ಚಿತ್ರದುರ್ಗ ಸಂಸ್ಥಾನ ಮೈಸೂರು ಸಂಸ್ಥಾನದಲ್ಲಿ ವಿಲೀನವಾಯಿತು.

ಒಟ್ಟಾರೆಯಾಗಿ ಹೇಳಬೇಕೆಂದರೆ ದಾವಣಗೆರೆ ಪ್ರದೇಶ ಚಿತ್ರುದುರ್ಗ ಪಾಳೆಯಗಾರರ ಆಡಳಿತದಲ್ಲಿತ್ತು. ಇದರಿಂದ ಮಧ್ಯಕಾಲೀನ ಅವಧಿಯಲ್ಲಿ ಪಾಳೆಯಪಟ್ಟುಗಳು ಆಳ್ವಿಕೆ ನಡೆಸಿದ ಪ್ರದೇಶವಾಗಿತ್ತು ಎಂದು ಹೇಳಬಹುದು.

ಕಣಕುಪ್ಪೆ ಪ್ರದೇಶ ಕುರಿತಂತೆ ಲಕ್ಷ್ಮಣ್ ತೆಲಗಾವಿಯವರ 'ಚಂದ್ರವಳ್ಳಿ' ಕೃತಿ, ಸೂರ್ಯನಾಥ ಯು ಕಾಮತ್‌ರ 'ಕರ್ನಾಟಕ ರಾಜ್ಯ ಗ್ಯಾಸೆಟಿಯರ್-ಭಾಗ ಮೂರು', ಟಿ. ಗಿರಿಜ ಅವರ 'ದಾವಣಗೆರೆ ಇದು ನಮ್ಮ ಜಿಲ್ಲೆ' ಕೃತಿಗಳು ತಿಳಿಯಪಡಿಸುತ್ತವೆ. ಕಣ್ಣಕುಪ್ಪೆ ಕೋಟೆಯು ಜಗಳೂರು ಸೀಮೆಯಲ್ಲಿದ್ದ ಚಿತ್ರದುರ್ಗ ಪಾಳೆಯಗಾರನಾದ ಚಿಕ್ಕಣ್ಣ ನಾಯಕನ ಕಾಲದಲ್ಲಿ ನಿರ್ಮಿಸಿದ ಕೋಟೆಯಾಗಿತ್ತೆಂದು ಈ ಕೃತಿಗಳು ಸ್ಪಷ್ಟಪಡಿಸುತ್ತವೆ. ಈ ಅಧ್ಯಯನಗಳು ಚಿತ್ರದುರ್ಗ ಗಡಿಪ್ರದೇಶಗಳ ವಿವರಗಳನ್ನೊಳಗೊಂಡಿವೆ. ಚಿಕ್ಕಣ್ಣನಾಯಕನ ಅಧೀನದಲ್ಲಿ ಕೋಟೆ ನಿರ್ಮಾಣವಾಯಿತು. ಚಿತ್ರದುರ್ಗದ ಸೈನಿಕ ಪಡೆ ಇರುತ್ತಿತ್ತು ಎಂಬ ವಿವರಗಳನ್ನು ಮಾತ್ರ ಒದಗಿಸುತ್ತವೆ. ಆದರೆ ಈ ಕೋಟೆಯ ವ್ಯಾಪ್ತಿಯಲ್ಲಿ ಎಷ್ಟು ಗ್ರಾಮಗಳಿದ್ದವು? ಯಾವ ಜನಸಮುದಾಯವು ವಾಸಿಸುತ್ತಿತ್ತು? ಅವರ ಸಾಮಾಜಿಕ ಬದುಕು ಹೇಗಿತ್ತು? ಧಾರ್ಮಿಕ ವಿಷಯಗಳು, ಇಲ್ಲಿ ಯಾವ ರೀತಿಯ ಆಳ್ವಿಕೆಯಿತ್ತು, ಏಕೆ ಈ ಪ್ರದೇಶದಲ್ಲಿ ಕೋಟೆ ಕಟ್ಟಿದರು ಮುಂತಾದ ಹಲವು ಪ್ರಶ್ನೆಗಳು ಉದ್ಭವಿಸುತ್ತವೆ. ಈ ಅಂಶಗಳ ಬಗ್ಗೆ ಈ ಅಧ್ಯಯನಗಳು ಏನನ್ನೂ ವಿವರಿಸುವುದಿಲ್ಲ. ಆದ್ದರಿಂದ ಮುಂದಿನ ಅಧ್ಯಯನಕಾರರು ಈ ಪ್ರದೇಶದ ಬಗ್ಗೆ ಹೆಚ್ಚಿನ ಅಧ್ಯಯನ ಮಾಡಲು ಗಮನ ಹರಿಸುವಂತಾಗಬೇಕಾಗುತ್ತದೆ.

ಹರಪನಹಳ್ಳಿಯ ಪಾಳೆಯಗಾರರು

ಹರಪನಹಳ್ಳಿ ನಾಯಕರೂ ಸಹ ಈಗಿನ ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ಪ್ರದೇಶದಲ್ಲಿ ಆಳ್ವಿಕೆ ನಡೆಸಿರುವುದನ್ನು ೧೯೭೨ ರಲ್ಲಿ ಪ್ರಕಟಗೊಂಡ ಗ್ಯಾಸೆಟಿಯರ್ ಮಾತ್ರವಲ್ಲದೆ, ಇನ್ನುಳಿದ ಅಧ್ಯಯನಗಳು ಕೂಡ ಸ್ಪಷ್ಟಪಡಿಸುತ್ತವೆ. ಮುಖ್ಯವಾಗಿ ಕುಂಭಾ ಸದಾಶಿವಪ್ಪನವರ 'ಹರಪನಹಳ್ಳಿ ಪಾಳೆಯಗಾರರು', 'ಹಲವು ಹನ್ನೊಂದು ಹರಪನಹಳ್ಳಿ', ಮಹದೇವ, ಸುಬ್ಬಣ್ಣ ರೈ, ಮಾಧವ ಪೆರಾಜೆ ಅವರ 'ಹೊಸಪೇಟೆ ತಾಲ್ಲೂಕು ದರ್ಶನ', ವಿರೂಪಾಕ್ಷಿ ಪೂಜಾರಹಳ್ಳಿಯವರ 'ಬಳ್ಳಾರಿ ಜಿಲ್ಲೆಯ ಪಾಳೆಯಗಾರರು', ಟಿ. ಗಿರಿಜರವರ 'ದಾವಣಗೆರೆ ಇದು ನಮ್ಮ ಜಿಲ್ಲೆ' ಎಂಬ ಅಧ್ಯಯನ ಕೃತಿಗಳು ಹರಪನಹಳ್ಳಿ ಪಾಳೆಯಗಾರರ ಕುರಿತು ಅಧ್ಯಯನಾಸಕ್ತರಿಗೆ ಉಪಯುಕ್ತ ಆಕರಗಳನ್ನು ಒದಗಿಸುತ್ತವೆ.

ಇದುವರೆಗೆ ನಡೆಸಿದ ಅಧ್ಯಯನಗಳಿಂದ ತಿಳಿದುಬರುವಂತೆ ಹರಪನಹಳ್ಳಿ ಪಾಳೆಯಗಾರರ ಮೊದಲ ನಾಯಕನು ಬೇಡ ಜನಾಂಗಕ್ಕೆ ಸೇರಿದವನಾಗಿದ್ದನೆಂಬುದಾಗಿ ತಿಳಿದುಬರುತ್ತದೆ. ಅಲ್ಲದೆ ವಿಜಯನಗರದ ಪತನಾನಂತರ ಹರಪನಹಳ್ಳಿಯನ್ನು ಕೇಂದ್ರವಾಗಿಟ್ಟುಕೊಂಡು ಆಳ್ವಿಕೆ ನಡೆಸತೊಡಗಿದನು. ಕೋಟೆ ಕಟ್ಟಿಸಿ ಸಮರ್ಥ ಬೇಡ ಸೈನಿಕ ಪಡೆಯನ್ನು ರಚಿಸಿ ಪಾಳೆಯಪಟ್ಟನ್ನು ವಿಸ್ತರಿಸಿ ಖ್ಯಾತಿ ಪಡೆದನು. ನಂತರ ಚಿತ್ರದುರ್ಗ ತಿಮ್ಮಣ್ಣನಾಯಕನ ಮಗಳನ್ನು ವಿವಾಹ ಮಾಡಿಕೊಂಡನು. ಆದರೆ ಉಚ್ಚಂಗಿ ಪ್ರದೇಶದ ವಿಚಾರದಲ್ಲಿ ದ್ರೋಹ ಬಗೆದ ಹೊನ್ನೆ ನಾಗತಿಯನ್ನು ಉಚ್ಚಂಗಿ ಕೋಟೆಯಿಂದ ತಳ್ಳಿ ಸಾಯಿಸಿದನು ಎನ್ನಲಾಗಿದೆ. ಈ ವಿಚಾರದಲ್ಲಿ ವಿದ್ವಾಂಸರಲ್ಲಿ ಜಿಜ್ಞಾಸೆಯಿದೆ. ಹೊನ್ನೆನಾಗತಿಯು ಬಿದ್ದ ಸ್ಥಳವನ್ನು ಇಂದಿಗೂ ಹೊನ್ನೆಹೊಂಡವೆಂದು ಕರೆಯುವರೆಂದು ಕುಂಭಾಸದಾಶಿವಪ್ಪ, ಮಲ್ಲಿಕಾರ್ಜುನ ಕನ್ನಿಹಳ್ಳಿಯವರು ತಿಳಿಸಿರುವರು. ನಂತರ ದಾದಯ್ಯನಾಯಕ ಜರಿಮಲೆ ಚಂಪಾನಾಗತಿ, ಗುಡೆಕೋಟೆಯ ಬರ್ಮಾನಾಗತಿ, ಬಿಳಿಚೋಡಿನ ಹನುಮನಾಗತಿಯರನ್ನು ವಿವಾಹವಾದನು. ಈತನ ಆಳ್ವಿಕೆಯ ನಂತರ ರಂಗಣ್ಣನಾಯಕ ಹರಪನಹಳ್ಳಿಯಲ್ಲಿ ಅಧಿಕಾರ ಪಡೆದನು. ಈತನ ಕಾಲ ಕ್ರಿ.ಶ. ೧೫೧೪-೧೫೩೮ ಎಂದು ಕುಂಭಾಸದಾಶಿವಪ್ಪನವರು ತಿಳಿಸಿದರೆ, 'ಹೊಸಪೇಟೆ ತಾಲ್ಲೂಕು ದರ್ಶನ' ಕೃತಿಕಾರರು ಮತ್ತು ಮಲ್ಲಿಕಾರ್ಜುನ ಕನ್ನಿಹಳ್ಳಿಯವರು ಕ್ರಿ.ಶ. ೧೫೯೨-೧೬೧೬ ಎಂಬುದಾಗಿ ಅಭಿಪ್ರಾಯಪಡುವರು. ಈ ವಾದವನ್ನು ಗಮನಿಸಿದರೆ ವಿಜಯನಗರ ಸಾಮ್ರಾಜ್ಯ ಇನ್ನೂ ಪತನಗೊಂಡಿರಲಿಲ್ಲ ಎಂಬುದರ ಜೊತೆಗೆ ಎಲ್ಲಾ ಇತಿಹಾಸಕಾರರು ಅಭಿಪ್ರಾಯ ಪಟ್ಟಿರುವಂತೆ ವಿಜಯನಗರದ ಪತನಾನಂತರ ಪಾಳೆಯಗಾರರು ಸ್ವತಂತ್ರಗೊಂಡು ಆಳ್ವಿಕೆ ನಡೆಸಿದರು ಎಂಬುದಾಗಿ ತಿಳಿದುಬರುತ್ತದೆ. ಇದರಿಂದ ಕುಂಭಾಸದಾಶಿವಪ್ಪ ಅವರ ಕಾಲನಿರ್ಣಯ ತಪ್ಪಾಗಿ ದಾಖಲಿಸಿರಬಹುದೆಂದು ಊಹಿಸಬಹುದು. ದಾದಯ್ಯನಾಯಕನು ಸುಮಾರು ೧೫೬೫ ರಲ್ಲಿ ರಾಜ್ಯ ಸ್ಥಾಪಿಸಿದ್ದಿರಬಹುದು ಎಂದು ಹೇಳಬಹುದು. ನಂತರ ಪಾಳೆಯಗಾರನಾದವನು ಭರ್ಮಣ್ಣನಾಯಕ. ಈತನು ೧೬೧೬ ರಿಂದ ೧೬೫೦ ರವರೆಗೆ ಅಧಿಕಾರ ನಡೆಸಿದನು. ನಂತರ ಓಬಣ್ಣನಾಯಕ ೧೬೫೦-೧೬೫೫ ರವರೆಗೆ, ವೀರಮುಮ್ಮಡಿನಾಯಕ ೧೬೫೫-೧೬೬೭ ರವರೆಗೆ, ಮುಮ್ಮಡಿನಾಯಕ ೧೬೬೭-೧೬೮೭ ರವರೆಗೆ, ಬಸವಂತ ನಾಯಕ ೧೬೮೭-೧೭೦೫ ರವರೆಗೆ ಆಳ್ವಿಕೆ ನಡೆಸಿದರೆಂದು ತಿಳಿದುಬರುತ್ತದೆ. ಈ ಬಸವಂತ ನಾಯಕ ಬೇಡ ಸಮುದಾಯದಿಂದ ವೀರಶೈವ ಧರ್ಮಕ್ಕೆ ಮತಾಂತರ ಹೊಂದಿ ತನ್ನ ಹೆಸರನ್ನು ಕೊಟ್ರಬಸಪ್ಪನೆಂದು ಕರೆದುಕೊಂಡನೆಂದು ಕುಂಭಾಸದಾಶಿವಪ್ಪನವರು ತಿಳಿಸಿರುವರು. ಆದರೆ ಈ ಮತಾಂತರದ ಹಿಂದಿನ ಕಾರಣವನ್ನು ತಿಳಿಯಪಡಿಸಿಲ್ಲ. ಬಹುಶಃ ಕೊಟ್ಟೂರಿನಲ್ಲಿ ಕೊಟ್ಟೂರೇಶ್ವರ ಸ್ವಾಮಿಯ ಪ್ರಭಾವದಿಂದ ಈ ಹೆಸರನ್ನು ಪಡೆದಿರಬೇಕು. ಇಲ್ಲವೇ ಯಾವುದಾದರೂ ವೀರಶೈವ ಶರಣರ ಮೇಲಿನ ಭಕ್ತಿಯಿಂದ ಮತಾಂತರಗೊಂಡಿರಬಹುದಾದ ಸಾಧ್ಯತೆಯೂ ಇದೆ. ನಂತರ ಮರಿಕೊಟ್ರಪ್ಪ ೧೭೦೫ ರಿಂದ ೧೭೪೧ ರವರೆಗೆ, ಮೊದಲ ವೀರಬಸಪ್ಪನಾಯಕ ೧೭೪೧-೧೭೪೨ ರವರೆಗೆ, ಮೊದಲನೇ ಸೋಮೇಶೇಖರ ನಾಯಕ ೧೭೪೨ ರಿಂದ ೧೭೬೬ ರವರೆಗೆ ಆಳ್ವಿಕೆ ನಡೆಸಿದರೆಂದು ತಿಳಿದುಬರುತ್ತದೆ. ಮೊದಲನೇ ಸೋಮಶೇಖರನ ಆಳ್ವಿಕೆಯ ಆಡಳಿತಾವಧಿಯಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ, ಜನಪರ ಕೆಲಸಗಳಿಂದ ದಕ್ಷ ಆಡಳಿತವನ್ನು ನಡೆಸಿದ ಸಮರ್ಥ ನಾಯಕನೆಂದು ಹರಪನಹಳ್ಳಿ ಪಾಳೆಯಗಾರರಲ್ಲೆ ಪ್ರಮುಖನೆನಿಸಿರುವನೆಂದು ಕುಂಭಾಸ ಅವರು ತಿಳಿಸುವರು. ಹಾಗೆಯೇ ಚಿತ್ರದುರ್ಗದೊಂದಿಗೆ ದಾವಣಗೆರೆ ಪ್ರದೇಶದ ಮಾಯಕೊಂಡದ ಯುದ್ಧದಲ್ಲಿ ಹಿರೇಮದಕರಿನಾಯಕನನ್ನು ಸೋಲಿಸಿ ಸಂಹರಿಸಿದನು. ಬಹುಶಃ ಈ ವೇಳೆಯಲ್ಲಿ ದಾವಣಗೆರೆ ಪ್ರದೇಶ ಸೋಮಶೇಖರ ನಾಯಕನ ಆಳ್ವಿಕೆಯಲ್ಲಿತ್ತು ಎನ್ನಬಹುದು. ನಂತರ ವೀರಬಸಪ್ಪ ನಾಯಕ ೧೭೬೬ ರಿಂದ ೧೭೬೮ ರವರೆಗೆ, ಬಸಪ್ಪನಾಯಕ ೧೭೬೮ ರಿಂದ ೧೭೯೨ ರವರೆಗೆ, ಸೋಮಶೇಖರ ನಾಯಕ ೧೭೯೨ ರಿಂದ ೧೭೯೯ ರವರೆಗೆ ಹರಪನಹಳ್ಳಿಯನ್ನು ಕೇಂದ್ರವಾಗಿಟ್ಟುಕೊಂಡು ಆಳ್ವಿಕೆ ನಡೆಸಿದ ಪ್ರಮುಖ ಪಾಳೆಯಗಾರರ ವಂಶವಾಗಿತ್ತು.

೧೭೬೮ ರ ಸುಮಾರಿನಲ್ಲಿ ಬಸಪ್ಪನಾಯಕನ ಮೇಲೆ ಹೈದರ್‌ನ ಸೈನ್ಯ ದಾಳಿ ಮಾಡಿತು. ಈ ದಾಳಿಯನ್ನು ಎದುರಿಸುವಲ್ಲಿ ವಿಫಲನಾಗಿ, ಹೈದರ್‌ನಿಗೆ ಅಪಾರ ಸಂಪತ್ತನ್ನು ನೀಡಿದನು.[೫೫] ಆದರೆ ಹೈದರ್ ಈತನನ್ನು ಹಾಗೂ ಈತನ ಸೈನ್ಯವನ್ನು ಮೈಸೂರಿಗೆ ಕರೆದೊಯ್ದನು. ಹೈದರ್‌ನ ಮರಣದ ನಂತರ ಟಿಪ್ಪು ಈ ಪಾಳೆಯಪಟ್ಟವನ್ನು ಹತೋಟಿಯಲ್ಲಿಟ್ಟುಕೊಂಡು ನಂತರ ಸೋಮಶೇಖರನಾಯಕ ಬೇಡ ಪಡೆಯನ್ನು ರಚಿಸಿ

ಮರಾಠರ ಬೆಂಬಲವನ್ನು ಪಡೆದು ಹರಪನಹಳ್ಳಿಯಲ್ಲಿ ಟಿಪ್ಪುವಿನ ಹತೋಟಿಯನ್ನು ತಪ್ಪಿಸಲು ಯುದ್ಧಮಾಡಿದನು. ಆದರೆ ಫಲಕಾರಿಯಾಗದೆ ಟಿಪ್ಪುವಿನೊಡನೆ ಸಂಧಾನ ಬಯಸಿ ಕಪ್ಪಕಾಣಿಕೆ ನೀಡಿ ಆಳ್ವಿಕೆ ಮುಂದುವರಿಸಿದನು. ೧೭೯೯ ರಲ್ಲಿ ಟಿಪ್ಪು ಆಂಗ್ಲರ ವಿರುದ್ಧ ಹೋರಾಡಿ ಮರಣ ಹೊಂದಿದನು. ಹಾಗೆಯೇ ಆಂಗ್ಲರ ಹ್ಯಾರಿಸನ್ ಹರಪನಹಳ್ಳಿಯನ್ನು ವಶಪಡಿಸಿಕೊಂಡು ಸೋಮಶೇಖರನಾಯಕನನ್ನು ಮೈಸೂರಿಗೆ ಕೊಂಡೊಯ್ದನು. ಅಂತಿಮವಾಗಿ ೧೮೨೫ ರಲ್ಲಿ ಸೋಮಶೇಖರನಾಯಕ ಮೈಸೂರಿನಲ್ಲಿ[೫೬] ವಿಧಿವಶನಾದನೆಂದು ಕುಂಭಾಸ ರವರು ತಿಳಿಸಿರುವರು. ನಂತರ ಹರಪನಹಳ್ಳಿ ಆಂಗ್ಲರ ವಶವಾಗಿ ಕಲೆಕ್ಟರುಗಳ ಆಳ್ವಿಕೆಯಲ್ಲಿ ಮುಂದುವರೆಯಿತು ಎನ್ನಲಾಗಿದೆ.

ಈ ಅಧ್ಯಯನಗಳ ವಿಚಾರದಿಂದ ದಾವಣಗೆರೆ ಚರಿತ್ರೆ ರಚನೆಗೆ ಹೆಚ್ಚಿನ ಆಧಾರ ದೊರೆತಂತಾಗುತ್ತದೆ. ಇದರಿಂದ ದಾವಣಗೆರೆ ಪ್ರದೇಶದ ಚರಿತ್ರೆಯ ವಿಸ್ತಾರ ಹೆಚ್ಚಿದಂತಾಗಿದೆ. ಈ ಅಧ್ಯಯನಕಾರರ ಅಧ್ಯಯನಗಳಿಂದ ಹರಪನಹಳ್ಳಿ ಪಾಳೆಯಗಾರರಿಗೆ ದಾವಣಗೆರೆಯ ವಿವಿಧ ಪ್ರದೇಶಗಳಿಗೆ ಹಬ್ಬಿತ್ತು ಎನ್ನಬಹುದು. ಹಾಗೆ ಇವರು ಬಸವಪಟ್ಟಣ, ಸಂತೆಬೆನ್ನೂರು, ಕೆಳದಿ, ಚಿತ್ರದುರ್ಗ, ಜರಿಮಲೆ, ಗುಡೇಕೋಟೆ, ಬಿಳಿಚೋಡು ಪ್ರದೇಶಗಳೊಂದಿಗೆ ರಾಜಕೀಯ ಸಂಬಂಧದ ಜೊತೆಗೆ ವೈವಾಹಿಕ ಸಂಬಂಧ ಬೆಸೆದಿರುವುದನ್ನು ಗ್ರಹಿಸಬಹುದು. ಈ ಕುರಿತು ಅಧ್ಯಯನ ಮಾಡಿದ ಅಧ್ಯಯನಕಾರರು ಹರಪನಹಳ್ಳಿ ಪಾಳೆಯಗಾರರನ್ನು ಮುಖ್ಯ ಕೇಂದ್ರವಾಗಿಟ್ಟುಕೊಂಡು ಅಧ್ಯಯನ ಮಾಡಿರುವುದೇ ವಿನಹಃ ಜನಸಾಮಾನ್ಯರ ವಿಷಯ ಕುರಿತು ಪ್ರಸ್ತಾಪಿಸಿಲ್ಲ. ಪಾಳೆಯಗಾರರ ಚರಿತ್ರೆಯ ಜೊತೆಗೆ ಶ್ರೀಸಾಮಾನ್ಯರ ಕುರಿತು ರಚಿಸಿದ್ದರೆ ಚರಿತ್ರೆಗೆ ಇನ್ನೂ ಹೆಚ್ಚಿನ ಮಹತ್ವ ದೊರೆತಂತಾಗುತ್ತಿತ್ತು ಎಂಬ ಅಭಿಪ್ರಾಯಕ್ಕೆ ಬರಬಹುದಾಗಿದೆ.

ಬಸವಾ ಪಟ್ಟಣ ಮತ್ತು ಸಂತೇ ಬೆನ್ನೂರು ಪಾಳೆಯಗಾರರು

ವಿಜಯನಗರೋತ್ತರ ಕಾಲದ ಕರ್ನಾಟಕ ಚರಿತ್ರೆಯಲ್ಲಿ ಬಸವಾಪಟ್ಟಣ ಮತ್ತು ಸಂತೇಬೆನ್ನೂರು ನಾಯಕರು ಪ್ರಮುಖ ಸ್ಥಾನ ಪಡೆದಿರುವರು. ಈಗಿನ ದಾವಣಗೆರೆ ಪ್ರದೇಶದ ಚನ್ನಗಿರಿ ತಾಲ್ಲೂಕಿನಲ್ಲಿ ಕಾಣಬರುವ ಬಸವಾಪಟ್ಟಣ ಚಾರಿತ್ರಿಕವಾಗಿ ಮಹತ್ವ ಪಡೆದಿದೆ. ಈ ಸ್ಥಳದ ಹೆಸರಿನ ಹಿನ್ನೆಲೆಯನ್ನು ಗಮನಿಸುವುದಾದರೆ ೧೨ ನೇ ಶತಮಾನದಲ್ಲಿ ಅನುಭವ ಮಂಟಪ ನಶಿಸಿದ ಮೇಲೆ ಶಿವಶರಣರು ಬೇರೆ ಬೇರೆ ದಿಕ್ಕುಗಳಿಗೆ ಹೋದರೆಂದು ಹಾಗೆ ಒಬ್ಬ ಶಿವಶರಣರು ಈ ಸ್ಥಳಕ್ಕೆ ಬಂದು ನೆಲೆಸಿ ಬಸವಣ್ಣನವರ ವಿಗ್ರಹವನ್ನು ಸ್ಥಾಪಿಸಿ ಪೂಜಿಸಿದರೆಂದು ಇದರಿಂದ ಬಸವಾಪಟ್ಟಣವೆಂದು ಹೆಸರಾಯಿತೆಂದು ಐತಿಹ್ಯವಿದೆ.

ಇವರ ಇತಿಹಾಸವನ್ನು ತಿಳಿಯಲು ಪ್ರಮುಖವಾಗಿ ಗ್ಯಾಸೆಟಿಯರ್ ಮೂಲ ಆಕರವಾಗಿದೆ. ನಂತರ ಇದನ್ನೇ ಆಧರಿಸಿ ಇತಿಹಾಸಕಾರರು ಕೃತಿಗಳನ್ನು ರಚಿಸಿರುವರು. ಈ ಪ್ರದೇಶದ ಚರಿತ್ರೆಯನ್ನೊಳಗೊಂಡ ಕೃತಿಗಳು ಹಲವು ಹೊಸ ವಿಷಯಗಳನ್ನು ಬೆಳಕಿಗೆ ತರುವ ಪ್ರಯತ್ನ ಮಾಡಿವೆ. ಚನ್ನಗಿರಿ ತಾಲ್ಲೂಕಿನ ಸಂತೇಬೆನ್ನೂರಿನವರಾದ ಸುಮತೀಂದ್ರನಾಡಿಗರು, ಎಂ. ಚಿದಾನಂದಮೂರ್ತಿ ಮತ್ತು ಕೆ. ಜಿ. ಸುರೇಶ ಅವರು ಈ ಪಾಳೆಯಗಾರರ ಬಗ್ಗೆ ಹೆಚ್ಚಿನ ಸಂಶೋಧನೆ ನಡೆಸಿರುವರು. ಎಂ. ಚಿದಾನಂದ ಮೂರ್ತಿ, ಹೆಚ್. ನೀಲಪ್ಪ, ಇಕ್ಬಾಲ್ ಅಹ್ಮದ್, ಬೆನಕನಹಳ್ಳಿ ಜಿ. ನಾಯಕ್ ಇನ್ನಿತರರು ಅಧ್ಯಯನ ಮಾಡಿರುವರು.

ಈ ಮೇಲಿನವರ ಅಧ್ಯಯನಗಳಿಂದ ಈಗಿನ ದಾವಣಗೆರೆ ಪ್ರದೇಶದ ಬಸವಾಪಟ್ಟಣ ಹಾಗೂ ಸಂತೇಬೆನ್ನೂರು ನಾಯಕರು ಆಳ್ವಿಕೆ ನಡೆಸಿದರೆಂಬುದಕ್ಕೆ ಆಧಾರ ಒದಗಿಸಿರುವರು. ಈ ವಂಶದ ನಾಯಕ ಧೂಮರಾಜನೆಂದು ಬೇಡರ ಮನೆತನಕ್ಕೆ ಸೇರಿದವನೆಂದು ಗ್ಯಾಸೆಟಿಯರ್‌ನಿಂದ ಹಾಗೂ ಸುಮತೀಂದ್ರನಾಡಿಗರ ಬರಹಗಳಿಂದ ತಿಳಿಯುತ್ತದೆ. ಆದರೆ ಈ ವಂಶದ ಮೂಲಪುರುಷನ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಗ್ಯಾಸೆಟಿಯರ್‌ಗಳಲ್ಲಿ ಹಾಗೂ ವಿಶ್ವಕೋಶದಲ್ಲಿ ಧೂಮರಾಜನೆಂದು ಇದ್ದರೆ ಕೈಫಿಯತ್ತಿನಲ್ಲಿ ಕಾಮಕೋಟಿ ಹನುಮಪ್ಪನಾಯಕ ಎಂದು ಈತನು ಉಚ್ಚಂಗಿ ಕಡೆಯಿಂದ ಬಸವಾಪಟ್ಟಣಕ್ಕೆ ಬಂದನೆಂದು ಅಬ್ದುಲ್ ಸತ್ತಾರ್‌ರವರು ಅಭಿಪ್ರಾಯಪಟ್ಟಿರುವರು.[೫೭] ನಾಡಿಗರು ಈತನು ವಾಲ್ಮೀಕಿ ಗೋತ್ರಕ್ಕೆ ಸೇರಿದ ಪೂವ್ವಲ ವಂಶದವನೆಂದು ತಿಳಿಸಿರುವರು. ಹಾಗೆ ೧೬ನೇ ಶತಮಾನದಲ್ಲಿ ವಿಜಯನಗರದ ಸೈನ್ಯಪಡೆಯಲ್ಲಿ

ಅಧಿಕಾರಿಯಾಗಿದ್ದ ಧೂಮರಾಜ ಬೇಟೆಯಾಡುತ್ತಾ ಚನ್ನಗಿರಿ ತಾಲ್ಲೂಕಿನ ಬಸವಾಪಟ್ಟಣಕ್ಕೆ ಬಂದು ಬೇಡರ ಯುವತಿಯನ್ನು ವಿವಾಹವಾಗಿ ಅಲ್ಲಿಯೇ ಚಿಕ್ಕ ಪಾಳೆಯಪಟ್ಟನ್ನು ಕಟ್ಟಿ ಆಳ್ವಿಕೆ ನಡೆಸಿದನೆಂದು ಸುಮತೀಂದ್ರ ನಾಡಿಗರು ತಿಳಿಸಿರುವರು. ನಂತರ ಅಧಿಕಾರಕ್ಕೆ ಬಂದ ಕೆಂಗಣ್ಣನಾಯಕ ಈ ಪ್ರದೇಶವನ್ನು ಮುಖ್ಯಕೇಂದ್ರವಾಗಿಟ್ಟುಕೊಂಡು ಕೋಟೆಯೊಂದನ್ನು ನಿರ್ಮಿಸಿ ಅನಂತಪುರದಿಂದ ಮಾಯಕೊಂಡದವರೆಗೂ ಮತ್ತು ಹರಿಹರದಿಂದ ತರೀಕೆರೆಯವರೆಗೂ ರಾಜ್ಯವನ್ನು ವಿಸ್ತರಿಸಿದನೆಂದು ತಿಳಿಸುವರು. ಈ ಕಾಲಾವಧಿಯಲ್ಲಿ ಕೆಂಗಣ್ಣನ ಆಳ್ವಿಕೆಯಲ್ಲಿ ದಾವಣಗೆರೆ ಪ್ರದೇಶವೂ ಒಳಪಟ್ಟಿತ್ತು ಎಂಬುದನ್ನು ಈತನು ವಿಸ್ತರಿಸಿದ ಎಲ್ಲೆಯನ್ನು ಅನುಲಕ್ಷಿಸಿ ಅಭಿಪ್ರಾಯಪಡಬಹುದು. ಕೆಂಗಣ್ಣನಾಯಕನ ನಂತರ ವೀರಹನುಮಪ್ಪನಾಯಕ ಅಧಿಕಾರಕ್ಕೆ ಬಂದನು. ಈತನು ವಿಜಯನಗರ ಸೇನೆಯಲ್ಲಿ ದಳಪತಿಯಾಗಿದ್ದು ಮಹಮದೀಯರ ವಿರುದ್ಧ ನಡೆದ ಯುದ್ಧದಲ್ಲಿ ಪ್ರಮುಖ ಪಾತ್ರವಹಿಸಿದ್ದರಿಂದ ಸುಲ್ತಾನರು ಸಂತೇಬೆನ್ನೂರನ್ನು ಮಾಗಿಣೆಯಾಗಿ ನೀಡಿದರು. ಇದರಿಂದ ಬಸವಾಪಟ್ಟಣ ಸಂಸ್ಥಾನ ಸಂತೇಬೆನ್ನೂರಿನವರೆಗೂ ವಿಸ್ತರಿಸಿತು. ಮುಂದೆ ಸಂತೇಬೆನ್ನೂರನ್ನು ಕೇಂದ್ರವಾಗಿಟ್ಟುಕೊಂಡು ಆಳ್ವಿಕೆ ನಡೆಸಿದರೆಂದು ಗ್ಯಾಸೆಟಿಯರ್ ಮತ್ತು ಸುಮತೀಂದ್ರನಾಡಿಗರ ಬರಹಗಳಿಂದ ಸ್ಪಷ್ಟವಾಗುತ್ತದೆ. ಹಾಗೆ ಈ ನಾಯಕರು ಸುಮಾರು ೮೦ ವರ್ಷಗಳ ಕಾಲ ಆಳಿದರೆಂದು ಸುಮತೀಂದ್ರನಾಡಿಗರು ತಿಳಿಸಿರುವರು. ಆದರೆ ಕಾಲಗಣನೆ ಬಗ್ಗೆ ನಿಖರ ಆಧಾರಗಳು ತಿಳಿದುಬಂದಿರುವುದಿಲ್ಲ.

ಸಂತೇಬೆನ್ನೂರು ಹೆಸರಿನ ಹಿನ್ನೆಲೆಯನ್ನು ಗಮನಿಸುವುದಾದರೆ ಹಿಂದೆ ರಂಗಾಪುರ ಎಂದಿದ್ದ ಗ್ರಾಮ ಬೆನ್ನೂರು ಎಂದು ಕರೆಯಿಸಿಕೊಂಡಿತು. ನಂತರ ಈ ಪ್ರದೇಶದಲ್ಲಿ ಸಂತೆ ನಡೆಯುತ್ತಿದ್ದುದರಿಂದ ಮುಂದೆ ಸಂತೇಬೆನ್ನೂರು ಎಂಬ ಹೆಸರನ್ನು ಪಡೆಯುವಂತಾಗಿದೆ.[೫೮] ಈ ಪ್ರದೇಶವನ್ನಾಳಿದ ಅರಸರಲ್ಲಿ ಕೆಂಗಪ್ಪನಾಯಕ, ಇಮ್ಮಡಿ ಕೆಂಗಪ್ಪನಾಯಕ, ನಿಚ್ಚ ಮದುವಣಿಗ, ಕೆಂಗಾಹನುಮಪ್ಪನಾಯಕ, ರಾಜಪ್ಪನಾಯಕ, ಬಾಲಗಿರಿನಾಯಕ, ದಳನಾಯಕ, ಹಿರೇಕೆಂಗಹನುಮಪ್ಪನಾಯಕ, ಚಿಕ್ಕಕೆಂಗಾಹನುಮಪ್ಪನಾಯಕ ಮುಂತಾದವರು ಪ್ರಮುಖರಾಗಿರುವರು. ಈ ನಾಯಕರು ಸುಮಾರು ಒಂದು ಶತಮಾನ ಕಾಲ ಆಳಿದರೆಂದು ಸುಮತೀಂದ್ರನಾಡಿಗರು ಅಭಿಪ್ರಾಯಪಟ್ಟಿರುವರು. ಮುಖ್ಯವಾಗಿ ಇಲ್ಲಿ ಗಮನಿಸುವುದೇನೆಂದರೆ ಕಾಲನಿರ್ಣಯದ ಖಚಿತತೆ ಕ್ಲಿಷ್ಟವಾಗಿ ಕಾಣಬರುತ್ತದೆ.

ಸಂತೇಬೆನ್ನೂರನ್ನು ಕೇಂದ್ರವಾಗಿಟ್ಟುಕೊಂಡು ಆಳಿದ ಕೊನೆ ಅರಸನಾದ ಚಿಕ್ಕಕೆಂಗಾಹನುಮಪ್ಪನಾಯಕ ೧೬೬೨ ರಲ್ಲಿ ಬಿಜಾಪುರ ಸಯ್ಯದ್‌ನ ಕಡೆಯಿಂದ ಬಂದ ಸೈನ್ಯವನ್ನು ಎದುರಿಸಲಾರದೆ ಸಂತೇಬೆನ್ನೂರನ್ನು ಅವರಿಗೆ ಒಪ್ಪಿಸಿ ತರೀಕೆರೆ ಪ್ರಾಂತ್ಯಕ್ಕೆ ಹೊರಟುಹೋದನು. ಅಲ್ಲಿಗೆ ಸಂತೇಬೆನ್ನೂರಿನ ನಾಯಕರ ಆಳ್ವಿಕೆ ಇತಿಹಾಸದಲ್ಲಿ ಕಣ್ಮರೆಯಾಯಿತು. ನಂತರ ಈ ಪ್ರದೇಶವು ಕ್ರಮವಾಗಿ ಬಿಜಾಪುರ ಸುಲ್ತಾನರು, ಚಿತ್ರದುರ್ಗದ ಪಾಳೆಯಗಾರರು, ಕೆಳದಿನಾಯಕರು, ಮೊಘಲರು, ಮರಾಠರು, ಹೈದರ್ ಮತ್ತು ಟಿಪ್ಪುಸುಲ್ತಾನರು, ಮೈಸೂರು ಅರಸರ ಆಳ್ವಿಕೆಗೆ ಒಳಪಟ್ಟಿತ್ತು. ಕೊನೆಗೆ ಬ್ರಿಟಿಷರ ಆಧಿಪತ್ಯಕ್ಕೆ ಸೇರಿದ ಮೈಸೂರು ಪ್ರಾಂತ್ಯದೊಂದಿಗೆ ವಿಲೀನವಾಯಿತು ಎಂಬ ವಿಚಾರವನ್ನು ಸುಮತೀಂದ್ರನಾಡಿಗರು ಮಲೆಕರ್ನಾಟಕದ ಅರಸುಮನೆತನಗಳ ಕೃತಿಯಲ್ಲಿ ಹೇಳಿರುವರು. ಹಾಗೆ ಈ ಮನೆತನವು ತರೀಕೆರೆಯನ್ನು ಕೇಂದ್ರವಾಗಿಟ್ಟುಕೊಂಡು ಸರ್ಜಾಹನುಮಪ್ಪನಾಯಕ, ಎರಡನೇ ಕೆಂಗಪ್ಪನಾಯಕ, ಎರಡನೇ ಸೀತಾರಾಮಪ್ಪ, ಹುಚ್ಚು ಹನುಮಪ್ಪನಾಯಕ, ಪಟ್ಟಾಭಿನಾಯಕ, ನಿಚ್ಚಮದುವಣಿಗ ಹನುಮಪ್ಪನಾಯಕ, ಇಮ್ಮಡಿ ಹನುಮಪ್ಪನಾಯಕ, ಮೂರನೇ ಸೀತಾರಮಪ್ಪ, ಎರಡನೇ ಸರ್ಜಹನುಮಪ್ಪನಾಯಕ, ಕೃಷ್ಣಪ್ಪನಾಯಕ, ಮೊದಲನೆ ಸರ್ಜಾಹನುಮಪ್ಪನಾಯಕ, ಮುಂತಾದವರು ಅಧಿಕಾರ ನಡೆಸಿದರು.[೫೯]

ಮೇಲ್ಕಾಣಿಸಿದ ರಾಜಮನೆತನಗಳ, ಪಾಳೆಯಗಾರರ ಆಳ್ವಿಕೆಯಲ್ಲಿ ದಾವಣಗೆರೆ ಪ್ರದೇಶ ಒಳಗೊಂಡಿತ್ತು. ಕ್ರಮೇಣ ಹೈದರ್‌ಅಲಿ, ಮತ್ತು ಟಿಪ್ಪುಸುಲ್ತಾನರ ಕಾಲಾವಧಿಯಲ್ಲಿ ಸಾಕಷ್ಟು ಪಾಳೆಯಪಟ್ಟುಗಳನ್ನು ವಶಪಡಿಸಿಕೊಂಡು ಆಳ್ವಿಕೆ ನಡೆಸಿದರು. ೧೭೯೯ ರವರೆಗೆ ಈ ಪಾಳೆಯಗಾರಿಕೆ ಸಂಸ್ಥಾನಗಳು ಜೀವಂತವಾಗಿ ಉಳಿದಿದ್ದವು. ನಂತರ ನಾಲ್ಕನೇ ಆಂಗ್ಲೋ ಮೈಸೂರು ಕದನದಲ್ಲಿ ಟಿಪ್ಪುಸುಲ್ತಾನ್ ಸೋತು ವಿಧಿವಶನಾದ. ಆಂಗ್ಲರು ಈ ಚಿಕ್ಕಪುಟ್ಟ ಎಲ್ಲಾ ಪಾಳೆಯಪಟ್ಟುಗಳನ್ನು ವಶಕ್ಕೆ ತೆಗೆದುಕೊಂಡು ಕೆಲವು ಪ್ರದೇಶಗಳನ್ನು ಮೈಸೂರು

ಸಂಸ್ಥಾನಕ್ಕೆ ಸೇರಿಸಿದರು. ಕರ್ನಾಟಕದ ಇತರೆ ಪ್ರದೇಶಗಳಲ್ಲಿ ಕೆಲವು ಪಾಳೆಯಪಟ್ಟುಗಳು ಹಾಗೆಯೇ ಮುಂದುವರೆದವು. ಈಗಿನ ಹರಪನಹಳ್ಳಿ ಪ್ರದೇಶವನ್ನು ಬಳ್ಳಾರಿಗೆ ಸೇರಿಸಿ ಮದ್ರಾಸ್ ಪ್ರಾಂತ್ಯಕ್ಕೆ ಒಳಪಡಿಸಿಕೊಂಡು ಕಲೆಕ್ಟರ್‌ಗಳ ಆಳ್ವಿಕೆಗೆ ಒಳಪಡಿಸಲಾಯಿತು. ಹೀಗೆ ದಾವಣಗೆರೆ ಪ್ರದೇಶದಲ್ಲಿದ್ದ ಪಾಳೆಯಪಟ್ಟುಗಳು ಆಂಗ್ಲರ ಅಧಿಪತ್ಯಕ್ಕೆ ಒಳಗಾಗಿ ತಮ್ಮ ತನವನ್ನು ಕಳೆದುಕೊಂಡವು. ನಂತರ ಆಧುನಿಕ ಇತಿಹಾಸದ ಕಾಲ ಆರಂಭವಾಯಿತೆನ್ನಬಹುದು. ಈ ಕಾಲಾವಧಿಯಲ್ಲಿ ಭಾರತೀಯ ಇತಿಹಾಸಕಾರರು ಆಂಗ್ಲರ ವಿರುದ್ಧ ದೇಶದಲ್ಲಿ ರಾಷ್ಟ್ರೀಯತೆ ಭಾವನೆ ಮೂಡಿಸುವ ದೃಷ್ಟಿಕೋನವನ್ನಿಟ್ಟುಕೊಂಡು ಚರಿತ್ರೆ ರಚಿಸಿದರು. ಇಂಥ ಸಂದರ್ಭದಲ್ಲಿ ಜನಸಾಮಾನ್ಯರ, ದೀನದಲಿತರ, ಆರ್ಥಿಕ, ಸಾಮಾಜಿಕ, ಕಲೆ ವಾಸ್ತುಶಿಲ್ಪ ಮುಂತಾದ ವಿಷಯಗಳು ಮರೆ ಮಾಚಿದ ಚರಿತ್ರೆ ರಚನೆಯಾಗಿದೆ.ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಇಂದು ಚರಿತ್ರೆ ರಚನೆಯಾದರೆ ಕಣ್ಮರೆಯಾದ ಚರಿತ್ರೆಯನ್ನು ಬೆಳಕಿಗೆ ತಂದಂತಾಗುತ್ತದೆ.

ವಿಜಯನಗರ ಪತನಾನಂತರ ಚರಿತ್ರೆ ಬಗೆಗೆ ಅಷ್ಟಾಗಿ ಕೃತಿಗಳು ಕಾಣಬರುವುದಿಲ್ಲ. ೧೯೬೪ ಮತ್ತು ೧೯೭೨ ರಲ್ಲಿ ರಚನೆಯಾದ ಗ್ಯಾಸೆಟಿಯರ್‌ಗಳ ಮೂಲಕ ವಿಜಯನಗರೋತ್ತರ ಚರಿತ್ರೆಯನ್ನು ಅರಿಯಬಹುದಾಗಿದೆ. ಆನಂತರದ ಈಗಿನ ದಾವಣಗೆರೆ ಪ್ರದೇಶದಲ್ಲಿ ಅಧ್ಯಯನ ನಡೆಸಿ ಎಂ. ಎಸ್. ಪುಟ್ಟಣ್ಣ, ಟಿ. ಎನ್. ಗಂಡುಗಲಿ, ಪ್ರೊ. ಲಕ್ಷ್ಮಣ್ ತೆಲಗಾವಿ, ಎಂ. ಜಿ. ವೆಂಕಟಸುಬ್ಬಯ್ಯ, ಬಿ. ರಾಜಶೇಖರಪ್ಪ, ಮೀರಾಸಾಬಿಹಳ್ಳಿ ಶಿವಣ್ಣ, ವೈ. ಹೆಚ್. ನಾಯಕವಾಡ, ಮಹದೇವ, ಸುಬ್ಬಣ್ಣರೈ, ಮಾಧವಪೆರಾಜೆ, ಕುಂಭಾಸ, ವಿರೂಪಾಕ್ಷಿ ಪೂಜಾರಹಳ್ಳಿ, ಸುಮತೀಂದ್ರನಾಡಿಗ್, ಎಂ. ಚಿದಾನಂದ ಮೂರ್ತಿ ಇವರು ಗ್ಯಾಸೆಟಿಯರ್‌ನ್ನು ಹೆಚ್ಚಾಗಿ ಅವಲಿಂಬಿಸಿದ್ದಾರೆ. ಇಲ್ಲಿ ಭಿನ್ನವಾದ ಚರಿತ್ರೆಯ ಅಧ್ಯಯನ ಮಾದರಿಗಳು ಕಾಣಸಿಗುವುದಿಲ್ಲ.

ದಾವಣಗೆರೆ ಪ್ರದೇಶ ವಿಜಯನಗರೋತ್ತರ ಅಥವಾ ಕ್ರಿ.ಶ. ೧೫೬೫ ರಿಂದ ೧೮೦೦ ರವರೆಗಿನ ಅವಧಿಯ ಇತಿಹಾಸವನ್ನು ತಿಳಿಯಲು ಗ್ಯಾಸೆಟಿಯರ್‌ಗಳು ಮಾತ್ರ ಸಹಾಯಕವಾಗಿವೆ. ಇನ್ನುಳಿದಂತೆ ಕೆಲ ಇತಿಹಾಸಕಾರರು ಗ್ಯಾಸೆಟಿಯರನ್ನು ಅವಲಂಬಿಸಿದ್ದಾರೆ. ಈ ಸಮಯದಲ್ಲಿ ಆಳ್ವಿಕೆ ನಡೆಸಿದ ಪಾಳೆಯಗಾರರ ಬಗೆಗೆ ಎಂ. ಎಸ್. ಪುಟ್ಟಣ್ಣನವರು ಚಿತ್ರದುರ್ಗ ಪಾಳೆಯಗಾರರು, ಎಂ. ಜಿ. ವೆಂಕಟೇಶಯ್ಯ ಅವರು ಚಿತ್ರದುರ್ಗ ಪಾಳೆಯಗಾರರು, ಎಂ. ವಿ. ಶ್ರೀನಿವಾಸ, ಲಕ್ಷ್ಮಣ್ ತೆಲಗಾವಿಯವರ ಚಂದ್ರವಳ್ಳಿ, ಟಿ. ಎನ್. ಗಂಡುಗಲಿಯವರ ಪ್ರಮುಖ, ಹಾಗೂ ದೇಶ ದ್ರೋಹಿ ದೊಡ್ಡ ಮದಕರಿನಾಯಕ, ಕುಂಭಾಸರವರ ಹರಪನಹಳ್ಳಿ ಪಾಳೆಯಗಾರರು, ಹಲವು ಹನ್ನೊಂದು ಹರಪನಹಳ್ಳಿ, ವಿರೂಪಾಕ್ಷಿ ಪೂಜಾರಹಳ್ಳಿಯವರ ಬಳ್ಳಾರಿ ಜಿಲ್ಲೆಯ ಪಾಳೆಯಗಾರರು, ಅಬ್ದುಲ್ ಸತ್ತಾರ್‌ರವರ ತರೀಕೆರೆ ಪಾಳೆಯಗಾರರು, ಸುಮತೀಂದ್ರ ನಾಡಿಗ್‌ರ ಸಂತೆಬೆನ್ನೂರು ನಾಯಕರು, ಎಂಬ ಕೃತಿಗಳಲ್ಲಿ ಈ ಬಗೆಗೆ ಬಿಡಿ ಲೇಖನಗಳು ಪ್ರಕಟವಾಗಿವೆ. ಆದರೆ ಈ ಪ್ರದೇಶದ ಕ್ರಿ.ಶ.೧೫೬೫ ರಿಂದ ೧೮೦೦ರ ವರೆಗಿನ ಚರಿತ್ರೆಯ ವಿವರಗಳಿಗಾಗಿ ಗ್ಯಾಸೆಟಿಯರನ್ನೇ ಅವಲಂಬಿಸಬೇಕಾಗಿದೆ.

೪.೩ ತೃತೀಯ ಹಂತ

ಆಧುನಿಕ ಕಾಲ

ವ್ಯಾಪಾರ ಉದ್ದೇಶದಿಂದ ಭಾರತಕ್ಕೆ ಬಂದ ವಿದೇಶಿಯರು ಇಲ್ಲಿನ ಅಭದ್ರತೆಯನ್ನು ಕಂಡು ರಾಜ್ಯ ವಿಸ್ತರಣೆಗೆ ಕೈಹಾಕಿದರು. ಆದರಲ್ಲಿ ಬ್ರಿಟಿಷರು ನಿರಂತರವಾಗಿ ಮೇಲುಗೈ ಸ್ಥಾಪಿಸಿದರು. ವಿಜಯನಗರದ ಪತನಾನಂತರ ದಾವಣಗೆರೆ ಪ್ರದೇಶವನ್ನು ಸ್ಥಳೀಯ ಅರಸು ಮನೆತನಗಳು ಆಳ್ವಿಕೆ ನಡೆಸಿದವು. ನಂತರ ಹೈದರಾಲಿ ಮತ್ತು ಟಿಪ್ಪುಸುಲ್ತಾನರು ಈ ಎಲ್ಲಾ ಪ್ರದೇಶದ ಮೇಲೆ ಹತೋಟಿಯನ್ನು ಸ್ಥಾಪಿಸಿದರು. ನಂತರ ಟಿಪ್ಪುವಿನ ಅವನತಿಯ ನಂತರ ಈ ದಾವಣಗೆರೆ ಪ್ರದೇಶದ ಹರಪನಹಳ್ಳಿ ನಿಜಾಮನಿಗೆ ಸೇರಿತು. ಕ್ರಿ.ಶ. ೧೮೦೦ ರಲ್ಲಿ ಸಹಾಯಕಸೈನ್ಯ ಪದ್ಧತಿಗೆ ಸೇರಿದ ಹೈದ್ರಾಬಾದ್ ನಿಜಾಮನು ಈ ಪ್ರದೇಶವನ್ನು ಬ್ರಿಟಿಷರಿಗೆ ಬಿಟ್ಟುಕೊಟ್ಟನು. ನಂತರ ಅಧ್ಯಯನ ಪ್ರದೇಶವನ್ನು ಮದ್ರಾಸ್ ಪ್ರಾಂತ್ಯಕ್ಕೆ ಸೇರಿಸಲಾಯಿತು. ಸರ್‌ಥಾಮಸ್ ಮನ್ರೋ ಬಳ್ಳಾರಿ ಪ್ರದೇಶವನ್ನು ಮೊದಲ ಕಲೆಕ್ಟರ್ ಆಗಿ ನೇಮಕಗೊಂಡು ಆಡಳಿತ ನಡೆಸಿದನೆಂದು ಗ್ಯಾಸೆಟಿಯರ್ ತಿಳಿಸುತ್ತದೆ. ಹಾಗೆಯೇ ಚಿತ್ರದುರ್ಗ, ದಾವಣಗೆರೆ ಪ್ರದೇಶ ಮತ್ತು ಶಿವಮೊಗ್ಗ ಪ್ರದೇಶಗಳನ್ನು ಮೈಸೂರು ಒಡೆಯರ ಆಳ್ವಿಕೆಗೆ ಸೇರಿಸಲಾಯಿತು.

ಆದರೆ ಪರೋಕ್ಷವಾಗಿ ಆಂಗ್ಲರು ಮೈಸೂರನ್ನು ಸಹಾಯಕ ಸೈನಿಕ ಪದ್ಧತಿಗೆ ಸಹಿಹಾಕಿಸಿಕೊಂಡು ತಮ್ಮ ನಿಯಂತ್ರಣದಲ್ಲಿಟ್ಟುಕೊಂಡದ್ದು ಸ್ಪಷ್ಟ. ಈ ಅವಧಿಯಲ್ಲಿ ದಾವಣಗೆರೆ ಚರಿತ್ರೆ ರಚನೆಗೆ ಪ್ರವಾಸಿ ಫ್ರಾನ್ಸಿಸ್ ಬುಕಾನನ್ ವರದಿ ಸಹಾಯಕವಾಗುತ್ತದೆ. ಈತನು ದಕ್ಷಿಣ ಭಾರತದ ಭೌಗೋಳಿಕ ಹಿನ್ನೆಲೆಯನ್ನಿಟ್ಟುಕೊಂಡು ಇಲ್ಲಿನ ಖನಿಜಸಂಪತ್ತು, ಜನರ ಸ್ಥಿತಿಗತಿಯನ್ನು ತನ್ನ ಪ್ರವಾಸ ಕಥನದಲ್ಲಿ ತಿಳಿಸಿರುವನು. ೧೮೦೦ ರಿಂದ ೧೮೫೭ ರ ಕಾಲಾವಧಿಯಲ್ಲಿ ಈಗಿನ ದಾವಣಗೆರೆ ಪ್ರದೇಶದ ಚನ್ನಗಿರಿ ತಾಲ್ಲೂಕಿನ ಸ್ವತಂತ್ರ ಪ್ರಿಯ ಸೇನಾನಿ ದೊಂಢಿಯಾವಾಘನು ಬ್ರಿಟಿಷರ ಆಳ್ವಿಕೆಯ ವಿರುದ್ಧ ಪ್ರತಿಕ್ರಿಯಿಸಿದವರಲ್ಲಿ ಮೊದಲಿಗನು ಎಂದು ಗ್ಯಾಸೆಟಿಯರ್ ಸ್ಪಷ್ಟಪಡಿಸುತ್ತದೆ. ಹಾಗೆ ಇವನು ಕರ್ನಾಟಕದ ಪಾಳೆಯಗಾರರಾದ ಬಾಲಂ ಕೃಷ್ಣಪ್ಪನಾಯಕ, ಹಿರೇನಾಯಕ ಮುಂತಾದವರೊಂದಿಗೆ ಸಂಪರ್ಕಹೊಂದಿ ಆಂಗ್ಲರ ಅಧೀನದಲ್ಲದ್ದ ಸವಣೂರು, ರಾಣಿಬೆನ್ನೂರು, ಹಾನಗಲ್ಲು, ಕಂಬಳ, ಹರಪನಹಳ್ಳಿಗಳನ್ನು ವಶಪಡಿಸಿಕೊಂಡು ಆಂಗ್ಲರಿಗೆ ಸಿಂಹಸ್ವಪ್ನನಾಗಿದ್ದನು. ತಮಗೆ ಕಂಟಕಪ್ರಾಯನಾಗಿದ್ದಾನೆಂದು ಮನಗಂಡ ಆಂಗ್ಲರು ೧೮೦೦ ರಲ್ಲಿ ರಾಯಚೂರಿನ ಗೊಂಡಿಯಾರ್‌ನಲ್ಲಿ ನೇಣುಗಂಬಕ್ಕೇರಿಸಿದರು ಎಂದು ಗ್ಯಾಸೆಟಿಯರ್ ತಿಳಿಸುತ್ತದೆ.[೬೦] ೧೮೫೭ ರ ದಂಗೆಯ ಪೂರ್ವದಲ್ಲಿ ಕರ್ನಾಟಕದ ಹಲವೆಡೆ ಇಂಥ ಪ್ರತಿಭಟನೆಗಳು ನಡೆದವು. ಸಂಸ್ಥಾನದ ಹಿತೈಷಿಗಳಿಂದ ತಮ್ಮ ಕುತಂತ್ರದಿಂದ ಇವರೆಲ್ಲರನ್ನೂ ಧಮನಗೊಳಿಸಿ ವಸಹಾತು ಆಡಳಿತವನ್ನು ಮುಂದುವರಿಸಿದರು. ಇದಲ್ಲದೆ ಕೊಡಗು, ಚಿಕ್ಕಮಗಳೂರು, ಶಿವಮೊಗ್ಗ, ಚಿತ್ರದುರ್ಗ ಮುಂತಾದ ಕಡೆ ಆಂಗ್ಲರ ವಿರುದ್ಧ ರೈತ ಚಳವಳಿಗಳು ನಡೆದವು. ಇವುಗಳಲ್ಲಿ ಈಗಿನ ಹೊನ್ನಾಳಿ ತಾಲ್ಲೂಕಿನಲ್ಲಿ ಶಿರ್ತ್ ತೆರಿಗೆಯ ವಿರುದ್ಧ ಪ್ರತಿಭಟನೆ ನಡೆದವು[೬೧] ಎಂದು ಕರ್ನಾಟಕ ಚರಿತ್ರೆ ಸಂಪುಟ ೬ ರಲ್ಲಿ ತಿಳಿಸಲಾಗಿದೆ. ಇಂಥ ಅನೇಕ ಪ್ರತಿಭಟನೆಗಳನ್ನು ಆಂಗ್ಲರು ನಿರ್ಧಾಕ್ಷಿಣ್ಯವಾಗಿ ಹತ್ತಿಕ್ಕಿದರು ಎನ್ನಲಾಗಿದೆ.

೧೮೩೧ ರಿಂದ ೧೮೮೧ ರವರೆಗೆ ಆಂಗ್ಲ ಕಮಿಷನರ್ ಕೈಯಲ್ಲಿ ಮೈಸೂರು ಉಳಿಯಿತು. ಮುಮ್ಮಡಿ ಕೃಷ್ಣರಾಜ ಒಡೆಯರ ಅಸಮರ್ಥತೆಯನ್ನು ಮನಗಂಡ ಲಾರ್ಡ್‌ವಿಲಿಯಂ ಬೆಂಟಿಕ್ ಮೈಸೂರು ಸಂಸ್ಥಾನವನ್ನು ಕಮಿಷನರ್ ಆಳ್ವಿಕೆಗೆ ಒಳಪಡಿಸಿದರು. ಪ್ರಮುಖ ಕಮಿಷನರರಾದ ಮಾರ್ಕ್‌ಕಬ್ಬನ್ ಮತ್ತು ಲೂಯಿ ಬೆಂಥಾಮ್‌ಬೌರಿಂಗ್‌ರ ಕಾಲದಲ್ಲಿ ದಾವಣಗೆರೆ ಪ್ರದೇಶ ಹಲವು ಪ್ರಯೋಜನೆಗಳನ್ನು ಪಡೆಯಿತು. ಅಂದಿನಿಂದ ದಾವಣಗೆರೆ ಪ್ರದೇಶ ಮೈಸೂರಿಗೆ ನೇರ ಸಂಪರ್ಕ ಪಡೆದುಕೊಂಡಿತು ಎಂದು ತಿಳಿದು ಬರುತ್ತದೆ. ಬೆಂಗಳೂರಿನಿಂದ ಹರಿಹರಕ್ಕೆ ಸಂಪರ್ಕ ಮಾರ್ಗ ಕಲ್ಪಿಸಲಾಯಿತು. ೧೮೬೮ ರಲ್ಲಿ ಬೌರಿಂಗ್‌ನ ಆಡಳಿತಾವಧಿಯಲ್ಲಿ ಹರಿಹರದಲ್ಲಿ ಹರಿಯುವ ತುಂಗಭದ್ರಾನದಿಗೆ ಸೇತುವೆ ನಿರ್ಮಿಸಲಾಯಿತು. ಇದರಿಂದ ಕನ್ನಡ ಮಾತನಾಡುವ ಎರಡು ಪ್ರದೇಶಗಳನ್ನು ಸುಲುಭವಾಗಿ ಸೇರುವಂತೆ ಮಾಡಿತು ಎಂದು ಟಿ. ಗಿರಿಜ ಅವರು ತಿಳಿಸಿರುವರು. ನಂತರ ೧೮೭೬-೭೮ ರ ಅವಧಿಯಲ್ಲಿ ರಾಜ್ಯದಲ್ಲಿ ಭೀಕರ ಬರಗಾಲ ರಾಜ್ಯದಾದ್ಯಂತ ಆವರಿಸಿತ್ತು. ಇದರಿಂದ ದಾವಣಗೆರೆ ಪ್ರದೇಶ ಹೊರತಾಗಿರಲಿಲ್ಲ. ಚನ್ನಗಿರಿ, ಹೊನ್ನಾಳಿ, ಮತ್ತು ಚಿತ್ರದುರ್ಗದ ಕೆಲವು ಭಾಗಗಳು ಸಾಕಷ್ಟು ನಷ್ಟವನ್ನು ಅನುಭವಿಸಿದವೆಂದು ಷೇಕ್‌ಅಲಿಯವರು ಕರ್ನಾಟಕ ಚರಿತ್ರೆ ಸಂಪುಟದಲ್ಲಿ ತಿಳಿಸಿರುತ್ತಾರೆ. ನಂತರ ೧೮೮೧ ರಲ್ಲಿ ಆಂಗ್ಲರು ಮೈಸೂರನ್ನು ಒಡೆಯರಿಗೆ ಪುನರಾಧೀನ ಮಾಡಲಾಯಿತು ಎಂದು ಗ್ಯಾಸೆಟಿಯರ್‌ಗಳು, ಹಾಗೆಯೇ ಇತಿಹಾಸಕಾರರು ಸಹ ತಮ್ಮ ಕೃತಿಗಳಲ್ಲಿ ತಿಳಿಸಿರುವರು. ನಂತರ ಮೈಸೂರನ್ನು ದಿವಾನರುಗಳು ಆಳ್ವಿಕೆ ನಡೆಸಿದರು. ಆ ಕಾಲಾವಧಿಯಲ್ಲಿ ದಾವಣಗೆರೆ ಪ್ರದೇಶ ದಿವಾನರುಗಳ ಆಳ್ವಿಕೆಗೆ ಒಳಪಟ್ಟಿತ್ತಲ್ಲದೆ ಶೇಷಾದ್ರಿ ಐಯ್ಯರ್‌ರವರ ದಿವಾನಗಿರಿಯಲ್ಲಿ ಅಂದರೆ ೧೮೮೯ ರಲ್ಲಿ ಬೆಂಗಳೂರಿನಿಂದ ಹರಿಹರಕ್ಕೆ ರೈಲ್ವೇ ಮಾರ್ಗ ಕಲ್ಪಿಸಲಾಯಿತು. ಇದರಿಂದ ಈ ಪ್ರದೇಶ ರಾಜ್ಯದ ಹಲವು ಪ್ರದೇಶಗಳಿಗೆ ಸಂಪರ್ಕ ಪಡೆಯಿತು.[೬೨] ನಂತರ ೧೮೫೫ ರಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ದಾವಣಗೆರೆ ಭಾಗಿಯಾಗಿ ತನ್ನದೇ ಆದ ಮಹತ್ವದ ಕೊಡುಗೆಯನ್ನು ನೀಡಿರುವುದನ್ನು ಗ್ಯಾಸೆಟಿಯರ್ ಹಾಗೂ ನಂತರ ಬಂದಂತಹ ಸ್ವತಂತ್ರ ಚಳವಳಿ ಕುರಿತ ಅಧ್ಯಯನಗಳು ತಿಳಿಯಪಡಿಸುತ್ತವೆ.

ದಾವಣಗೆರೆ ಪರಿಸರದಲ್ಲಿ ಸ್ವಾತಂತ್ರ್ಯ ಹೋರಾಟ

ದಾವಣಗೆರೆ ಪ್ರದೇಶದ ಸ್ವಾತಂತ್ರ್ಯ ಹೋರಾಟವು ೧೮೫೭ ರ ಸಿಪಾಯಿ ದಂಗೆಯ ಅಥವಾ ಪ್ರಥಮ ಸ್ವತಂತ್ರ್ಯ ಹೋರಾಟದ ಪೂರ್ವದಲ್ಲಿ ಚನ್ನಗಿರಿಯ ದೋಂಢಿಯಾವಾಘನಿಂದ ಪ್ರಾರಂಭವಾಯಿತೆನ್ನಬಹುದು. ಭಾರತದ

ಸ್ವತಂತ್ರ ಹೋರಾಟವು ರಾಷ್ಟ್ರಮಟ್ಟದಲ್ಲಿ, ಪ್ರಾಂತ್ಯ ಮಟ್ಟದಲ್ಲಿ ಯಾವ ರೀತಿಯಲ್ಲಿ ಸಂಘಟಿತವಾಗಿತ್ತೋ ಅದೇ ರೀತಿಯಲ್ಲಿ ದಾವಣಗೆರೆ ಪ್ರದೇಶದಲ್ಲಿ ಸ್ವಾತಂತ್ರ್ಯ ಹೋರಾಟ ನಡೆಯುತ್ತಾ ಬಂದಿತು. ಗ್ಯಾಸೆಟಿಯರ್‌ಗಳಲ್ಲಿ ಹಾಗೂ ಸೂರ್ಯನಾಥ್ ಕಾಮತ್‌ರವರ ಸ್ವಾತಂತ್ರ್ಯಸಂಗ್ರಾಮದ ಸ್ಮೃತಿಗಳು ಭಾಗ ಒಂದು ಮತ್ತು ಎರಡರಲ್ಲಿ ಹಿರೇಮಠ ವೀರಭದ್ರಯ್ಯನವರ ಹರಪನಹಳ್ಳಿ ತಾಲ್ಲೂಕು ಸ್ವಾತಂತ್ರ್ಯ ಹೋರಾಟ ಕೃತಿಯಲ್ಲಿ, ಹಿರೇಬಿದ್ರಿ ಹೊಳಿಬಸಪ್ಪರವರ ದಾವಣಗೆರೆ ಜಿಲ್ಲೆಯ ಸ್ವದೇಶಿ ಚಳವಳಿ ಅಪ್ರಕಟಿತ ಎಂ.ಫಿಲ್. ಪ್ರಬಂಧದಲ್ಲಿ, ಶಂಕರನಾರಾಯಣರಾವ್ ಎನ್.ಪಿ. ಅವರ ಸ್ವತಂತ್ರ ಗಂಗೆಯ ಸಾವಿರ ತೊರೆಗಳು ಕೃತಿಗಳಲ್ಲಿ ದಾವಣಗೆರೆ ಪ್ರದೇಶಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟದ ವಿವರಗಳನ್ನು ನೀಡುತ್ತವೆ. ೧೯೩೦ ರ ವೇಳೆಗೆ ಸ್ವಾತಂತ್ರ್ಯ ಹೋರಾಟ ದಾವಣಗೆರೆಯ ಎಲ್ಲಾ ಪ್ರದೇಶಗಳಿಗೆ ವ್ಯಾಪಿಸಿತು. ಇದಕ್ಕೂ ಪೂರ್ವವಾಗಿ ಕ್ರಿ.ಶ. ೧೮೮೫ ರಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯಾಯಿತು. ಮೊದಲ ಆಂದೋಲನ ಡಿಸೆಂಬರ್ ೨೮ ರಿಂದ ೩೦ ರವರೆಗೆ ನಡೆಯಿತು. ಈ ಅಧಿವೇಶನಕ್ಕೆ ಕರ್ನಾಟಕದ ಪ್ರತಿನಿಧಿಗಳು ಭಾಗವಹಿಸಿದ್ದರು.

ಭಾರತದ ಸ್ವತಂತ್ರ್ಯ ಹೋರಾಟದಲ್ಲಿ ಗಾಂಧೀಜಿಯವರಿಗಿಂತ ಮೊದಲೇ ಬಾಲಗಂಗಾಧರ ತಿಲಕರ ಪ್ರಭಾವವಿತ್ತು ಎನ್ನಲಾಗಿದೆ. ನಂತರ ಗಾಂಧೀಜಿಯವರ ಆಗಮನದಿಂದ ಸ್ವದೇಶಿ ಚಳವಳಿ ದಾವಣಗೆರೆಯಲ್ಲಿ ಯಶಸ್ವಿಯಾಯಿತು. ಇದಕ್ಕೂ ಪೂರ್ವದಲ್ಲಿ ಹರ್ಡೇಕರ್ ಮಂಜಪ್ಪ ೧೯೩೧ ರಲ್ಲಿ ಚಿತ್ರದುರ್ಗಕ್ಕೆ ಭೇಟಿ ನೀಡಿ ಬ್ರಿಟಿಷರ ದಬ್ಬಾಳಿಕೆಯನ್ನು ವಿರೋಧಿಸಲು ಕರೆ ನೀಡಿದರೆಂದು ಗ್ಯಾಸಟಿಯರ್ ತಿಳಿಸುತ್ತದೆ. ಈ ಒಂದು ಪ್ರಭಾವದಿಂದ ದಾವಣಗೆರೆಯಲ್ಲಿ ೧೯೩೨ ರ ಮಾರ್ಚ್ ತಿಂಗಳ ಹೋಳಿಹಬ್ಬದ ದಿನ ವಿದೇಶಿ ವಸ್ತುಗಳ ದಹನ ಕಾರ್ಯ ನಡೆಯಿತೆಂದು[೬೩] ಹಿರೇಬಿದ್ರಿ ಹೋಳಿಬಸಪ್ಪನವರು ತಮ್ಮ ಪ್ರಬಂಧದಲ್ಲಿ ತಿಳಿಸಿರುವರು. ೧೯೩೪ ರಲ್ಲಿ ಗಾಂಧೀಜಿಯವರು ದಾವಣಗೆರೆಗೆ ಭೇಟಿ ನೀಡಿ ಒಂದು ದಿನ ವಾಸ್ತವ್ಯ ಹೂಡಿ ನಗರದಲ್ಲಿ ಹರಿಜನ ವಿಧ್ಯಾರ್ಥಿನಿಲಯದ ಸ್ಥಾಪನೆ ಮಾಡಿದರು.[೬೪] ನಂತರ ಗಾಂಧೀಜಿಯವರ ಕರೆಗೆ ಓಗೊಟ್ಟು ಜನರು ಸ್ವದೇಶಿ ಚಳವಳಿಯಲ್ಲಿ ಭಾಗಿಯಾಗಿ ಚಳವಳಿಯನ್ನು ಯಶಸ್ವಿಗೊಳಿಸಿದರು ಎಂದು ಎನ್.ಬಿ. ಹನುಮಂತಯ್ಯ ಅವರು 'ಶತಮಾನದ ದಾವಣಗೆರೆ' ಎಂಬ ಸಂಪಾದಿತ ಕೃತಿಯಲ್ಲಿ ತಿಳಿಸಿರುವರು. ಜನವರಿ ೨೪, ೧೯೩೬ ರಲ್ಲಿ ಎಲ್ಲಾ ಜಿಲ್ಲಾಕೇಂದ್ರಗಳು ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು. ಆದರೆ ಜಿಲ್ಲಾಧಿಕಾರಿಗಳು ಎರಡು ತಿಂಗಳವರೆಗೆ ರಾಷ್ಟ್ರಧ್ವಜವನ್ನು ಹಾರಿಸದಂತೆ ಪ್ರತಿಬಂಧಕಾಜ್ಞೆಯನ್ನು ವಿಧಿಸಿದರೆಂದು, ಕಾಂಗ್ರೆಸ್ ಸಪ್ತಾಹವನ್ನು ೧೯೩೯ ಮೇ ತಿಂಗಳಲ್ಲಿ ಜಿಲ್ಲೆಯ ಅನೇಕ ಸ್ಥಳಗಳಲ್ಲಿ ಆಚರಿಸಲಾಯಿತು. ಪ್ರತಿದಿನವೂ ಮೆರವಣಿಗೆ ಮತ್ತು ರಾಜಕೀಯ ಸಭೆಗಳನ್ನು ಏರ್ಪಡಿಸಲಾಯಿತು. ಶೇಂದಿ ಅಂಗಡಿಗಳ ಮುಂದೆ ಕಾಂಗ್ರೆಸ್ ನಾಯಕರು ಪಿಕೆಟಿಂಗ್ ಪ್ರಾರಂಭಿಸಿದರು[೬೫] ಎಂದು ಎಂ.ವಿ. ಶ್ರೀನಿವಾಸ್ ಮತ್ತು ಪ್ರೊ. ಲಕ್ಷ್ಮಣ್ ತೆಲಗಾವಿ ಚಂದ್ರವಳ್ಳಿ ಕೃತಿಯಲ್ಲಿ ತಿಳಿಸಿರುವರು. ೧೯೩೭ ರ ಶಿಕಾರಿಪುರ ಧ್ವಜ ಸತ್ಯಾಗ್ರಹ, ೧೯೩೯ ರ ಅರಣ್ಯ ಚಳವಳಿ, ೧೯೩೯ ರಿಂದ ೧೯೪೦ ರಲ್ಲಿನ ಕಾನೂನುಭಂಗ ಚಳವಳಿಗಳು, ರೈಲುತಡೆ, ರಸ್ತೆ ತಡೆಗಳು ಈ ಎಲ್ಲದರ ಪ್ರಭಾವವಾಗಿ ೧೯೪೨ ರ ಕ್ವಿಟ್ ಇಂಡಿಯಾ ಚಳವಳಿ ಸ್ವಯಂಸಿದ್ಧತೆಯನ್ನು ಪಡೆದು ಪೂರ್ಣಪ್ರಮಾಣದ ಹೋರಾಟವಾಗಿ ಪರಿಣಮಿಸಿತು. ಇಲ್ಲಿ ನಿರಂತರವಾಗಿ ನಡೆದ ಪಿಕೆಟಿಂಗ್‌ಗಳು, ವಿಧ್ವಂಸಕ ಕೃತ್ಯಗಳು, ಭೂಗತ ಚಟುವಟಿಕೆಗಳು, ಪತ್ರಿಕಾ ಪ್ರಚಾರ ಮತ್ತು ಕ್ಷಿಪ್ರಗತಿಯ ಯೋಜನೆಗಳು ಎಷ್ಟೊಂದು ಪ್ರಮುಖವಾದುವೆಂದರೆ ಒಬ್ಬೊಬ್ಬ ಸಾಮಾನ್ಯ ಪ್ರಜೆಯೂ ತನ್ನ ದೈನಂದಿನ ವೈಯಕ್ತಿಕ ಮಾರ್ಗವಾಗಿ ಹೋರಾಟವನ್ನು ನಡೆಸುವಂತಾಯಿತು. ಸತ್ಯಾಗ್ರಹಿಗಳನ್ನು ಪ್ರೋತ್ಸಾಹಿಸುವ ಕಾರ್ಯವಂತೂ ಭರದಿಂದ ಸಾಗಿತ್ತು. ಸ್ವದೇಶಿ ಚಳವಳಿಯು ೧೯೪೭ ವರೆಗೆ ನಡೆಯಿತು.[೬೬] ಇದರಲ್ಲಿ ದಾವಣಗೆರೆಯ ಹೋರಾಟಗಾರರು ಭಾಗಿಯಾಗಿದ್ದರು ಎಂದು ಆರುಂಧತಿ ರಮೇಶ್ ತಿಳಿಸಿರುವರು.

೧೯೪೭ ಆಗಸ್ಟ್ ೧೫ ರಂದು ಭಾರತ ಸ್ವಾತಂತ್ರ್ಯಗೊಂಡಿತು. ನಂತರ ದೇಶದಲ್ಲೆಡೆ ಚಳವಳಿ ಮುಕ್ತಾಯವಾದಂತೆ ದಾವಣಗೆರೆಯಲ್ಲಿ ಸಹ ಚಳವಳಿ ಮುಕ್ತಾಯವಾಯಿತು. ಆದರೆ ಈ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿದ್ದ ಅನೇಕ ಮುಖಂಡರ ಪಾತ್ರ ಪ್ರಮುಖವಾದದು. ಅಂಥವರಲ್ಲಿ ವಸುಪಾಲ್, ಪ್ರೊ. ಅನಂತರಾಮ್, ಎ. ಹೆಚ್. ಶಿವಾನಂದಸ್ವಾಮಿ, ಬಣಗಾರ ಹೊನ್ನಪ್ಪ, ಮುದುಗಲ್ ನಾಗಪ್ಪ, ಇಜಾರಿ ಶಿರಸಪ್ಪ, ಕಡ್ಡಿ ಸೇತುರಾಮಾಚರ್, ಮುದೇನೂರು ಕೊಟ್ರಬಸಪ್ಪ, ಕೆ. ಎಸ್. ವೀರಪ್ಪ, ಪರಮೇಶ್ವರಪ್ಪ, ಬಿ.ಎನ್. ಓಬಳಪ್ಪ, ಭೀಮಪ್ಪನಾಯಕ,

ವಾಸುದೇವ ಶೆಟ್ಟಿ, ಕೊಟ್ರನಂಜಪ್ಪ, ಲೋಕೇಶಪ್ಪ, ಇವರಲ್ಲದೆ ದಾವಣಗೆರೆ ತಾಲ್ಲೂಕಿನ ಕೆ. ಟಿ. ಜಂಬಣ್ಣ, ಇಬ್ರಾಹಿಂ ಸಾಬ್, ಓಂಕಾರಪ್ಪ, ಕೆ. ಎಚ್. ರಂಗನಾಥ್, ಕೆ. ಆರ್. ಪಾಂಡುರಂಗರಾವ್, ಗೌಡರ ಸಿದ್ದಮ್ಮ, ಮಲ್ಲಪ್ಪ, ಡಿ. ಎನ್. ಅಡಿವೆಪ್ಪ, ಹಳೂರು ನಾಗಪ್ಪ ಮತ್ತು ರಾಚಯ್ಯ, ಮಳೀಮಠ, ಹರಿಹರ ತಾಲ್ಲೂಕಿನ ಎನ್. ನೀಲಪ್ಪ, ಎಂ.ಜಿ. ಕೊಟ್ರಪ್ಪ, ಕೆ. ಹಾಲಪ್ಪ, ಸಿದ್ದಪ್ಪ, ಜಗಳೂರು ತಾಲ್ಲೂಕಿನ ಜಿ. ರುದ್ರಮುನಿಯಪ್ಪ, ಎಂ. ಬಸಪ್ಪ, ಡಿ. ರುದ್ರಪ್ಪ, ಭೀಮಪ್ಪನಾಯಕ, ಟಿ. ಸಿದ್ದಬಸಪ್ಪನಾಯಕ, ಜಿ. ನಾಗಮ್ಮ, ಪುಟ್ಟಣ್ಣ, ಚನ್ನಗಿರಿ ತಾಲ್ಲೂಕಿನ ರುದ್ರಪ್ಪ, ಎಚ್. ಸಿದ್ದಪ್ಪ, ಎಚ್. ಗುರುಬಸಪ್ಪ, ಕುಂದೂರು ರುದ್ರಪ್ಪ, ಬಿ. ಜಿ. ನಾರಾಯಣಶೆಟ್ಟಿ, ಎಸ್. ಉಮಾಪತಿ. ಮತ್ತು ಸೋಮಣ್ಣ ಶೆಟ್ಟಿ, ಹರಪನಹಳ್ಳಿ ತಾಲ್ಲೂಕಿನಿಂದ ಅಕ್ಕಸಾಲಿ ಬಸವಣ್ಣಪ್ಪ, ಪದ್ಮಾಜಿ ಸಿದ್ದಪ್ಪ, ಬೆಳ್ಳುಳ್ಳಿ ಚನ್ನಬಸಪ್ಪ, ಹೊನ್ನಾಳಿ ತಾಲ್ಲೂಕಿನ ಹೆಚ್. ವಿ. ರಂಗಪ್ಪ, ಹೊನ್ನಾಳಿ ಸಿ. ಈಶ್ವರಪ್ಪ[೬೭] ಮುಂತಾದ ಸ್ವಾತಂತ್ರ್ಯ ಹೋರಾಟ ಮಣಿಗಳು ಹೋರಾಟ ನಡೆಸಿದ ವಿವರವನ್ನು ಹೆಸರನ್ನು ಸೂರ್ಯನಾಥ್‌ಕಾಮತ್[೬೮]ರ ಕೃತಿಯಲ್ಲಿ ಹಾಗೂ ಹಿರೇಬಿದ್ರಿ ಹೋಳಿಬಸಪ್ಪ ಅವರು ತಮ್ಮ ಅಪ್ರಕಟಿತ ಎಂ.ಫಿಲ್. ಪ್ರಬಂಧದಲ್ಲಿ ವಿವರ ನೀಡಿದ್ದಾರೆ. ಮುಖ್ಯವಾಗಿ ಇಲ್ಲಿ ಶ್ರೀಮಂತ ವರ್ಗದವರು ಅಥವಾ ಮೇಲ್ವರ್ಗದವರ ನಾಯಕರೇ ಹೆಚ್ಚಾಗಿ ಈ ಚಳವಳಿಯಲ್ಲಿ ಕಂಡುಬರುತ್ತಾರೆ. ಸ್ವಾತಂತ್ರ್ಯ ಹೋರಾಟಕ್ಕೆ ಎಲೆಮರೆಯಕಾಯಿಯಂತೆ ಎಷ್ಟೋ ನಾಯಕಮಣಿಗಳು ಜೊತೆಗೆ ಶ್ರೀಸಾಮಾನ್ಯರು, ಬಡವರು, ಹಿಂದುಳಿದವರು, ಕಾರ್ಮಿಕರು ಹೋರಾಟದಲ್ಲಿ ತಮ್ಮ ಸೇವೆಯನ್ನು ಸಲ್ಲಿಸಿರುವ ಸಾಧ್ಯತೆ ಇದೆ. ಆದರೆ ಇಂಥ ವಿಷಯವನ್ನು ಅಲಕ್ಷಿಸಿ ಉನ್ನತ ವ್ಯಕ್ತಿಗಳನ್ನು ಕುರಿತು ಉಲ್ಲೇಖಿಸಿರುವುದು ಅಪವಾದವೆನ್ನಿಸುತ್ತದೆ. ಸ್ವಾತಂತ್ರ್ಯ ಹೋರಾಟ ಕುರಿತು ಚರಿತ್ರೆಕಾರರು ಮರು ಅಧ್ಯಯನ ಮಾಡಿದರೆ ಇಂತಹ ಅಪವಾದವನ್ನು ತಪ್ಪಿಸಿದಂತಾಗುತ್ತದೆನ್ನಹುದು.

ದಾವಣಗೆರೆ ಜಿಲ್ಲೆ ಕರ್ನಾಟಕ ಏಕೀಕರಣಕ್ಕೆ ತನ್ನದೇ ಆದ ಕೊಡುಗೆ ನೀಡಿದೆ ಎನ್ನುವುದನ್ನು ಹೆಚ್. ಈ. ಬಸವರಾಜಪ್ಪನವರು 'ಸ್ಟಡೀಸ್ ಇನ್ ಕರ್ನಾಟಕ ಹಿಸ್ಟರಿ ಅಂಡ್ ಕಲ್ಚರ್' ಸಂಪುಟ ಐದರಲ್ಲಿ ಪರಿಚಯಿಸುವರು. ಸಂಯುಕ್ತ ಕರ್ನಾಟಕ ರಚನೆಗೆ ದಾವಣಗೆರೆ ಮಹತ್ವದ ಕೊಡುಗೆಯನ್ನು ನೀಡಿದೆ. ದಾವಣಗೆರೆಯಲ್ಲಿ ಏಕೀಕರಣ ಸಭೆ ನಡೆಯಿತು. ಅಖಿಲಕರ್ನಾಟಕದ ಸದಸ್ಯರುಗಳು ಭಾಗವಹಿಸಿ ಒಂದೇ ಭಾಷೆಯ ಬ್ರಿಟಿಷ್ ಪ್ರಾಂತ್ಯದ ಮತ್ತು ಸಂಸ್ಥಾನದ ಪ್ರಜೆಗಳು ಒಟ್ಟಿಗೆ ಸೇರಿ ತಮ್ಮ ಪ್ರಾಂತ್ಯಕ್ಕೆ ಒಂದೇ ಆಡಳಿತದ ಬೇಡಿಕೆಯನ್ನು ಮಂಡಿಸಿತು. ಇದರಿಂದ ಈ ಮಹತ್ವದ ಸಭೆ ಇಡೀ ಭಾರತದಲ್ಲೆ ಗಮನ ಸೆಳೆಯಿತು. ಈ ಸಭೆಯಲ್ಲಿ ಕರ್ನಾಟಕ ಏಕೀಕರಣ ಶೀಘ್ರವಾಗಿ ಆಗಬೇಕೆಂದು ನಿರ್ಣಯಿಸಿತು. ಇದಲ್ಲದೆ ೧೯೪೮ ರಲ್ಲಿ ಕರ್ನಾಟಕ ಯುವ ಅಧಿವೇಶನ ದಾವಣಗೆರೆಯಲ್ಲಿ ನಡೆಯಿತು. ಇದರ ಮುಖ್ಯ ಉದ್ದೇಶ ಏಕೀಕೃತ ಕರ್ನಾಟಕದ ಸ್ಥಾಪನೆಯಾಗಿತ್ತು. ಇದಕ್ಕೆ ಅಖಂಡ ಕರ್ನಾಟಕ ನಿರ್ಮಾಣ ಪರಿಷತ್ ಕರ್ನಾಟಕ ಏಕೀಕರಣ ಸಂಘಗಳು ಬೆಂಬಲ ವ್ಯಕ್ತಪಡಿಸಿದವು. ನಂತರ ೧೯೪೯ ರಲ್ಲಿ ಮತ್ತೊಂದು ಯುವ ಅಧಿವೇಶನ ನಡೆಸಲಾಯಿತು. ಈ ಅಧಿವೇಶನವೂ ಸಹ ಭಾಷಾವಾರು ಪ್ರಾಂತ್ಯದ ರಚನೆಗೆ ಒತ್ತಾಯಿಸಿತು. ಹಾಗೆ ದಾವಣಗೆರೆ ಯುವಕ ಸಂಘವು ಸಂಯುಕ್ತ ಕರ್ನಾಟಕ ಪ್ರಾಂತ್ಯದ ಚಳವಳಿಯ ಪ್ರಗತಿಗೆ ಹತ್ತು ಲಕ್ಷ ಹಣ ನೀಡಲು ನಿರ್ಧರಿಸಿತು ಎಂದು ಬಸವರಾಜಪ್ಪ ತಿಳಿಸಿರುವರು. ೧೯೪೯ ರಲ್ಲಿ ದಾವಣಗೆರೆಯಲ್ಲಿ ಮತ್ತೊಂದು ಕೆ.ಪಿ.ಸಿ.ಸಿ. ಸಭೆ ನಡೆಯಿತು. ಇದರಲ್ಲಿ ಹೈದ್ರಾಬಾದ್ ಸಂಸ್ಥಾನ ಕುರಿತ ಎಲ್ಲಾ ಭಾಗಗಳ ಸದಸ್ಯರು ಭಾಗವಹಿಸಿ ಅಖಂಡ ಕರ್ನಾಟಕ ರಚಿಸಬೇಕೆಂದು ಒತ್ತಾಯಿಸಿದರು. ಇಂಥ ಹಲವು ಹೋರಾಟಗಳಿಂದ ಕನ್ನಡ ಮಾತನಾಡುವ ಪ್ರದೇಶಗಳ ಏಕೀಕರಣವಾಯಿತು. ೧೯೫೬ ನವೆಂಬರ್ ಒಂದರಂದು ವಿಶಾಲ ಮೈಸೂರು ರಾಜ್ಯಸ್ಥಾಪನೆಯಾಯಿತು[೬೯] ಎಂಬುದನ್ನು ಗ್ಯಾಸೆಟಿಯರ್ ತಿಳಿಸುತ್ತದೆ. ಇದೇ ಮಾಹಿತಿಯನ್ನು ಬಸವರಾಜಪ್ಪನವರು ನೀಡಿರುತ್ತಾರೆ.

೧೯೪೭ ರ ನಂತರದಲ್ಲಿ ದಾವಣಗೆರೆ ಪ್ರದೇಶದ ಚರಿತ್ರೆ ಕುರಿತಂತೆ ಅಧ್ಯಯನಗಳಾಗಿರುವುದು ಕಡಿಮೆಯೆನ್ನಬಹುದು. ಸರ್ಕಾರಿ ಗ್ಯಾಸೆಟಿಯರ್‌ಗಳು ಈ ಪ್ರದೇಶದ ಚರಿತ್ರೆಯ ಮೇಲೆ ಬೆಳಕು ಚೆಲ್ಲುತ್ತವೆ. ಆದರೆ ೧೯೯೮ ರಲ್ಲಿ ಎಸ್. ಸಿ. ಭರತನ್‌ರವರು 'ದಿ ಎನ್‌ಸೈಕ್ಲೋಪಿಡಿಕ್ ಡಿಸ್ಟ್ರಿಕ್ಟ್ ಗ್ಯಾಸೆಟಿಯರ್ ಆಫ್ ಇಂಡಿಯಾ ಸಂಪುಟ ಹನ್ನೊಂದು' ಕೃತಿಯನ್ನು ಕರ್ನಾಟಕದ ೨೭ ಜಿಲ್ಲೆಗಳಲ್ಲಿ ಬಾಗಲಕೋಟೆ, ಚಾಮರಾಜನಗರ, ದಾವಣಗೆರೆ, ಗದಗ, ಹಾವೇರಿ, ಕೊಪ್ಪಳ, ಉಡುಪಿ ಕುರಿತಾಗಿ ರಚಿಸಿರುವರು. ಇದು ೧೯೪೭ ರ ನಂತರದ

ಚರಿತ್ರೆಯನ್ನು ತಿಳಿಸುವಲ್ಲಿ ಪ್ರಮುಖವಾಗಿದೆ. ನಂತರ ಟಿ. ಗಿರಿಜರವರ 'ದಾವಣಗೆರೆ ಇದು ನಮ್ಮ ಜಿಲ್ಲೆ' ೨೦೦೧ ರಲ್ಲಿ ಕೃತಿಯನ್ನು ರಚಿಸಿರುವರು. ೧೯೪೭ ರ ನಂತರ ಚರಿತ್ರೆ ತಿಳಿಸುವ ಪ್ರಯತ್ನ ಮಾಡುತ್ತದೆ ಈ ಕೃತಿ. ಬಳ್ಳೇಕೆರೆ ಹನುಮಂತಪ್ಪನವರು ಹರಿಹರ ತಾಲ್ಲೂಕು ದರ್ಶಿನಿ, ಹರಿಹರ ತಾಲ್ಲೂಕಿನ ಪ್ರಾಚೀನ ಇತಿಹಾಸದಿಂದ ಪ್ರಸ್ತುತ ಕಾಲದವರೆಗೂ ಅಂದರೆ ೧೯೪೭ ರ ನಂತರ ೨೦೦೦ ರವರೆಗೂ ತಾಲ್ಲೂಕಿನ ಚರಿತ್ರೆಯನ್ನು ತಿಳಿಸುತ್ತದೆ. ಡಾ. ಕೊಟ್ರೇಶ್ ಉತ್ತಂಗಿಯವರ 'ಹೊನ್ನಲೆಗೆಳು' ಕೃತಿ ಪ್ರಾಚೀನ ಕಾಲದ ಚರಿತ್ರೆಯಿಂದ ಹಿಡಿದು ಇತ್ತೀಚಿನವರೆವಿಗೂ ಹೊನ್ನಾಳಿಯ ತಾಲ್ಲೂಕಿನ ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ ಮುಂತಾದ ವಿಷಯಗಳನ್ನು ತಿಳಿಸುತ್ತದೆ. ಇಂಥ ಕೆಲವೇ ಅಧ್ಯಯನಗಳು ದಾವಣೆಗೆರೆ ಪ್ರದೇಶದ ಆಧುನಿಕ ಚರಿತ್ರೆ ಕುರಿತಂತೆ ತಿಳಿಸುತ್ತವೆ. ಇದರಿಂದ ಸ್ವತಂತ್ರ್ಯಾನಂತರ ದಾವಣಗೆರೆ ಪರಿಸರದ ಚರಿತ್ರೆಯ ರಚನೆಯಲ್ಲಿ ಸಮಗ್ರತೆ ಕಾಣುವುದಿಲ್ಲ ಎಂಬುದು ಕಟುಸತ್ಯ. ಈ ಹಿನ್ನೆಲೆಯಲ್ಲಿ ಕೊರತೆ ತುಂಬುವ ಅಧ್ಯಯನಗಳು ಅತ್ಯವಶ್ಯಕವಾಗಿ ನಡೆಯಬೇಕಾದ ಅಗತ್ಯವಿದೆ.

ಟಿಪ್ಪಣಿಗಳು

೧. ಸುಂದರ ಅ., **ಕರ್ನಾಟಕ ಚರಿತ್ರೆ ಸಂಪುಟ ಒಂದು,** ಪು. ೭೮

೨. **ಅದೇ,** ಪು. ೧೦೯

೩. ಶಿವತಾರಕ್ ಕೆ. ಬಿ., **ಕರ್ನಾಟಕ ಪುರಾತತ್ವ ನೆಲೆಗಳು,** ಪು. ೩೩೦, ೩೪೬

೪. ತಿಪ್ಪೇಸ್ವಾಮಿ ಹೆಚ್., **ದಾವಣಗೆರೆ ಜಿಲ್ಲೆಯ ದೇವಾಲಯಗಳು,** ಪಿಎಚ್.ಡಿ. ಮಹಾಪ್ರಬಂಧ, ಪು. ೧೩, ೧೫

೫. ಲಕ್ಷ್ಮಣ್ ತೆಲಗಾವಿ, **ಮೌರ್ಯ ಮತ್ತು ಶಾತವಾಹನ ಯುಗ,** ಪು. ೧೯೮, ೨೦೦, ೨೦೧, ೨೦೩, ೨೦೬, ೨೧೬

೬. ಸೋಮಶೇಖರ್ ಎಸ್. ವೈ., **ಆಕನೂರು ಗ್ರಾಮದ ಬಳಿ ಆದಿ ಇತಿಹಾಸ ಕುರುಹುಗಳು,** ಇತಿಹಾಸ ದರ್ಶನ, ಸಂಪುಟ ೧೨, ಪು. ೧೨, ೧೩

೭. ಶ್ರೀನಿವಸಾಮೂರ್ತಿ ಹೆಚ್. ವಿ., ರಾಮಕೃಷ್ಣನ್ ಆರ್., (ಸಂ.), **ಸಮಗ್ರ ಕರ್ನಾಟಕದ ಚರಿತ್ರೆ,** ಪು. ೨೪

೮. ಸತ್ಯನ್. ಬಿ. ಎನ್., **ಚಿತ್ರದುರ್ಗ ಡಿಸ್ಟ್ರಿಕ್ಟ್ ಗ್ಯಾಸೆಟಿಯರ್,** ಪು. ೨೭

೯. **ಅದೇ** ಪು. ೩೦

೧೦.ಲಕ್ಷ್ಮಣ್ ತೆಲಗಾವಿ, **ಪೂರ್ವೋಕ್ತ,** ಪು. ೧೩

೧೧. ಶ್ರೀನಿವಾಸಮೂರ್ತಿ ಹೆಚ್. ವಿ., ಮತ್ತು ರಾಮಕೃಷ್ಣನ್ ಆರ್. **ಪೂರ್ವೋಕ್ತ,** ಪು. ೨೫

೧೨. ಶ್ರೀನಿವಾಸ್ ಎಂ. ವಿ., ಲಕ್ಷ್ಮಣ್ ತೆಲಗಾವಿ, (ಸಂ.), **ಚಂದ್ರವಳ್ಳಿ,** ಪು. ೨

೧೩. ತಿಪ್ಪೇಸ್ವಾಮಿ ಹೆಚ್., **ಪೂರ್ವೋಕ್ತ,** ಪು. ೧೯

೧೪. ವಿರೂಪಾಕ್ಷಿ ಪೂಜಾರಹಳ್ಳಿ, **ಚಿನ್ನಹಗರಿ ಸಿರಿ,** ಪು. ೫೦

೧೫. ಸತ್ಯನಾರಾಯಣರಾವ್, (ಅನು.), ಬಾಲಸುಬ್ರಮಣ್ಯಂ, **ಮರೆಯಲಾಗದ ಮಹಾಸಾಮ್ರಾಜ್ಯ,** ಪು. ೩೯

೧೬. ಸತ್ಯನ್ ಬಿ. ಎನ್., **ಪೂರ್ವೋಕ್ತ,** ಪು. ೩೧

೧೭. ಶ್ರೀನಿವಾಸಮೂರ್ತಿ ಎಂ. ವಿ., ಲಕ್ಷ್ಮಣ್ ತೆಲಗಾವಿ, **ಪೂರ್ವೋಕ್ತ,** ಪು. ೬, ೭

೧೮. ಲಕ್ಷ್ಮಣ್ ತೆಲಗಾವಿ, **ಪೂರ್ವೋಕ್ತ,** ಪು. ೯೦

೧೯. ತಿಪ್ಪೇಸ್ವಾಮಿ, **ಪೂರ್ವೋಕ್ತ,** ಪು. ೨೦, ೨೧

೨೦. ರಘುನಾಥಭಟ್ ಎಚ್. ಎಆರ್., **ಚಂದ್ರವಳ್ಳಿ,** ಪು. ೧೦

೨೧. ಸತ್ಯನ್ ಬಿ. ಎನ್., **ಪೂರ್ವೋಕ್ತ,** ಪು. ೩೨

೨೨. ಉಷಾ ಎಂ. ಭಟ್, **ಚಂದ್ರವಳ್ಳಿ,** ಪು. ೧೩

೨೩. ಸತ್ಯನ್ ಬಿ. ಎನ್., **ಪೂರ್ವೋಕ್ತ,** ಪು. ೩೩

೨೪. ಭಟ್ ಎಸ್. ಸಿ., ದಿ ಎನ್‌ಸೈಕ್ಲೋಪೀಡಿಯಾ ಆಫ್ ಡಿಸ್ಟ್ರಿಕ್ಟ್ಸ್ ಗ್ಯಾಸೆಟಿಯರ್ ಆಫ್ ಇಂಡಿಯಾ, ವ್ಯಾಲ್ಯೂಮ್ ೧೧, ನ್ಯೂದೆಹಲಿ, ೧೯೯೮,ಪು. ೩೭
೨೫. ಶ್ರೀನಿವಾಸಮೂರ್ತಿ, ರಾಮಕೃಷ್ಣನ್, ಪೂರ್ವೋಕ್ತ, ಪು. ೫೦
೨೬. ತಿಪ್ಪೇಸ್ವಾಮಿ ಹೆಚ್., ಪೂರ್ವೋಕ್ತ, ಪು. ೨೬
೨೭. ವಿರೂಪಾಕ್ಷಿ ಪೂಜಾರಹಳ್ಳಿ, ಪೂರ್ವೋಕ್ತ, ಪು. ೫೧
೨೮. ಕನ್ನಡ ವಿಶ್ವಕೋಶ, ಸಂಪುಟ ನಾಲ್ಕು, ಪು. ೮೯
೨೯. ಸೀತಾರಾಮ ಜಾಗೀರ್‌ದಾರ್, ಚಂದ್ರವಳ್ಳಿ, ಪು. ೨೩
೩೦. ತಿಪ್ಪೇಸ್ವಾಮಿ ಹೆಚ್. ಪೂರ್ವೋಕ್ತ, ಪು. ೨೮, ೨೯
೩೧. ರಾಜಶೇಖರಪ್ಪ ಬಿ., ಇತಿಹಾಸ ಕಥನ, ಪು. ೧೨೮
೩೨. ದೀಕ್ಷಿತ್ ಸಿ. ಕೆ. ವೈ., ಚಂದ್ರವಳ್ಳಿ, ಪು. ೭೦, ೭೭
೩೩. ಕೊಟ್ರೇಶ್ ಉತ್ತಂಗಿ, ಹೊನ್ನೆಲೆಗಳು, ಪು. ೪೪೭, ೪೪೯
೩೪. ಜಗದೀಶ, ಮಲೆಕರ್ನಾಟಕದ ಅರಸು ಮನೆತನಗಳು, ಪು. ೧೧೦
೩೫. ಶಿವಮೊಗ್ಗ ಡಿಸ್ಟ್ರಿಕ್ಟ್ ಗ್ಯಾಸೆಟಿಯರ್, ಪು. ೧೧೦
೩೬. ಬಳ್ಳಾರಿ ಡಿಸ್ಟ್ರಿಕ್ಟ್ ಗ್ಯಾಸೆಟಿಯರ್, ಪು. ೪೪
೩೭. ಮಹಾದೇವ, ಸುಬ್ಬಣ್ಣ ರೈ, ಹೊಸಪೇಟೆ ತಾಲ್ಲೂಕು ದರ್ಶನ, ಪು. ೭೦
೩೮. ರಾಜಶೇಖರಪ್ಪ ಬಿ., ಪೂರ್ವೋಕ್ತ, ಪು. ೧೩೫, ೧೩೬
೩೯. ರಾಜಪ್ಪದಳವಾಯಿ, ದಕ್ಷಿಣಕರ್ನಾಟಕದ ಅರಸು ಮನೆತನಗಳು, ಪು. ೧ ರಿಂದ ೧೩
೪೦. ನಾಗರಾಜ ಎಚ್. ಎಂ., ಚಂದ್ರವಳ್ಳಿ, ಪು. ೩೭
೪೧. ರಾಜಶೇಖರಪ್ಪ ಬಿ. ಪೂರ್ವೋಕ್ತ, ಪು. ೧೩೫
೪೨. ಶ್ರೀಲತೆ, ಚಂದ್ರವಳ್ಳಿ, ಪು. ೪೪
೪೩. ಕುಂಭಾಸ, ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ, ಪು. ೪೮, ೫೦
೪೪. ಸುಮತೀಂದ್ರನಾಡಿಗ್, ವಿಜಯಶಿಲ್ಪ, ಪು. ೧೨೧
೪೫. ಶಿವಣ್ಣ ಕೆ. ಎಸ್., ಚಂದ್ರವಳ್ಳಿ, ಪು. ೫೭, ೬೨
೪೬. ರಾಜಶೇಖರಪ್ಪ ಬಿ. ಪೂರ್ವೋಕ್ತ, ಪು. ೧೩೨, ೧೩೬
೪೭. ಸುಮತೀಂದ್ರ ನಾಡಿಗ್, ಪೂರ್ವೋಕ್ತ, ಪು. ೪೪೭, ೪೪೯
೪೮. ಕೊಟ್ರೇಶ್ ಉತ್ತಂಗಿ, ಪೂರ್ವೋಕ್ತ, ಪು. ೪೪೭, ೪೪೯
೪೯. ಸತ್ಯನ್. ಬಿ. ಎನ್., ಪೂರ್ವೋಕ್ತ, ಪು. ೫೩
೫೦. ಲಕ್ಷ್ಮಣ್ ತೆಲಗಾವಿ, ಚಂದ್ರವಳ್ಳಿ, ಪು. ೭೯
೫೧. ರಾಜಶೇಖರಪ್ಪ ಬಿ., ದಕ್ಷಿಣಕರ್ನಾಟಕದ ಅರಸು ಮನೆತನಗಳು, ಪು. ೯೩
೫೨. ಸತ್ಯನ್ ಬಿ. ಎನ್., ಪೂರ್ವೋಕ್ತ, ೫೩
೫೩. ಲಕ್ಷ್ಮಣ್ ತೆಲಗಾವಿ, ಚಂದ್ರವಳ್ಳಿ, ೩೫, ೮೭, ೮೮
೫೪. ಮಹಾದೇವ, ಸುಬ್ಬಣ್ಣ ರೈ, ಪೂರ್ವೋಕ್ತ, ಪು. ೫೬, ೫೯
೫೫. ಕುಂಭಾ. ಸದಾಶಿವಪ್ಪ, ಪೂರ್ವೋಕ್ತ, ಪು. ೧೫, ೩೮

೫೬. ಮಲ್ಲಿಕಾರ್ಜುನ ಕನ್ನಿಹಳ್ಳಿ, ತರಳಬಾಳು ಹುಣ್ಣಿಮೆ ಸ್ಮರಣ ಸಂಚಿಕೆ, ಪು. ೧೩೭

೫೭. ಸಮುತೀಂದ್ರ ನಾಡಿಗ್, ಮಲೆಕರ್ನಾಟಕದ ಅರಸು ಮನೆತನಗಳು, ಪು. ೨೪೨

೫೮. ಸುಮತೀಂದ್ರನಾಡಿಗ್, ವಿಜಯಶಿಲ್ಪ, ಪು. ೯೧

೫೯. ಅದೇ, ಮಲೆಕರ್ನಾಟಕದ ಅರಸುಮನೆತನಗಳು, ಪು. ೨೫೫, ೨೫೯

೬೦. ಸೂರ್ಯನಾಥ ಯು. ಕಾಮತ್, ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಭಾಗ ಒಂದು, ಪು. ೨೭

೬೧. ಷೇಕ್ ಅಲಿ. ಬಿ., ಕರ್ನಾಟಕ ಚರಿತ್ರೆ, ಸಂಪುಟ ಆರು, ಪು. ೮೫

೬೨. ಅದೇ, ಪು. ೨೨೨, ೨೨೪, ೨೨೫

೬೩. ಹಿರೇಬಿದ್ರಿ ಹೊಳಿ ಬಸಪ್ಪ, ದಾವಣಗೆರೆ ಜಿಲ್ಲೆಯ ಸ್ವದೇಶಿ ಚಳವಳಿ, ಅಪ್ರಕಟಿತ ಎಂ.ಫಿಲ್. ಪ್ರಬಂಧ, ಕ.ವಿ.ವಿ.ಹಂ. ಪು. ೨೬

೬೪. ಹನುಮಂತಯ್ಯ ಎಚ್. ಬಿ., ಶತಮಾನದ ದಾವಣಗೆರೆ, ಪು. ೩೧

೬೫. ರಾಮರಸನ್. ಜಿ. ಚಂದ್ರವಳ್ಳಿ, ಪು. ೧೦೯

೬೬. ಹಿರೇಬಿದ್ರಿ ಹೋಳಿ ಬಸಪ್ಪ, ಪೂರ್ವೋಕ್ತ, ೩೮, ೪೦

೬೭. ಅದೇ. ಪು. ೬೪, ೭೧

೬೮. ಬಸವರಾಜಪ್ಪ ಹೆಚ್. ಈ., ಸ್ಟಡೀಸ್ ಇನ್ ಕರ್ನಾಟಕ ಹಿಸ್ಟರಿ ಅಂಡ್ ಕಲ್ಚರ್, ವ್ಯಾಲ್ಯೂಮ್, ಪು. ೧೫೨, ೧೫೩, ೧೫೪

ಅಧ್ಯಾಯ ಐದು

ದಾವಣಗೆರೆ ಜಿಲ್ಲೆಯ ಸಮಕಾಲೀನ ಚರಿತ್ರೆ ಅಧ್ಯಯನ: ಸಾಧ್ಯತೆ ಮತ್ತು ಸವಾಲುಗಳು

ದಾವಣಗೆರೆ ಜಿಲ್ಲೆ ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೂ ತನ್ನದೇ ಆದ ಮಹತ್ವದ ಚರಿತ್ರೆಯನ್ನು ಹೊಂದಿದ್ದು ಆಳರಸರ ಆಳ್ವಿಕೆಗೆ ಎಡೆಯಾಗಿದ್ದು ಅವರ ರಾಜಕೀಯ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಕಲೆ ಮತ್ತು ವಾಸ್ತುಶಿಲ್ಪಗಳ ಕೇಂದ್ರವಾಗಿ ಭವ್ಯ ಚರಿತ್ರೆಯನ್ನು ಸಾರುತ್ತಿದೆ. ಪ್ರಸ್ತುತ ಅಧ್ಯಯನದಲ್ಲಿ ಜಿಲ್ಲೆಯ ಪ್ರತ್ಯೇಕ ಜಿಲ್ಲೆಯ ಕೂಗು, ಮತ್ತು ಪ್ರತ್ಯೇಕ ಜಿಲ್ಲೆಯಾದ ನಂತರ ಚರಿತ್ರೆ ರಚನೆಯ ಸಾಧ್ಯತೆ ಮತ್ತು ಸವಾಲುಗಳ ಕುರಿತು ಇಲ್ಲಿ ಚರ್ಚಿಸಲಾಗಿದೆ.

ಪ್ರತ್ಯೇಕ ದಾವಣಗೆರೆ ಜಿಲ್ಲೆಯ ಕೂಗು

ದಾವಣಗೆರೆ ೧೮೮೬ ರಲ್ಲಿ ಮೈಸೂರು ಸಂಸ್ಥಾನದ ಆಡಳಿತ ವಿಭಾಗವಾದ ಚಿತ್ರದುರ್ಗದ ಜಿಲ್ಲೆಯ ಒಂದು ಉಪವಿಭಾಗವಾಗಿತ್ತು. ನಂತರ ೧೯೨೦ ರಲ್ಲಿ ಚಿತ್ರದುರ್ಗ ಜಿಲ್ಲೆಯ ತಾಲ್ಲೂಕಾಗಿ ಅಸ್ತಿತ್ವಕ್ಕೆ ಬಂದಿತು. ೧೮೦೧ ರ ಸುಮಾರಿನಲ್ಲಿ ಕೇವಲ ೫೦೦ ಮನೆಗಳ ಗ್ರಾಮದ ದಾವಣಗೆರೆ ಇನ್ನೂರ ಐವತ್ತು ವರ್ಷಗಳ ನಂತರ ಸಹಸ್ರಾರು ಮನೆಗಳ ದೊಡ್ಡನಗರವಾಗಿ ಕೈಗಾರಿಕೆ, ವ್ಯಾಪಾರ, ವಾಣಿಜ್ಯದ ಪ್ರಮುಖ ಕೇಂದ್ರವಾಗಿದ್ದು ಕರ್ನಾಟಕದ ಮ್ಯಾಂಚೆಸ್ಟರ್ ನಗರವೆಂದು ಖ್ಯಾತಿ ಪಡೆಯಿತು. ರಾಜ್ಯದ ಮಧ್ಯಭಾಗದಲ್ಲಿರುವ ಈ ಪ್ರದೇಶ ರಾಜ್ಯದ ಆಡಳಿತ ದೃಷ್ಟಿಯಿಂದ ಯೋಗ್ಯಸ್ಥಳವೆಂದು ಗುರುತಿಸಲಾಗಿದ್ದು, ರಾಜ್ಯದ ರಾಜಧಾನಿಯಾಗಲು ಸಹ ಅರ್ಹ ಸ್ಥಳವಾಗಿದೆ. ಚಾರಿತ್ರಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಾಗೂ ವ್ಯಾಪಾರ, ಉದ್ದಿಮೆ ಇತ್ಯಾದಿಗಳ ಸಂಗಮಗಳ ನಗರವೆನ್ನಿಸಿ ನೂತನ ಜಿಲ್ಲಾ ಕೇಂದ್ರವಾಗಲು ಅರ್ಹತೆಯನ್ನು ಪಡೆಯಿತು. ದಾವಣಗೆರೆ ಯಾವುದೇ ರಾಜ್ಯದ ರಾಜಧಾನಿಯಾಗದಿದ್ದರೂ, ಕರ್ನಾಟಕದ ರಾಜಧಾನಿಯಾಗಲು ತಕ್ಕದಿತ್ತು ಈ ತಾಣ. ರಾಜಧಾನಿಯಾಗಿದ್ದರೆ, ಕನ್ನಡ ಭಾಷೆಗೆ ಈ ಕುತ್ತು ಬರುತ್ತಿರಲಿಲ್ಲ ಎನ್ನುವ ಅಭಿಪ್ರಾಯವನ್ನು ಭಾಷಾಭಿಮಾನಿಗಳು ಇಂದಿಗೂ ವ್ಯಕ್ತಪಡಿಸಿರುತ್ತಾರೆ.[೩] ನಂತರ ರಾಜ್ಯದ ರಾಜಧಾನಿಯಾಗದಿದ್ದರೂ ಪರವಾಗಿಲ್ಲ ರಾಜ್ಯದಲ್ಲಿ ಒಂದು ಜಿಲ್ಲಾಕೇಂದ್ರವಾಗಿಯಾದರೂ ಆಗಲಿ ಎಂದು ಜನರ ಆಕಾಂಕ್ಷೆಯಾಗಿತ್ತು.

ದಾವಣಗೆರೆ ಜಿಲ್ಲೆಯ ಸ್ಥಾನಮಾನ

ಜಿಲ್ಲಾ ಕೇಂದ್ರವಾಗಿದ್ದರೆ ಸಾಕು ಎನ್ನುವ ಜನರ ಆಕಾಂಕ್ಷೆ ಇಂದು ನಿನ್ನೆಯದಲ್ಲ, ಸುಮಾರು ೮೦ ರ ದಶಕದಿಂದಲೇ ಬಂದಿದ್ದು, ಬಾಗಲಕೋಟೆ ಹಾಗೂ ದಾವಣಗೆರೆಯನ್ನು ಜಿಲ್ಲಾ ಕೇಂದ್ರವನ್ನು ಮಾಡುವ ವಿಚಾರದಲ್ಲಿ ಕರ್ನಾಟಕ ಸರ್ಕಾರ ಶ್ರೀ ಎ. ಡಿ. ಗೊರ್ವಲ ಮತ್ತು ಶ್ರೀ ಪಿ. ಸಿ. ಮಹಾಲನೇಬಿಸ್ ಮುಂತಾದ ತಜ್ಞರನ್ನು ಒಳಗೊಂಡ ಸಮಿತಿಯನ್ನೂ ನೇಮಿಸಿತ್ತು. ಈ ಸಮಿತಿ ಈ ಮುಂದಿನಂತೆ ವರದಿಯನ್ನು ಸಲ್ಲಿಸಿತ್ತು.

''ದಾವಣಗೆರೆ ಜಿಲ್ಲೆಯಾಗಲು ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿ, ಹರಪನಹಳ್ಳಿ, ತಾಲ್ಲೂಕುಗಳು, ಶಿವಮೊಗ್ಗ ಜಿಲ್ಲೆಯಿಂದ ಚನ್ನಗಿರಿ; ಚಿತ್ರದುರ್ಗ ಜಿಲ್ಲೆಯಿಂದ ಹರಿಹರ, ಜಗಳೂರು; ಧಾರವಾಡ ಜಿಲ್ಲೆಯಿಂದ ಬ್ಯಾಡಗಿ, ರಾಣೆಬೆನ್ನೂರು, ಹಿರೇಕೆರೂರು ತಾಲ್ಲೂಕುಗಳನ್ನು ಸೇರಿಸಿದರೆ ಆಗ ದಾವಣಗೆರೆಯು ಒಂಬೈನೂರು ಹಳ್ಳಿಗಳಿಂದ ಕೂಡಿ ಒಟ್ಟು ವಿಸ್ತೀರ್ಣ ೮೪೯೦.೧೫ ಚ.ಕಿ.ಮೀ. ಆಗುತ್ತದೆ'' ಎಂದು ತನ್ನ ಅಭಿಪ್ರಾಯವನ್ನು ಮಂಡಿಸಿತು.

ಈ ಒಂದು ವರದಿಯಿಂದ ಪ್ರತ್ಯೇಕ ಜಿಲ್ಲೆಯ ಕನಸು ನನಸಾಗಲಿಲ್ಲ. ನಂತರ ಶ್ರೀ ಹುಂಡೇಕರ್ ಮತ್ತು ಗದ್ದಿಗೌಡರ್ ಸಮಿತಿಗಳ ಒಮ್ಮತದ ಶಿಫಾರಸ್ಸಿನಂತೆ ರಾಜ್ಯದಲ್ಲಿ ಏಳು ಹೊಸ ಜಿಲ್ಲೆಗಳನ್ನು ೧೯೯೭ ರ

ಆಗಸ್ಟ್ ೧೫ ರಂದು ರಚಿಸಲು ಈ ಸಂಬಂಧವಾಗಿ ಕರ್ನಾಟಕ ಸರ್ಕಾರ ಆದೇಶ ಹೊರಡಿಸಿತು. ಈ ರೀತಿ ಹೊಸದಾಗಿ ರಚಿಸಲ್ಪಟ್ಟ ಜಿಲ್ಲೆಗಳಲ್ಲಿ ದಾವಣಗೆರೆ ಜಿಲ್ಲೆಯೂ ಒಂದು. ಕರ್ನಾಟಕದ ಜಿಲ್ಲೆಗಳ ಮರುವಿಂಗಡಣೆ ಯೋಜನೆಯಂತೆ ಹಳೆಯ ಚಿತ್ರದುರ್ಗ, ಶಿವಮೊಗ್ಗ, ಬಳ್ಳಾರಿ ಜಿಲ್ಲೆಗಳಿಂದ ದಾವಣಗೆರೆ, ಹರಿಹರ, ಜಗಳೂರು, ಚನ್ನಗಿರಿ, ಹೊನ್ನಾಳಿ, ಹರಪನಹಳ್ಳಿ ತಾಲ್ಲೂಕುಗಳು ಭೌಗೋಳಿಕವಾಗಿ ಎಲ್ಲೆಗಳನ್ನು ಪಡೆದು ಆವಿರ್ಭವಿಸಿದ ನೂತನ ದಾವಣಗೆರೆ ಜಿಲ್ಲೆ ೧೯೯೭ ಆಗಸ್ಟ್ ೧೫ ರಂದು ಅಸ್ತಿತ್ವಕ್ಕೆ ಬಂದಿತು.[೪]

೨೦ ಹೋಬಳಿಕೇಂದ್ರಗಳನ್ನು ೬ ತಾಲ್ಲೂಕು ಕೇಂದ್ರಗಳನ್ನೊಳಗೊಂಡು ಕರ್ನಾಟಕ ರಾಜ್ಯದ ೨೯ ಜಿಲ್ಲೆಗಳಲ್ಲಿ ಒಂದಾಗಿ ಹೊರಹೊಮ್ಮಿತು. ಅಂತೂ ಪ್ರತ್ಯೇಕ ಜಿಲ್ಲೆಯ ಕೂಗು ಇದೇ ಜಿಲ್ಲೆಯವರಾದ ದಿವಗಂತ ಜೆ. ಹೆಚ್. ಪಟೇಲರ ಮಂತ್ರಿತ್ವದ ಅವಧಿಯಲ್ಲಿಯೇ ಆಗಿದ್ದು ಜಿಲ್ಲೆಯ ಸೌಭಾಗ್ಯ.

ದಾವಣಗೆರೆ ಜಿಲ್ಲೆಯ ಸಮಕಾಲೀನ ಚರಿತ್ರೆ ಅಧ್ಯಯನದ ಸಾಧ್ಯತೆಗಳು

ಪ್ರಸ್ತುತ ವಿಷಯ ಕುರಿತು ಇತಿಹಾಸಕಾರರು, ಸಂಶೋಧಕರು, ಬುದ್ಧಿಜೀವಿಗಳು, ಲೇಖಕರು ಮುಂತಾದವರು ಚರಿತ್ರೆ ಕುರಿತಂತೆ ಅಧ್ಯಯನಗಳನ್ನು ನಡೆಸಿರುವರು. ಅಲ್ಲದೆ ಆಕರಗಳ ಅಲಭ್ಯತೆಯಿಂದ ಜಿಲ್ಲೆಯ ಚರಿತ್ರೆ ರಚಿಸುವಲ್ಲಿ ಸಮಸ್ಯೆ ಎದುರಾಗುತ್ತದೆ. ಇಂತಹ ಸಮಸ್ಯೆಗಳನ್ನು ಎದುರಿಸಿ ಜಿಲ್ಲೆಯ ಚರಿತ್ರೆಯ ಮೇಲೆ ಹೊಸ ಬೆಳಕನ್ನು ಮೂಡಿಸುವ ಪ್ರಯತ್ನ ಮಾಡಬೇಕಾಗುತ್ತದೆ. ಪ್ರಸ್ತುತ ಅಧ್ಯಾಯದಲ್ಲಿ ಜಿಲ್ಲೆಯ ಚರಿತ್ರೆ ಕುರಿತು ರಚಿಸಿರುವ ಕೃತಿಗಳನ್ನು ಹೊರೆತುಪಡಿಸಿ ಇನ್ನು ಮುಂದೆ ಆಗ ಬೇಕಾದ ಅಧ್ಯಯನಗಳ ಸಾಧ್ಯತೆ ಕುರಿತು ಪ್ರತ್ಯೇಕ ಜಿಲ್ಲೆಯಾದ ಬಳಿಕ ಎದುರಾದ ಸಮಸ್ಯೆಗಳು ಅಥವಾ ಸವಾಲುಗಳೇನು ಎಂಬ ವಿಷಯ ಕುರಿತಂತೆ ಇಲ್ಲಿ ಚರ್ಚಿಸಲಾಗಿದೆ.

ದಾವಣಗೆರೆ ಜಿಲ್ಲೆಯನ್ನು ಅನುಲಕ್ಷಿಸಿ ನಡೆಸಿದ ಅಧ್ಯಯನದ ಕ್ಷೇತ್ರಗಳಿಂದ ಚರಿತ್ರೆ, ಸಂಸ್ಕೃತಿ, ಚಳವಳಿ, ಜನಾಂಗೀಯ, ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪ, ರಾಜಕೀಯ, ಸಾಮಾಜಿಕ, ಆರ್ಥಿಕ, ಕೈಗಾರಿಕೆ, ಕಾರ್ಮಿಕ, ಶೈಕ್ಷಣಿಕ ಇನ್ನಿತರ ಕ್ಷೇತ್ರಗಳನ್ನು ಕುರಿತು ಅಧ್ಯಯನಗಳು ನಡೆದಿರುವುದರ ಬಗ್ಗೆ ಅವಲೋಕಿಸಲಾಗಿದೆ. ಆದರೆ ಇವುಗಳು ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ಪ್ರಯತ್ನಿಸಿದರೂ ಅಧ್ಯಯನಕ್ಕೆ ಒಳಪಡಬೇಕಾದ ಕ್ಷೇತ್ರಗಳಾಗಿ ವಿಸ್ತಾರವಾಗಿವೆ. ಆದ್ದರಿಂದ ಪ್ರಸ್ತುತ ಜಿಲ್ಲೆಯ ಚರಿತ್ರೆ ಕುರಿತು ಶೈಕ್ಷಣಿಕ, ಕೃಷಿ, ಜನಾಂಗೀಯ, ಗ್ರಾಮಗಳ, ಕೈಗಾರಿಕೆ, ಗ್ಯಾಸೆಟಿಯರ್, ಮಠಮಂದಿರಗಳ, ತುಂಗಭದ್ರಾ ನದಿ ಪರಿಸರದ, ವಿಜ್ಞಾನತಂತ್ರಜ್ಞಾನ, ಕೆರೆ ಕಾಲುವೆಗಳ, ಹಬ್ಬಹರಿದಿನ, ಶೈಕ್ಷಣಿಕ, ಮುಂತಾದವುಗಳ ಕುರಿತಂತೆ ಅಧ್ಯಯನಗಳನ್ನು ನಡೆಸುವ ಕೆಲಸವಾಗಬೇಕಿದೆ. ಈ ವಿಷಯಗಳನ್ನು ಕುರಿತಂತೆ ಇಲ್ಲಿ ಚರ್ಚಿಸಲಾಗಿದೆ. ಅಂತಹ ಅಧ್ಯಯನಗಳಾಗುವ ಸಾಧ್ಯತೆಗಳಿವೆ. ಈ ಕುರಿತು ಕೆಳಕಂಡಂತೆ ಸಂಕ್ಷಿಪ್ತ ಮಾಹಿತಿಯನ್ನು ನೀಡಲಾಗಿದೆ.

೧. ಪ್ರತಿಗ್ರಾಮಗಳಲ್ಲಿ ಜನಸಂಖ್ಯೆ ಆಧರಿಸಿ ಶಿಕ್ಷಣ ಸಂಸ್ಥೆಗಳು ಹಾಗೂ ವಿದ್ಯಾರ್ಥಿಗಳಿಗನುಸಾರವಾಗಿ ಶಿಕ್ಷಕರು ಇರಬೇಕು. ಆದರೆ ಪ್ರಸ್ತುತ ಈ ವ್ಯವಸ್ಥೆಯಲ್ಲಿ ಅನೇಕ ನ್ಯೂನ್ಯತೆಗಳು ತಾಂಡವವಾಡುತ್ತಿವೆ. ಅದರಿಂದಾಗಿ ಪ್ರತಿ ಗ್ರಾಮದ ಶಿಕ್ಷಣ ಸಂಸ್ಥೆಗಳು, ಅಲ್ಲಿನ ಸೌಲಭ್ಯಗಳು, ಶಾಲೆಗಳಲ್ಲಿರುವ ಶಿಕ್ಷಕರು, ಅವರು ನೀಡುತ್ತಿರುವ ಶಿಕ್ಷಣದ ಗುಣಮಟ್ಟ ಮುಂತಾದವುಗಳನ್ನು ಕುರಿತು ಸಮಗ್ರ ಅಧ್ಯಯನ ಆಗಬೇಕಾಗಿದೆ.

೨. ಕೃಷಿಯೇ ಬಹುಪಾಲು ಜನರ ಜೀವನಾಧಾರವಾಗಿರುವುದರಿಂದ ಅವರ ಸಮಸ್ಯೆಗಳು, ಮಣ್ಣಿನ ಗುಣದೋಷಗಳು, ರೈತರ ಬೆಳೆಗಳಿಗೆ ಬರುವ ರೋಗಗಳು, ಹಾಗೂ ಅವುಗಳನ್ನು ತಡೆಗಟ್ಟುವ ಕ್ರಮಗಳ ಬಗ್ಗೆ, ಸರ್ಕಾರದ ಯೋಜನೆಗಳು ರೈತರಿಗೆ ಸರಿಯಾಗಿ ತಲುಪದೆ, ಅಧಿಕಾರ ವರ್ಗದವರ ಹಾಗೂ ಜನಪ್ರತಿನಿಧಿಗಳ ಪಾಲಾಗುತ್ತಿರುವುದೇ ಹೆಚ್ಚಾಗಿರುವುದಾಗಿ ಕೇಳಿಬರುತ್ತದೆ. ಆದ್ದರಿಂದ ಈ ಬಗ್ಗೆ ಪ್ರತ್ಯೇಕ ಅಧ್ಯಯನ ಮಾಡಬಹುದಾಗಿದೆ.

೩. ಕಲೆ, ಸಾಹಿತ್ಯ ಹಾಗೂ ಸಂಸ್ಕೃತಿಯ ವಿಪುಲತೆಯನ್ನು ಇಲ್ಲಿ ಕಾಣುತ್ತೇವೆ. ಆದರೆ ಈ ಕ್ಷೇತ್ರಗಳ ಪೋಷಣೆ, ಸಹಕಾರ ಅಗತ್ಯ. ಆ ನಿಟ್ಟಿನಲ್ಲಿ ಸರ್ಕಾರದ ಕ್ರಮಗಳನ್ನು ಕುರಿತಾದ ಅಧ್ಯಯನ ಆಗಬೇಕಾಗಿದೆ. ಪ್ರತಿ ತಾಲ್ಲೂಕಿಗೆ ಕನ್ನಡ ಸಾಹಿತ್ಯ ಪರಿಷತ್ತಿಗೊಂದು ಭವನ ನಿರ್ಮಿಸುವುದು, ತಾಲ್ಲೂಕು ದಂಡಾಧಿಕಾರಿಗಳು, ಜನಪ್ರತಿನಿಧಿಗಳು ಹಾಗೂ ತಾಲ್ಲೂಕು ವಾಸಿಗಳ ಜವಾಬ್ದಾರಿಯೂ ಆಗಿದೆ.

೪. ತಾಲ್ಲೂಕಿನಲ್ಲಿ ವಿವಿಧ ರೀತಿಯ ಬುಡಕಟ್ಟುಗಳನ್ನು ಕಾಣುತ್ತೇವೆ. ಹಕ್ಕಿಪಿಕ್ಕಿ, ಬುಡಬುಡಕಿ, ಹೆಳವ, ಕೊರಮ, ಕೊರಚ ಮುಂತಾದವರು ತಮ್ಮದೇ ಆದ ಜೀವನೋಪಾಯ ಕಂಡುಕೊಂಡಿದ್ದಾರೆ. ಇಂಥ ಬುಡಕಟ್ಟುಗಳ ಬದುಕು, ಆರ್ಥಿಕ ಸ್ಥಿತಿಗತಿ, ಸಾಮಾಜಿಕ ಸ್ಥಾನಮಾನ ಮುಂತಾದ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಅಧ್ಯಯನ ಮಾಡಬಹುದಾಗಿದೆ.

೫. ತಾಲ್ಲೂಕಿನಲ್ಲಿ ದೈವ ಭಕ್ತಿಗೆ, ಗ್ರಾಮದೇವತೆಗಳಿಗೆ, ಗ್ರಾಮಾಚರಣೆಗಳಿಗೆ ಕೊರತೆಯಿಲ್ಲ. ನೂರಾರು ದೇಗುಲಗಳ ಹಾಗೂ ಕ್ಷೇತ್ರಗಳ ಜೀರ್ಣೋದ್ಧಾರ ಮತ್ತು ಆಚರಣೆ ಕುರಿತು ಅಧ್ಯಯನ ಮಾಡಬಹುದಾಗಿದೆ.

೬. ತಾಲ್ಲೂಕಿನಲ್ಲಿ ಕೈಗಾರಿಕೆಗೆ ಒತ್ತು ನೀಡಿರುವುದು ಎದ್ದು ಕಾಣುತ್ತದೆ. ಶಾಸನಗಳಿಂದ ತಿಳಿದು ಬರುವಂತೆ ಹಿಂದೆ ಎಣ್ಣೆ ಮಿಲ್ಲು ಗಾಣಗಳು ಸಾಕಷ್ಟಿದ್ದವು. ಬ್ರಿಟಿಷರ ಕಾಲದಲ್ಲಿ ಚಿನ್ನದ ಗಣಿಗಾರಿಕೆ ನಡೆದ ಅವಶೇಷಗಳು ನಮ್ಮ ಕಣ್ಣಮುಂದಿವೆ. ಆ ನಂತರದಲ್ಲಿ ಕೈಮಗ್ಗಗಳು ಹುಟ್ಟಿಕೊಂಡವು. ಈ ಉದಾಹರಣೆಗಳನ್ನು ಬಿಟ್ಟರೆ ದೊಡ್ಡ ಉದ್ಯಮಗಳು ಸ್ಥಾಪನೆಯಾಗದಿರುವುದು ಸೋಜಿಗದ ವಿಷಯವೇ ಸರಿ. ಇದ್ದ ಸಣ್ಣ ಕೈಗಾರಿಕೆಗಳಾದ ಕೈಮಗ್ಗಗಳು, ಉಣ್ಣೆ ಮಗ್ಗಗಳು ಹಾಗೂ ಬಹು ಹಿಂದಿನಿಂದಲೂ ಕಸುಬಾಗಿ ಕಲೆಯಾಗಿ ಬೆಳೆದು ಬಂದಿದ್ದ ಕುಂಬಾರಿಕೆಯೂ ಕೂಡ ಅವಸಾನದ ಹಾದಿ ಹಿಡಿದಿದೆ. ಆದ್ದರಿಂದ ಯಾವ ಯಾವ ಕೈಗಾರಿಕೆಗಳು ಸ್ಥಾಪನೆಯಾಗಬಹುದಿತ್ತು, ಆಗದಿರುವುದಕ್ಕೆ ಅಡ್ಡಿಗಳಾದರೂ ಏನು? ಯಾವ ಕಾರಣಕ್ಕಾಗಿ ಕೈಗಾರಿಕೆಗಳು ಬೆಳೆಯಲು ಶಕ್ಯವಾಗಿಲ್ಲ ಎಂಬ ಅಂಶಗಳನ್ನು ಕುರಿತಾದ ಸಮಗ್ರ ಅಧ್ಯಯನದ ಅವಶ್ಯಕತೆ ಇರುವುದೆಂದೇ ಹೇಳಬಹುದು ಎಂಬುದಾಗಿ ಕೊಟ್ರೇಶ್ ಉತ್ತಂಗಿಯವರು ತಮ್ಮ 'ಹೊನ್ನೆಲೆಗಳು' ಎಂಬ ಕೃತಿಯಲ್ಲಿ ಉಲ್ಲೇಖಿಸಿರುವರು.[೧] ಇದರಿಂದ ದಾವಣಗೆರೆ ಜಿಲ್ಲೆಯ ಚರಿತ್ರೆಯ ಮೇಲೆ ಬೆಳಕು ಚೆಲ್ಲುವಲ್ಲಿ ಇಂತಹ ಅಧ್ಯಯನಗಳಿಂದ ಸಾಧ್ಯ ಎಂದು ವೇದ್ಯವಾಗುತ್ತದೆ.

೭. ದಾವಣಗೆರೆ ಜಿಲ್ಲೆ ಗ್ಯಾಸೆಟಿಯರ್ ರಚನೆ ಕೂಡ ಅವಶ್ಯಕವಾದುದಾಗಿದೆ. ಇದರಿಂದ ಜಿಲ್ಲೆಯ ಸಮಸ್ತ ಚರಿತ್ರೆಯನ್ನು ಕ್ರೋಢೀಕರಿಸಿದಂತಾಗುತ್ತದೆ. ಇತಿಹಾಸಕಾರರಿಗೆ, ಸಂಶೋಧಕರಿಗೆ, ಬುದ್ಧಿಜೀವಿಗಳಿಗೆ, ವಿಚಾರವಾದಿಗಳಿಗೆ, ವಿಧ್ಯಾವಂತರಿಗೆ ಪ್ರವಾಸಿಗರಿಗೆ, ಚಿಂತಕರಿಗೆ, ಆರ್ಥಿಕ ತಜ್ಞರಿಗೆ ಅತ್ಯಂತ ಹೆಚ್ಚು ಉಪಯುಕ್ತವಾಗುವಲ್ಲಿ ಯಾವುದೇ ಅನುಮಾನವಿಲ್ಲ.

೮. ಜಿಲ್ಲೆಯಲ್ಲಿಯರುವ ಐತಿಹಾಸಿಕ ಸ್ಮಾರಕಗಳ ರಕ್ಷಣೆ ಕುರಿತಂತೆ ಹೆಚ್ಚಿನ ಅಧ್ಯಯನ ಆಗಬೇಕಿದೆ. ಹಾಗೆಯೇ ಭವ್ಯ ಚರಿತ್ರೆಗೆ ಬೆಳಕು ಚೆಲ್ಲುವಂತ ಕಾರ್ಯವಾಗಬೇಕಾಗಿದೆ.

೯. ಜಿಲ್ಲೆಯ ಆರು ತಾಲ್ಲೂಕುಗಳಲ್ಲಿ ಜಗಳೂರು ತಾಲ್ಲೂಕು ಒಂದಾಗಿದ್ದು ಜಿಲ್ಲೆಯಲ್ಲಿಯೇ ಬರಪೀಡಿತ ತಾಲ್ಲೂಕಾಗಿದೆ. ಈ ಒಂದು ತಾಲ್ಲೂಕನ್ನು ಕುರಿತಂತೆ ಹೆಚ್ಚಿನ ಅಧ್ಯಯನಗಳಾಗಿಲ್ಲವೆಂದೇ ಹೇಳಬಹುದು. ಕೇವಲ ಅಲ್ಲೊಂದು ಇಲ್ಲೊಂದು ಲೇಖನಗಳು ಪ್ರಕಟಗೊಂಡು ತಾಲ್ಲೂಕಿನ ಅರೆಬರೆ ವಿಷಯ ತಿಳಿಸುವ ಪ್ರಯತ್ನ ನಡೆದಿದೆ. ಆದರೆ ತಾಲ್ಲೂಕಿನ ಸಮಗ್ರ ಅಧ್ಯಯನ ಆಗಬೇಕಿದೆ. ಸಾಕಷ್ಟು ಜನಸಮುದಾಯಗಳು, ಕೃಷಿ, ನೀರಾವರಿ ವ್ಯವಸ್ಥೆ, ಆರ್ಥಿಕ, ಸಾಮಾಜಿಕ, ರಾಜಕೀಯ, ಧಾರ್ಮಿಕ, ಶೈಕ್ಷಣಿಕ ಕುರಿತಾಗಿ ಅಧ್ಯನಗಳಾಗಬೇಕಿದೆ. ಹಾಗೆಯೇ ತಾಲ್ಲೂಕಿನ ಚಾರಿತ್ರಿಕ ನೆಲೆಯಾದ ಕಣಕುಪ್ಪೆ, ಚಿತ್ರದುರ್ಗ ಸಂಸ್ಥಾನದ ಆಡಳಿತಾವಧಿಯಲ್ಲಿ ಕೋಟೆ ನಿರ್ಮಾಣ ಮಾಡಿ ಸೈನಿಕ ಪಡೆಯನ್ನು ಇಟ್ಟು, ಆಳ್ವಿಕೆ ನಡೆಸಿದ ಪಾಳೆಯ ಪಟ್ಟಿನ ಚರಿತ್ರೆ ಕುರಿತಂತೆ ಸಂಶೋಧನೆಯನ್ನು ಮಾಡಬಹುದು. ಹಾಗೂ ಗೊಣಚಕಲ್ಲು ರಂಗಸ್ವಾಮಿ ಬೆಟ್ಟ ಕುರಿತಂತೆ ಅಧ್ಯಯನ ಆಗಬೇಕಾಗಿದೆ.

೧೦. ದಾವಣಗೆರೆ ಜಿಲ್ಲೆಯಲ್ಲಿರುವ ಮಠ ಮಾನ್ಯಗಳ ಕುರಿತಂತೆ ಹಾಗೂ ಮಠಾಧಿಪತಿಗಳ, ಸ್ವಾಮೀಜಿಯವರ ಕುರಿತು ಅಧ್ಯಯನ ನಡೆಸುವುದರಿಂದ ಜಿಲ್ಲೆಯ ಧಾರ್ಮಿಕ ಕ್ಷೇತ್ರದ ಚರಿತ್ರೆಯ ಮೇಲೆ ಬೆಳಕು ಚೆಲ್ಲಿದಂತಾಗುತ್ತದೆ. ಆದ್ದರಿಂದ ಈ ಒಂದು ಕ್ಷೇತ್ರವನ್ನು ಅನುಲಕ್ಷಿಸಿ ಅಧ್ಯಯನ ಆಗಬೇಕಿದೆ.

೧೧. ಜಿಲ್ಲೆಯಲ್ಲಿ ದೊರೆತಿರುವ ಶಾಸನಗಳ ಮರುಪರಿಶೀಲನೆ ಆಗಬೇಕಾಗಿದೆ. ಇದರಿಂದ ಜಿಲ್ಲೆಯ ಚರಿತ್ರೆಯ ಮೇಲೆ ಹೊಸ ಬೆಳಕು ಚೆಲ್ಲುತ್ತದೆ. ಈ ಅಧ್ಯಯನ ಅಗತ್ಯವಾಗಿ ಆಗಬೇಕಾಗಿದೆ.

೧೨. ಜಿಲ್ಲೆಯು ಕ್ರೀಡಾಕ್ಷೇತ್ರದಲ್ಲಿ ಸಾಧಿಸಿದ ಸಾಧನೆ, ವೃತ್ತಿರಂಗಭೂಮಿ, ಪತ್ರಿಕೋದ್ಯಮ ಕುರಿತಂತೆ ಹೆಚ್ಚಿನ ಅಧ್ಯಯನ ಆಗಬೇಕಿದೆ.

೧೩. ಜಿಲ್ಲೆಯ ಕೃಷಿ, ನೀರಾವರಿ, ಪಶುಸಂಗೋಪನೆ, ಹೈನುಗಾರಿಕೆ, ಕರಕುಶಲತೆ, ಗುಡಿಕೈಗಾರಿಕೆ, ತೂಕ ಮತ್ತು ಅಳತೆ, ಮುಂತಾದ ಕ್ಷೇತ್ರಗಳನ್ನು ಅನುಲಕ್ಷಿಸಿ ಪ್ರತ್ಯೇಕ ಅಧ್ಯಯನಗಳು ಆಗಬೇಕಿದೆ.

೧೪. ದಾವಣಗೆರೆ ಜಿಲ್ಲೆಯನ್ನು ಅನುಲಕ್ಷಿಸಿ ತುಂಗಭದ್ರಾ ನದಿ ಪ್ರದೇಶಲ್ಲಿರುವ ಧಾರ್ಮಿಕ ಕ್ಷೇತ್ರಗಳ ಮಹತ್ವ ಕುರಿತಂತೆ ಅಧ್ಯಯನ ಆಗಬೇಕಿದೆ.

೧೫. ಜಿಲ್ಲೆಯ ವಿಜ್ಞಾನ, ತಂತ್ರಜ್ಞಾನ ಕುರಿತಂತೆ ವಿದ್ಯುಚ್ಛಕ್ತಿ, ವಿಂಡ್‌ಪ್ಯಾನ್, ಶಿಫ್ಟಿಂಗ್ ಸಿಸ್ಟಮ್, ಮಳೆಕೊಯ್ಲು, ತಳಿಸಂವರ್ಧನೆ, ಗಣಕಯಂತ್ರದ ಕುರಿತಂತೆ, ಸೇತುವೆಗಳ ನಿರ್ಮಾಣ ಕುರಿತಂತೆ ಜಿಲ್ಲೆಯಲ್ಲಿ ಹೆಚ್ಚಿನ ಅಧ್ಯಯನ ಆಗಬೇಕಿದೆ.

೧೬. ಪ್ರಸ್ತುತ ದಾವಣಗೆರೆ ಜಿಲ್ಲೆಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ದೇವಾಲಯಗಳ ನಿರ್ಮಾಣವಾಗಿರುವುದು ಕಂಡು ಬಂದಿದೆ. ಅಧ್ಯಯನ ಮಾತ್ರ ಅಲ್ಪಪ್ರಮಾಣದಲ್ಲಿ ನಡೆದಿದೆ. ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ದೇವಾಲಯದಲ್ಲಿರುವ ಭಿತ್ತಿಚಿತ್ರಗಳು, ಮೂರ್ತಿ ಶಿಲ್ಪಗಳು, ಮಿಥುನ ಶಿಲ್ಪಗಳ ಹೆಚ್ಚಿನ ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟಿವೆ. ಈ ಒಂದು ಅಂಶವನ್ನು ಗಮನಿಸಿ ಅಧ್ಯಯನ ಮಾಡುವುದರ ಮೂಲಕ ಜಿಲ್ಲೆಯ ಚರಿತ್ರೆಗೆ ಪೂರಕ ಮಾಹಿತಿ ದೊರೆತಂತಾಗುತ್ತದೆ. ಇದರ ಜೊತೆಗೆ ಈ ದೇವಾಲಯಗಳ ರಕ್ಷಣೆ ಕಾರ್ಯ ಇಂದಿನ ಸಮಾಜದ ಜರೂರಾಗಿದೆ.

೧೭. ಜಿಲ್ಲೆಯಲ್ಲಿರುವ ಕೆರೆ, ಕಾಲುವೆಗಳ, ಬಾವಿಗಳ, ಕೊಳವೆ ಬಾವಿಗಳ ಮಹತ್ವ ಕುರಿತಂತೆ ಅಧ್ಯಯನ ಆಗಬೇಕಿದೆ.

೧೮. ಜಿಲ್ಲೆಯಲ್ಲಿ ನಡೆಯುವ ಹಬ್ಬಹರಿದಿನಗಳ, ಜಾತ್ರೆ ಉತ್ಸವಗಳ, ಗ್ರಾಮಾಚರಣೆಗಳು ಮುಂತಾದ ಆಚರಣೆಗಳ ಕುರಿತಂತೆ ಅಧ್ಯಯನ ಆಗಬೇಕಾಗಿದೆ.

೧೯. ಜಿಲ್ಲೆಯ ಶೈಕ್ಷಣಿಕ ಕ್ಷೇತ್ರದ ಪ್ರಗತಿಯನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನ ನಡೆಸಬೇಕಾಗಿದೆ.

೨೦. ತುಂಗಭದ್ರಾ ನದಿ ಪರಿಸರದಲ್ಲಿ ಜನರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ ಕುರಿತಂತೆ ಸಹ ಅಧ್ಯಯನ ಆಗಬೇಕಿದೆ.

೨೧. ಜಿಲ್ಲೆಯ ಗ್ರಾಮಗಳ ಸ್ಥಿತಿಗತಿ ಕುರಿತಂತೆ ಅಧ್ಯಯನ ಆಗಬೇಕಿದೆ.

ಇಂತಹ ಹಲವಾರು ಕ್ಷೇತ್ರಗಳನ್ನು ಕುರಿತಂತೆ ಜಿಲ್ಲೆಯ ಚರಿತ್ರೆಯನ್ನು ರಚಿಸುವ ಸಾಧ್ಯತೆಗಳಿವೆ ಎಂದು ಹೇಳಬಹುದಾಗಿದೆ.

ದಾವಣಗೆರೆ ಜಿಲ್ಲೆ ಚರಿತ್ರೆ: ಸಮಸ್ಯೆ ಮತ್ತು ಸವಾಲುಗಳು

ದಾವಣಗೆರೆ ಜಿಲ್ಲೆ ಸಮಶೀತೋಷ್ಣ ಹವೆಯೊಂದಿಗೆ ಅರೆಮಲೆನಾಡು, ಬಯಲು ಪ್ರದೇಶಗಳಿಂದ ಕೂಡಿ ದೆ. ತುಂಗಭದ್ರಾ ಹಾಗೂ ಅದರ ಉಪನದಿಗಳ ಜಲಸಂಪನ್ಮೂಲವನ್ನು ಹೊಂದಿ ರಾಜಕೀಯ ವ್ಯಾಪಾರ, ಉದ್ದಿಮೆ, ಶಿಕ್ಷಣ, ಆಧ್ಯಾತ್ಮಿಕ, ಇತ್ಯಾದಿಗಳ ಸಂಗಮಗಳ ನಗರವೆನ್ನಿಸಿದೆ. ನೂತನ ಜಿಲ್ಲಾ ಕೇಂದ್ರವಾಗಿ ಪ್ರಗತಿಯತ್ತ ಶರವೇಗದಲ್ಲಿ ತನ್ನಿರುವನ್ನು ಜಗತ್ತಿಗೆ ಸಾರುತ್ತಿದೆ. ಇಂತಹ ಒಂದು ಜಿಲ್ಲೆಯಲ್ಲಿ ಜಲಸಮಸ್ಯೆ, ಹತ್ತಿಗಿರಣಿ ಕಾರ್ಮಿಕರ ಸಮಸ್ಯೆ, ಬೀದಿಪಾಲಾದ ಹರಿಹರದ ಕಿರ್ಲೋಸ್ಕರ್ ಕಾರ್ಖಾನೆಯ ಕಾರ್ಮಿಕರ ಸಮಸ್ಯೆ, ದಾವಣಗೆರೆಯಲ್ಲಿ ಒಂದು ವಿಶ್ವವಿದ್ಯಾಲಯದ ಸ್ಥಾಪನೆಯ ಬೇಡಿಕೆ, ಪರಿಸರ ಚಳವಳಿ, ಸಮಸ್ಯೆಗಳ ಕುರಿತಂತೆ ಪ್ರಸ್ತುತ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಜಲಸಮಸ್ಯೆ

ಕರ್ನಾಟಕದಲ್ಲಿ ಹಲವಾರು ನದಿಗಳು ಹುಟ್ಟಿ ಹರಿದು ಜೀವಸಂಕುಲದ ಸೆಲೆಯಾಗಿವೆ. ರಾಜ್ಯದಲ್ಲಿ ಕೃಷ್ಣಾ, ಕಾವೇರಿ, ಶಿಂಷಾ, ಅರ್ಕಾವತಿ, ಶರಾವತಿ, ಕಾಳಿ, ಬೆಡ್ತಿ, ಅಘನಾಶಿನಿ, ಬರಹೊಳೆ, ಘಟಪ್ರಭ, ಮಲಪ್ರಭ, ನೇತ್ರಾವತಿ, ಹೇಮಾವತಿ, ಕಬಿನಿ, ತುಂಗಾ, ಭದ್ರಾ ಇನ್ನಿತರ ನದಿ ಹಳ್ಳ ಕೊಳ್ಳಗಳು ಹರಿಯುತ್ತಿದ್ದು, ಕೆಲ

ನದಿಗಳು ರಾಜ್ಯದ ಆಂತರಿಕ ಹಾಗೂ ಬಾಹ್ಯ ವಿವಾದಗಳಿಗೆ ಎಡೆ ಮಾಡಿಕೊಟ್ಟಿವೆ. ಅಂತಹ ಆಂತರಿಕ ಸಮಸ್ಯೆಯಲ್ಲಿ ಒಂದಾದ ಭದ್ರಾ ಆಣೆಕಟ್ಟಿನ ನೀರಿನ ಸಮಸ್ಯೆ ಕೂಡ ಒಂದಾಗಿದೆ.

ತುಂಗಾನದಿ ಇದು ಪಶ್ಚಿಮ ಘಟ್ಟಗಳ ವರಹ ಪರ್ವತದ ತುಟ್ಟತುದಿಯ ಗಂಗಾಮೂಲದಲ್ಲಿ ಜನಿಸುತ್ತದೆ. ಇದರ ಉದ್ದ ೧,೯೮೮.೦ ಕಿ.ಮೀ.ಗಳು. ಮೊದಲಿಗೆ ಪೂರ್ವಾಭಿಮುಖವಾಗಿ ಹರಿದನಂತರ ಕಳಸ ಹತ್ತಿರ ಈಶಾನ್ಯಕ್ಕೆ ತಿರುಗಿ ಬಾಳೆಹೊನ್ನೂರು ಸಮೀಪ ಹರಿದು ನಂತರ ಹೆಬ್ಬೆ ಹತ್ತಿರ ಸೋಮವಾಹಿನಿಯಿಂದ ಜಗರ ಕಣಿವೆ ಸೇರುತ್ತದೆ. ಮುಂದೆ ಲಕ್ಕವಳ್ಳಿ, ಸಮೀಪವಿರುವ ಭದ್ರಾ ಅಣೆಕಟ್ಟನ್ನು ತಲುಪುತ್ತದೆ. ಅಲ್ಲಿಂದ ಭದ್ರಾವತಿ ಮೂಲಕ ಶಿವಮೊಗ್ಗ ಜಿಲ್ಲೆಯಲ್ಲಿ ಹರಿಯುವುದು. ಚಿಕ್ಕಮಗಳೂರು ಜಿಲ್ಲೆಯಲ್ಲಿ ಈ ನದಿಯ ಹರಿವು ೩೨ ಕಿ.ಮೀ. ಈ ನದಿಗೆ ಲಕ್ಕವಳ್ಳಿ ಹತ್ತಿರ ಜಲಾಶಯ ನಿರ್ಮಿಸಿ ನೀರಾವರಿ ಮತ್ತು ವಿದ್ಯುತ್ ಉತ್ಪಾದನೆಗೆ ಅನುಕೂಲ ಕಲ್ಪಿಸಲಾಗಿದೆ. ತುಂಗ ಮತ್ತು ಭದ್ರಾ ಹೆಸರಿನ ಈ ಎರಡು ಸಹೋದರ ನದಿಗಳು ಶಿವಮೊಗ್ಗ ಜಿಲ್ಲೆಯ ಕೂಡಲಿ ಹತ್ತಿರ ಸಂಗಮಗೊಂಡು ತುಂಗಭದ್ರಾ ಎಂದು ಕರೆಸಿಕೊಳ್ಳುತ್ತದೆ.[೬] ಒಟ್ಟು ೩೮೧ ಕಿ.ಮೀ. ಉದ್ದವನ್ನು[೭] ಹೊಂದಿದೆ.

ಭದ್ರಾ ಜಲಾಶಯ ಯೋಜನೆ

ಇದು ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಲಕ್ಕವಳ್ಳಿ ಸಮೀಪದಲ್ಲಿದೆ. ಶಿವಮೊಗ್ಗ ಜಿಲ್ಲೆಯ ಗಡಿಭಾಗದ ಸಿಂಗನಮನೆ ಹತ್ತಿರ ಭದ್ರಾ ಜಲಾಶಯವನ್ನು ಹಿಂದಿನ ಮೈಸೂರು ಸರ್ಕಾರ ೧೯೪೭ ರಲ್ಲಿ ಪ್ರಾರಂಭಿಸಿತು. ಈ ಯೋಜನೆ ಭದ್ರಾನದಿಗೆ ಅಡ್ಡಲಾಗಿ ಗಚ್ಚಿನ ಅಣೆಕಟ್ಟನ್ನು ನಿರ್ಮಿಸಲಾಗಿದೆ. ಅಣೆಕಟ್ಟು ೪೪೦ ಮೀ. ಉದ್ದ ಮತ್ತು ಆಳದ ಅಸ್ತಿಭಾರದ ಮೇಲಿಂದ ೭೨ ಮೀ. ಎತ್ತರವಿದೆ. ಇದಕ್ಕೆ ಎರಡು ಕಾಲುವೆಗಳಿದ್ದು ಚಿಕ್ಕಮಗಳೂರು, ಶಿವಮೊಗ್ಗ, ಚಿತ್ರದುರ್ಗ, ದಾವಣಗೆರೆ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ನೀರಿನ ಕೊರತೆ ಇರುವ ಪ್ರದೇಶಗಳಿಗೆ ಅಲ್ಪವಾಗಿ ನೀರು ಒದಗಿಸುತ್ತದೆ. ಈ ಅಣೆಕಟ್ಟಿನ ಎಡದಂಡೆ ಕಾಲುವೆ ೭೭ ಕಿ.ಮೀ. ಉದ್ದವಿದ್ದು ೯೭,೭೦೦ ಹೆಕ್ಟೇರ್ ಭೂಮಿಗೆ ನೀರನ್ನು ಒದಗಿಸುತ್ತದೆ. ಈ ಯೋಜನೆಯು ಚಿಕ್ಕಮಗಳೂರಿನ ತರೀಕೆರೆ ತಾಲ್ಲೂಕು ಶಿವಮೊಗ್ಗ ಜಿಲ್ಲೆಯ ಶಿವಮೊಗ್ಗ, ಭದ್ರಾವತಿ, ಚನ್ನಗಿರಿ, ಹೊನ್ನಾಳಿ, ಮತ್ತು ದಾವಣಗೆರೆ ಜಿಲ್ಲೆಯ ದಾವಣಗೆರೆ, ಹರಿಹರ ಮತ್ತು ಹರಪನಹಳ್ಳಿ ತಾಲ್ಲೂಕುಗಳಿಗೆ ಫಲಕಾರಿಯಾಗಿದೆ. ೨೨,೦೦ ಕಿ.ವ್ಯಾ. ವಿದ್ಯುಚ್ಛಕ್ತಿಯನ್ನು ಕೂಡ ಉತ್ಪಾದಿಸಲಾಗುತ್ತದೆ. ದಾವಣಗೆರೆ ಭಾಗಕ್ಕೆ ನೀರಿನ ಅಭಾವವೆಂದು ಆಗಾಗ ಹೋರಾಟಗಳು ಸಂಭವಿಸುತ್ತಿರುತ್ತವೆ. ಹೊಳಲ್ಕೆರೆ, ಚನ್ನಗಿರಿ ಪ್ರದೇಶಕ್ಕೆ ಅಲ್ಪಪ್ರಮಾಣದಲ್ಲಿಯಾದರೂ ಸರಿಯಾಗಿ ನೀರು ದೊರಕುತ್ತಿಲ್ಲ.[೮] ಈ ಒಂದು ಯೋಜನೆಯಿಂದ ಪ್ರಸ್ತುತ ದಾವಣಗೆರೆ ಜಿಲ್ಲೆಗೆ ನೀರಿನ ಸಮಸ್ಯೆ ನಿವಾರಣೆಯಾಗಿಲ್ಲವೆಂದೇ ಹೇಳಬಹುದು. ಹಾಗೆ ಜಿಲ್ಲೆಯ ಆರುತಾಲ್ಲೂಕುಗಳಲ್ಲಿ ಒಂದಾದ ಜಗಳೂರು ತಾಲ್ಲೂಕಂತೂ ಭಧ್ರಾ ಜಲಾಶಯ ಯೋಜನೆಯಿಂದ ಸಂಪೂರ್ಣ ವಂಚಿತವಾಗಿದೆ.

ಮಧ್ಯಮ ಮತ್ತು ಸಣ್ಣ ನೀರಾವರಿ ಯೋಜನೆಗಳಲ್ಲಿ ಜಲಸಮಸ್ಯೆಯ ಘಟನೆಗಳು ವ್ಯಾಪಕವಾಗಿ ಸಂಭವಿಸಿವೆ. ಅಂತಹ ಸಮಸ್ಯೆಗಳಲ್ಲಿ ಒಂದಾದ ಭದ್ರಾ ಮೇಲ್ದಂಡೆ ಯೋಜನೆ ಪ್ರಮುಖವಾಗಿದೆ. ಈ ಯೋಜನೆಗಾಗಿ ಜನರ ಹೋರಾಟ ಮತ್ತು ಚಳವಳಿಗಳು ವ್ಯಾಪಕವಾಗಿ ನಡೆದಿವೆ. ಆದರೆ ಸರ್ಕಾರ ಬಂಡವಾಳಶಾಹಿ ದೊರೆಗಳ ಪರವಾಗಿ 'ತುಂಗಾತಿರುವು' ಎಂಬ ಯೋಜನೆಯನ್ನು ರೂಪಿಸಿದೆ. ಮೊದಲಿನಂತೆ ಯೋಜನೆ ಕೈಗೊಂಡರೆ ಅಪಾರ ಪ್ರಮಾಣದ ಕಾಫಿ ತೋಟ ಮತ್ತು ಅಗಣ್ಯನಾಶವಾಗುತ್ತದೆಂಬ ಅಂದಾಜಿದೆ. ಭದ್ರ ಮೇಲ್ದಂಡೆ ಯೋಜನೆಯಿಂದ ೨೦ ಟಿ.ಎಂ.ಸಿ. ನೀರಿನ ಲಭ್ಯತೆಯನ್ನು ಬಚಾವತ್ ಆಯೋಗದ 'ಎ' ಸ್ಕೀಂ ನಡಿ ಮುಗಿಸಬೇಕಿತ್ತು. ಆದರೆ ಅದಾಗಲಿಲ್ಲ. ಬಚಾವತ್ 'ಬಿ' ಸ್ಕೀಂ ಕ್ರಿ.ಶ. ೨೦೦೦ ದ ಮೇ ೩೧ ರಂದು ಜಾರಿಗೆ ಬರುವ ೧೮೩ ಟಿ.ಎಂ.ಸಿ. ನೀರು ಲಭ್ಯವಾಗಲಿದೆ. ಇದರ ವ್ಯಾಪ್ತಿಗೆ ಬರುವ ಚಿತ್ರದುರ್ಗ, ತುಮಕೂರು, ಬಳ್ಳಾರಿ ಮತ್ತು ಕೋಲಾರ ಜಿಲ್ಲೆಗಳ ಕೆಲವು ಭಾಗಗಳಿಗೆ ನೀರಾವರಿಯಾಗಲಿದೆ.[೯] ಪ್ರಸ್ತುತ ಸರ್ಕಾರ ಈ ಯೋಜನೆಯನ್ನು ಕಾರ್ಯ ರೂಪಕ್ಕೆ ತರುವ ಪ್ರಯತ್ನ ಮಾಡುತ್ತಲಿದೆ. ಆದರೆ ಕಾರ್ಯರೂಪಕ್ಕೆ ಯಾವಾಗ ಬರುತ್ತದೆ ಎಂದು ಕಾದುನೋಡಬೇಕಾಗಿದೆ. ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕು ಸಹ ಈ ಯೋಜನೆಯಿಂದ ವಂಚಿತವಾಗಿದ್ದು ನೀರಿನ ಸಮಸ್ಯೆಯಿಂದ ಸಾಕಷ್ಟು ಪರಿತಪಿಸುತ್ತದೆ. ಹೀಗೆ ಜಿಲ್ಲೆಯಾದ್ಯಂತ ನೀರಿನ ಸಮಸ್ಯೆಯಿಂದ ಬಳಲುತ್ತಿದ್ದು, ಬೇಡಿಕೆಗಾಗಿ ಹೋರಾಟಗಳು, ಚಳವಳಿಗಳು ನಡೆಯುತ್ತಿವೆ.

ಕೈಗಾರಿಕಾ ಕಾರ್ಖಾನೆಗಳ ಸ್ಥಗಿತತೆಯ ಸಮಸ್ಯೆ

ಕರ್ನಾಟಕ ರಾಜ್ಯದ ಹೃದಯ ಭಾಗದಲ್ಲಿರುವಂತ ದಾವಣಗೆರೆ ಹಲವಾರು ಕೈಗಾರಿಕಾ ಕಾರ್ಖಾನೆಗಳ ಸ್ಥಾಪನೆಯಿಂದ ಅತ್ಯಂತ ಹೆಚ್ಚಿನ ಲಾಭಗಳಿಸುವ ಮೂಲಕ ರಾಜ್ಯ, ದೇಶ, ವಿದೇಶಗಳ ಮಟ್ಟದಲ್ಲಿ ಪ್ರಸಿದ್ಧಿಯನ್ನು ಪಡೆದಿತ್ತು ಒಂದು ಕಾಲದಲ್ಲಿ. ಹಾಗೆ ಕರ್ನಾಟಕದ 'ಮ್ಯಾಂಚಸ್ಟ್‌ರ್' ನಗರವೆಂದು ಖ್ಯಾತಿ ಪಡೆದ ನಗರವಾಗಿತ್ತು. ಕೈಗಾರಿಕಾ ಪರಿಸರಕ್ಕೆ ಯೋಗ್ಯ ಸ್ಥಳವಾದ ದಾವಣಗೆರೆ ಕೈಗಾರಿಕಾ ಅಭಿವೃದ್ಧಿಗೆ ಬೇಕಾಗುವ ಮೂಲ ಸವಲತ್ತುಗಳಾದ ಕೈಗಾರಿಕಾ ಭೂಮಿ, ಕಾರ್ಮಿಕ ವರ್ಗ, ಬಂಡವಾಳ ಹಾಗೂ ನಿರ್ವಹಣಾ ನಿಪುಣತೆ ಈ ನಗರದಲ್ಲಿ ಮೊದಲಿನಿಂದಲೂ ಲಭ್ಯವಿದೆ. ವಿದ್ಯುಚ್ಛಕ್ತಿ, ನೀರು, ವಾಹನ ಸೌಕರ್ಯ, ದೂರವಾಣಿ ಸಂಪರ್ಕ, ಉತ್ತಮ ಸಾರಿಗೆ ಸಂಪರ್ಕ, ಉತ್ತಮ ಬ್ಯಾಂಕಿಂಗ್ ವ್ಯವಸ್ಥೆ, ತಾಂತ್ರಿಕ ವಿದ್ಯಾಸಂಸ್ಥೆಗಳ ಸೌಲಭ್ಯ ಇನ್ನಿತರ ಸೌಲಭ್ಯಗಳಿಂದ ಈ ನಗರ ಕೂಡಿತ್ತು.

ಇಂಥ ವಾತಾವರಣವನ್ನು ಹೊಂದಿದ ದಾವಣಗೆರೆ ನಗರದಲ್ಲಿ ಹತ್ತಿಗಿರಣಿಗಳು, ಸಕ್ಕರೆ ಕಾರ್ಖಾನೆಗಳು, ಅಕ್ಕಿಗಿರಣಿಗಳು ಹಾಗೂ ನೂರಾರು ಸಣ್ಣ ಕೈಗಾರಿಕೆಗಳು ಕಾರ್ಯ ನಿರ್ವಹಿಸುತ್ತಿದ್ದವು. ಆದರೆ ಹಲವು ಕಾರಣಗಳಿಂದ ಇವುಗಳು ಅವನತಿ ಹೊಂದಿದ್ದ ಪರಿಣಾಮವಾಗಿ ಜಿಲ್ಲೆಯಲ್ಲಿ ಉದ್ಯೋಗವನ್ನು ಅವಲಂಬಿಸಿ ಜೀವನ ಸಾಗಿಸುತ್ತಿದ್ದ ಕಾರ್ಮಿಕರ ಸ್ಥಿತಿ ಚಿಂತಾಜನಕವಾಗಿದೆ. ಈ ಒಂದು ಸಮಸ್ಯೆಯಿಂದ ಕಾರ್ಮಿಕರ ಬದುಕು ಬರಡಾಗಿ ಉದ್ಯೋಗವನ್ನು ಕಳೆದುಕೊಂಡು ಒಪ್ಪೊತ್ತಿನ ಊಟಕ್ಕೂ ಪರಿತಪಿಸುವ ಸ್ಥಿತಿ ಜಿಲ್ಲೆಯನ್ನು ಕಾಡುತ್ತಿದೆ.

ಕ್ರಿ.ಶ. ೨೦೦೫ ರ ಸಮೀಕ್ಷೆಯ ಪ್ರಕಾರ ಜಿಲ್ಲೆಯಲ್ಲಿ ಒಟ್ಟು ೨೩೧ ಕಾರ್ಖಾನೆಗಳು, ೬೫೮೫ ಜನ ಕಾರ್ಮಿಕರಿರುವ ವಿಷಯ ತಿಳಿದು ಬರುತ್ತದೆ. ಈ ಹಿಂದೆ ಅಂದರೆ ೧೯೭೪-೭೫ ರವೇಳೆಯಲ್ಲಿ ಕರ್ನಾಟಕದ[೧೦] ಕೈಗಾರಿಕಾ ಕೇಂದ್ರಗಳಲ್ಲಿ ದಾವಣಗೆರೆ ಹನ್ನೊಂದನೆಯ ಸ್ಥಾನವನ್ನು ಪಡೆದಿತ್ತು. ದಾವಣಗೆರೆ ನಗರದಲ್ಲಿ ೮ ಬಟ್ಟೆಗಿರಣಿಗಳು, ೧೩ ಹತ್ತಿಗಿರಣಿಗಳು, ೧೯ ಅಕ್ಕಿಗಿರಣಿಗಳು, ೮ ಎಣ್ಣೆಗಿರಣಿಗಳು, ೧೧೨ ಸಣ್ಣ ಹಾಗೂ ಮಧ್ಯಮವರ್ಗದ ಕಾರ್ಖಾನೆ ಕೇಂದ್ರಗಳಿದ್ದವು.

ದಾವಣಗೆರೆಯಲ್ಲಿ ಹತ್ತಿಗಿರಣಿಗಳ ಸ್ಥಿತಿ-ಗತಿ

ದಾವಣಗೆರೆಯಲ್ಲಿ ಸುಮಾರು ೮ ಹತ್ತಿಗಿರಣಿಗಳು ಸ್ಥಾಪನೆಗೊಂಡು ಕಾರ್ಯನಿರ್ವಹಿಸುತ್ತಿದ್ದವು. ಮೊದಲನೆಯದಾಗಿ ಕ್ರಿ.ಶ. ೧೯೩೬ ರಲ್ಲಿ ರಾಜನಹಳ್ಳಿ ಹನುಮಂತಪ್ಪನವರ ದೂರದೃಷ್ಟಿಯ ಪರಿಣಾಮವಾಗಿ ದಿ. ದಾವಣಗೆರೆ ಕಾಟನ್ ಮಿಲ್ಸ್ ಲಿಮಿಟೆಡ್ ಸ್ಥಾಪನೆಗೊಂಡಿತು. ಈ ಕಾಟನ್‌ಮಿಲ್‌ನಲ್ಲಿ ನೂಲು ಮತ್ತು ಹತ್ತಿ ಬಟ್ಟೆ, ರೆಯಾನ್ ಶಿಲ್ಕು ತಯಾರಾಗುತ್ತಿತ್ತು. ಇದು ದೇಶ ವಿದೇಶಗಳಿಗೆ ಹೆಸರಾಗಿ ಡಿ.ಸಿ.ಎಂ. ಎಂದು ಗುರುತಿಸಲ್ಪಟ್ಟಿತ್ತು. ಪ್ರಾರಂಭಿಕ ೪೫ ವರ್ಷಗಳ ಕಾಲ ಅಧಿಕ ಲಾಭಗಳಿಸಿ ಮುಂಚೂಣಿಯಲ್ಲಿದ್ದ ಈ ಮಿಲ್ ೮೦ ರ ದಶಕದಲ್ಲಿ ನಷ್ಟವನ್ನು ಅನುಭವಿಸಿತು. ಈ ಕಾರಣದಿಂದಾಗಿ ಮುಂಬೈನ ಗೋಕುಲದಾಸ್ ಮಿಲ್ಸ್‌ನವರಿಗೆ ಮಾರಲಾಯಿತು. ನಂತರವು ಸಹ ನಷ್ಟವನ್ನು ತುಂಬಲು ಪ್ರಯತ್ನಿಸಿದರೂ ಲಾಭಾಂಶ ದೊರಕದ ಕಾರಣ ಈ ಕಾರ್ಖಾನೆ ಶಾಶ್ವತವಾಗಿ ಮುಚ್ಚುವಂತಾಯಿತು. ಇದರಿಂದ ನಗರಕ್ಕೆ ತುಂಬಲಾರದ ನಷ್ಟವಾಯಿತು. ಕೆಲಸ ಮಾಡುವ ಕಾರ್ಮಿಕರು ಬೀದಿ ಪಾಲಾದರು.

ಎರಡನೆಯದಾಗಿ ಕ್ರಿ.ಶ. ೧೯೪೫ ರಲ್ಲಿ ದಿ. ಮರಿಗೆಪ್ಪ ಚಿಗಟೇರಿ ಹಾಗೂ ಗುಂಡಿ ಮಹಾದೇವಪ್ಪನವರು ಶ್ರೀ ಶಂಕರ್ ಟೈಲ್ಸ್ ಮಿಲ್ಲನ್ನು ಸ್ಥಾಪನೆ ಮಾಡಿದರು. ಇದು ಸಹ ನಗರದಲ್ಲಿ ಪ್ರಾರಂಭಿಕ ಹಂತದಲ್ಲಿ ಲಾಭವನ್ನು ಗಳಿಸಿ ೧೯೪೮ ರಲ್ಲಿ ಸಾಕಷ್ಟು ನಷ್ಟವನ್ನು ಅನುಭವಿಸಿ ಶಾಶ್ವತವಾಗಿ ಮುಚ್ಚಲ್ಪಟ್ಟಿತು. ಇದರಿಂದಲೂ ಸಹ ಕಾರ್ಮಿಕರು ಕೆಲಸ ಕಳೆದುಕೊಂಡು ಸಮಸ್ಯೆಯಲ್ಲಿ ಮುಳುಗಿದರು.

ಮೂರನೆಯದಾಗಿ ಕ್ರಿ.ಶ. ೧೯೪೬ ರಲ್ಲಿ ಗಂಡಿಮಹದೇವಪ್ಪ ಮತ್ತು ಸಹೋದರರ ಫಲವಾಗಿ ಶ್ರೀ ಗಣೇಶ್ ಟೆಕ್ಸ್‌ಟೈಲ್ಸ್ ಅನ್ನು ಸ್ಥಾಪಿಸಿದರು. ೧೯೫೦ ರಿಂದ ತನ್ನ ಉತ್ಪಾದನೆಯನ್ನು ಪ್ರಾರಂಭಿಸಿ ೧೯೮೦-೮೧ ರ ವರೆಗೂ ಉತ್ತಮ ಲಾಭಾಂಶವನ್ನು ಗಳಿಸಿ ನಂತರ ನಷ್ಟವನ್ನು ಅನುಭವಿಸಿತು. ೧೯೮೭ ರಿಂದ ೧೯೮೯ ರವರೆಗೆ

ತಾತ್ಕಾಲಿಕವಾಗಿ ಕಾರ್ಖಾನೆಯನ್ನು ಮುಚ್ಚಲಾಯಿತು. ನಂತರ ೧೯೯೦ ರಲ್ಲಿ ಪುನಃ ಪ್ರಾರಂಭಿಸಲಾಯಿತು. ಇದೂ ಸಹ ಲಾಭ ನಷ್ಟವನ್ನು ಅನುಭವಿಸುತ್ತಾ ನಡೆಯುತ್ತದೆ.

ನಾಲ್ಕನೆಯದಾಗಿ ಕ್ರಿ.ಶ. ೧೯೫೧ ರಲ್ಲಿ ಅಂಬರ್‌ಕರ್ ವಿರೂಪಣ್ಣ, ದೊಡ್ಡ ಎಲ್ಲಪ್ಪ, ಶ್ರೀ ರಾಮಚಂದ್ರರಾವ್ ರವರು ಶ್ರೀ ಎಲ್ಲಮ್ಮ ಕಾಟನ್ ಉಲ್ಲನ್ ಅಂಡ್ ಸಿಲ್ಕ್ ಮಿಲ್ಸ್ ಲಿಮಿಟೆಡ್ ಅನ್ನು ಸ್ಥಾಪನೆ ಮಾಡಿ ಲಾಭಾಂಶವನ್ನು ಗಳಿಸಿ ಕಾಲಾನಂತರ ಇದೂ ಸಹ ನಷ್ಟವನ್ನು ಅನುಭವಿಸಿತು. ೧೯೭೬ ರಲ್ಲಿ ಕಾರ್ಖಾನೆಯ ಕಾರ್ಯವನ್ನು ಸ್ಥಗಿತಗೊಳಿಸಲಾಯಿತು. ನಂತರ ೧೯೭೩ ರಲ್ಲಿ ಭಾರತ ಸರ್ಕಾರ ಎನ್.ಟಿ.ಸಿ. ಸಂಸ್ಥೆಯು ಪುನಶ್ಚೇತನಕ್ಕಾಗಿ ತನ್ನ ಒಡೆತನಕ್ಕೆ ತೆಗೆದುಕೊಂಡಿತು. ಆದರೂ ಸಹ ಕಡಿಮೆ ಉತ್ಪಾದನೆಯನ್ನು ಹೊಂದಿ ನಷ್ಟದ ಹಾದಿ ಹಿಡಿದಿದೆ.

ಐದನೆಯದಾಗಿ ಕ್ರಿ.ಶ. ೧೯೫೭ ರಲ್ಲಿ ರಾಜನಹಳ್ಳಿ ರಾಮಶೆಟ್ಟಿ ಮತ್ತು ಅವರ ಮಗ ಆರ್. ಆರ್. ಶ್ರೀನಿವಾಸ ಮೂರ್ತಿಯವರ ಪ್ರಯತ್ನದಿಂದ ಶ್ರೀ ಚಂದ್ರೋದಯ ಮಿಲ್ಸ್ ಲಿಮಿಟೆಡ್ ಕಾರ್ಖಾನೆಯನ್ನು ಪ್ರಾರಂಭಿಸಿದರು. ಈ ಕಾರ್ಖಾನೆಯಿಂದ ಥಾಯ್‌ಲ್ಯಾಂಡ್, ಯು.ಕೆ., ಹಾಂಕಾಂಗ್ ಮುಂತಾದ ದೇಶಗಳಿಗೆ ಬಟ್ಟೆಯನ್ನು ರಫ್ತು ಮಾಡಲಾಗುತ್ತಿತ್ತು. ೧೯೯೦ ರವರೆಗೆ ಸಮರ್ಥವಾಗಿ ಕಾರ್ಯ ನಿರ್ವಹಿಸಿತು. ನಂತರ ನಷ್ಟವನ್ನು ಭರಿಸಲಾಗದೆ ತನ್ನ ಕಾರ್ಯವನ್ನು ಶಾಶ್ವತವಾಗಿ ಸ್ಥಗಿತಗೊಳಿಸಿ ಕಟ್ಟಡವನ್ನು ನೆಲಸಮ ಮಾಡಲಾಯಿತು. ಇದನ್ನೇ ನಂಬಿಕೊಂಡು ಕೆಲಸ ಮಾಡುತ್ತಿದ್ದ ಕಾರ್ಮಿಕರ ಸ್ಥಿತಿ ಚಿಂತಾಜನಕವಾಯಿತು.

ಆರನೆಯದಾಗಿ ಕ್ರಿ.ಶ. ೧೯೫೭ ರಲ್ಲಿ ದಿ. ಜಿ. ಮಹದೇವಪ್ಪ, ಜಿ. ಸಿದ್ದಲಿಂಗಪ್ಪ, ಜಿ. ಮುದ್ದಣ್ಣ ಹಾಗೂ ಜಿ.ಎಂ. ಹಾಲಪ್ಪ ಇವರುಗಳು ಸೇರಿ ಶ್ರೀ ಸಿದ್ದೇಶ್ವರ ಟೆಕ್ಸ್‌ಟೈಲ್ ಮಿಲ್ಸ್ ಲಿಮಿಟೆಡ್ ಕಾರ್ಖಾನೆಯನ್ನು ಪ್ರಾರಂಭಿಸಿದರು. ಈ ಕಾರ್ಖಾನೆಯು ಸಹ ಪ್ರಾರಂಭಿಕ ಹಂತದಲ್ಲಿ ಲಾಭವನ್ನು ಪಡೆದು ಹಂತಹಂತವಾಗಿ ನಷ್ಟವನ್ನು ಅನುಭವಿಸಿ ಪುನಃ ೧೯೯೦ ರಲ್ಲಿ ಅಥಣಿ ವೀರಣ್ಣ ಸಹೋದರರ ಸಹಾಯದಿಂದ ತನ್ನ ಉತ್ಪಾದನೆಯನ್ನು ಪುನರಾರಂಭಿಸಲಾಯಿತು. ಇದು ಸಹ ಪ್ರಸ್ತುತ ಸಂದರ್ಭದಲ್ಲಿ ನಷ್ಟದಲ್ಲಿ ನಡೆಯುತ್ತದೆ.

ಏಳನೆಯದಾಗಿ ಕ್ರಿ.ಶ. ೧೯೭೨ ರಲ್ಲಿ ಎಂ. ರಂಗಪ್ಪ ತಿಮ್ಮಪ್ಪ ಮಲ್ಲಾಡಹಳ್ಳಿ ಇವರು ಶ್ರೀ ಆಂಜನೇಯ ಕಾಟನ್ ಮಿಲ್ಸ್ ಲಿಮಿಟೆಡ್ ಕಾರ್ಖಾನೆಯನ್ನು ಸ್ಥಾಪಿಸಿ ೧೯೭೬ ರಲ್ಲಿ ಉತ್ಪಾದನೆ ಕಾರ್ಯವನ್ನು ಆರಂಭಿಸಿ ೧೯೯೨ ರಲ್ಲಿ ಚಳ್ಳಕೆರೆ ವೀರಭದ್ರಪ್ಪ ಎಂಬುವವರು ಖರೀಧಿಸಿ ಮತ್ತೆ ಹೊಸ ಚಾಲನೆಯನ್ನು ನೀಡಿದರು. ಇದು ಸಹ ಕುಂಟುತ್ತಾ ಸಾಗುತ್ತಿದೆ.

ಎಂಟನೆಯದಾಗಿ ಕ್ರಿ.ಶ. ೧೯೭೩ ರಲ್ಲಿ ವೀರಭದ್ರಪ್ಪ ಎಂ. ಚಿಗಟೇರಿ ಹಾಗೂ ಜಯಣ್ಣನವರು ಶ್ರೀಚಿಗಟೇರಿ ಮಿಲ್ಸ್ ಲಿಮಿಟೆಡ್ ಅನ್ನು ಸ್ಥಾಪಿಸಿದರು. ೧೯೮೭ ರಲ್ಲಿ ತಾತ್ಕಾಲಿಕವಾಗಿ ನಿಂತು ೧೯೮೯ ರಲ್ಲಿ ಶಾಶ್ವತವಾಗಿ ಮುಚ್ಚಲ್ಪಟ್ಟಿತು.

ಈ ಎಂಟು ಹತ್ತಿಗಿರಣಿಗಳಲ್ಲಿ ಐದು ಹತ್ತಿಗಿರಣಿಗಳು ಶಾಶ್ವತವಾಗಿ ಮುಚ್ಚಲ್ಪಟ್ಟವು. ಇನ್ನುಳಿದ ಮೂರು ಗಿರಣಿಗಳು ಲಾಭ ನಷ್ಟವನ್ನು ಅನುಭವಿಸುತ್ತಾ ಉಳಿದು ಕೊಂಡು ಬಂದಿವೆ. ಇವುಗಳ ಅವನತಿಗೆ ಕೆಲವು ಕಾರಣಗಳನ್ನು ಗಮನಿಸಬಹುದು.

೧. ೮೦ ರ ದಶಕದಲ್ಲಿ ಹತ್ತಿಗಿರಣಿ ವ್ಯವಹಾರದಲ್ಲಿ ಆದ ಹಿಂಜರಿತ.

೨. ಕಚ್ಚಾವಸ್ತುವಾದ ಹತ್ತಿ ಬೆಳೆಯ ಕುಂಠಿತ

೩. ಕಾರ್ಮಿಕ ಮತ್ತು ಮಾಲಿಕರ ನಡುವೆ ಭಿನ್ನಾಭಿಪ್ರಾಯ

೪. ಕಾರ್ಖಾನೆಗಳ ಸ್ಥಾಪಕರಲ್ಲಿದ್ದಂತಹ ದೂರದರ್ಶಿತ್ವ ಮುಂದಿನ ಪೀಳಿಗೆಯಲ್ಲಿ ಇಲ್ಲದೇ ಇರುವುದು. ಇನ್ನಿತರ ಕಾರಣಗಳಿಂದ ಹತ್ತಿಗಿರಣಿಗಳು ಅವನತಿ ಕಂಡವು.[೧೧]

ಹತ್ತಿಗಿರಣಿ ಕಾರ್ಖಾನೆಗಳು ಪ್ರಾರಂಭಗೊಂಡಾಗ ನಿರುದ್ಯೋಗಿ ಪುರುಷ, ಮಹಿಳೆಯರಿಗೆ ಕೆಲಸ ದೊರೆತಂತಾಯಿತು. ಅಲ್ಲದೆ ಅವರ ಜೀವನ ಮಟ್ಟ ಸುಧಾರಿಸಿತು. ನಂತರ ಹೆಚ್ಚಿನ ದುಡಿಮೆ, ಕಡಿಮೆ ವೇತನ,

ದುಡಿಯುತ್ತಿರುವ ಮಹಿಳೆಯರಿಗೆ ಹೆರಿಗೆ ಮುಂತಾದ ಸೌಲಭ್ಯಗಳು ದೊರೆಯದೆ ಸೌಲಭ್ಯಗಳಿಂದ ವಂಚಿತಗೊಂಡರು. ಇವರ ಬದುಕು ಹತ್ತಿಗಿರಣಿ ಕಾರ್ಮಿಕರ ಬದುಕು ಹತ್ತಿಯಂತೆ ಮೃದುವಾಗಿರದೆ ಗಡುಸಾಗಿತ್ತು ಎಂದು ವ್ಯಕ್ತವಾಯಿತು. ಕಾರ್ಮಿಕ ಮತ್ತು ಮಾಲೀಕರ ನಡುವೆ ಅಸಮಾನತೆ ಕಂಡು ಮಾಲೀಕರು ಇಲ್ಲಿ ಕಾರ್ಮಿಕರನ್ನು ಶೋಷಿಸುವಲ್ಲಿ ಮುಂದಾದರು. ಇಂತಹ ಸಂದರ್ಭದಲ್ಲಿ ಕಾರ್ಮಿಕ ಸಂಘಟಿತ್ತುಕೊಂಡು ಬೇಡಿಕೆಗಳ ಪೂರೈಕೆಗಾಗಿ ಪ್ರಯತ್ನಿಸಿದರು. ಇದೇ ಸಂದರ್ಭದಲ್ಲಿ ಮೈಸೂರು ಸಂಸ್ಥಾನ ಇವರಿಗೆ ಪ್ರೋತ್ಸಾಹವನ್ನು ಕೂಡ ನೀಡಲಿಲ್ಲ. ಆದರೂ ಕೂಡ ಸಂಘಟಿತ್ತುಕೊಳ್ಳುವುದರ ಮೂಲಕ ತಮ್ಮ ಅಸ್ತಿತ್ವದ ಉಳಿವಿಗಾಗಿ ದೀರ್ಘ ಹೋರಾಟ ನಡೆಸಿದವು. ಇದರಿಂದ ಕಾರ್ಮಿಕ ರಂಗದಲ್ಲಿ ಕೊಲೆ, ಘರ್ಷಣೆ, ಜೈಲು ಶಿಕ್ಷೆ ಸಾಮಾನ್ಯವಾಗಿದ್ದವು. ನಂತರ ಸಂಘಟನೆಯು ವಂಚಿತವಾಗಿದ್ದ ಸೌಲಭ್ಯಗಳನ್ನು ಪಡೆದುಕೊಳ್ಳುವಲ್ಲಿ ಯಶಸ್ಸು ಕಂಡಿತು. ಯಶಸ್ಸಿನ ಬೆನ್ನಲ್ಲೆ ಪ್ರಪಂಚದ ಅಭಿವೃದ್ಧಿ ಹೊಂದುತ್ತಿರುವ ಬಹುತೇಕ ರಾಷ್ಟ್ರಗಳು ಜಾಗತೀಕರಣದ ಒತ್ತಡಕ್ಕೆ ಒಳಗಾದಾಗ ಭಾರತದಲ್ಲಿ ಕರ್ನಾಟಕ ಸೇರಿದಂತೆ ದಾವಣಗೆರೆ ಹತ್ತಿಗಿರಣಿಗಳೂ ಸಹ ಇಕ್ಕಟ್ಟಿಗೆ ಸಿಲುಕಿ ಅವನತಿ ಹಾದಿ ತುಳಿಯುವ ಸಂದರ್ಭ ಬಂದೊದಗಿತು. ಈ ಸಂದರ್ಭದಲ್ಲಿ ಒಂದೆಡೆ ದೇಶದ ಆರ್ಥಿಕ ರಂಗ ದುಸ್ಥಿತಿ ಕಂಡರೆ ಇನ್ನೊಂದೆಡೆ ಇಂಥ ಗಿರಣಿ ಕೈಗಾರಿಕೆಗಳಲ್ಲಿ ದುಡಿಯುತ್ತಿದ್ದ ಕಾರ್ಮಿಕರು ಬೀದಿಪಾಲಾಗಿ ಜೀವನ ನಿರ್ವಹಣೆ ದುಸ್ಥರವಾಗಿ ಹೀನಾಯ ಸ್ಥಿತಿ ಬಂದಿತು.[೧೨]

ಹತ್ತಿಗಿರಣಿಗಳ ಅವನತಿಯ ನಂತರ ಕಾರ್ಮಿಕರ ಸ್ಥಿತಿ-ಗತಿ

ಕ್ರಿ.ಶ. ೧೯೩೦ ರ ಸುಮಾರಿಗೆ ದಾವಣಗೆರೆ ಹತ್ತಿಗಿರಣಿ ತಲೆ ಎತ್ತಿದ ನಂತರ ಅನೇಕ ಹತ್ತಿಗಿರಣಿಗಳು ಉಗಮಗೊಂಡವು. ಅವು ನಗರ ಮತ್ತು ಸುತಮುತ್ತಲ ಗ್ರಾಮಗಳ ಸಾವಿರಾರು ಕುಟುಂಬಗಳಿಗೆ ಉದ್ಯೋಗದ ಮೂಲಕ ಆಶ್ರಯ ನೀಡಿದವು. ಹೀಗೆ ಜನ್ಮವೆತ್ತಿ ಬೆಳವಣಿಗೆ ಹೊಂದಿದ ಗಿರಣಿಗಳಲ್ಲಿ ೧೯೮೦ ರ ದಶಕದಲ್ಲಿ ಒಂದೊಂದೆ ಅವನತಿಯತ್ತ ಸಾಗುತ್ತಾ ಒಟ್ಟು ಐದು ಹತ್ತಿಗಿರಣಿಗಳು ಇತಿಹಾಸ ಗರ್ಭದಲ್ಲಿ ಸೇರಿಕೊಂಡವು.[೧೩]

ಈ ಕಾರ್ಖಾನೆಗಳ ಅವನತಿಯಿಂದ ಕಾರ್ಮಿಕರ ಸ್ಥಿತಿ ಚಿಂತಾಜನಕವಾಯಿತು. ಹಾಗೆಯೇ ಜೀವನದ ನಿರ್ವಹಣೆಗಾಗಿ ಬೇರೊಂದು ಕೆಲಸವನ್ನು ಅವಲಂಬಿಸಬೇಕಾಯಿತು. ಅಂತಹ ಕೆಲಸಗಳೆಂದರೆ ಕೈಗಾಡಿ ಎಳೆಯುವುದು, ಆಟೋಚಾಲನೆ, ಕೂಲಿ ಕೆಲಸ, ಆಹಾರ ಉದ್ಯಮದಲ್ಲಿ ಕೆಲಸ ಮಾಡುವುದು[೧೪] ಮತ್ತು ಮಹಿಳೆಯರು ಶೇಂಗಾಬೀಜ, ಶೇಂಗಾ ಮಾರುವುದು, ಜೋಳದ ರೊಟ್ಟಿ ಮಾಡುವುದು ಹಾಗೆಯೇ ಕೆಲವೊಬ್ಬ ಸ್ತ್ರೀಯರು ಜೀವನ ನಿರ್ವಹಣೆಗಾಗಿ ವೇಶ್ಯಾವೃತ್ತಿಯನ್ನು[೧೫] ಅನುಸರಿಸಿದರು. ಇದಲ್ಲದೆ ಕಾರ್ಮಿಕರ ಮಕ್ಕಳ ಶಿಕ್ಷಣದ ಮೇಲೆ ಮಾರಕವಾದ ಪರಿಣಾಮ ಬೀರಿತು. ಇಂತಹ ಜ್ವಲಂತ ಸಮಸ್ಯೆಗಳು ಇಂದಿಗೂ ದಾವಣಗೆರೆಯಲ್ಲಿ ಜೀವಂತವಾಗಿವೆ.

ಹತ್ತಿಗಿರಣಿಗಳಲ್ಲದೆ ದಾವಣಗೆರೆಯಲ್ಲಿ ಸಕ್ಕರೆ ಕಾರ್ಖಾನೆಗಳು ಸ್ಥಾಪನೆಗೊಂಡಿವೆ. ೧೯೭೪ ರಲ್ಲಿ ಕುಕ್ಕುವಾಡದಲ್ಲಿ 'ದಿ ದಾವಣಗೆರೆ ಷುಗರ್ ಕಂಪನಿ' ಸ್ಥಾಪನೆಯಾಯಿತು. ಇಲ್ಲಿ ಸುಮಾರು ೭೦೦ ಜನ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದರು. ದೊಡ್ಡ ಬಾತಿಯಲ್ಲಿ 'ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ' ಸ್ಥಾಪನೆಯಾಗಿ ೫೦೦ ಜನ ಕಾರ್ಮಿಕರು ಕೆಲಸ ಮಾಡುವರು. ಮತ್ತು 'ಶಾಮನೂರು ಷುಗರ್ಸ್ ಕಾರ್ಖಾನೆ', ದುಗ್ಗತ್ತಿಯಲ್ಲಿ ಸ್ಥಾಪನೆಗೊಂಡು ಕಾರ್ಮಿಕರಿಗೆ ಉದ್ಯೋಗವನ್ನು ದೊರಕಿಸಿ ಕೊಟ್ಟಿದೆ. ಆದರೂ ಸಹ ಇವುಗಳಲ್ಲಿ ಕಾರ್ಮಿಕರ ಸ್ಥಿತಿ ಗಂಭೀರವಾಗಿದೆ. ಇವುಗಳಲ್ಲದೆ ಎಣ್ಣೆ ಗಿರಣಿಗಳು, ಅಕ್ಕಿ ಮಿಲ್‌ಗಳು, ಮಂಡಕ್ಕಿ ಭಟ್ಟಿಗಳು ಸ್ಥಾಪನೆಗೊಂಡು ಕಾರ್ಮಿಕರ ಜೀವನದ ಸೆಲೆಯಾಗಿದ್ದು ಕಾಲಾನಂತರ ಇವುಗಳೂ ಸಹ ನಷ್ಟವನ್ನು ಅನುಭವಿಸುತ್ತಾ ಅವನತಿಯನ್ನು ಕಂಡು ಕಾರ್ಮಿಕ ಜೀವನವೇ ದುಃಖಮಯವಾಗಿದೆ. ಹತ್ತಿಗಿರಣಿ ಕಾರ್ಖಾನೆಗಳ ಕುರಿತಂತೆ ಎಸ್. ಬಿ. ರವಿಕುಮಾರ್, ವೈ. ಎ. ದೇವಪಾಲ್, ಎಸ್. ಹೆಚ್. ಸಿದ್ದಲಿಂಗಸ್ವಾಮಿ, ಜಿ. ಹೆಚ್. ಅಂಜನಪ್ಪ, ಬಿ. ಪಿ. ಕುಮಾರ್ ಇನ್ನಿತರರು ಪ್ರಸ್ತುತ ಕ್ಷೇತ್ರವನ್ನು ಕುರಿತು ಅಧ್ಯಯನ ನಡೆಸಿರುವರು.

ಹರಿಹರದ ಕಿರ್ಲೋಸ್ಕರ್ ಕಾರ್ಖಾನೆ ಸ್ಥಗಿತತೆ

ಕ್ರಿ.ಶ. ೧೯೪೨ ರಲ್ಲಿ ಹರಿಹರದಲ್ಲಿ ಮೈಸೂರು ಕಿರ್ಲೋಸ್ಕರ ಕಾರ್ಖಾನೆ ಸ್ಥಾಪನೆಗೊಂಡಿತು. ಆರಂಭದಲ್ಲಿ ತಿಂಗಳಿಗೆ ಕೇವಲ ೩೫ ಟನ್ ಎರಕದ ಕೆಲಸ ನಡೆಯುತ್ತಿತ್ತು. ೧೯೫೧ ರಲ್ಲಿ ೪೫೦ ಕ್ಕಿಂತ ಹೆಚ್ಚಿನ ಯಂತ್ರ ಉತ್ಪಾದಿಸಿ, ಎರಕದ ಕೆಲಸವು ತಿಂಗಳಿಗೆ ೪೨೦ ಟನ್‌ಗಿಂತ ಅಧಿಕವಾಯಿತು. ಎರಡನೇ ಮಹಾಯುದ್ಧದಲ್ಲಿ ಭಾರತ ಸರ್ಕಾರವು ರಕ್ಷಣಾ ಸಾಧನಗಳ ತಯಾರಿಕೆಗೆ ಆದೇಶ ನೀಡಿದಂತೆ ರಕ್ಷಣಾ ಯಂತ್ರ ಸಾಮಗ್ರಿಗಳನ್ನು ಬೃಹತ್ ಪ್ರಮಾಣದಲ್ಲಿ ತಯಾರಿಸಿತು. ೧೯೫೧ ರಿಂದ ಈಚೆಗೆ ಉತ್ಪಾದನೆ ಗಣನೀಯವಾಗಿ ಹೆಚ್ಚಿ ಲೇತ್‌ಗಳನ್ನು, ಡ್ರಿಲ್ಲಿಂಗ್ ಮಿಷನ್‌ಗಳನ್ನು, ಪವರ್ ಪ್ರಸ್ ಮತ್ತು ಗರಗಸ ಯಂತ್ರಗಳನ್ನು ತಯಾರಿಸಲಾರಂಭಿಸಿತು. ಈ ಒಂದು ಕಾರ್ಖಾನೆಯಲ್ಲಿ ೪೦೦೦ ಕ್ಕೂ ಹೆಚ್ಚು ಕಾರ್ಮಿಕರು ಕಾರ್ಯ ನಿರ್ವಹಿಸುತ್ತಿದ್ದರು. ಹೀಗೆ ಪ್ರತಿವರ್ಷ ಕಾರ್ಖಾನೆಯ ಉತ್ಪಾದನೆಯು ತ್ವರಿತವಾಗಿ ಹೆಚ್ಚುತ್ತಿದ್ದು ಹಲವಾರು ಕಾರಣಗಳಿಂದ ೨೦೦೦ ರಲ್ಲಿ ಇದ್ದಕ್ಕಿದ್ದಂತೆ ಈ ಕಾರ್ಖಾನೆಯನ್ನು ಮುಚ್ಚಲಾಯಿತು.[೯೬]

ಈ ಕಾರ್ಖಾನೆಯನ್ನೇ ಅವಲಂಬಿಸಿ ಬದುಕನ್ನು ಸಾಗಿಸುತ್ತಿದ್ದ ಸುಮಾರು ೪೦೦೦ ಕ್ಕೂ ಹೆಚ್ಚು ಕಾರ್ಮಿಕರ ಬದುಕಿಗೆ ಎರಕ ಹೊಯ್ದಂತಾಯಿತು. ಪುನಃ ಕಾರ್ಖಾನೆಯನ್ನು ಪುನರಾಂಭಿಸುವಂತೆ ಒತ್ತಾಯಿಸಿ ನಾಗರೀಕ ಹೋರಾಟ ಸಮಿತಿ ಕರೆ ನೀಡಿದ್ದ ಹರಿಹರ ಬಂದ್ ಸಂಪೂರ್ಣ ಯಶಸ್ವಿಯಾಯಿತು. ಹಾಗೆಯೇ ಬಸ್ಸು, ರೈಲು, ಬ್ಯಾಂಕ್ ಮೇಲೆ ಕಲ್ಲು ತೂರಿ ಆಕ್ರೋಶವನ್ನು ವ್ಯಕ್ತಪಡಿಸಿದರು.[೯೭] ಆದರೂ ಸಹ ಯಾವುದೇ ರೀತಿಯ ಅನುಕೂಲವಾಗಲಿಲ್ಲ. ಈ ಒಂದು ಸಮಸ್ಯೆ ಸಹ ದಾವಣಗೆರೆ ಜಿಲ್ಲೆಯ ಹರಿಹರದಲ್ಲಿ ಇಂದಿಗೂ ಕಾಡುತ್ತಿದೆ.

ಹರಿಹರ ಮತ್ತು ದಾವಣಗೆರೆ ಪ್ರದೇಶಗಳಲ್ಲಿ ಪರಿಸರ ಚಳವಳಿ

ಹರಿಹರ ನಗರದ ಪಶ್ಚಿಮಕ್ಕೆ ಹೊಂದಿಕೊಂಡು ತುಂಗಭದ್ರಾ ನದಿಯ ಸಮೀಪದಲ್ಲಿ ಬಿರ್ಲಾ ಸಂಸ್ಥೆಯು ಕ್ರಿ.ಶ. ೧೯೬೮ ರಲ್ಲಿ ಪಾಲಿಫೈಬರ್ಸ್ ಕಾರ್ಖಾನೆಯನ್ನು ಸ್ಥಾಪಿಸಿತು. ಇಲ್ಲಿ ಅರಳೆಯೇತರ ಬಟ್ಟೆಗಳಿಗೆ ಬೇಕಾಗುವ ರೇಯಾನ್ ಎಳೆಯನ್ನು ತಯಾರಿಸಲಾಗುತ್ತದೆ. ಇಲ್ಲಿ ಸುಮಾರು ೫೦೦೦ ಕ್ಕೂ ಹೆಚ್ಚು ಜನರು ಕೆಲಸ ಮಾಡುತ್ತಾರೆ.[೯೮]

ಈ ಒಂದು ಕಾರ್ಖಾನೆ ನಿರ್ಮಾಣಗೊಳ್ಳುವ ಹಂತದಲ್ಲಿ ವ್ಯಾಪಕ ಪ್ರತಿಭಟನೆಗಳನ್ನು ಸಮರ್ಥವಾಗಿ ಎದುರಿಸಿ ತನ್ನ ಕಾಮಗಾರಿಯನ್ನು ಪೂರ್ಣಗೊಳಿಸಿಕೊಂಡಿತು. ಆದರೂ ಪಾಲಿಫೈಬರ್ ಮತ್ತು ಗ್ರಾಸಿವರ್ ಕಾರ್ಖಾನೆಗಳ ವಿರುದ್ಧ ಹರಿಹರ ಮತ್ತು ದಾವಣಗೆರೆಯಲ್ಲಿ ಚಳವಳಿಗಳು ನಡೆದವು. ಈ ಕಾರ್ಖಾನೆಗಳು ತುಂಗಭದ್ರಾ ನದಿಯನ್ನು ಅವಲಂಬಿಸಿಕೊಂಡಿರುವುದೇ ಚಳವಳಿಗೆ ಮೂಲಕಾರಣ. ತುಂಗ ಭದ್ರಾ ನದಿಯ ನೀರು ಮಾಲಿನ್ಯಕ್ಕೊಳಗಾಗುತ್ತದೆ ಎನ್ನುವುದೇ ಚಳವಳಿಕಾರರ ವಾದ. ಪಾಲಿಫೈಬರ್ ಕಾರ್ಖಾನೆಯು ವಿಷಪೂರಿತ ಕೊಳಕು ನೀರನ್ನು ತುಂಗಭದ್ರಾ ನದಿಗೆ ಹರಿದು ಬಿಟ್ಟಿದ್ದರಿಂದಾಗಿ ತುಂಗಭದ್ರಾ ನದಿಯ ಮೀನುಗಳು ಸತ್ತವು ಎನ್ನುವ ವರದಿ ವ್ಯಾಪಕ ಜನ ಪ್ರತಿಭಟನೆಗೆ ಕಾರಣವಾಯಿತು. ಕೃಷಿಕರು, ಮೀನುಗಾರರು ಹಾಗೂ ನಗರವಾಸಿಗಳು ಬೃಹತ್ ಸಂಖ್ಯೆಯಲ್ಲಿ ಸೇರಿ ಈ ಘಟನೆಯ ವಿರುದ್ಧ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಆದರೆ ಕಾರ್ಖಾನೆಯ ಮಾಲೀಕರು ಈ ಪ್ರಕರಣಕ್ಕೆ ಬೇರೆಯೇ ಕಾರಣವನ್ನು ನೀಡಿದರು. ಅವರ ಪ್ರಕಾರ ಯಾರೋ ದುಷ್ಕರ್ಮಿಗಳು ವಿಮಾನದಿಂದ ನದಿಗೆ ವಿಷವನ್ನು ಚಿಮುಕಿಸಿ ಮೀನುಗಳು ಸಾಯುವಂತೆ ಮಾಡಿದರು. ಇದರಲ್ಲಿ ಕಾರ್ಖಾನೆಯ ಯಾವ ಕೈವಾಡವೂ ಇಲ್ಲ. ಪ್ರಭಾವಿ ವಕೀಲರ ಸಹಾಯದಿಂದ ಮಾಲಿಕರ ಈ ವಾದ ನ್ಯಾಯ ಮಂಡಲಿಯಲ್ಲಿ ಗಟ್ಟಿಯಾಗಿ ಉಳಿಯಿತು. ಧಾರವಾಡದ ಸಮಾಜ ಪರಿವರ್ತನ ಸಮುದಾಯವು ಈ ಕಾರ್ಖಾನೆಗಳ ವಿರುದ್ಧ ಚಳವಳಿ ನಡೆಸಿತು. ಆದರೆ ರಾಜಕಾರಣಿಗಳು, ಅಧಿಕಾರಿಗಳು ಮತ್ತು ಸರಕಾರಿ ತಂತ್ರಜ್ಞರ ತೀರ್ಮಾನವೇ ಅಂತಿಮವಾಗಿರುವುದರಿಂದಾಗಿ ಹರಿಹರ ಮತ್ತು ದಾವಣಗೆರೆಯಲ್ಲಿನ ಚಳವಳಿಗಳು ಪ್ರಾಮುಖ್ಯತೆಯನ್ನು ಪಡೆದುಕೊಳ್ಳಲಿಲ್ಲ. ಚಳವಳಿಯೊಳಗಿನ ಆಂತರಿಕ ಭಿನ್ನತೆಗಳೂ ಇದಕ್ಕೆ ಕಾರಣವಾದವು ಎನ್ನಲಾಗಿದೆ.[೯೯] ಇಂದಿಗೂ ಕೂಡ ಹರಿಹರ ಮತ್ತು ದಾವಣಗೆರೆ ಸುತ್ತಮುತ್ತಲಿನ ಗ್ರಾಮಗಳಲ್ಲಿನ ಜನರು ನದಿಯ ಕಲುಷಿತ ನೀರಿನಿಂದ ಹಾಗೂ ಕಲುಷಿತ ಗಾಳಿಯಿಂದ ತೀವ್ರ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ.

ಬಾಲಕಾರ್ಮಿಕರ ಸಮಸ್ಯೆ

ದಾವಣಗೆರೆಯಲ್ಲಿ ನೂರಾರು ಮಂಡಕ್ಕಿ ಭಟ್ಟಿಗಳಿವೆ. ಇವುಗಳಲ್ಲದೆ ಕಡಲೆ ಮತ್ತು ಅವಲಕ್ಕಿ ತಯಾರಿಕಾ ಘಟಕಗಳೂ ಇವೆ. ಇವುಗಳಿಗೆ ಪ್ರತ್ಯೇಕವಾದ ಲೇಔಟ್ ಇದೆ. ಈಗ 'ಶ್ರೀ ಮಹಮದಾಲಿ ಜೋಹರ್ ನಗರ' ಎಂದು ನಾಮಕರಣಗೊಂಡಿದೆ. ನಗರದ ಉತ್ತರದಲ್ಲಿ ೩೮ ಎಕರೆ ೩೪ ಗುಂಟೆ, ೩೯೬೪,೮೦೦ ರೂ ವೆಚ್ಚದಲ್ಲಿ ಮಂಡಕ್ಕಿ ಭಟ್ಟಿ ಪುರ್ನವಸತಿ ಯೋಜನೆ ಕೈಗೊಳ್ಳಲಾಗಿದೆ.[೨೦]

ಮುಖ್ಯ ವಿಷಯವೆಂದರೆ ೧೪ ವರ್ಷದ ಒಳಗಿನ ಬಾಲಕಾರ್ಮಿಕರು ೬೦೦ ಡಿಗ್ರಿ ಸೆಲ್ಸಿಯಸ್ ಉಷ್ಣತೆಯ ಮಂಡಕ್ಕಿ ಭಟ್ಟಿಯ ಅಸುರಕ್ಷತೆ ವಾತಾವರಣದಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಈ ಕಾರ್ಮಿಕರ ಸ್ಥಿತಿಗತಿ ಚಿಂತಾಜನಕವಾಗಿದೆ. ಕಾರ್ಮಿಕರಿಗೆ ಕನಿಷ್ಟ ಕೂಲಿ ಹಾಗೂ ಸೂಕ್ತವಾದ ಕೆಲಸ ಮಾಡುವ ವಾತಾವರಣ ಕಲ್ಪಿಸಬೇಕೆಂದು ರಾಜ್ಯಸರ್ಕಾರಕ್ಕೆ ಒತ್ತಾಯ ಮಾಡಲಾಗುತ್ತಿದೆ. ಮಂಡಕ್ಕಿ ಭಟ್ಟಿಯನ್ನು ಬೆಳಿಗ್ಗೆಯಿಂದ ಸಂಜೆಯವರೆಗೆ ಅಸುರಕ್ಷತೆ ವಾತಾವರಣದಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಎಲ್ಲಾ ಸೌಲಭ್ಯಗಳನ್ನು ಒದಗಿಸಬೇಕು, ಅಪಘಾತವಿಮೆ, ಸಾವಿಗೀಡಾದರೆ ಪರಿಹಾರ ಒದಗಿಸಬೇಕು ಮುಂತಾದ ಸೌಲಭ್ಯಗಳಿಗೆ ಒತ್ತಾಯ ಮಾಡುತ್ತಿರುವರು. ಈ ಮಂಡಕ್ಕಿ ಭಟ್ಟಿಗಳಲ್ಲಿ ಸಾವಿರಕ್ಕೂ ಹೆಚ್ಚು ಕಾರ್ಮಿಕರು ಕೆಲಸ ಮಾಡುವ ಕಾರಣಕ್ಕೆ ಇದನ್ನು ಸಮೂಹ ಉದ್ಯಮವೆಂದು ಪರಿಗಣಿಸಬೇಕು ಎಂದು, ಯಾವುದೇ ಕಾರಣಕ್ಕೂ ಬಾಲಕಾರ್ಮಿಕರ ಪದ್ಧತಿಯನ್ನು ನಿರ್ಮೂಲನೆ ಮಾಡಬೇಕು, ಸರ್ಕಾರ ಈ ನಿಟ್ಟಿನಲ್ಲಿ ಕಠಿಣ ಕ್ರಮ ಕೈಗೊಳ್ಳಬೇಕು ಎಂಬೆಲ್ಲಾ ಬೇಡಿಕೆಗಳತ್ತ ಸರ್ಕಾರ ಗಮನ ಹರಿಸಿ ಈ ಮೂರು ವರ್ಷಗಳಲ್ಲಿ ಸಾವಿರಕ್ಕೂ ಹೆಚ್ಚು ಬಾಲಕಾರ್ಮಿಕರನ್ನು ಮುಕ್ತಗೊಳಿಸಲಾಗಿದೆ.[೨೧] ಆದರೂ ಸಹ ಅಕ್ಷರ ಕಲಿಯುವ ವಯಸ್ಸಿನಲ್ಲಿ ಕೆಲಸಮಾಡುವ ವಾತಾವರಣ ಸೃಷ್ಟಿಯಾಗಿದೆ. ಸರ್ಕಾರ ಬಾಲಕಾರ್ಮಿಕರನ್ನು ಯಾರು ಇಟ್ಟುಕೊಂಡಿದ್ದಾರೆಯೋ ಅಂಥವರ ವಿರುದ್ಧ ಸೂಕ್ತ ಕ್ರಮ ಕೈಗೊಂಡರೂ ಸಹ ಇನ್ನು ಜೀವಂತವಾಗಿ ಈ ಪದ್ಧತಿ ನಗರದಲ್ಲಿ ನೆಲೆಯೂರಿದೆ. ಈ ಒಂದು ಸಮಸ್ಯೆಯಿಂದಲೂ ದಾವಣಗೆರೆ ದೂರವಾಗಿಲ್ಲವೆಂದೇ ಹೇಳಬಹುದು.

ವಿಶ್ವವಿದ್ಯಾಲಯ ಸ್ಥಾಪನೆಯ ಬೇಡಿಕೆ

ಈ ಒಂದು ಬೇಡಿಕೆಯೂ ಜಿಲ್ಲೆಯ ವಿದ್ಯಾವಂತ ಅಭಿಲಾಷಿಗರ ಬೇಡಿಕೆಯಾಗಿದೆ. ಕಳೆದ ವರ್ಷದಲ್ಲಿ ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಪ್ರತ್ಯೇಕ ವಿಶ್ವವಿದ್ಯಾಲಯಗಳ ಸ್ಥಾಪನೆಯಾಗಬೇಕು ಎಂದು ವಿದ್ಯಾರ್ಥಿ ಸಂಘಟನೆಗಳು ಜಿಲ್ಲೆಯಾದ್ಯಂತ ಹೋರಾಟ ನಡೆಸಿದವು. ಆದರೆ ಫಲಕಾರಿಯಾಗಲಿಲ್ಲ. ಇಂದಿಗೂ ಈ ವಿದ್ಯಾವಂತ ಅಭಿಮಾನಿಗಳ ಮನದಾಳದಲ್ಲಿ ಈ ಆಶೆಯು ಅಂಕುರಗೊಂಡಿದೆ.

ಇತರೆ

ಇತಿಹಾಸಕಾರರು ಚರಿತ್ರೆ ರಚನೆಯ ಸಂದರ್ಭದಲ್ಲಿ ರಾಜ ರಾಣಿಯರ ಕ್ರಮ ಮೇಲ್ವರ್ಗದವರ, ಶ್ರೀಮಂತರ ಕುರಿತಂತೆ ಹೆಚ್ಚಿನ ಗಮನ ಹರಿಸಿ ಚರಿತ್ರೆ ರಚಿಸಿರುವುದನ್ನು ಕಾಣುತ್ತೇವೆ. ಆದರೆ ಅದು ಕೇವಲ ಉಳ್ಳವರ ಚರಿತ್ರೆಯನ್ನೇ ರಚಿಸಿದಂತೆ ಆಗಿದೆ. ಮುಖ್ಯವಾಗಿ ಸಮಾಜದಲ್ಲಿ ಮೇಲ್ವರ್ಗದವರು ಶ್ರೀಮಂತವರ್ಗದವರು ಮಾತ್ರ ಇರುವುದಿಲ್ಲ. ತಳ ಸಮುದಾಯ, ಮಹಿಳೆಯರು, ಬುಡಕಟ್ಟು ಸಮುದಾಯಗಳು, ಕಾರ್ಮಿಕರು, ಜನರ ಆಚಾರ ವಿಚಾರಗಳು ಒಟ್ಟಾರೆಯಾಗಿ ಸಮಾಜದಲ್ಲಿ ಕಾಣಬರುವ ಪ್ರತಿಯೊಂದು ಸಂಗತಿಗಳು ಪ್ರಮುಖವಾಗಿವೆ. ಆದರೆ ಚರಿತ್ರೆ ರಚನಾಕಾರರು ಇವುಗಳನ್ನು ಚರಿತ್ರೆ ರಚನೆಯಲ್ಲಿ ಅಲಕ್ಷಿಸಿ ಚರಿತ್ರೆ ರಚಿಸಿರುವುದು ಸಮಾಜದ ವಾಸ್ತವತೆಯನ್ನು ಮರೆಮಾಚಿರುವುದರಿಂದ ಇತಿಹಾಸಕ್ಕೆ ತುಂಬಲಾರದ ನಷ್ಟವಾಗಿದೆ ಎನ್ನಬಹುದು. ಜೊತೆಗೆ ದಾವಣಗೆರೆ ಪ್ರದೇಶದಲ್ಲಿ ಪರಿಸರ, ಜಲ, ಭಾಷೆ, ಗಡಿ, ವನ್ಯಜೀವಿ, ಹೋರಾಟ, ಚಳವಳಿಗಳು ನಡೆದಿರುವುದು ಕಾಣಬರುತ್ತದೆ. ಈ ಎಲ್ಲಾ ಅಂಶಗಳು ಚರಿತ್ರೆಯಲ್ಲಿ ಅಲಕ್ಷಿಸಲ್ಪಟ್ಟಿವೆ. ಇಂಥ ಅಲಕ್ಷಿತ ಚರಿತ್ರೆಯನ್ನು ಕೈಗೆತ್ತಿಕೊಂಡು ಚರಿತ್ರೆಯಲ್ಲಿ ಮರೆಯಾದ ಘಟನೆಗಳ ವಿವರವನ್ನು ಚರಿತ್ರೆಯ ಪುಟಗಳಲ್ಲಿ ಸೇರಿಸುವ ಕಾರ್ಯವನ್ನು ಇಂದು ಸಬಾಲ್ಟ್ರನ್ ಮತ್ತು ಮಾರ್ಕ್ಸಿಸ್ಟ್ ಚರಿತ್ರಕಾರರು ಪ್ರಯತ್ನಿಸುತ್ತಿರುವುದನ್ನು ಕಾಣುತ್ತೇವೆ.

ಒಟ್ಟಾರೆಯಾಗಿ ದಾವಣಗೆರೆ ಜಿಲ್ಲೆ ದಾವಣಗೆರೆಯ ಹತ್ತಿಗಿರಣಿ ಕಾರ್ಖಾನೆಗಳ ಮೂಲಕ ಜಗತ್ತಿನಲ್ಲಿ ಖ್ಯಾತಿ ಪಡೆದ ನಗರವಾಗಿತ್ತು. ಸಕ್ಕರೆ ಕಾರ್ಖಾನೆಗಳು, ಎಣ್ಣೆ ಮಿಲ್‌ಗಳು, ಅಕ್ಕಿ ಮಿಲ್‌ಗಳು, ಮಂಡಕ್ಕಿ ಭಟ್ಟಿಗಳು

ಹಾಗೂ ಕಡ್ಲೆ ಭಟ್ಟಿಗಳು ಸ್ಥಾಪನೆಗೊಂಡು ಆರ್ಥಿಕ ಕ್ಷೇತ್ರದಲ್ಲಿಯೇ ಪ್ರಗತಿಯನ್ನು ಸಾಧಿಸಿದ ಕ್ಷೇತ್ರವಾಗಿದೆ. ಒಂದು ಕಾಲದಲ್ಲಿ 'ಮ್ಯಾಂಚೆಸ್ಟರ್' ನಗರವೆಂದು ಖ್ಯಾತಿ ಪಡೆದ ಜಿಲ್ಲೆ ಇಂದು ಜ್ವಲಂತ ಸಮಸ್ಯೆಗಳಿಗೆ ಆಗರವಾಗಿದೆ. ಇದಕ್ಕೂ ಪೂರ್ವದಲ್ಲಿ ಜಿಲ್ಲೆಯ ಚರಿತ್ರೆ ಕುರಿತ ಅಧ್ಯಯನಗಳ ಸಾಧ್ಯತೆಗಳಿವೆ. ಸಮಸ್ಯೆಗಳಿಂದ ಜಲಸಮಸ್ಯೆ, ಹತ್ತಿಗಿರಣಿಗಳ ಉಗಮ ಮತ್ತು ಅವನತಿ, ಹರಿಹರದ ಕಿರ್ಲೋಸ್ಕರ್ ಕಾರ್ಖಾನೆಯ ಅವನತಿ, ಪರಿಸರ ಚಳವಳಿ, ಬಾಲಕಾರ್ಮಿಕರ ಸಮಸ್ಯೆ, ವಿಶ್ವವಿದ್ಯಾಲಯದ ಸ್ಥಾಪನೆ ಇನ್ನಿತರ ಸಮಸ್ಯೆಗಳು ಪ್ರಚಲಿತವಾಗಿ ಕಾಡುತ್ತಿವೆ.

ಅಡಿ ಟಿಪ್ಪಣಿ

೧. ಗಿರಿಜ ಟಿ. **ದಾವಣಗೆರೆ ಇದು ನಮ್ಮ ಜಿಲ್ಲೆ**, ನಿಹಾರಿಕಾ ಪ್ರಕಾಶನ, ದಾವಣಗೆರೆ, ೨೦೦೧, ಪು. ೨-೩

೨. **ಅದೇ**, ಪು. ೨೬

೩. ಗಿರಿಜ ಟಿ. ಮತ್ತು ಶೋಭಾ ಎಚ್. ಜಿ., **ಕರ್ಪೂರ ಸ್ಮರಣ ಸಂಚಿಕೆ**, ರಾಜ್ಯಮಟ್ಟದ ೩ನೇ ಮಹಿಳಾ ಸಮಾವೇಶ, ದಾವಣಗೆರೆ, ೨೦೦೨, ಪು. ೩೫

೪. ತಿಪ್ಪೇಸ್ವಾಮಿ ಹೆಚ್., **ದಾವಣಗೆರೆ ಜಿಲ್ಲೆಯ ದೇವಾಲಯಗಳು**, ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಅಪ್ರಕಟಿತ, ಮಹಾಪ್ರಬಂಧ, ಹಂಪಿ, ೨೦೦೦, ಪು.೮

೫. ಕೊಟ್ರೇಶ್ ಉತ್ತಂಗಿ, **ಹೊನ್ನೆಲೆಗಳು**, ಸಹನಾದ್ರಿ ಪ್ರಕಾಶನ, ಹೊನ್ನಾಳಿ, ೨೦೦೪, ಪು.೫೯೧

೬. ಡಾ. ವಿರೂಪಾಕ್ಷಿ ಪೂಜಾರಹಳ್ಳಿ, **ಜಲಸಂಬಂಧಿ ಚಳವಳಿಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯, ಪು.೨೦

೭. **ಅದೇ** ಪು.೨೪

೮. **ಅದೇ** ಪು. ೨೯

೯. ತಂಬಂಡ ವಿಜಯ್ ಪೂಣಚ್ಚ, **ಚರಿತ್ರೆ ವಿಶ್ವಕೋಶ ೪**, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧, ಪು.೮೯೬

೧೦. ಅನಂತರಾಮು ರಾವ್ ಕೆ. **ಸುವರ್ಣ ಕರ್ನಾಟಕ ದರ್ಶನ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೬, ಪು.೮೬೩

೧೧. ಕುಮಾರ್ ಬಿ.ಪಿ., **ದಾವಣಗೆರೆ ಹತ್ತಿಗಿರಣಿ ಕಾರ್ಮಿಕರ ಚಳವಳಿಗಳು**, ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ.ಪದವಿಗಾಗಿ ಸಲ್ಲಿಸಿದ ಅಪ್ರಕಟಿತ ಮಹಾಪ್ರಬಂಧ, ಹಂಪಿ, ೨೦೦೬, ಪು.೩-೫

೧೩ **ಅದೇ**, ಪು.೯೫

೧೪. **ಅದೇ** ಪು.೯೬, ೯೭

೧೫. **ಅದೇ** ಪು. ೧೦೦, ೧೦೦೧

೧೬. ಬೆಳ್ಳೇಕೆರೆ ಹನುಮಂತಪ್ಪ, **ಹರಿಹರ ತಾಲ್ಲೂಕು ದರ್ಶನ**, ಕಮಲ ಪ್ರಕಾಶನ, ಶಿವಮೊಗ್ಗ, ೨೦೦೪, ಪು.೬೪, ೬೫

೧೭. ನೋಡಿ **ನಗರವಾಣಿ ದಿನಪತ್ರಿಕೆ**, ದಾವಣಗೆರೆ, ೨೨-೧೦-೨೦೦೨, ಪು.೧

೧೮. ಬೆಳ್ಳೇಕೆರೆ ಹನುಮಂತಪ್ಪ, **ಪೂರ್ವೋಕ್ತ**, ಪು.೬೦೭

೧೯. ತಂಬಂಡ ವಿಜಯಪೂಣಚ್ಚ,**ಪೂರ್ವೋಕ್ತ**, ೨೦೦೧, ಪು. ೧೦೩

೨೦. ಗಿರಿಜ, **ಪೂರ್ವೋಕ್ತ**, ಪು.೧೦೩

೨೧. ನೋಡಿ **ಸಂಯುಕ್ತ ಕರ್ನಾಟಕ ದಿನಪತ್ರಿಕೆ**, ದಾವಣಗೆರೆ, ೧೮-೫-೨೦೦೭, ಪು.೩

ಅಧ್ಯಾಯ ಆರು

ಸಮಾರೋಪ

ದಾವಣಗೆರೆ ಜಿಲ್ಲೆ ಇತಿಹಾಸ ಪೂರ್ವಕಾಲದಿಂದಲೂ ಗುರುತಿಸಿಕೊಳ್ಳುತ್ತಾ ಬಂದಿದೆ. ಇಂಥ ಜಿಲ್ಲೆಯನ್ನು ಅನುಲಕ್ಷಿಸಿ ಅನೇಕ ಕೃತಿಗಳು ಪ್ರಸ್ತುತ ಸಂದರ್ಭದವರೆಗೂ ರಚನೆಯಾಗಿರುವುದು ಕಂಡುಬರುತ್ತದೆ. ಈ ಕೃತಿಗಳನ್ನು ಚರಿತ್ರೆ ರಚನಾಶಾಸ್ತ್ರದ ಹಿನ್ನೆಲೆಯಲ್ಲಿ ನೋಡುವ ಉದ್ದೇಶದಿಂದ ಈ ಅಧ್ಯಯನವನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಕೃತಿಗಳು ದಾವಣಗೆರೆ ಜಿಲ್ಲೆಯ ಚರಿತ್ರೆ ರಚನೆಗೆ ಹೇಗೆ ಪೂರಕವಾಗಿವೆ ಎಂಬುದುರ ಕುರಿತು ಪ್ರಸ್ತುತ ಅಧ್ಯಯನದಲ್ಲಿ ಚರ್ಚಿಸುವ ಒಂದು ಕಿರು ಪ್ರಯತ್ನವನ್ನು ಮಾಡಲಾಗಿದೆ. ದಾವಣಗೆರೆ ಪ್ರದೇಶದ ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆಯನ್ನು ಕುರಿತು ಸಂಕ್ಷಿಪ್ತವಾಗಿ ಇಲ್ಲಿ ತಿಳಿಸಲಾಗಿದೆ. ಈ ಜಿಲ್ಲೆಯು ಅನೇಕ ಬೆಟ್ಟ-ಗುಡ್ಡ, ನದಿ, ಹಳ್ಳ, ಕೊಳ್ಳ, ಕೆರೆ-ಕಟ್ಟೆ, ಅರಣ್ಯಪ್ರದೇಶಗಳಿಂದ ಕೂಡಿದೆ. ಅಲ್ಲದೆ, ಇಲ್ಲಿಯ ಶಿಲಾಸಂಪತ್ತು ಸಹ ಪ್ರಮುಖವಾಗಿರುವುದು ಗಮನಾರ್ಹ ಸಂಗತಿ. ಗ್ರಾನೈಟ್, ಕಾಂಗ್ಲಾಮರೇಟ್, ಬೆಣಚು ಕಲ್ಲು, ಸುಣ್ಣದಕಲ್ಲು, ಸೋಪ್‌ಸ್ಟೋನ್ ಮುಂತಾದ ಶಿಲಾಪದರುಗಳಿವೆ. ಜೊತೆಗೆ ತಾಮ್ರ, ಕಬ್ಬಿಣ, ಚಿನ್ನ, ಮ್ಯಾಂಗನೀಸ್, ಟೈಟಾನಿಯಂ ಮುಂತಾದ ಖನಿಜ ಸಂಪತ್ತುಗಳಿಂದ ಕೂಡಿದ ಪ್ರದೇಶವಾಗಿದೆಯೆಂದು ಈ ಅಧ್ಯಯನದಲ್ಲಿ ತಿಳಿದುಬರುತ್ತದೆ. ಹಾಗೆಯೇ ದಾವಣಗೆರೆ ಜಿಲ್ಲೆಯು ಚಾರಿತ್ರಿಕವಾಗಿ ತನ್ನದೇ ಆದ ಮಹತ್ವ ಪಡೆದಿರುವುದನ್ನು ಕಾಣಲಾಗಿದೆ. ಇದು ಆದಿಮಾನವನ ಆವಾಸ ಸ್ಥಾನವಾಗಿಯೂ ಹಾಗೂ ಮೌರ್ಯ, ಶಾತವಾಹನ, ಕದಂಬ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣಿ ಚಾಲುಕ್ಯ, ಪಾಂಡ್ಯ, ನೊಳಂಬ, ಸೇವುಣ, ಹೊಯ್ಸಳ, ವಿಜಯನಗರದ ಅರಸರು, ಜೊತೆಗೆ ಚಿತ್ರದುರ್ಗ, ಹರಪನಹಳ್ಳಿ, ಬಸವಾಪಟ್ಟಣ, ಸಂತೇಬೆನ್ನೂರು ಮತ್ತು ತರೀಕೆರೆ ಮುಂತಾದ ಪಾಳೆಯಗಾರರ ಆಳ್ವಿಕೆಗ ಒಳಪಟ್ಟ ಜಿಲ್ಲೆಯಾಗಿತ್ತು. ಹೀಗೆ ಹೈದರ್, ಟಿಪ್ಪು ಮತ್ತು ಆಂಗ್ಲರ ಹಾಗೂ ಮೈಸೂರಿನ ಒಡೆಯರ ಆಳ್ವಿಕೆ ನಡೆಸಿರುವುದನ್ನು ತಿಳಿಯಲಾಗಿದೆ.. ೧೯೪೭ ರಲ್ಲಿ ಭಾರತ ಸ್ವಾತಂತ್ರ್ಯ ಪಡೆದ ನಂತರ ದಾವಣಗೆರೆ ಜಿಲ್ಲೆಯು ಆಧುನಿಕ ಮೈಸೂರು ರಾಜ್ಯದ ಆಳ್ವಿಕೆಗೆ ಒಪಟ್ಟಿತ್ತು ಎನ್ನುವುದನ್ನು ಈ ಅಧ್ಯಯನ ಪ್ರಸ್ತುತ ಪಡಿಸುತ್ತದೆ. ನಂತರ ದಾವಣಗೆರೆ ಪ್ರದೇಶ ಕರ್ನಾಟಕ ರಾಜ್ಯದ ವ್ಯಾಪ್ತಿಯಲ್ಲಿ ಮುಂದುವರಿಯುತ್ತಿರುವ ವಿಷಯವನ್ನು ಸಂಕ್ಷಿಪ್ತವಾಗಿ ಪರಿಚಯಿಸಿ ಕೊಡಲಾಗಿದೆ. ಇದರಿಂದ ದಾವಣಗೆರೆ ಪ್ರದೇಶ ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೂ ಚಾರಿತ್ರಿಕವಾಗಿ ತನ್ನದೇ ಆದ ವೈಶಿಷ್ಟ್ಯತೆ ಪಡೆದಿರುವುದನ್ನು ಗುರುತಿಸಲಾಗಿದೆ.

ಈ ಜಿಲ್ಲೆಯ ಚರಿತ್ರೆ ಮತ್ತು ಚರಿತ್ರೆಯೇತರ ಕೃತಿಗಳ ಅವಲೋಕನ ಮಾಡಲಾಗಿದೆ. ಇದರಿಂದ ದಾವಣಗೆರೆ ಪ್ರದೇಶದ ಚರಿತ್ರೆಗೆ ಸಂಬಂಧಿಸಿದಂತೆ ಜಿಲ್ಲಾ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಕರ್ನಾಟಕ ಚರಿತ್ರೆ ಸಂಪುಟಗಳು ಹಾಗೂ ಜಿಲ್ಲೆಯನ್ನು ಅನುಲಕ್ಷಿಸಿ ರಚನೆಗೊಂಡಿರುವ ಚರಿತ್ರೆ ಕೃತಿಗಳು, ಅಪ್ರಕಟಿತ ಎಂ.ಫಿಲ್. ಮತ್ತು ಪಿಎಚ್.ಡಿ. ಸಂಶೋಧನಾ ಪ್ರಬಂಧಗಳು, ಜನಾಂಗೀಯ ಅಧ್ಯಯನ ಕೃತಿಗಳು, ಮಾಸಪತ್ರಿಕೆ, ಸ್ಮರಣ ಸಂಚಿಕೆ, ಇತಿಹಾಸ ದರ್ಶನದ ಸಂಪುಟಗಳಲ್ಲಿನ ಲೇಖನಗಳು, ಹಾಗೆಯೇ ಸಾಹಿತ್ಯ ಕೃತಿಗಳು ಮತ್ತು ಚರಿತ್ರೆಯೇತರ ಕ್ಷೇತ್ರಗಳಾದ ಕೈಗಾರಿಕೆ, ಕಾರ್ಮಿಕ, ರಾಜಕೀಯ, ಆರ್ಥಿಕ, ಶೈಕ್ಷಣಿಕ ವಿಷಯಗಳ ಕುರಿತಂತೆ ನಡೆದ ಅಧ್ಯಯನ ಕೃತಿಗಳ ಅವಲೋಕನವನ್ನು ಮಾಡಲಾಗಿದೆ. ಇದರಿಂದ ದಾವಣಗೆರೆ ಜಿಲ್ಲೆಯನ್ನು ಅನುಲಕ್ಷಿಸಿ ನಡೆಸಿದ ಅಧ್ಯಯನ ಕೃತಿಗಳು ಎಷ್ಟು ಪ್ರಮಾಣದಲ್ಲಿ ರಚನೆಯಾಗಿವೆ? ಎಂಬುದನ್ನು ಈ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ. ಹಾಗೂ ರಚಿತಗೊಂಡಿರುವ ಕೃತಿಗಳ ಮಹತ್ವವೇನು ಎಂಬುದರ ಜೊತೆಗೆ ಇವುಗಳನ್ನು ಕಾಲಾನುಕ್ರಮವಾಗಿ ಈ ಅಧ್ಯಯನದಲ್ಲಿ ವಿವರಿಸಲಾಗಿದೆ.

ಚರಿತ್ರೆ ರಚನಾಶಾಸ್ತ್ರದ ಹಿನ್ನೆಲೆಯಲ್ಲಿ ದಾವಣಗೆರೆ ಜಿಲ್ಲೆಯ ಕುರಿತ ಅಧ್ಯಯನಗಳು ಎಂಬ ಈ ಚರಿತ್ರೆ ಸಂಶೋಧನೆ ಹೊಸ ವಿಧಾನಗಳಿಂದ ಕೂಡಿದೆ. ಈ ಅಧ್ಯಯನದಿಂದ ದಾವಣಗೆರೆ ಪ್ರದೇಶದ ಚರಿತ್ರೆ ರಚನೆ

ಹೇಗೆ ಆಗಿದೆ ಎಂಬುದನ್ನು ತಿಳಿಸಿಕೊಡುತ್ತದೆ. ಇಲ್ಲಿ ಪ್ರಾಚೀನ ಕಾಲ, ಮಧ್ಯಕಾಲ ಮತ್ತು ಆಧುನಿಕ ಕಾಲದ ಚರಿತ್ರೆಗೆ ಸಂಬಂಧಿಸಿದಂತೆ ಅನೇಕ ಇತಿಹಾಸಕಾರರು ಹಾಗೂ ಸಂಶೋಧಕರು ಅಧ್ಯಯನ ನಡೆಸಿರುವುದನ್ನು ಪರಿಚಯಿಸುತ್ತದೆ. ಅಲ್ಲದೆ ಈ ಅಧ್ಯಯನಕಾರರ ಅಧ್ಯಯನ ಕೃತಿಗಳನ್ನು ವಿಶ್ಲೇಷಣೆಗೆ ಒಳಪಡಿಸಿ ಸತ್ಯಾಸತ್ಯತೆ ಏನು ಎಂಬುದನ್ನು ಚರ್ಚೆಯ ಮೂಲಕ ತಿಳಿಸಲಾಗಿದೆ. ಹಾಗೆಯೇ ಸೂಕ್ಷ್ಮವಾಗಿ ಗ್ರಹಿಸಿ ನೋಡಿದರೆ ಇತಿಹಾಸಕಾರ ಚರಿತ್ರೆ ರಚನೆಯಲ್ಲಿ ಯಾವ ಚರಿತ್ರೆ ಮಾದರಿಯನ್ನು ಅಳವಡಿಸಿಕೊಂಡು ಅಧ್ಯಯನ ನಡೆಸಿರುವನು ಎಂಬುದನ್ನು ಈ ನಿಬಂಧದಲ್ಲಿ ತಿಳಿಸಲು ಪ್ರಯತ್ನಿಸಲಾಗಿದೆ. ಚರಿತ್ರೆಕಾರ ಕೇವಲ ಉಳ್ಳವರ ಅಥವಾ ಮೇಲ್ವರ್ಗದವರ ಚರಿತ್ರೆಯನ್ನು ರಚನೆ ಮಾಡಿರುವುದನ್ನು ಪರಿಚಯಿಸುತ್ತದೆ. ಜೊತೆಗೆ ಚರಿತ್ರೆ ರಚನೆ ಮಾದರಿಯಲ್ಲಿ ಸಾಂಪ್ರದಾಯಿಕ ಮಾದರಿಯನ್ನು ಅನುಸರಿಸಿರುವುದನ್ನು ಎತ್ತಿ ಹಿಡಿಯುವ ಪ್ರಯತ್ನ ನಡೆದಿದೆ. ಇಂಥ ಅನೇಕ ಅಲಕ್ಷಿತ ಸಂಗತಿಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. ಚರಿತ್ರೆ ರಚನೆಯಲ್ಲಿ ಕಡೆಗಣಿಸಲ್ಪಟ್ಟ, ಅಲಕ್ಷಿಸಲ್ಪಟ್ಟ ವಿಷಯಗಳನ್ನು ಗಮನದಲ್ಲಿರಿಸಿಕೊಂಡು ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

'ದಾವಣಗೆರೆ ಜಿಲ್ಲೆಯ ಸಮಕಾಲೀನ ಚರಿತ್ರೆ ಅಧ್ಯಯನ: ಸಾಧ್ಯತೆ ಮತ್ತು ಸವಾಲುಗಳು' ಎಂಬ ಅಧ್ಯಾಯವು ಸಹ ಪ್ರಮುಖವಾಗಿದೆ. ಈ ಅಧ್ಯಯನದಿಂದ ದಾವಣಗೆರೆ ಪ್ರದೇಶವನ್ನು ಅನುಲಕ್ಷಿಸಿ ಚರಿತ್ರೆ ಮತ್ತು ಚರಿತ್ರೆಯೇತರ ಕ್ಷೇತ್ರಗಳ ಕುರಿತು ಇನ್ನೂ ಯಾವ ಯಾವ ವಿಷಯಗಳ ಅಧ್ಯಯನಗಳಾಗುವ ಸಾಧ್ಯತೆ ಇದೆ ಎಂಬುದನ್ನು ತಿಳಿಸಿಕೊಡುತ್ತದೆ. ನಂತರ ದಾವಣಗೆರೆ ಜಿಲ್ಲೆ ಹೇಗೆ ರಚನೆಯಾಯಿತು, ಅದರ ಹಿನ್ನೆಲೆ ಏನು ಎಂಬುದನ್ನೂ ತಿಳಿಸಿಕೊಡುತ್ತದೆ. ಪ್ರಮುಖವಾಗಿ ಈ ಅಧ್ಯಯನ ಕೃತಿಗಳು ಯಾವ ವಿಷಯಗಳನ್ನೂ ಪ್ರಸ್ತಾಪ ಮಾಡಿಲ್ಲ ಎಂಬುದನ್ನು ತಿಳಿಸುತ್ತದೆ. ಮತ್ತು ಅಲಕ್ಷಿತ ಚರಿತ್ರೆಗೆ ಸಂಬಂಧಿಸಿದಂತೆ ತಳ ಸಮುದಾಯದ ಚರಿತ್ರೆ ಮಹಿಳೆ, ಮೌಖಿಕ ಚರಿತ್ರೆ ಕುರಿತಂತೆ ವಿಶ್ಲೇಷಿಸಲಾಗಿದೆ. ನಂತರ ದಾವಣಗೆರೆ ಜಿಲ್ಲೆಯ ಚರಿತ್ರೆ ಸಮಸ್ಯೆ ಮತ್ತು ಸವಾಲುಗಳೇನು ಎಂಬುದರ ಬಗ್ಗೆ ಅವಲೋಕಿಸಿದಾಗ ಮೇಲು ನೋಟಕ್ಕೆ ಜಲ ಸಮಸ್ಯೆ, ಕಾರ್ಖಾನೆಗಳ ಅವನತಿ, ಕಾರ್ಮಿಕರ ಸ್ಥಿತಿ-ಗತಿ, ಪರಿಸರ ಚಳವಳಿ, ಬಾಲ ಕಾರ್ಮಿಕರ ಮುಂತಾದ ಸಮಸ್ಯೆಗಳಿಂದ ಆವೃತಗೊಂಡಿರುವುದರ ಬಗ್ಗೆ ಚರ್ಚಿಸಲಾಗಿದೆ. ಇಂಥ ಜ್ವಲಂತ ಸಮಸ್ಯೆಗಳಿಂದ ದಾವಣಗೆರೆ ಜಿಲ್ಲೆಯು ಎದುರಿಸುತ್ತಿರುವುದನ್ನು ಪ್ರಸ್ತುತ ಅಧ್ಯಯನದಲ್ಲಿ ತಿಳಿಸಲಾಗಿದೆ. ಇನ್ನೂ ಮರೆಯಾದ ಅನೇಕ ಸಂಗತಿಗಳಿವೆ. ಮುಂದಿನ ಸಂಶೋಧಕರು ಈ ಬಗ್ಗೆ ಅಧ್ಯಯನ ಮಾಡಲು ಅನುಕೂಲವಾಗಿದೆ.

ಒಟ್ಟಾರೆಯಾಗಿ ಈ ಪ್ರಸ್ತುತ ಅಧ್ಯಯನದಲ್ಲಿ ಚರಿತ್ರೆ ರಚನಾಶಾಸ್ತ್ರದ ಹಿನ್ನೆಲೆಯಲ್ಲಿ ದಾವಣಗೆರೆ ಜಿಲ್ಲೆಯನ್ನು ಕುರಿತು ಇದುವರೆಗೆ ಬಂದಂಥ ಕೃತಿಗಳನ್ನು ಸಮೀಕ್ಷೆ ಮಾಡಿ ಹಾಗೂ ವಿಶ್ಲೇಷಣೆಗೆ ಒಳಪಡಿಸಿ ಅಧ್ಯಯನ ಮಾಡಲಾಗಿದೆ. ಹಾಗೂ ಈ ಅಧ್ಯಯನವು ಚರಿತ್ರೆ ರಚನಾಶಾಸ್ತ್ರದ ಹಿನ್ನೆಲೆಯನ್ನಿಟ್ಟುಕೊಂಡು ಅಧ್ಯಯನ ಮಾಡಿರುವುದರಿಂದ ದಾವಣಗೆರೆ ಜಿಲ್ಲೆಯ ಇತಿಹಾಸ ಕ್ಷೇತ್ರಕ್ಕೊಂದು ಕೈಗನ್ನಡಿಯಾಗಿದೆ.

ಅನುಬಂಧ ಒಂದು

ಪರಾಮರ್ಶನ ಗ್ರಂಥಗಳು

ಪರಾಮರ್ಶನ ಗ್ರಂಥಗಳು

೧. ಅಂಜಿನಪ್ಪ ಬಿ. ಎಚ್. : **ಹತ್ತಿ ಹಿಂಜುವ ಕಾರ್ಖಾನೆಗಳಲ್ಲಿ ಮಹಿಳಾ ಕಾರ್ಮಿಕರ ಸಾಮಾಜಿಕ, ಆರ್ಥಿಕ ಸ್ಥಿತಿ-ಗತಿಗಳು: ದಾವಣಗೆರೆ ನಗರದ ಒಂದು ಅಧ್ಯಯನ,** ಕುವೆಂಪು ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಎಂ. ಫಿಲ್. ಪ್ರಬಂಧ, ೧೯೯೮

೨. ಅಂಜಿನಪ್ಪ ಬಿ. ಎಚ್. : **ಕರ್ನಾಟಕದಲ್ಲಿ ಹತ್ತಿ ಹಿಂಜುವ ಜಿನ್ನಿಂಗ್ ಕಾರ್ಖಾನೆಗಳಲ್ಲಿರುವ ಮಹಿಳಾ ಕಾರ್ಮಿಕರ ಸಾಮಾಜಿಕ, ಆರ್ಥಿಕ ಸ್ಥಿತಿ-ಗತಿಗಳು: ಸಮಾಜಶಾಸ್ತ್ರೀಯ ಅಧ್ಯಯನ,** ಕುವೆಂಪು ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪಿಎಚ್.ಡಿ. ಮಹಾಪ್ರಬಂಧ, ೨೦೦೨

೩. ಅನಂತರಾಮ್‌ರಾವ್ ಕೆ.: **ಸುವರ್ಣ ಕರ್ನಾಟಕ ದರ್ಶನ,** ಸಂ., ಕ.ಸಾ.ಪ., ಬೆಂಗಳೂರು, ೨೦೦೬

೪. ಅಭಿಶಂಕರ್ ಕೆ.: (ಸಂ.), **ಕರ್ನಾಟಕ ಗ್ಯಾಸೆಟಿಯರ್,** ೧೯೭೫

೫. ಇಕ್ಬಾಲ್ ಅಹ್ಮದ್: **ಚನ್ನಗಿರಿ ದರ್ಶನ,** ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೧೯೮೦,

೬. ಈಶ್ವರಪ್ಪ ಎಂ. ಜಿ.: **ಮ್ಯಾಸಬೇಡರು,** ಐ.ಬಿ.ಹೆಚ್. ಪ್ರಕಾಶನ, ೧೯೮೧

೭. ಈಶ್ವರಪ್ಪ ಎಂ. ಜಿ.: (ಸಂ.), **ಶತಮಾನದ ದಾವಣಗೆರೆ,** ೨೦೦೧

೮. ಈಶ್ವರಪ್ಪ ಎಂ. ಜಿ. : **ಅಮೃತ ಪುರುಷ,** ಸ್ವಾಗತ ಸಮಿತಿ, ಶಾಮನೂರು ಶಿವಶಂಕರಪ್ಪ ನಗರ, ಬಾಪೂಜಿ ವಿದ್ಯಾಸಂಸ್ಥೆ, ದಾವಣಗೆರೆ, ೨೦೦೫

೯. ಕಕ್ಕಿಲ್ಲಾಯ ಟಿ.ವಿ.: **ಬರೆಯದ ದಿನಚರಿಯ ಮರೆಯದ ಪುಟಗಳು,** ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೩

೧೦. ಕಮಲದಾನಿ ಗುರುರಾಯರು: **ಹರಿಹರಕ್ಷೇತ್ರದ ಮಹಾತ್ಮ್ಯೆ,** ಶ್ರೀಕಾಂತ ಕುಲಕರ್ಣಿ, ಹರಿಹರ, ೧೯೯೬

೧೧. ಕುಮಾರ್ ಬಿ. ಪಿ.: **ದಾವಣಗೆರೆ ಹತ್ತಿಗಿರಣಿ ಕಾರ್ಮಿಕರ ಚಳವಳಿ,** ಹಂಪಿ, ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಪಿಎಚ್.ಡಿ. ಮಹಾಪ್ರಬಂಧ, ೨೦೦೬

೧೨. ಕುಂಭಾಸ.: **ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ,** ಶ್ರೀ ಮಾಲತೇಶ ಪ್ರಕಾಶನ, ಹರಪನಹಳ್ಳಿ, ೧೯೯೦

೧೩. ಕೃಷ್ಣಮೂರ್ತಿ ಹನೂರು: **ಮ್ಯಾಸಬೇಡರ ಸಂಸ್ಕೃತಿ,** ಸಂವಹನ ಪ್ರಕಾಶನ, ಮೈಸೂರು, ೧೯೯೩

೧೪. ಕೊಟ್ರೇಶ್ ಉತ್ತಂಗಿ: **ಹೊನ್ನೆಲೆಗಳು,** ಸಹನಾದ್ರಿ ಪ್ರಕಾಶನ, ಹೊನ್ನಾಳಿ, ೨೦೦೪

೧೫. ಕೊಟ್ರೇಶ್ ಉತ್ತಂಗಿ: **ಹೊನ್ನಮಣಿಗಳು,** ಸಹನಾದ್ರಿ ಪ್ರಕಾಶನ, ಹೊನ್ನಾಳಿ, ೨೦೦೫

೧೬. ಗಡಕಟ್ಟಿ ಧನಂಜಯಪ್ಪ, ಕೊಟ್ರೇಶ್ ಉತ್ತಂಗಿ: (ಸಂ.), **ಚಿಲುಮೆ,** ಸ್ಮರಣ ಸಂಚಿಕೆ, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು, ಹೊನ್ನಾಳಿ, ೧೯೯೯

೧೭. ಗಿರಿಜ ಟಿ.: **ದಾವಣಗೆರೆ ದರ್ಶಿನಿ,** ರೇಖಾ ಪ್ರಕಾಶನ, ದಾವಣಗೆರೆ, ೧೯೮೫

೧೮. ಗಿರಿಜ ಟಿ.: **ಚಿತ್ರದುರ್ಗ ಜಿಲ್ಲಾದರ್ಶಿನಿ,** ರೇಖಾ ಪ್ರಕಾಶನ, ದಾವಣಗೆರೆ, ೧೯೯೧

೧೯. ಗಿರಿಜ ಟಿ.: **ದಾವಣಗೆರೆ ಇದು ನಮ್ಮ ಜಿಲ್ಲೆ,** ನಿಹಾರಿಕ ಪ್ರಕಾಶನ, ದಾವಣಗೆರೆ, ೨೦೦೧

೨೦. ಗಿರಿಜ ಟಿ., ಶೋಭಾ ಎಚ್. ಜಿ. : **ಕರ್ಪೂರ ಸ್ಮರಣ ಸಂಚಿಕೆ,** ರಾಜ್ಯಮಟ್ಟದ ೩ನೇ ಮಹಿಳಾ ಸಮಾವೇಶ, ದಾವಣಗೆರೆ, ೨೦೦೨

೨೧. ತಂಬಂಡ ವಿಜಯ ಪೂಣಚ್ಚ:(ಸಂ.), **ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ ೪ ಚರಿತ್ರೆ**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೨೨. ತಾರಾನಾಥ ಎನ್. ಎಸ್., **ಶತಮಾನದ ಸಂಶೋಧನೆ**, ಕ.ಸಾ.ಪ., ಬೆಂಗಳೂರು, ೨೦೦೧

೨೩. ತಿಪ್ಪೇರುದ್ರಸ್ವಾಮಿ ಎಚ್.: **ಕರ್ನಾಟಕ ಸಂಸ್ಕೃತಿಯ ಸಮೀಕ್ಷೆ**, ಬಿ.ಕೆ.ಮೂರ್ತಿ ಪ್ರಕಾಶನ, ಮೈಸೂರು, ೧೯೯೧

೨೪. ತಿಪ್ಪೇಸ್ವಾಮಿ ಬಿ.: **ತರಳಬಾಳು ಹುಣ್ಣಿಮೆ**, ಸ್ಮರಣ ಸಂಚಿಕೆ, ತರಳಬಾಳು ಪ್ರಕಾಶನ, ಸಿರಿಗೆರೆ, ೧೯೯೯

೨೫. ತಿಪ್ಪೇಸ್ವಾಮಿ ಎಚ್.: **ದಾವಣಗೆರೆ ಜಿಲ್ಲೆಯ ದೇವಾಲಯಗಳು**, ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪಿಎಚ್.ಡಿ. ಮಹಾಪ್ರಬಂಧ, ೨೦೦೦

೨೬. ದಾದಾಪೀರ್ ಬಿ. ಸಿ.: **ಪಿಂಜಾರರ ಸಂಸ್ಕೃತಿ**, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೧೯೯೩

೨೭. ದೇವ್‌ಪಾಲ್ ವೈ. ಎ. : **ವೇಜ್ ಅಂಡ್ ಸ್ಯಾಲರಿ ಅಡ್ಮಿನಿಸ್ಟ್ರೇಷನ್ ಇನ್ ಟೆಕ್ಸಟೈಲ್ ಮಿಲ್ಸ್**, ಎ **ಕೇಸ್ ಸ್ಟಡಿ ಆಫ್ ಕರ್ನಾಟಕ**, ಮೈಸೂರು ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪಿಎಚ್.ಡಿ. ಮಹಾಪ್ರಬಂಧ, ಮೈಸೂರು, ೧೯೮೮

೨೮. ದುಂಡ್ಯಪ್ಪ ಹಿ. ಗೊ.: **ಕುಂಬಾರನ ಹಾಡುಗಳು**, ಕುಂಭೇಶ್ವರ ಪ್ರಕಾಶನ, ಹರಿಹರ, ೧೯೮೯

೨೯. ದುಂಡ್ಯಪ್ಪ ಹಿ. ಗೊ.: **ಕುಂಭ ಕಲೆ**, ಕುಂಭೇಶ್ವರ ಪ್ರಕಾಶನ, ಹರಿಹರ, ೧೯೯೪

೩೦. ದುಂಡ್ಯಪ್ಪ ಹಿ. ಗೂ. : **೬೬ ಹಳ್ಳಿಯ ಒಡತಿ ಊರಮ್ಮನ ಚರಿತೆ**, ಕುಂಬೇಶ್ವರ ಪ್ರಕಾಶನ, ಹರಿಹರ, ೧೯೯೬

೩೧. ನೀಲಪ್ಪ ಹೆಚ್.: (ಸಂ.), **ವಿಜಯ ಶಿಲ್ಪ**, ವಿಜಯ ಯುವಕರ ಸಂಘ, ಸಂತೇಬೆನ್ನೂರು, ೨೦೦೪

೩೨. ಪಾಟೀಲ ಪುಟ್ಟಪ್ಪ : **ನವಕರ್ನಾಟಕದ ನಿರ್ಮಾಪಕರು ಭಾಗ ಒಂದು**, ವಿಶ್ವಕನ್ನಡ ಸಮ್ಮೇಳನ, ಬೆಂಗಳೂರು, ೨೦೦೫

೩೩. ಫ್ರಾನ್ಸಿಸ್ ಕ್ಸೆವಿಯರ್, **ಹರಿಹರ ಆರೋಗ್ಯ ಮಾತೆಯ ಪುಣ್ಯಕ್ಷೇತ್ರದ ಚರಿತೆ**, ಸಜೀವ ಸಂಕೇಶ ಪ್ರಕಾಶನ, ಹರಿಹರ, ೨೦೦೨

೩೪. ಬಣಕಾರ ಎಂ. ಬಿ.: (ಸಂ.), **ತರಳಬಾಳು**, ಹುಣ್ಣಿಮೆ ಸ್ಮರಣ ಸಂಚಿಕೆ, ಜಗಳೂರು, ೧೯೯೩

೩೫. ಬಣಕಾರ ರಾಜಶೇಖರ: **ಬಾಗಳಿಯ ದೇಗುಲಗಳು**, ದೇಗುಲ ಪ್ರಕಾಶನ, ಬಾಗಳಿ, ೧೯೯೯

೩೬. ಬಳ್ಳೇಕೆರೆ ಹನುಮಂತಪ್ಪ: **ಹರಿಹರ ತಾಲ್ಲೂಕು ದರ್ಶನಿ**, ಕಮಲ ಪ್ರಕಾಶನ, ಶಿವಮೊಗ್ಗ, ೨೦೦೨

೩೭. ಬಾಲ ಬೃಹಸ್ಪತಿ: **ಬೃಹಚ್ಚಲಂ ಮಠದ ಶ್ರೀ ಚೆನ್ನಮಲ್ಲಿಕಾರ್ಜುನ ಸ್ವಾಮಿ ಪುರಾಣ**, ಹೊನ್ನಾಳಿ, ೧೯೮೯

೩೮. ಬೆನಕನಹಳ್ಳಿ ಜಿ. ನಾಯಕ್: **ಚನ್ನಗಿರಿ ತಾಲ್ಲೂಕು ದರ್ಶಿನಿ**, ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು, ೧೯೮೬

೩೯. ಬೆನಕನಹಳ್ಳಿ ಜಿ. ನಾಯಕ್: **ಲಂಬಾಣಿಗರ ಜನಪದ ಗೀತೆಗಳು**, ಕ.ಸಾ.ಪ. ಬೆಂಗಳೂರು, ೧೯೮೭

೪೦. ಭಟ್ ಎಸ್. ಸಿ.: **ದಿ ಎನ್‌ಸೈಕ್ಲೋಪೀಡಿಕ್ ಡಿಸ್ಟ್ರಿಕ್ಟ್ ಗ್ಯಾಸೆಟಿಯರ್ ಆಫ್ ಇಂಡಿಯಾ ಇನ್ ವಾಲ್ಯೂಮ್ ೧೧**, ಗ್ಯಾನ್ ಪಬ್ಲಿಷಿಂಗ್ ಹೌಸ್, ನ್ಯೂದೆಲ್ಲಿ, ೧೯೯೮

೪೧. ಮರುಳಪ್ಪ ಆರ್. ಎಸಂ: (ಸಂ.), **ತರಳಬಾಳು ಹುಣ್ಣಿಮೆ**, ಸ್ಮರಣ ಸಂಚಿಕೆ, ಚನ್ನಗಿರಿ, ೧೯೯೨

೪೨. ಮುಜುಮ್‌ದಾರ್ ಪಿ. ಆರ್, ಭಾರದ್ವಾಜ್ ಆರ್.ಕೆ., ಚೌಧರಿ, ಆರ್.ಸಿ. : **ಇತಿಹಾಸ ಸಂಶೋಧನಾ ಮಾರ್ಗ**, ಚೇತನ ಬುಕ್ ಹೌಸ್, ಮೈಸೂರು, ೧೯೯೬

೪೩. ಮಹಮದ್ ಇಮಾಂ ಜೆ. : **ಮೈಸೂರು ಆಗ ಮತ್ತು ಈಗ**, ಇವರ ಕುಟುಂಬ ಸದಸ್ಯರ ವೈಯಕ್ತಿಕ ಸಂಗ್ರಹದಿಂದ (ಅಪ್ರಕಟಿತ ಹಸ್ತಪ್ರತಿ)

೪೪. ಮಹಾಬಲೇಶ್ವರ ಕಾಟರಹಳ್ಳಿ: **ಬಾಗಿಳಿಯೇ ಬಾಗಳಿಗೆ,** ಕ.ಸಾ.ಅ. ಬೆಂಗಳೂರು, ೧೯೯೩

೪೫. ರವಿಕುಮಾರ್ ಕೆ.: **ನಾಡಶಿಲ್ಪಿ,** ರಾಘವೇಂದ್ರ ಪ್ರಕಾಶನ, ಬೆಂಗಳೂರು, ೧೯೮೦

೪೬. ರವಿಕುಮಾರ್ ಎಸ್. ಬಿ., : **ಗ್ರೌತ್ ಅಂಡ್ ಡೆವಲೆಪ್‌ಮೆಂಟ್ ಆಫ್ ಇಂಡಸ್ಟ್ರಿಸ್ ಇನ್ ಚಿತ್ರದುರ್ಗ ಡಿಸ್ಟ್ರಿಕ್ಟ್,** ಕುವೆಂಪು ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪಿಎಚ್.ಡಿ. ಮಹಾಪ್ರಬಂಧ, ೧೯೯೭

೪೭. ರಾಮದಾಸ ಸದ್ಗುರು : **ಪಾದರೇಣು ಸಚ್ಚಿಶ್ಯರಾದ ಶ್ರೀ ಕೊಂಡಯ್ಯ ಸ್ವಾಮಿ,** ಗುರುಕೃಪ, ಲಿಂಗೈಕ್ಯ ಶ್ರೀ ರಾಮಸ್ವಾಮೀಜಿಯವರು ಶ್ರೀ ಗುರು ರಾಮದಾಸಸ್ವಾಮಿ, ಆಧ್ಯಾತ್ಮ ಮಂದಿರ, ದಾವಣಗೆರೆ, ೧೯೯೮

೪೮. ರಾಜಶೇಖರಪ್ಪ ಬಿ.: **ಇತಿಹಾಸ ಕಥನ,** ಸಿ.ವಿ.ಜಿ. ಪಬ್ಲಿಕೇಶನ್ಸ್, ಬೆಂಗಳೂರು, ೨೦೦೧

೪೯. ರಾಜಶೇಖರಪ್ಪ ಬಿ.: **ನಿರಂತರ,** ಶ್ರೀ ಲೋಕಪಾವನಿ ಪ್ರಕಾಶನ, ಪಾಂಡವಪುರ, ಮಂಡ್ಯ, ೨೦೦೧

೫೦. ರಾಜರಾಮ ಹೆಗಡೆ, ಅಶೋಕ ಶೆಟ್ಟರ್, (ಸಂ.), **ಮಲೆ ಕರ್ನಾಟಕದ ಅರಸು ಮನೆತನಗಳು,** ಪ್ರಸಾರಾಂಗ, ಕ.ವಿ.ವಿ.ಹಂಪಿ, ೨೦೦೧

೫೧. ಲಕ್ಷ್ಮಣ್ ತೆಲಗಾವಿ : **ಹರತಿಸಿರಿ,** ವಾಲ್ಮೀಕಿ ಸಂಪದ, ಹರ್ತಿಕೋಟೆ, ೧೯೮೭

೫೨. ಲಕ್ಷ್ಮಣ್ ತೆಲಗಾವಿ : **ಮೌರ್ಯ ಮತ್ತು ಶಾತವಾಹನ ಯುಗ,** ಪ್ರಸಾರಾಂಗ, ಕ.ವಿ.ವಿ.ಹಂ., ೨೦೦೪

೫೩. ವಸು. ಎಂ., ಸಂ.: **ದಕ್ಷಿಣ ಕರ್ನಾಟಕದ ಅರಸು ಮನೆತನಗಳು,** ಪ್ರಸಾರಾಂಗ, ಕ.ವಿ.ವಿ.ಹಂ., ೨೦೦೧

೫೪. ವಸಂತ ಕುಮಾರ್ ಬಿ. ಎಸ್. : **ಸ್ಪರ್ಧಾ ಚೈತ್ರ,** ಸ್ಪರ್ಧಾ ಚೈತ್ರ ಪ್ರಕಾಶನ, ಬೆಂಗಳೂರು, ಮಾಸಿಕ ಪತ್ರಿಕೆ, ೨೦೦೫, ಜನವರಿ

೫೫. ವೆಂಕಟರತ್ನಮ್ ಎ. ಬಿ., ಮತ್ತು ಪದ್ಮ ಎಂ. ಬಿ.: **ಇತಿಹಾಸ ಸಂಶೋಧನಾ ಮಾರ್ಗ,** ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಕಂಪನಿ ಲಿಮಿಟೆಡ್, ಬೆಂಗಳೂರು, ೧೯೯೧

೫೬. ವೆಂಕಟಸುಬ್ಬಯ್ಯ ಜಿ. : **ಕನ್ನಡ ನಿಘಂಟು ೭,** ಕ.ಸಾ.ಪ., ಬೆಂಗಳೂರು, ೧೯೯೫

೫೭. ವಿರೂಪಾಕ್ಷಿ ಪೂಜಾರಹಳ್ಳಿ : **ಜಲಸಂಬಂಧಿ ಚಳವಳಿಗಳು, ಭಾಗ ಎರಡು,** ಪ್ರಸಾರಾಂಗ, ಕ.ವಿ.ವಿ.ಹಂ., ೧೯೯೯

೫೮. ವಿರೂಪಾಕ್ಷಿ ಪೂಜಾರಹಳ್ಳಿ: **ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು,** ಪ್ರಸಾರಾಂಗ, ಕ.ವಿ.ವಿ.ಹಂ., ೨೦೦೨

೫೯. ವಿರೂಪಾಕ್ಷಿ ಪೂಜಾರಹಳ್ಳಿ, **ಬಳ್ಳಾರಿ ಜಿಲ್ಲೆಯ ಪಾಳೆಯಗಾರರು,** ಪ್ರಸಾರಾಂಗ, ಕ.ವಿ.ವಿ.ಹಂ., ೨೦೦೪

೬೦. ವಿರೂಪಾಕ್ಷಿ ಪೂಜಾರಹಳ್ಳಿ: **ತರಿಕೆರೆ ಪಾಳೆಯಗಾರ ಸರ್ಜಪ್ಪನಾಯಕನ ಕಥನ ಕಾವ್ಯ,** ಪ್ರಸಾರಾಂಗ, ಕ.ವಿ.ವಿ.ಹಂ., ೨೦೦೬

೬೧. ವಿರೂಪಾಕ್ಷಿ ಪೂಜಾರಹಳ್ಳಿ: **ವಾಲ್ಮೀಕಿ ಸಮುದಾಯದ ಪ್ರಾತಃಸ್ಮರಣೀಯರು,** ಪ್ರಸಾರಾಂಗ, ಕ.ವಿ.ವಿ.ಹಂ., ೨೦೦೬

೬೨. ವಿರೂಪಾಕ್ಷಿ ಪೂಜಾರಹಳ್ಳಿ: **ಕಾಮಗೇತಿ ವಂಶಜರ ಚರಿತ್ರೆ,** ಪ್ರಸಾರಾಂಗ, ಕ.ವಿ.ವಿ.ಹಂ., ೨೦೦೬

೬೩. ವಿರೂಪಾಕ್ಷಿ ಪೂಜಾರಹಳ್ಳಿ: **ಚಿನ್ನಹಗರಿ ಸಿರಿ,** ಚಿನ್ನಹಗರಿ ಪ್ರಕಾಶನ, ಪೂಜಾರಹಳ್ಳಿ, ೨೦೦೬

೬೪. ವೀರಭದ್ರಯ್ಯ ಹಿರೇಮಠ : **ಹರಪನಹಳ್ಳಿ ತಾಲ್ಲೂಕು ಸ್ವಾತಂತ್ರ್ಯ ಹೋರಾಟಗಾರರು,** ಶ್ರೀಸದ್ಗುರು ರೇಣುಕ ಪ್ರಕಾಶನ, ಹರಪನಹಳ್ಳಿ, ೧೯೯೮

೬೫. ವೀರಭದ್ರಪ್ಪ ಬಿ. ವಿ. : **ಜಗಳೂರು ಮಹಮ್ಮದ್ ಇಮಾಂ ಸಾಬ್,** ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ೨೦೦೬

೬೬. ಷೇಕ್ ಅಲಿ ಬಿ. ಸಂ.: **ಕರ್ನಾಟಕ ಚರಿತ್ರೆ ಸಂಪುಟ ಮೂರು,** ಪ್ರಸಾರಾಂಗ, ಕ.ವಿ.ವಿ.ಹಂ., ೧೯೯೭

೧೭.ಶಂಕರನಾರಾಯಣರಾವ್ ಎಚ್. ಎಂ.: **ಶ್ರೀ ಹರಿಹರೇಶ್ವರ ದೇವಾಲಯದ ಅಧ್ಯಯನ**, ಶಾರದಾ ವಿಲಾಸ ಪ್ರಕಾಶನ, ಬೃಹಚ್ಚಲಾಮಠ, ಹೊನ್ನಾಳಿ, ೧೯೯೩

೧೮. ಶಾಂತ ವೀರಯ್ಯ ಅಗರ ಬನ್ನಿಹಟ್ಟಿ: **ಹಿರಿಯ ಕಲ್ಮಠದ ಗುರುಪರಂಪರೆ**, ಚನ್ನಚೇತನ ಪ್ರಕಾಶನ, ಬೃಹಚ್ಚಲಾಮಠ, ಹೊನ್ನಾಳಿ, ೧೯೯೩

೧೯. ಶ್ರೀಕಾಂತ ತಾಂಬೆ : **ಹಳೇಬಾತಿ ಆಂಜನೇಯ ಸ್ವಾಮಿಯ ಸಂಕ್ಷಿಪ್ತ ಚರಿತ್ರೆ**, ವಿದ್ಯಾಪ್ರಕಾಶನ, ಹರಿಹರ, ೧೯೯೯

೨೦. ಶ್ರೀನಿವಾಸ್ ಎಂ. ವಿ., ಲಕ್ಷ್ಮಣ್ ತೆಲಗಾವಿ: **ಚಂದ್ರವಳ್ಳಿ**, ಜಿಲ್ಲಾ ಇತಿಹಾಸ ಸಂಶೋಧನಾ ಮಂಡಳಿ, ಚಿತ್ರದುರ್ಗ, ೧೯೭೬

೨೧. ಸತ್ಯನ್ ಬಿ. ಎನ್.: **ಬಳ್ಳಾರಿ ಡಿಸ್ಟ್ರಿಕ್ಟ್ ಗ್ಯಾಸೆಟಿಯರ್**, ಗವರ್ನಮೆಂಟ್ ಪ್ರೆಸ್, ಬೆಂಗಳೂರು, ೧೯೬೪

೨೨. ಸದಾನಂದ್ ಜಿ. ಎಸ್. : **ಜಗಳೂರು ಮಹಮದ್ ಇಮಾಮ್**, ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ, ಕರ್ನಾಟಕ ವಿಧಾನ ಸಭೆ ಸಚಿವಾಲಯ, ಬೆಂಗಳೂರು, ೨೦೦೦

೨೩. ಸದಾನಂದ ಕನವಳ್ಳಿ, ವೀರಣ್ಣ ರಾಜೂರ : **ಮಹಾಮಾರ್ಗ**, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಮಠ, ಗದಗ, ೧೯೯೮

೨೪. ಸದಾಶಿವಪ್ಪ ಕುಂಭಾ.: **ಹರಪನಹಳ್ಳಿಯ ಪಾಳೆಯಗಾರರು**, ಮಾಲತೇಶ ಪ್ರಕಾಶನ, ಹರನಪನಹಳ್ಳಿ, ೧೯೯೩

೨೫. ಸದಾಶಿವಪ್ಪ ಕುಂಭಾ.: **ಹಲವು ಹನ್ನೊಂದು ಹರಪನಹಳ್ಳಿ**, ಮಾಲತೇಶ ಪ್ರಕಾಶನ, ಹರನಪನಹಳ್ಳಿ, ೧೯೯೭

೨೬. ಸಿದ್ದಲಿಂಗಸ್ವಾಮಿ, ಎಸ್. ಎಚ್. : **ಇಂಡಸ್ಟ್ರಿಯಲ್ ರಿಲೇಷನ್ಸ್ ಇನ್ ಟೆಕ್ಸ್‌ಟೈಲ್ಸ್ ಇಂಡಸ್ಟ್ರಿ, ಎ ಕೇಸ್ ಸ್ಟಡಿ ಆಫ್ ಕಾಟನ್ ಮಿಲ್ಸ್ ಇನ್ ದಾವಣಗೆರೆ**, ಮೈಸೂರು ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಪಿಎಚ್. ಡಿ. ಮಹಾಪ್ರಬಂಧ

೨೭. ಸಿದ್ದೇಶ್ವರ ಮಿಲ್ ಕೆಲಸಗಾರರ ಕಾರ್ಯಕಾರಿ ಸಮಿತಿ : **ಕಾರ್ಮಿಕ ರತ್ನರ ಕೆಂಪು ಕಥೆ**, ಶ್ರೀಸಿದ್ದೇಶ್ವರ ಮಿಲ್ ಸಂಘದ ಕಾರ್ಯಕಾರಿ ಸಮಿತಿ, ದಾವಣಗೆರೆ, ೧೯೮೧

೨೮. ಸುರೇಂದ್ರರಾವ್ ಬಿ.: (ಸಂ.), **ಕರ್ನಾಟಕ ಚರಿತ್ರೆ ಸಂಪುಟ ೨**, ಪ್ರಸಾರಾಂಗ, ಕ.ವಿ.ವಿ.ಹಂ., ೧೯೯೭

೨೯. ಸುರೇಶ ಕೆ. ಜಿ.: **ಚನ್ನಗಿರಿ ತಾಲ್ಲೂಕಿನ ಪಶ್ಚಿಮ ಭಾಗದ ಪುರಾತತ್ವ ನೆಲೆಗಳು: ಒಂದು ಅಧ್ಯಯನ**, ಧಾರವಾಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಡೆಜರ್ಟೇಶನ್, ೧೯೯೪-೯೫

೩೦. ಸುಂದರ ಅ., ಸಂ.: **ಕರ್ನಾಟಕ ಚರಿತ್ರೆ ಸಂಪುಟ ಒಂದು**, ಪ್ರಸಾರಾಂಗ, ಕ.ವಿ.ವಿ.ಹಂ., ೧೯೯೭

೩೧. ಸೂರ್ಯನಾಥ್ ಕಾಮತ್: **ಕರ್ನಾಟಕ ರಾಜ್ಯಗ್ಯಾಸೆಟಿಯರ್, ಭಾಗ ಒಂದು**, ಕರ್ನಾಟಕ ರಾಜ್ಯ ಸರ್ಕಾರ, ಬೆಂಗಳೂರು, ೧೯೮೪

೩೨. ಸೂರ್ಯನಾಥ ಕಾಮತ್: **ಸ್ವಾತಂತ್ರ್ಯ ಹೋರಾಟದ ಸ್ಮೃತಿಗಳು**, ಸಂಪುಟ ಒಂದು, ಗೀತಾ ಬುಕ್ ಹೌಸ್, ಮೈಸೂರು, ೧೯೯೪

೩೩. ಸ್ವಾಮಿ ಬಿ. ಎಸ್., ಕಮಲೇಶ್ ಕೆ., : ದಾವಣಗೆರೆ ಅಪ್ಪಾಜಿ ಜೀವನ ಚರಿತ್ರೆ, ಬಾಪೂಜಿ ವಿದ್ಯಾಸಂಸ್ಥೆ, ದಾವಣಗೆರೆ, ೨೦೦೭

೩೪. ಹಯವದನರಾವ್ ಸಿ.: **ಮೈಸೂರು ಗ್ಯಾಸೆಟಿಯರ್ ವಾಲ್ಯೂಮ್ ಫೈವ್**, ಗವರ್ನಮೆಂಟ್ ಪ್ರೆಸ್, ಬೆಂಗಳೂರು, ೧೯೮೪

೩೫. ಹಿರೇಬಿದ್ರಿ ಹೋಳಿ ಬಸಪ್ಪ: ದಾವಣಗೆರೆ ಜಿಲ್ಲೆಯ ಸ್ವದೇಶಿ ಚಳವಳಿ, ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಎಂ.ಫಿಲ್. ನಿಬಂಧ, ೨೦೦೪-೨೦೦೫